ಕಾಲೇಜು ಪ್ರಾಥಮಿಕ ಶಾಲೆಯ ಕಟ್ಟದಲ್ಲಿ ನಡೆಯುತ್ತಿದೆ. ಇಂಥ ಅನೇಕ ನಿದರ್ಶನಗಳಿವೆ. ದಯಮಾಡಿ ಮಾನ್ಯ ಸದಸ್ಯರು ಅಸಮಾಧಾನ ಮಾಡಿಕೊಳ್ಳಬಾರದಾಗಿ ವಿನಂತಿಸುತ್ತೇನೆ

4. ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ

+ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಎರಡು ವರ್ಗವನ್ನು ಮಾಡಿಕೊಂಡು ಮಾತನಾಡುತ್ತೇನೆ, ಒಂದು ನನ್ನ ಕ್ಷೇತ್ರಕ್ಕೆ ಮತ್ತು ಜಿಲ್ಲೆಗೆ ಸಂಬಂಧಪಟ್ಟರತಕ್ಕದ್ದು. ಇದರ ಬಗ್ಗೆ ಬಹುಶ: ಎರಡನೇ ಬಾರಿ ಹೇಳಿದಂತಾಗುತ್ತದೆ. ತಮಗೆ ಗೊತ್ತಿರುವಹಾಗ ತುಮಕೂರು ಜಿಲ್ಲೆ ಮತ್ತು ಚಿಕ್ಕನಾಯಕನ ಹಳ್ಳಿಗೆ ಈ ಸಲ ಮಳೆಯೇ ಆಗಿಲ್ಲ. ಸರ್ಕಾರ ರೈತರ ನೆರವಿಗಾದರೂ ಕಡೆಯಪಕ್ಷ ಬರುತ್ತದೆಂದು ನಾವು ಬಹಳ ಆಸೆಯನ್ನಿಟ್ಟುಕೊಂಡಿದ್ದೆವು. ನನ್ನ ಕ್ಷೇತ್ರದ 200-250 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆಯಾಯಿತು. ಇದರ ಪರಿಹಾರಕ್ಕೆ ಅನೇಕ ಸಲ ಕೇಳಿಕೊಂಡೆವು. ಇನ್ನೂ 94 ಹಳ್ಳಿಗಳಲ್ಲಿ ಭಾರಿ ಕುಡಿಯುವ ನೀರಿನ ತೊಂದರೆ ಇದೆ. ಏನಾದರೂ ಮಾಡಿ ಸರ್ಕಾರದಲ್ಲಿ ಕೇಳಿಕೊಂಡರೂ ಸಹ ಇದುವರೆಗೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆಯನ್ನು ನಾವು ಪಡೆದಿಲ್ಲ. ರಾಜ್ಯಪಾಲರ ಭಾಷಣವನ್ನು ನೋಡಿದಾಗ ಅದರಲ್ಲಿ ಹೋದ ವರ್ಷದ ಸಾಧನೆ ಯಾಗಲಿ, ಮುಂದಿನ ವರ್ಷದ ಗುರಿಯಾಗಲಿ ಎಲ್ಲಾ ಪಟ್ಟಿ ಮಾಡಲೇ ಇಲ್ಲ ಈ ಸ್ಥಿತಿಯಲ್ಲಿ ಚುನಾವಣೆಯಾಗುವುದು ಬೇಡ, ಏನಾದರೂ ಹಳ್ಳಿಗಳ ಕೆಲಸವಾಗಲಿ ಎಂದು ನಾವೆಲ್ಲರೂ ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟೆವು. ಆದರೆ ಇವರಿಗೆ ಸರ್ಕಾರದ ಇರುವಿಕೆಯ ಬಗ್ಗೆ ಅನುಮಾನವಾಗಿದೆಯೋ ಏನೋ; ಮುಂದಿನ ವರ್ಷದ ಗುರಿಯನ್ನು ನಿಗದಿಪಡಿಸಿಕೊಂಡಿಲ್ಲ. ನಮ್ಮ ಭಾಗದಲ್ಲಿ ಇಂದು ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಸುಮಾರು 500 ಅಡಿಯ ಆಳದಲ್ಲಿನ ಭೂ ಗರ್ಭದಲ್ಲಿ ನೀರಿದೆ. ಈ ನೀರನ್ನು ಗ್ರಾಮೀಣ ಜನರಿಗೆ ಕನಿಷ್ಟ ಪಕ್ಷ ಕುಡಿಯುವ ನೀರಿಗಾಗಿ ಒದಗಿಸಬೇಕೆಂಬ ಕಳಕಳಿ ತಮ್ಮ ಸರ್ಕಾರಕ್ಕೆ ಇರುವುದಾದರೆ ತಕ್ಷಣ ಸಭೆಗಳನ್ನು ಕರೆದು ರಾಜಕೀಯ ಮಾಡದೆಯೇ ತಕ್ಷಣ ಗ್ರಾಮೀಣ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ನನ್ನ ಕ್ಷೇತ್ರವಾದ ಚಿಕ್ಕನಾಯಕನ ಹಳ್ಳಿಯಲ್ಲಿ ಹತ್ತು, ಹದಿನೈದು ದಿವಸಕ್ಕೆ ಒಂದು ಸಾರಿ ನೀರನ್ನು ಬಿಡುತ್ತಿದ್ದಾರೆ. ಹೋದ ಸಲ ಇದರ ಬಗ್ಗೆ ಕೇಳಿದಾಗ ಸನ್ಮಾನ್ಯ ಪೌರಾಡಳಿತ ಸಚಿವರು ಹೇಮಾವತಿಯಿಂದ ಅಲ್ಲಿಗೆ ನೀರನ್ನು ಕೊಡುವುದಾಗಿ ಒಪ್ಪಿಕೊಂಡಿದ್ದರು ಆದರೆ ಈವರೆಗೆ ಆ ಕೆಲಸವಾಗಲಿಲ್ಲ. ಈ ವರ್ಷವಾದರೂ ನಮಗೆ ಹೇಮಾವತಿಯಿಂದ ನೀರನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾನು ಮತ್ತು ತುಮಕೂರು ಶಾಸಕರು ಇದ್ದಂಥ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬಹಳ ಆಸಕ್ತಿಯಿಂದ ನಮ್ಮ ಪರಿಸ್ಥಿತಿ ಬಗ್ಗೆ ಕೇಳಿದ್ದರು. ಇದಕ್ಕೆ ತಾತ್ಕಾಲಿಕ ಮತ್ತು ಶಾಶ್ವತ ಪರಿಹಾರವೆಂದು ಎರಡು ರೀತಿ ಮಾಡೋಣವೆಂದು ಅವರು ಅವತ್ತು ಹೇಳಿದ್ದರು. ತಾತ್ಕಾಲಿಕ ಪರಿಹಾರವೆಂದರೆ ಬೋರ್‌ನ್ನು ಕೊರೆಸಿಕೊಡುವುದು. ಆ ಬೋರ್‌ಗಳನ್ನು ಕೊರೆಸಿ ಹ್ಯಾಂಡ್ ಪಂಪ್‌ಗಳನ್ನು ಅಳವಡಿಸುವುದರಿಂದ ಇವತ್ತು ನಮಗೆ ಪ್ರಯೋಜನವಾಗುತ್ತಿಲ್ಲ. ನೂರು, ನೂರಾಐವತ್ತು ಅಡಿಯ ಕೆಳಗೆ ನೀರಿದ್ದರೆ ಹ್ಯಾಂಡ್‌ಪಂಪನ್ನು ಒತ್ತಲು ಆಗುವುದಿಲ್ಲ ಆದ್ದರಿಂದ ಅದಕ್ಕೆ ವಿದ್ಯುತ್ ಯಂತ್ರವನ್ನು ಜೋಡಿಸಿ ಕೊಡಬೇಕೆಂದು ಹೇಳಿದ್ದೆವು, ಅದಕ್ಕೆ ಇದುವರೆಗೆ ಹಣವನ್ನು ಒದಗಿಸಿಲ್ಲ. ಆದ್ದರಿಂದ ತಾವೇನು ಬೋರ್‌ವೆಲ್‌ಗಳನ್ನು

ಹಾಕುತ್ತೀರಿ ಅದಕ್ಕೆ ಕನಿಷ್ಟ ವಿದ್ಯುತ್ ಯಂತ್ರವನ್ನು ಜೋಡಿಸಲು ಹಣವನ್ನು ಒದಗಿಸಬೇಕು. ಇನ್ನುಶಾಶ್ವತ ಪರಿಹಾರ ಒದಗಿಸುವ ಬಗ್ಗೆ ಮುಖ್ಯ ಮಂತ್ರಿಯವರು ಹೇಳಿದ್ದರು. ನಮ್ಮ ಭಾಗದಿಂದ 6-7 ಕಿಲೋಮೀಟರ್ ದೂರದಲ್ಲಿ ಹೇಮಾವತಿ ನದಿ ನೀರು ಹರಿಯುತ್ತದೆ, ಬೇಸಿಗೆಯಲ್ಲಿ ಒಣಗುತ್ತಿರುವ ನಮ್ಮ ಭಾಗಕ್ಕೆ ಅಲ್ಲಿರುವ ನೀರನ್ನು ನಮ್ಮಲ್ಲಿನ ಕೆರೆಗಳಿಗಾದರೂ ಕೊನೆಯ ಪಕ್ಷ ಒದಗಿಸಿಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಅವರಲ್ಲಿ ಕೇಳಿಕೊಂಡೆವು. ಅದರಿಂದಾಗಿ 20-30 ಕೆರೆಗಳು ತುಂಬಿ ಬಿಟ್ಟರೆ ನಮಗೆ ಶಾಶ್ವತ ಪರಿಹಾರವಾಗಬಹುದೆಂದು, ಕುಡಿಯುವ ನೀರಿನ ಪರಿಹಾರವಾಗಬಹುದು.

ಆ ಭಾಗದ ಜನರು ಪ್ರಮುಖವಾದ ಬೆಳೆಯಾದ ತೆಂಗು ಮತ್ತು ಅಡಿಕೆ ತೋಟಗಳನ್ನು ಮಾಡಿಕೊಂಡಿದ್ದಾರೆ. ಒಂದು ಸಾರಿ ಆ ಬೆಳೆ ಹೋದರೆ 'ಬೆಳೆದ ಮಗ ಸತ್ತುಹೋದರೆ ಹೇಗೆ ಆಗುತ್ತದೆಯೋ ಆ ತರಹ ಆಗುತ್ತದೆ' ಒಂದು ಸಾರಿ ತೋಟ ಹೋದರೆ ಅದೇ ರೀತಿ ಮತ್ತೆ ಮಾಡುವುದಕ್ಕೆ 25-30 ವರ್ಷಗಳು ಬೇಕಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ದೇಶ ಉಗಾಂಡ ದೇಶ ಆಗದೇ ಇದ್ದರೆ ಸಾಕಾಗುತ್ತದೆ. ಮನುಷ್ಯನ ಮಾಂಸ ಕಿತ್ತು ತಿನ್ನತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗದೇ ಇದ್ದರೆ ಈಗ ಸಾಕಾಗಿದೆ. ಇದೇ ತರಹ ಪರಿಸ್ಥಿತಿ ಮುಂದುವರಿದರೆ ಸುಮಾರು 70 ಕ್ಷೇತ್ರಗಳಲ್ಲಿ ತಿನ್ನವುದಕ್ಕೆ ಅನ್ನ ಇಲ್ಲದೆ, ಕುಡಿಯುವುದಕ್ಕೆ ನೀರು ಇಲ್ಲದೆ ಆಗುತ್ತದೆ. ಈಗಾಗಲೇ ನಮ್ಮ ಭಾಗದಲ್ಲಿದ್ದಂಥ ಕುರಿ, ಮೇಕೆಗಳೆಲ್ಲಾ ವಲಸೆ ಹೋಗಿವೆ, ದನ-ಕರುಗಳಲ್ಲಿ ಅರ್ಧ ಸಂಖ್ಯೆಯಷ್ಟು ಈಗಾಗಲೇ ಮಾರಾಟ ಮಾಡಿದ್ದಾರೆ. ಸನ್ಮಾನ್ಯ ರೇವಣ್ಣನವರಿಗೆ ಇದರ ಬಗ್ಗೆ ಚೆನ್ನಾಗಿ ಗೊತ್ತು. ಕೆ.ಎಂ.ಎಫ್. ನಲ್ಲಿ ನಾನು ಅಧ್ಯಕ್ಷನಾಗಿದ್ದ 1992ನೇ ಇಸವಿಯಲ್ಲಿ 1 ಲಕ್ಷದ 38 ಸಾವಿರ ಲೀಟರ್ ಹಾಲು ಬರುತ್ತಿದ್ದು ಈಗ ಅದು ಕೇವಲ 60 ಸಾವಿರ ಲೀಟರ್‌ಗೆ ಇಳಿದಿದೆ. ಪ್ರೋಗ್ರೆಸ್ ಆಗಬೇಕಾದುದೆಲ್ಲಾ ಹಿಂದಕ್ಕೆ ಏಕೆ ಬರುತ್ತಿದೆ ಎಂಬ ಬಗ್ಗೆ ಯಾರೂ ಯೋಚನೆ ಮಾಡುವುದಾಗಲೀ ಕೇಳುವುದಾಗಲೀ ಮಾಡುತ್ತಿಲ್ಲ. ಅದಕ್ಕಾಗಿ ಹೇಮಾವತಿ ನಾಲೆಯಿಂದ ನಮ್ಮ ಭಾಗದಲ್ಲಿರುವ ಕೆರೆಗಳಿಗೆ ನೀರು ಕೊಡಬೇಕು. ಆಮೇಲೆ, ತುಮಕೂರು ಜಿಲ್ಲೆಯ ಇನ್ನೊಂದು ಭಾಗದ್ದೆ ಅಂದರೆ, ಈಗ ಹೇಮಾವತಿ ನೀರು ಹರಿಯುತ್ತಿರುವ ವಿರುದ್ಧ ಭಾಗದಲ್ಲಿ ನೀರು ಕೊಡುವುದಕ್ಕೆ ನೇತ್ರಾವತಿ ನದಿಯಿಂದ ನೀರು ತರುವ ಬಗ್ಗೆ ಈಗಾಗಲೇ ಸರ್ವೇ ಕೆಲಸ ಮಾಡಲಾಗಿದೆ. ಈ ಬಾಬಿಗೆ ಹಣವನ್ನು ಒದಗಿಸಿದರೆ ತಿಪಟೂರು, ಚಿಕ್ಕನಾಯಕನ ಹಳ್ಳಿ, ಸಿರಾ, ಪಾವಗಡ ತಾಲ್ಲೂಕುಗಳಿಗೆ ನೇತ್ರಾವತಿ ನದಿ ನೀರನ್ನು ತರಬಹುದು. ಈ ಸಂದಬಂಧದಲ್ಲಿ ಕೆಲಸ ತೆಗೆದುಕೊಳ್ಳಬೇಕೆಂದು ತುಮಕೂರು ಜಿಲ್ಲೆಯ ನನ್ನ ಮಿತ್ರರುಗಳು ವಿಧಾನ ಸೌಧದ ಮುಂದೆ ಧರಣೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಈ ಬಗ್ಗೆ ನಾನು ಮತ್ತೆ ಸರ್ವೇ ಕೆಲಸ ಮಾಡಿಸುತ್ತೇನೆಂದು ಹೇಳಿರುವ ವಿಷಯ ನನಗೆ ಗೊತ್ತಾಯಿತು.

ಅಧ್ಯಕ್ಷರು: ನೇತ್ರಾವತಿ ನೀರನ್ನು ಎಲ್ಲಿಂದ ತರುವುದು?

ಶ್ರೀ ಜೆ.ಸಿ. ಮಾಧುಸ್ವಾಮಿ:- ಸಕಲೇಶಪುರದಿಂದ ಪಾವಗಡದವರೆಗೆ ಈ ನೀರನ್ನು ತರಬಹುದೆಂದು 1977-78ನೇ ಇಸವಿಯಲ್ಲೇ ಸರ್ವೇ ಆಗಿ, ಆ ಕೆಲಸ ಮಾಡಿಕೊಡಬೇಕೆಂದು ಸನ್ಮಾನ್ಯ ನಿಜಲಿಂಗಪ್ಪನವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಸನ್ಮಾನ ಮಾಡಿದ್ದೇವೆ. ಈ ಬಗ್ಗೆ

ಒಂದು ಪ್ರಾಜೆಕ್ಟ್ ಕೂಡ ತಯಾರು ಮಾಡಲಾಗಿದೆ. ಅದರಲ್ಲಿ ಏನೂ ಅನುಮಾನ ಇಲ್ಲ. ಅಪ್ಪರ್ ಭದ್ರಾ ಪ್ರಾಜೆಕ್ಟ್‌ನಿಂದ ಬಹುಶ: ಹುಳಿಯಾರ್ ವರೆಗೆ ತರಬಹುದು, ಆ ಮಧ್ಯದಲ್ಲಿ ನೇತ್ರಾವತಿ ನೀರನ್ನೂ ತರಬಹುದೆಂದು ಯೋಜನೆ ಮಾಡಲಾಗಿದೆ. ಈ ಯೋಜನೆಯನ್ನು ಮಾಡಿದರೆ ಸುಮಾರು 20 ತಾಲ್ಲೂಕುಗಳಿಗೆ ಶಾಶ್ವತ ಪರಿಹಾರ ಸಿಗುತ್ತದೆ. ಅದೂ ನಿಮ್ಮದ್ದೇ ರಾಜ್ಯದ ನದಿಯಾಗಿರುವುದರಿಂದ ಈ ಯೋಜನೆ ಮಾಡುವುದಕ್ಕೆ ಯಾವುದೇ ತಾಂತ್ರಿಕವಾದ ಒತ್ತಡಗಳು ಬರುವುದಿಲ್ಲ. ಆದುದರಿಂದ, ಈ ಕಾರ್ಯಕ್ರಮವನ್ನು ಮಾಡುವುದಕ್ಕಾಗಿ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಸರ್ಕಾರದಲ್ಲಿ ಕೇಳುತ್ತೇನೆ.

ಆಮೇಲೆ, ನಮ್ಮಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ ಬಹಳ ಇದೆ. ಇದು ಯಾವಾಗಲೂ ಕಣ್ಣಾಮುಚ್ಚಾಲೆ ಆಟ ಆಡುತ್ತದೆ. ಹೋದ ಅಧಿವೇಶನದಲ್ಲೂ ಇದರ ಬಗ್ಗೆ ತುಮಕೂರು ಜಿಲ್ಲೆಯ ಶಾಸಕರುಗಳೆಲ್ಲಾ ಒಂದಾಗಿ ಮಾತನಾಡಿದ್ದೇವೆ. ನಮಗೆ ಹೋದ ಇಡೀ ವರ್ಷ ಪವರ್ ಕಟ್‌ನ್ನು ಇಂಪೋಸ್ ಮಾಡಲಾಗಿತ್ತು. ಕಿಬ್ಬನಹಳ್ಳಿ ಹತ್ತಿರ ಇರುವ ರಿಸೀವಿಂಗ್ ಸ್ಟೇಷನ್ ಓವರ್‌ಲೋಡ್ ಆಗಿರುವುದರಿಂದ ಈ ರೀತಿಯಾಗಿದೆಯೆಂದು ಇಲಾಖೆಯವರು ನಮಗೆ ಹೇಳಿದ್ದಾರೆ. ಈ ಸಮಸ್ಯೆಯನ್ನು ಪರಿಹಾರ ಮಾಡುವ ಬಗ್ಗೆ ಘನ ಸರ್ಕಾರದವರು ಯೋಚನೆಯನ್ನೇ ಮಾಡಲಿಲ್ಲ. ಇದರ ಜೊತೆಗೆ ನನ್ನ ಕ್ಷೇತ್ರದಲ್ಲಿ 1992ನೇ ಇಸವಿಯಿಂದ ಇಲ್ಲಿಯವರೆಗೆ 1800 ಐ.ಪಿ. ಸೆಟ್‌ಗಳಿಗೆ ಇವರು ವಿದ್ಯುಚ್ಛಕ್ತಿ ಕೊಡಬೇಕಾಗಿದೆ. ಟಾರ್ಗೆಟ್ ಪ್ರಕಾರ ಐ.ಪಿ.ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಕೊಡದೇ ಇರುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಮಾನ್ಯ ಮಂತ್ರಿಯವರನ್ನು ಕೇಳಲಾಗಿದೆ. ಆದರೆ, ಈ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈಗ ತುಮಕೂರು ಜಿಲ್ಲೆಯ ಎರಡು ತಾಲ್ಲೂಕುಗಳನ್ನು ಮಾತ್ರ ಟಾರ್ಗೆಟ್ ಸ್ಕೀಮ್ ಒಳಗೆ ಸೇರಿಸಿ ಉಳಿದ ತಾಲ್ಲೂಕುಗಳನ್ನು 'ಎಷ್ಟು ಭಾಗ ಎಂದು ತೀರ್ಮಾನ ಮಾಡಿದ್ದಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ 400 ಐ ಪಿ ಸೆಟ್‌ಗಳಿಗೆ ಟಾರ್ಗೆಟ್ ಕೊಟ್ಟು 60 ಐ ಪಿ ಸೆಟ್‌ಗಳಿಗೆ ಆಗುವಷ್ಟು ಮೆಟೀರಿಯಲ್‌ನ್ನು ಕೊಡಲಿಲ್ಲ. ಇನ್ನು ಪಾವಗಡಕ್ಕೆ 500 ಐ ಪಿ ಸೆಟ್‌ಗಳಿಗೆ ಟಾರ್ಗೆಟ್ ಕೊಟ್ಟು 50 ಐ ಪಿ. ಸೆಟ್‌ಗಳಿಗೆ ಆಗುವಷ್ಟು ಮೆಟೀರಿಯಲ್‌ನ್ನು ಇನ್ನೂ ಸಪ್ಲೈ ಮಾಡಲಿಲ್ಲ. ಜಿಲ್ಲೆಗೆ ಎರಡು ತಾಲ್ಲೂಕನ್ನು ಟಾರ್ಗೆಟ್‌ಗೆ ಸೇರಿಸಿಕೊಂಡು ಅದಕ್ಕೆ ಬೇಕಾದ ಮೆಟೀರಿಯಲ್‌ನ್ನು ಕೊಡುವುದಿಲ್ಲ. ಈ ಬಗ್ಗೆ ನಾವು ನಾಲ್ಕಾರು ಸಾರಿ ಬಂದು, ಇದಕ್ಕೆ ಏನಾದರೂ ಮಾಡಿ, ನಾವು ಶಾಪಗ್ರಸ್ತರಾಗಿದ್ದೇವೆಂದು ಕೇಳಿದ್ದೇವೆ. ಈ ಈಕಡೆ ಸರ್ಕಾರದ ನೆರವು ಇಲ್ಲ, ಆ ಕಡೆ ನಿಸರ್ಗದ ನೆರವೂ ಇಲ್ಲ. ಇವತ್ತು ಮಾರ್ಚ್ 17ನೇ ತಾರೀಖು, ಸತ್ಯವಾಗಿ ಹೇಳುತ್ತೇನೆ, ನಮ್ಮ ತಾಲ್ಲೂಕಿನಲ್ಲಿ ಕೇವಲ 65 ಐ ಪಿ ಸೆಟ್‌ಗಳಿಗೆ ಮಾತ್ರ ಎನರ್ಜೈಸ್ ಮಾಡಿದ್ದಾರೆ. ಅದೂ ನಾನು ಕುಳಿತುಕೊಂಡು ಮೇಲಿಂದ ಮೇಲೆ ಒತ್ತಡ ತಂದಿದ್ದಕ್ಕೆ ಅಷ್ಟು ಮಾಡಿದ್ದಾರೆ. ಪಾವಗಡದಲ್ಲೂ ಬಹುಶ: ಅಷ್ಟೇ ಆಗಿರಬೇಕು. ಆಮೇಲೆ, ಬಡವರಿಗೆ ಒಂದು ದೀಪ ಕೊಡಬೇಕೆಂದು ಭಾಗ್ಯ ಜ್ಯೋತಿ ಸ್ಕೀಮನ್ನು ತಂದಿದ್ದೇವೆ. ಇವತ್ತಿನ ಪರಿಸ್ಥಿತಿಯಲ್ಲಿ ಒಂದೇ ಒಂದು ತಾಲ್ಲೂಕಿನಲ್ಲೂ ಈ ಭಾಗ್ಯ ಜ್ಯೋತಿ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವ ಸ್ಥಿತಿಯಲ್ಲಿ ಇಲ್ಲ. ಬಡವರಿಗೆ ಕೊಡುವ ಲೈಟ್ ಇಲ್ಲ, ಕೊಳವೆ ಬಾವಿಗಳಿಗೆ ಎನರ್ಜಿ ಇಲ್ಲ. ಹೀಗಾದರೆ ಹೇಗೆ? ತುಮಕೂರಿನಲ್ಲಿ ಇನ್ನೊಂದು ಡಿಸ್ಟ್ರಿಬ್ಯೂಷನ್ ಸ್ಟೇಷನ್ ಮಾಡಿದ್ದಾರೆ, ಅದರ ಮೇಲೆ ಗುಬ್ಬಿ ತಾಲ್ಲೂಕಿನ ಕೊಡುವ ವಿದ್ಯುಚ್ಛಕ್ತಿ ಲೋಡನ್ನು

ಹಾಕಿದರೆ ಚಿಕ್ಕನಾಯಕನ ಹಳ್ಳಿ, ತಿಪಟೂರು ಮತ್ತು ತುರುವೇಕೆರೆಯಲ್ಲಿ ರಿಸೀವಿಂಗ್ ಸ್ಟೇಷನ್‌ಲೋಡನ್ನು ಯುಟಿಲೈಸ್ ಮಾಡಬಹುದಾಗಿತ್ತು. ಆ ಕೆಲಸವನ್ನು ಅವರು ಮಾಡುವುದೇ ಇಲ್ಲ. ಯಾವಾಗ, ಮತ್ತು ಏಕೆ ವಿದ್ಯುಚ್ಛಕ್ತಿಯನ್ನು ತೆಗೆಯುತ್ತಾರೆಂದು ನಮಗೆ ಗೊತ್ತಾಗುವುದೇ ಇಲ್ಲ. ಆಮೇಲೆ, ಕಪ್ಪು ಎಂದು ಮಾಡಿರುವ ತಾಲ್ಲೂಕುಗಳಿಗೆ ಈಗಾಗಲೇ ತೋಡಿಸಿರುವ ಬೋರ್ ವೆಲ್‌ಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುತ್ತದೆಂದು ಮಾನ್ಯ ಮಂತ್ರಿಯವರು ಮೌಖಿಕವಾಗಿ ಹೇಳಿದ್ದರು, ಆದರೆ, ಈ 8 ತಾಲ್ಲೂಕುಗಳಲ್ಲಿ ಒಂದು ಐ ಪಿ ಸೆಟ್‌ಗೂ ವಿದ್ಯುಚ್ಛಕ್ತಿಯನ್ನು ಎನರ್ಜೈಸ್ ಮಾಡಲಿಲ್ಲ. ಇಂಥಾ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಟ್ಟು ನಮ್ಮ ಪಕ್ಷಕ್ಕೆ ಜನರು ವೋಟು ಹಾಕಲಿಲ್ಲವೆಂದು ಹೇಳಿದರೆ, ಯಾರು ಅವರಿಗೆ ವೋಟು ಹಾಕುತ್ತಾರೆ? ನಾವು ಬಯಲು ಸೀಮೆಯಲ್ಲಿರುವವರು, ನಮ್ಮ ಕಡೆ ನಾಲೆ ಇಲ್ಲ, ಸರೋವರಗಳನ್ನು ಮೊದಲೇ ಕಾಣಲಿಲ್ಲ. "ನೀರು ಕೊಡಪ್ಪ ಎಂದು ದೇವರನ್ನು ಬೇಡಿಕೊಂಡು ಬೋರ್ ವೆಲ್ ಹಾಕಿಸಿ, ನೀರು ಬಿದ್ದರೆ, ಅದನ್ನು ಮೇಲೆ ಎತ್ತಿ ಹಾಕಿಕೊಳ್ಳಲು ಅವಕಾಶ ಕೊಡದೆ ಇದ್ದರೆ ಹೇಗೆ? ಸಾಲ ಮಾಡಿ ಐ ಪಿ ಸೆಟ್‌ಗಳನ್ನು ತೆಗೆದುಕೊಂಡು ಬಂದು ಕರೆಂಟ್ ಇಲ್ಲದೆ ಕಷ್ಟಪಡುವಂಥ ರೈತರುಗಳು ಈ ಸರ್ಕಾರಕ್ಕೆ ವೋಟು ಹಾಕುತ್ತಾರೆಂದು ನಿರೀಕ್ಷೆ ಮಾಡುವುದಕ್ಕಾಗುತ್ತದೆಯಾ? ರೈತರುಗಳ ಮನೆ ಮಠಗಳನ್ನು ಹಾಳು ಮಾಡಿ, ನಮಗೆ ವೋಟು ಕೊಡುವುದರ ಮೂಲಕ ಆಶೀರ್ವಾದ ಮಾಡಿ ಎಂದು ಕೇಳುವುದರಲ್ಲಿ ಸೌಜನ್ಯ ಇರುತ್ತದೆಯಾ? ಇನ್ನೂ ಕಾಲ ಮಿಂಚಿಲ್ಲ, ಇನ್ನೂ ಒಂದೂವರೆ ವರ್ಷಗಳ ಕಾಲ ಅವಕಾಶ ಇದೆ. ದೇವರಿಗೆಂತ ದೊಡ್ಡವರಾಗಿರುವ ಗ್ರಾಮೀಣ ಜನರನ್ನು ಎಂದೂ ಅಸಡ್ಡೆ ಮಾಡಬಾರದು. ಅವರು ಯಾರ ಋಣವನ್ನೂ ಇಟ್ಟುಕೊಳ್ಳುವುದಿಲ್ಲ. ಸರ್ಕಾರ ಏನಾದರೂ ಅವರಿಗೆ ಕೆಲಸ ಮಾಡಿಕೊಟ್ಟಿದ್ದಿದ್ದರೆ, ಅದನ್ನು ಅವರು ತೀರಿಸುತ್ತಿದ್ದರು. ಅಸೆಂಬ್ಲಿ ಚುನಾವಣೆ ನಡೆದ ನಂತರ ರೈತಲು ಮಾಡಿರತಕ್ಕಂಥ ಸಾಲದ ಮೇಲೆ ಬಡ್ಡಿ ಮನ್ನಾ ಮಾಡಿದ ಕಾರಣಕ್ಕಾಗಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಅವರ ಪಕ್ಷಕ್ಕೆ ಯಥೇಚ್ಛವಾಗಿ ಮತ ಹಾಕಿದರು. ಈಗ ಕೊಡುವ ಸಾಲಕ್ಕೆ ಕನಿಷ್ಠ 9 ಪರ್ ಸೆಂಟ್ ಬಡ್ಡಿ ಹಾಕುತ್ತಾರೆಂದುಕೊಂಡು ರೈತರುಗಳು ಸಾಲ ಮಾಡಿದರೆ, ಅದಕ್ಕೆ 16 ಪರ್ ಸೆಂಟ್ ಬಡ್ಡಿ ಹಾಕಿದ್ದಾರೆ. ಮಳೆ, ಬೆಳೆ ಇಲ್ಲದೆ ರೈತರುಗಳು ಸಾಲ ಕಟ್ಟುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಅವರ ಆಸ್ತಿಗಳ ಮೇಲೆ ಅವಾರ್ಡ್ ಪಾಸ್ ಮಾಡಲಾಗುತ್ತಿದೆ. ಈ ರೀತಿಯ ಕೆಲಸವನ್ನು ಮೊದಲು ತಪ್ಪಿಸಬೇಕು.

ಆಮೇಲೆ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ, ಚಿಕ್ಕನಾಯಕನ ಹಳ್ಳಿಯಲ್ಲಿ ಈ ಬಗ್ಗೆ ಇನ್ನೂ 9 ಸಾವಿರ ಅರ್ಜಿಗಳು ವಿಲೇ ಆಗಬೇಕಾಗಿದೆ. ಇದಕ್ಕೆ ಕಾರಣವೇನೆಂದು ಯಾರೂ ಅಸೆಸ್ ಮಾಡಲೇ ಇಲ್ಲ. ಬಗರ್‌ಹುಕುಂ ಸಾಗುವಳಿ ಮಾಡಿರುವ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಮೂರು ವರ್ಷಗಳಿಂದ ಅಲ್ಲಿ ಸಭೆ ಸೇರಿಲ್ಲ. ಅಲ್ಲಿರುವ ಅಧಿಕಾರಿಗಳಿಗೆ ಮತ್ತು ಶಾಸಕರುಗಳಿಗೆ ಸಭೆಯಲ್ಲಿ ಕೂತು ವಿಲೇವಾರಿ ಮಾಡುವುದಕ್ಕೆ ಇಚ್ಛೆ ಇಲ್ಲ. ಬಗರ್‌ಹುಕುಂ ಸಾಗುವಳಿ ಮಾಡಿರುವ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಮೂರು ವರ್ಷಗಳಿಂದ ಅಲ್ಲಿ ಸಭೆ ಸೇರಿಲ್ಲ. ಅಲ್ಲಿರುವ ಅಧಿಕಾರಿಗಳಿಗೆ ಮತ್ತು ಶಾಸಕರುಗಳಿಗೆ ಸಭೆಯಲ್ಲಿ ಕೂತು ವಿಲೇವಾರಿ ಮಾಡುವುದಕ್ಕೆ ಇಚ್ಛೆ ಇಲ್ಲ ಪ್ಯಾರಲಲ್

12-10 ಪಿ. ಎಂ.

ಸಮಿತಿಯಾಗಬೇಕು, ಅಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರುಕುಳಿತುಕೊಂಡು ಜಮೀನುಗಳನ್ನು ವಿಲೇವಾರಿ ಮಾಡಬೇಕು. ಆವರ ಅಧಿಕಾರ ಮೊಟಕಾಗಿದೆ ಎನ್ನುವ ಭಾವನೆಯಲ್ಲಿ ಜಾಸ್ತಿ ಕೇಸ್ ಇರುವ ಕಡೆ ಎರಡೆರಡು ಸಮಿತಿಗಳನ್ನು ಮಾಡಿ ಎಂದು ಅವರು ಹೇಳಿಕೊಂಡು ಬಂದರು. ಅಲ್ಲಿ ಇಬ್ಬರು ಶಾಸಕರುಗಳಿದ್ದರೆ ಇನ್ನೊಂದು ಸಮಿತಿ ಮಾಡಿ ಇಬ್ಬರನ್ನೂ ಕೂರಿಸಬಹುದಾಗಿತ್ತು. ಮಾನ್ಯ ಜಯಚಂದ್ರ ಮತ್ತು ನನ್ನನ್ನು ಸೇರಿಸಿ ಎರಡು ಸಮಿತಿಯನ್ನು ಮಾಡಬಹುದಾಗಿತ್ತು. ಆ ಕೆಲಸವನ್ನು ಮಾಡಲೇ ಇಲ್ಲ. ನಾನು ಹೇಳುತ್ತೇನೆ ಸರ್ವೆಯರ್ಸ್ ಇಲ್ಲ, ರೆಕಾರ್ಡ್ಸ್ ಇಲ್ಲ ಇವತ್ತು ಬಾಗರ್ ಹುಕುಂ ಕಮಿಟಿ ಮುಂದೆ ಕುಳಿತುಕೊಂಡು ಚರ್ಚೆ ಮಾಡಲಿಕ್ಕೆ ಕೇಸ್‌ಗಳನ್ನು ರೆಕಾರ್ಡ್ ಬಿಲ್ಡ್ ಆಫ್ ಮಾಡಲಿಕ್ಕೆ ಕ್ಲಾರ್ಕ್‌ಗಳು ಇಲ್ಲ ತಾಲ್ಲೂಕಾ ಕಛೇರಿಗಳಲ್ಲಿ. ಮೂರು ತಿಂಗಳು, ನಾಲ್ಕು ತಿಂಗಳು ಚುನಾವಣೆಯ ಕೆಲಸ, ಎಲ್ಲಿ ರೆಕಾರ್ಡ್‌ಗಳು ಬಗರ್‌ಹುಕುಂ ಕಮಿಟಿಗೆ ಎಂದರೆ ತಹಸೀಲ್ದಾರ್‌ಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ತಹಸೀಲ್ದಾರ್‌ಗಳನ್ನು ಎಂತಹವರನ್ನು ಹಾಕಿದ್ದೀರಿ, ಸಣ್ಣ ಸಣ್ಣ ಘಟನೆಗಳಿಗೂ ಜಿಲ್ಲಾಧಿಕಾರಿಗಳನ್ನು ಕೇಳುತ್ತಾರೆ, ದೂರವಾಣಿಯನ್ನು ಹಚ್ಚಿಕೊಂಡು ಕುಳಿತುಕೊಳ್ಳುತ್ತಾರೆ. ಚಿಕ್ಕನಾಯಕನಹಳ್ಳಿಯಲ್ಲಿ ಸಣ್ಣ ಡಿಸ್‌ಪ್ಯೂಟ್ ಆಗಿದೆ ಎಂದು ಹೇಳಿದರೆ ನೀವು ಇರಿ, ಜಿಲ್ಲಾಧಿಕಾರಿಗಳವರು ಏನು ಹೇಳುತ್ತಾರೆ ಕೇಳುತ್ತೇವೆಂದು ಹೇಳುತ್ತಾರೆ. ಏನು ತಾಲ್ಲೂಕಾ ಮ್ಯಾಜಿಸ್ಟ್ರೇಟ್‌ಗೆ ಜವಾಬ್ದಾರಿ ಇಲ್ಲವಾ? ಏಕೆ ನೀವು ಪ್ರಥಮ ದರ್ಜೆ ಸಹಾಯಕರನ್ನು ಹಾಗೂ ದ್ವಿತೀಯ ದರ್ಜೆ ಸಹಾಯಕರಾಗಿದ್ದವರನ್ನು ತಾಲ್ಲೂಕಾ ಮ್ಯಾಜಿಸ್ಟ್ರೇಟ್‌ರನ್ನಾಗಿ ತಂದು ನೇಮಕ ಮಾಡುತ್ತೀರಿ.? ತಾವು ತರಿಸಿನೋಡಿ ಈ ರಾಜ್ಯದ ಮಾಹಿತಿಯನ್ನು ಯಾವುದೇ ಒಂದು ತಾಲ್ಲೂಕಿನಲ್ಲಿ ತಹಸೀಲ್ದಾರ್‌ರವರು ಜವಾಬ್ದಾರಿ ತೆಗೆದುಕೊಂಡು ಕೆಲಸವನ್ನು ನಿರ್ವಹಿಸುತ್ತಿಲ್ಲ; ಮೇಲ್ಗಡೆ ನೋಡುತ್ತಾನೆ. ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತೇವೆಂದು, ಜಿಲ್ಲಾ ಪಂಚಾಯಿತಿಗಳನ್ನು ಮಾಡುತ್ತೀರಿ, ತಾಲ್ಲೂಕಾ ಪಂಚಾಯಿತಿಗಳನ್ನು ಮಾಡುತ್ತೀರಿ, ಕಂದಾಯ ಇಲಾಖೆಯನ್ನು ಜಿಲ್ಲಾಧಿಕಾರಿಗಳ ಕಾಲಡಿ ತಂದು ಹಾಕಿದ್ದೀರಿ. ಎಷ್ಟು ಕೆಲಸಗಳನ್ನು ಮಾಡಿಸುತ್ತೀರಿ ಜಿಲ್ಲಾಧಿಕಾರಿಗಳಿಂದ ಸಾಕ್ಷರತೆ, ನಿಮ್ಮ ಕೋಲಾಟ, ಬೈಲಾಟ, ನಾಟಕೋತ್ಸವ ಸಾಹಿತ್ಯೋತ್ಸವ; ಜಿಲ್ಲಾಧಿಕಾರಿಗಳು ಮಾಡುವ ಕೆಲಸವನ್ನು ಬಿಟ್ಟು ಬೇರೆ ಎಲ್ಲಾ ಕೆಲಸವನ್ನು ಮಾಡುತ್ತಾರೆ. ಯಾವ ಕೆಲಸ ಕೇಂದ್ರೀಕರಣ ಆಗಬಾರದೆಂದು ನಿಮ್ಮ ಧೋರಣೆ ಇತ್ತೋ ಅದನ್ನು ನೂರಕ್ಕೆ ನೂರು ತೆಗೆದುಕೊಂಡು ಹೋಗಿ ನೀವು ಅವರ ಕಾಲಡಿ ಹಾಕಿದ್ದೀರಿ. ಯೋಚನೆ ಮಾಡಿದ್ದೀರಾ; ಮಾಡಲೇ ಇಲ್ಲ. ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಒಂದು ಲೋನ್ ರಿಲೀಸ್ ಮಾಡಿಸಬೇಕಾದರೆ ನಾವು ಇವತ್ತು ಜಿಲ್ಲಾಧಿಕಾರಿಗಳನ್ನು ಕೇಳಬೇಕಾಗಿದೆ. ಒಂದು ಬೋರ್‌ವೆಲ್ ಕೊಡಬೇಕಾದರೆ ನಾವು ಜಿಲ್ಲಾಧಿಕಾರಿಗಳನ್ನು ಕೇಳಬೇಕಾ? ಅವರಿಗೆ ನೀವು ಎಷ್ಟು ಲೋಡ್ ಹಾಕುತ್ತಿದ್ದೀರಿ. ಅಭಿವೃದ್ಧಿ ಕಾರ್ಯಗಳನ್ನು ಅಲ್ಲಿಡಬಾರದೆನ್ನುವ ದೃಷ್ಟಿಯಿಂದ ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳು ಆಗಬೇಕೆನ್ನುವ ನಿರ್ಣಯ ತೆಗೆದುಕೊಂಡು ಎಲ್ಲಾ ಕೆಲಸಗಳನ್ನು ತೆಗೆದುಕೊಂಡು ಹೋಗಿ ಅವರ ಕಾಲಡಿ ಹಾಕಿ ಆಡಳಿತವನ್ನು ಸ್ಥಗಿತ ಮಾಡಿಬಿಟ್ಟರೆ ಗತಿ ಏನು? ಇದನ್ನು ಸರ್ಕಾರದಲ್ಲಿ ಸ್ವಲ್ಪ ಯೋಚನೆ ಮಾಡಬೇಕು. ಇದರ ಜೊತೆಗೆ ಏನಾಗುತ್ತದೆಂದರೆ, ನಮ್ಮ ಭಾಗದಲ್ಲಿ ಅಪಾರವಾಗಿ ಬಗರ್‌ಹುಕುಂ ಜಮೀನು ಹೆಚ್ಚಿಗೆ ಉಳಿದಿದೆ. ಅನೇಕ ಸಲ ಹೇಳಿದ್ದೇನೆ ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳಬೇಕೆಂದು......

ಅಧ್ಯಕ್ಷರು:- ಗೋವಿಂದೇಗೌಡರೇ, ತಾವು ನೋಟ್ ಮಾಡಿಕೊಳ್ಳುತ್ತಿದ್ದಿರೆಲ್ಲಾ, ಏಕೆಂದರೆ ಸರ್ಕಾರದ ಪರವಾಗಿ ಯಾರಾದರೂ ಒಬ್ಬರು ನೋಟ್ ಮಾಡಿಕೊಳ್ಳಬೇಕು.

ತಹಸೀಲ್ದಾರ್:- ವಿಚಾರಕ್ಕೆ he has made a valid suggestion.

ಶ್ರೀ ಜೆ.ಸಿ. ಮಾಧುಸ್ವಾಮಿ:- ಹೆಚ್ಚಿನ ಜಮೀನು ನಮ್ಮ ಭಾಗದಲ್ಲಿ ಉಳಿದು ಹೋಗಿದೆ. ನೀವು ಅರಣ್ಯ ಇಲಾಖೆಯ ಜಮೀನು ಕೊಡುವುದಿಲ್ಲ, ಎಕ್ಸೆಸ್ ಜಮೀನದಲ್ಲಿ ಅವರು ಈಗಾಗಲೇ ಇದ್ದಾರೆ. ಅವರು ತೋಟವನ್ನು ಮಾಡಿದ್ದಾರೆ ಪೊಸಿಷನ್‌ನಲ್ಲಿ ಇದ್ದಾರೆ ಅದನ್ನು ವಿಲೇ ಮಾಡುವುದಕ್ಕೆ ಸರ್ಕಾರದವರು ಒಂದು ಆದೇಶವನ್ನು ಕೊಡಬೇಕಾಗಿತ್ತು ಈವರೆಗೆ ಕೊಟ್ಟಿಲ್ಲವೆಂದು ಹೇಳಿ ಆ ಕೆಲಸವನ್ನು ಸ್ವಲ್ಪ ಅಚ್ಚುಕಟ್ಟಾಗಿ ಮಾಡಬೇಕೆಂದು ಕೇಳುತ್ತೇನೆ. ಅಧ್ಯಕ್ಷರೇ, ಇದನ್ನು ಹೊರತು ಪಡಿಸಿ ನಾನು ಇನ್ನು ಒಂದೆರಡು ಇಲಾಖೆಯ ಬಗ್ಗೆ ಮಾತನಾಡಲು ಬಯಸುತ್ತೇನೆ. ನಮ್ಮ ಭಾಗದಲ್ಲಿ ಇವತ್ತು ಹೇಮಾವತಿ ನೀರು ಹೋಗುತ್ತದೆ, ನಮಗೆ ಅದರಿಂದ ಏನು ಪ್ರಯೋಜನ ಆಗುತ್ತಾ ಇಲ್ಲ. ನಮ್ಮ ಕ್ಷೇತ್ರ ಎಡಭಾಗಕ್ಕೆ ಬರುತ್ತದೆ ನೀರನ್ನು ಕೊಡುವುದಿಲ್ಲ ನಾವು ಸಿನಿಮಾ ನೋಡಿದಂತೆ. ಸಿನಿಮಾದಲ್ಲಿ ಹೇಮಾಮಾಲಿನಿ ಅಥವಾ ಯಾರನ್ನೋ ನೋಡಿ ಸಂತೋಷ ತೆಗೆದುಕೊಂಡಂತೆ ಆಗಿ ಬಿಟ್ಟಿದೆ ಇವತ್ತು ನಮ್ಮ ಸ್ಥಿತಿ. ಮಧ್ಯಮವರ್ಗದವರಿಗೆ ಏನು ಸಂತೋಷ ಸಿಗಬೇಕು ಆ ಸಂತೋಷ ಇವತ್ತು ಚಿಕ್ಕನಾಯಕನಹಳ್ಳಿಯವರಿಗೆ ಸಿಗುತ್ತಿದೆ. ದೊಡ್ಡವರಿಗೆ ಸಿಗುತ್ತದೆ ಸಣ್ಣವರಿಗೆ ಸಿಗುವುದಿಲ್ಲ ಎನ್ನುವುದು ಗ್ಯಾರಂಟಿ ಆಗಿರುತ್ತದೆ, ಆದರೆ ನಾವು ಕತೆಯನ್ನು ಕೇಳಿಕೊಂಡು ರಂಭೆ, ಊರ್ವಶಿಯರ ಕಾಲದಿಂದ ಬದುಕಿಕೊಂಡಿದ್ದೇವಲ್ಲ ಸ್ವಾಮಿ ಆ ಸ್ಥಿತಿ ಇವತ್ತು ನಮಗೆ ಅಲ್ಲಿ ಬಂದು ಬಿಟ್ಟಿದೆ. 6-7 ಕಿ.ಮೀ ದೂರದಿಂದ ನೀರು ವ್ಯಾಪಕವಾಗಿ ಹರಿಯುತ್ತದೆ ನಮಗೆ ಇಲ್ಲ. ಎಡಗಡೆ ಕೊಡುವುದಿಲ್ಲ, ಕೆರೆಗಾದರೂ ಕೊಡಿ ಅಂದರೆ ಅದು ಇಲ್ಲ. ಯಾರು ಬದುಕಿದ್ದಾರೆಂದರೆ ಸ್ವಾಮಿ, ತೃಪ್ತಿಯಾಗಿ ಆಂಧ್ರದ ಗುತ್ತಿಗೆದಾರರು ಇವತ್ತು ಸಮೃದ್ಧಿಯಾಗಿದ್ದಾರೆ. ಯಾವ ಕಾನೂನೂ ಇಲ್ಲ, ಯಾವ ನಿಯಮ ಇಲ್ಲ, ಯಾರು ಹೇಳುವವರು ಇಲ್ಲ, ಯಾರು ಕೇಳುವವರು, ಇಲ್ಲ ಎಂತಹ ದ್ರೋಹ ಮಾಡುತ್ತಾರೆ, ಎಂಟ್ರೆಸ್ಟ್‌ಮೆಂಟ್‌ಗೆ ಟೆಂಡರ್ ಕರೆಯುವಂತೆ ಇಲ್ಲ, ಯಾರನ್ನೂ ನೇಮಿಸುವಂತೆ ಇಲ್ಲ. ಅಲ್ಲಿ ಇರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಮೂರು ಟೆಂಡರ್‌ಗಳನ್ನು ಒಬ್ಬರ ಹತ್ತಿರ ತರಿಸಿಕೊಂಡು ಬಿಡುವುದು, ಹಾಕಿಸಿ ಎಂದು ಒಬ್ಬನಿಗೆ ಹೇಳುವುದು ಇನ್ನೊಬ್ಬನಿಗೆ ಕೊಡುವುದು. ತಮಗೆ ಒಂದು ಮಾಹಿತಿಯನ್ನು ಕಳುಹಿಸಬೇಕಾಗುತ್ತದೆ, ಈಗಾಗಲೇ 178-179ರಲ್ಲಿ ಹೇಮಾವತಿಯ ನಾಲೆಯಲ್ಲಿ ಈಗಾಗಲೇ ಕೆಲಸವಾಗಿರುವುದಕ್ಕೆ ಟೆಂಡರ್‌ನ್ನು ಕರೆದಿದ್ದಾರೆ..........

ಶ್ರೀ ವಾಟಾಳ್ ನಾಗರಾಜ್:- ಎಷ್ಟು ಸಲ ಹೇಳಬೇಕು, ಮೂರು ಮಂತ್ರಿಗಳನ್ನು ಬಿಟ್ಟರೆ ಯಾರು ಇಲ್ಲ.

ಅಧ್ಯಕ್ಷರು:- ರಾಜ್ಯಸಭೆಗೆ ನಾಮ ಪತ್ರವನ್ನು ಸಲ್ಲಿಸುವುದಕ್ಕೆ ಕೊನೆಯ ದಿನವಾಗಿರುವುದರಿಂದ ಹೋಗಿದ್ದಾರೆ ಪರವಾಗಿಲ್ಲ; ಗೋವಿಂದೇಗೌಡರು ಬರೆದುಕೊಳ್ಳುತ್ತಾರೆ. ನೀವು ಪಟೇಲ್‌ರ ಪರವಾಗಿಯೂ ಮಾತನಾಡುತ್ತೀರಿ, ಒಂದೊಂದು ಸಲ ಹೀಗೂ ಮಾತನಾಡಿ ನಮ್ಮನ್ನು ಇಕ್ಕಟ್ಟಿಗೂ ಸಿಕ್ಕಿಸುತ್ತೀರಿ. ನಮ್ಮ ಗತಿ ಏನು?

ಶ್ರೀ ವಾಟಾಳ್ ನಾಗರಾಜ್:- ತಪ್ಪು ಅಭಿಪ್ರಾಯ ನಾನು ಮಾನ್ಯ ಪಟೇಲ್‌ರವರ ಪರವಾಗಿಯೋ ಇರುವುದು ಅದರಲ್ಲಿ ಎರಕಡನೇ ಅಭಿಪ್ರಾಯ ಇಲ್ಲವೇ ಇಲ್ಲ. ಮಂತ್ರಿಗಳು ಇಲ್ಲಿ ಇಲ್ಲದೇ ಇರುವುದಕ್ಕೂ ನಾನು ಪಟೇಲ್‌ರ ಇರುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲ ಒಬ್ಬರು ಮಾತನಾಡುವಾಗ ಮಂತ್ರಿಗಳು ಇಲ್ಲವೆಂದರೆಹೇಹ ನಾನು ಏನು ಮಾಡಲಿ ತಾವು ಹೇಳಿ?

ಶ್ರೀ ಅರಗ ಜ್ಞಾನೇಂದ್ರ:- ಅಂದರೆ, ವಾಟಾಳರಿಗೆ ಕೇಳಿಕೊಂಡು ಮಂತ್ರಿಗಳಿಗೆ ಹೇಳಿ ಆ ಕೆಲಸವನ್ನು ಮಾಡಿಸುತ್ತಾರೆ ಎಂಬುದು ತಮ್ಮ ಅಭಿಪ್ರಾಯವೇ?

ಅಧ್ಯಕ್ಷರು:- ನನ್ನ ಅಭಿಪ್ರಾಯ ಏನೂ ಇಲ್ಲ,

ಶ್ರೀ ಅರಗ ಜ್ಞಾನೇಂದ್ರ:- ತಾವು ಮುಖ್ಯ ಮಂತ್ರಿಗಳ ಹತ್ತಿರ ಅವರ ಖಾಸಾ ಇದ್ದಾರೆಂದು ಹೇಳಿದಿರಿ.

ಶ್ರೀ ಜಿ.ಎಸ್. ಶಿವನಂಜಪ್ಪ :- ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಏನು ಪ್ರಶ್ನೆಯನ್ನು ಎತ್ತಿದ್ದಾರೆ 172-178-179ರಲ್ಲಿ ಏನು ಚಾನಲ್ ತೆಗೆಯಬೇಕು ತೆಗೆದು ಆಗಿಹೋಗಿಬಿಟ್ಟಿದೆ. ಎಂಟ್ರೆಸ್ಸ್‌ಮೆಂಟ್ ಇಲ್ಲ, ಮಾರ್ಕ್ ಯಾರಿಗೂ ಮಾಡಿಕೊಟ್ಟಿಲ್ಲ. ಈ ಮಧ್ಯೆದಲ್ಲಿ ಸರ್ಕಾರದವರು ಟೆಂಡರ್‌ನ್ನು ಕರೆಸುತ್ತಾರೆ. ಲೆಸ್ ಆಗುತ್ತದೆ ಆಹ ಅವನು ಸ್ಟೇ ಮಾಡುತ್ತಾನೆ. ಏಕೆ ಮಾಡಿದಿರಿ ಏಂದು ಕೇಳಿದರೆ ನೀವ್ಯಾರು ಕೇಳುವುದಕ್ಕೆ, ಎನ್ನುತ್ತಾರೆ, ಇವತ್ತು ಇಲ್ಲಿ ನಾಗೇಗೌಡರು ಇಲ್ಲ. ಒಂದುವೇಳೆ ಅವರು ಇದ್ದರೆ ನಾನು ಅಲ್ಲಿ ಬಂದು ಕುಳಿತುಕೊಳ್ಳುತ್ತಿದೆ. ಮತ್ತು ಅವರನ್ನು ಇವತ್ತು ಕೇಳುತ್ತಿದ್ದೇ. ನೀವ್ಯಾರು ಕೇಳುವುದಕ್ಕೆ ಎಂದು ಹೇಳಿದ್ದಾರೆ ನನಗೆ ಅವತ್ತು ಎದೆನೋವು ಇದ್ದುದ್ದರಿಂದ ಗಲಾಟೆ ಮಾಡುವುದಕ್ಕಾಗಲಿಲ್ಲ, ನಾನು ಅಪಾಲೇ ಆಸ್ಪತ್ರೆಗೆ ಹೋದೆ. ಆದರೆ ಮಂತ್ರಿಗಳಿಂದ ಬಂದ ಉತ್ತರವನ್ನು ನೋಡಿದಾಗ ಬಹುಶ: ನಾಗೇಗೌಡರು ಆ ಸ್ಥಾನದಲ್ಲಿ ಇರುವುದಕ್ಕೆ ನಾಲಾಯಕ್ ಆಗಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಅವರ ಫೋಟೋ ಎಲ್ಲಾ ಇದೆ ಅವರು ಕೊಡುತ್ತಾರೆ, ದಯಮಾಡಿ ತಾವು ಅದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ಈ ಕೆಲಸ ಆಗಿ ಹೋಗಿದೆ. ಅದು ಆದ ನಂತರ ಟೆಂಡರ್ ಕರೆಯುತ್ತಾರೆ. ಅದು ಅದ ನಂತರ ಯಾರೋ ಟೆಂಡರ್‌ಗೆ ಅರ್ಜಿ ಹಾಕುತ್ತಾರೆ, ಲೆಸ್‌ಗೆ ಹಾಕುತ್ತಾರೆ ನಾಲೆಯಾಗಿದೆ ಏಕೆ ತೆಗೆದುಕೊಳ್ಳಬಾರದೆಂದು. ಸರ್ಕಾರಿರದಿಂದ ಸ್ಟೇ ಬರುತ್ತದೆ, ಈ ಟೆಂಡರಿನ ಫೈನಲೈಜೇಶನ್ ಅನ್ನು ನಾನು ಸ್ಟೇ ಮಾಡಿದ್ದೇನೆಂದು; ತಾವು ಅರ್ಥ ಮಾಡಿಕೊಳ್ಳಬೇಕು ಈ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ನಡೆಯುತ್ತಿದೆ. ಅದರ ಪೂರ್ಣ ಮಾಹಿತಿ ನನ್ನ ಹತ್ತಿರ ಇದೆ. ಚೀಫ್ ಇಂಜನೀಯರ್ ಸ್ಪಾಟ್‌ಗೆ ಹೋಗುತ್ತಾರೆ. ಈಗಾಗಲೇ ನಾನು ಆ ಕೆಲಸವನ್ನು ಮಾಡಿದ್ದೇನೆ, ನೀವು ಮತ್ತೆ ಅದನ್ನು ಟೆಂಡರ್ ಹೇಗೆ ಕರೆದಿದ್ದೀರಿ ಎಂದು ಧರಣಿ ಮಾಡುತ್ತಾರೆ. ಇದು ಏನು ರಾಜ್ಯವೇ? ಲೂಟಿಗೆ ಇತಿ ಮಿತಿ ಏನು ಇಲ್ಲವೇ? ಲೂಟಿ ಮಾಡುತ್ತಾರೆ, ಮಾಡಿದ್ದಾರೆ; ಇಷ್ಟೊಂದ? 75 ಲಕ್ಷ 76 ಲಕ್ಷ ಒಂದು ಕೋಟಿ ರೂಪಾಯಿಗಳವರೆಗೆ

ನಾಲೆಯ ಕೆಲಸವನ್ನು ಮೊದಲು ಮಾಡಿ ಆಮೇಲೆ ಟೆಂಡರ್ ಕರೆಯುವ ವ್ಯವಸ್ಥೆಯನ್ನು ರಾಜ್ಯದಲ್ಲಿ ಇಟ್ಟಿದ್ದಾರೆ. ಇದರ ಜೊತೆಗೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಎಂದು ಮಾಡಿಕೊಂಡಿದ್ದಾರೆ. ಯಾರಿಗೆ ಬೇಕೋ ಅವರಿಗೆ ಕೆಲಸ ಕೊಡುವುದಕ್ಕೆ ಈ ಕಾರ್ಪೊರೇಷನ್; ಎಲ್ಲಾ ಗುತ್ತಿಗೆಯನ್ನು ರದ್ದು ಮಾಡುವುದಕ್ಕೆ ಎಲ್ಲಾ ಸೀರಿಟಿ ಪೇಮೆಂಟ್‌ನ ಸೀನಿಯಾರಿಟಿಯನ್ನು ವೈಲೇಟ್ ಮಾಡುವುದಕ್ಕೆ ಇವತ್ತು ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್ ಇವರಿಗೆ ದೇವಸ್ಥಾನ. ಇವರಿಗೆ ಯಾರಿಗೆ ಬೇಕು ಅವರಿಗೆ ಕೆಲಸ ಇವರಿಗೆ ಯಾರ ಯಾರು ಹತ್ತಿರ ಚುನಾವಣೆಯ ಕೆಲಸ ಯಾರ ಯಾರ ಹತ್ತಿರ ಜನಾಂಗದ ಕೆಲಸವನ್ನು ಮಾಡುತ್ತಾರೆ ಅವರಿಗೆ ಕೆಲಸ. ತಾವು ಇದರ ಬಗ್ಗೆ ಸಮಿತಿಯನ್ನು ನೇಮಕ ಮಾಡಿಬೇಕು ತರಿಸಬೇಕು ಎಂಟ್ರೆಸ್ಟ್‌ಮೆಂಟ್ ಯಾವ ಆಧಾರದ ಮೇಲೆ ಮಾಡುತ್ತಾರೆಂದು ಇವರು ಯಾರೋ ಒಬ್ಬರು ನಿವೃತ್ತಿಯಾದ ಇಂಜನೀಯರ್ ಅವರನ್ನು ತೆಗೆದುಕೊಂಡು ಹೋಗಿ ಎರಡು ವರ್ಷ ಎಕ್ಸ್‌ಟೆಂಡ್ ಮಾಡಿ ಕೂಡಿಸಿದ್ದಾರೆ. ಬೇರೆ ಯಾರು ಇಂಜನೀಯರುಗಳು ಇರಲಿಲ್ಲವಾ? ಈ ರಾಜ್ಯದ ಇಂಜನೀಯರ್ಸ್ ಅಸೋಸಿಯೇಷನ್‌ದಲ್ಲಿ ಸನ್ಮಾನ್ಯ ಮಂತ್ರಿಗಳ ಹತ್ತಿರ ಅವರು ಕೇಳಿಕೊಂಡರು ಎಕ್ಸ್‌ಟೆಂಡ್ ಯಾರಿಗೂ ಕೊಡಬೇಡಿ ಬೇರೆಯವರಿಗೆ ಕೊಡುವುದು ತಪ್ಪುತ್ತದೆ. ಇವರ ಕಾಲನ್ನು ಒತ್ತಿಕೊಂಡು ಇದ್ದರು ಎನ್ನುವ ಕಾರಣಕ್ಕೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ನಿವೃತ್ತಿಯಾದರೂ, ಎರಡು ವರ್ಷ ಎಂ.ಡಿ. ಯಾಗಿದ್ದಾರೆ. ಇಂತಹವರಿಗೆ ಕೆಲಸವನ್ನು ಕೊಡಿ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಿಗೆ ಚೀಟಿ ಬರೆದು ಕಳುಹಿಸುತ್ತಾರೆ. ಮತ್ತು ಕಾರ್ಯನಿರ್ವಾಹಕ ಅಭಿಯಂತರರಿಗೆ. ಮೇಲೆ ಒಂದು ಕೆಳಗೆ ಒಂದು ಸಹಿ. ಕಾಗದ ಇಲ್ಲ ಮತ್ತೆ ಅದನ್ನು ವಾಪಸ್ಸು ತಂದು ಕೊಡಬೇಕು ಇಂಜನಿಯರುಗಳು. ಇದರ ಬಗ್ಗೆ ಸಿಕ್ಕಿಹಾಕಿಕೊಂಡು ಅಲ್ಲಿರುವ ಎ.ಇ.ಇ. ಗಳು ಕಾರ್ಯನಿರ್ವಾಹಕ ಅಭಿಯಂತರು ಸೆಸ್ಪೆಂಡ್ ಆಗಬೇಕು ಇವರನ್ನು ಯಾರು ಅಲ್ಲಾಡಿಸಲೇ ಇಲ್ಲ. ನನ್ನ ಕ್ಷೇತ್ರದಲ್ಲಿ ಒಬ್ಬರು ಕಾರ್ಯನಿರ್ವಾಹಕ ಅಭಿಯಂತರರು ಇದ್ದಾರೆ, ಸ್ಪಾಟ್‌ಗೆ ಹೋಗುವುದಿಲ್ಲ ಅಲ್ಲಿಯ ಕೆಲಸವನ್ನು ನೋಡುವುದಿಲ್ಲ. ಬೇಕಾದರೆ ತಾವು ನನ್ನ ಕ್ಷೇತ್ರಕ್ಕೆ ಬಂದು ನೋಡಿ, ನನ್ನ ಕ್ಷೇತ್ರದ ಅರಳುಗುಪ್ಪೆಯಲ್ಲಿ 65 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಸೇತುವೆಯನ್ನು ಮಾಡಿ ಕಬ್ ಅಂಡ್ ಕವರ್ ಮಾಡಿದ್ದು ಮೇಲ್ಗಡೆ ಮಣ್ಣು ತುಂಬಿದ ಮೇಲೆ ಅದು ಕೆಳಗೆ ಕುಸಿದು ಬಿತ್ತು ಅದನ್ನು ಈಗ ಮುಚ್ಚಿ ಹಾಕುತ್ತಿದ್ದಾರೆ. ಪತ್ರಿಕೆಯಲ್ಲಿ ಬಂದರೆ ಚೀಫ್ ಇಂಜನೀಯರರು ಹೋಗಲಿಲ್ಲ ಸೂಪರಿಂಟೆಂಡೆಂಟ್ ಇಂಜನೀಯರರು ಅಲ್ಲಿಗೆ ಹೋಗಲಿಲ್ಲ. ಆ ಸೇತುವೆ ಏಕೆ ಕುಸಿಯಿತು ಎಂದು ನೋಡಲಿಲ್ಲ. ನೀವು ಕೊಟ್ಟ ಅವಧಿಗಿಂತ ಮೂರು ವರ್ಷದ ನಂತರ ಮುಗಿಸುತ್ತಿದ್ದಾರೆ. ಆ ಸೇತುವೆಯು ಇವತ್ತು ಕುಸಿಯುತ್ತಿದೆ, 10-12- ಹಳ್ಳಿಗಳಿಗೆ, ನನ್ನ ಕ್ಷೇತ್ರದಲ್ಲಿ ಸಂಪರ್ಕ ಕಡಿತವಾಗಿದೆ. ಅಲ್ಲಿಗೆ ಬಸ್ಸುಗಳು ಹೋಗಿ ನಾಲ್ಕು ವರ್ಷವಾಯಿತು. ನಾವು ರಾಜಕೀಯವನ್ನು ಮಾಡಬಹುದಾ?. ಜನ ನಮ್ಮನ್ನು ಹಾಗೆ ಬಿಡುತ್ತಾರಾ? ನಾವು ಯಾರನ್ನು ಕೇಳುವುದು? ಯಾರನ್ನೂ ಕೇಳುವುದಕ್ಕಾಗುವುದಿಲ್ಲ. ಅಲ್ಲಿರುವ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಇಂತಹವರಿಗೆ ನಾವು ಇಂತಿಷ್ಟು ಹಣವನ್ನು ಕೊಡುತ್ತೇವೆ. ಅದರಲ್ಲಿ ನನ್ನ ಹೆಸರನ್ನೂ ಬರೆಯುತ್ತಾರೆ ಇವರು ಒಂದೊಂದು ಪರ್ಸೆಂಟು ತೆಗೆದುಕೊಳ್ಳುತ್ತಾರೆ ಎಂದು ನಾವು ಆ ಪಾಪವನ್ನು ಮಾಡಿದ್ದರೆ ನಮ್ಮನ್ನು ಇಲ್ಲಿ ನೇಣುಹಾಕಲಿ. ಇಲ್ಲಿಯವರೆಗೆ ಎನ್‌ಕ್ವೈರಿ ಮಾಡಲಿಲ್ಲ. ಪಬ್ಲಿಕ್‌ದಲ್ಲಿ ಬರೆಯುತ್ತಾರೆ ಶಾಸಕರಿಗೆ ಇಷ್ಟು ಪರ್ಸೆಂಟು ಕೊಡುತ್ತೇವೆ ಕಾರ್ಯನಿರ್ವಾಹಕ

ಅಭಿಯಂತರರು ಹೇಳಿದ್ದಾರೆಂದು ನನಗೆ ಪತ್ರದ ಮೂಲಕ ಪೋಸ್ಟಿನಲ್ಲಿ ಕಳುಹಿಸುತ್ತಾರೆ. ಈ ಪಾಪಕ್ಕೆ ನಾವು ಶಾಸಕರು ಆಗಿದ್ದೇವಾ? ನಮ್ಮ ತಂದೆ ತಾಯಿ ನಮ್ಮನ್ನು ಹೆತ್ತಿದ್ದಾರೆ ನಮ್ಮ ಹೊಟ್ಟೆಗೆ ಅನ್ನ ಹಾಗೂ ಬಟ್ಟೆ ಕೊಡುವುದಕ್ಕೆ ಶಕ್ತಿ ಇಲ್ಲದವರಾ? ಯಾವನೋ ಹಣವನ್ನು ತಿನ್ನುವುದು ನಮ್ಮ ಮೇಲೆ ಹೋರಿಸುವುದಾ? ಲೂಟಿ ನಡೆಯುತ್ತಿದೆ ಇವತ್ತು ಹೇಮಾವತಿಯಲ್ಲಿ ಇದನ್ನು ಏನಾದರೂ ಮಾಡಿ ಸರ್ಕಾರದವರು ವಿಚಾರಣೆ ಮಾಡುತ್ತೀರಾ? ತಾಕತ್ತು ಇದೆಯಾ? ನೈತಿಕತೆ ಇದೆಯಾ? ಬಂದು ಅಲ್ಲಿ ಇರುವವರನ್ನು ಕೇಳುತ್ತೀರಾ ಏನಾಗುತ್ತಿದೆ ಹೇಮಾವತಿ ನಾಲೆ ಎಂದು, ಬರೀ ಲೂಟಿನಡೆಯುತ್ತಿದೆ. ಒಂದು ಜೆಸಿಬಿ ಕೆಲಸ ಎಂಟ್ರೆಸ್ಟ್‌ಮೆಂಟ್ ಆಗಬೇಕಾದರೆ ವಿಧಾನಸೌಧಕ್ಕೆ ಬರಬೇಕು. ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂಟ್ರೆಸ್ಟ್ ಮಾಡುವುದಿಲ್ಲ ಇವರು ಪತ್ರವನ್ನು ಕಳುಹಿಸಬೇಕು ಇಲ್ಲಿಂದ ಕೆಲಸವನ್ನು ಕೊಡಿ ಜೆ.ಸಿ.ಬಿ.ನಲ್ಲಿ ಮಣ್ಣು ತೆಗೆಯುವ ಕೆಲಸ ಒಂದೂವರೇ ಕೋಟಿ ರೂಪಾಯಿಗಳದ್ದು ಕೊಡಿ, 75 ಲಕ್ಷ ರೂಪಾಯಿಗಳದ್ದು ಕೊಡಿ ಅರ್ಧ ಕಿ.ಮೀ. ಕೊಡಿ ಮುಕ್ಕಾಲು ಕಿ.ಮೀ. ಕೊಡಿ ಎಂದು ಇದನ್ನು ತೆಗೆದುಕೊಂಡು ಹೋದರೆ ಅಲ್ಲಿ ಎಂಟ್ರೆಸ್ಟ್‌ಮೆಂಟ್ ಏನು ಇದು ಬರೀ ಎಂಟ್ರೆಸ್ಟ್‌ಮೆಂಟ್ ಕಮಿಟಿ. ನೀವು ಯುಕೆಪಿಯಲ್ಲಿ ಎಂಟ್ರೆಸ್ಟ್‌ಮೆಂಟ್ ಕಮಿಟಿ ಮಾಡಿದ ಕೆಲಸವನ್ನು ನೋಡಬೇಕು, ಎರಡೂವರೆ ಕೋಟಿ ರೂಪಾಯಿಗಳವರೆಗೆ ವರ್ಕ್ ಎಂಟ್ರೆಸ್ಟ್ ಮಾಡಬಹುದೆಂದು ಹೇಳಿ ಆಮೇಲೆ 5 ಕೋಟಿ ರೂಪಾಯಿಗಳವರೆಗೆ ಹೆಚ್ಚಿಗೆ ಮಾಡಿದರು. ಏಕೆ ಟೆಂಡರ್ ಕರೆಯುವುದಿಲ್ಲ, ಏಕೆ ಅಂದರೆ ಅಲ್ಲಿ ಜಾಗ ಬಿಡುವವರಿಗೆ ತೊಂದರೆಯಾಗುತ್ತದೆ ಅಕ್ವಿಜಿಶನ್‌ಗೆ ತೊಂದರೆಯಾಗಿ ಬಿಡುತ್ತದೆ ಅವರನ್ನು ಒಪ್ಪಿಸುವಂಥದ್ದು ಅವರನ್ನು ಒಪ್ಪಿಸಲಿಕ್ಕೆ 5 ಕೋಟಿ ರೂಪಾಯಿಗಳ ಟೆಂಡರ್‌ನ್ನು ಕೊಡುತ್ತಾರೆ. ಸರ್ಕಾರದಲ್ಲಿ ಹಣ ಇರಲಿಲ್ಲವೇ? ಅವನಿಗೆ ನೀವು 10-20 ಸಾವಿರ ರೂಪಾಯಿಗಳನ್ನು ಪರಿಹಾರ ಕೊಡುವುದಕ್ಕೆ ಆಗುತ್ತಾ ಇರಲಿಲ್ಲವೇ? ಯಾರೋ ಆಂಧ್ರದವರನ್ನು ಅಥವಾ ನಿಮಗೆ ಬೇಕಾದವರನ್ನು ಕರೆದುಕೊಂಡು ಬಂದು ಅವನ ಕಡೆಯಿಂದ ಆ ಮಾಲಿಕನಿಂದ ಸಹಿ ಹಾಕಿಸಿಕೊಂಡು ಇಂತಹವರಿಗೆ ಕೆಲಸವನ್ನು ಕೊಟ್ಟರೆ ಅವರಿಗೆ ನಾನು ಜಾಗವನ್ನು ಕೊಡುತ್ತೇನೆಂದು ಹೇಳುತ್ತಾರೆ. ಆ ಕೆಲಸವನ್ನು ಕೊಡಲಿಕ್ಕೆ ಒಬ್ಬ ಕಾಂಟ್ರಾಕ್ಟರಿಗೆ ಎರಡೂವರೆ ಕೋಟಿ ರೂಪಾಯಿಗಳಿಂದ 5 ಕೋಟಿ ರೂಪಾಯಿಗಳವರೆಗೆ ಎಂದು ಇತ್ತು. ಅಧ್ಯಕ್ಷರೇ, ತಮಗೆ ಒಂದು ಮಾಹಿತಿಯನ್ನು ಕೊಡುತ್ತೇನೆ. ಲೈನ್ ಎಸ್ಟಿಮೇಂಟ್ 4 ಕೋಟಿ ರೂಪಾಯಿಗಳಿಗೆ ಆಗುವ ಕೆಲಸವನ್ನು ಒಬ್ಬನಿಗೆ ವಹಿಸಿದ ಮೇಲೆ ಅದಕ್ಕೆ ಒಂದು ಕಮಿಟಿ ಅದಕ್ಕೆ ಹನ್ನೊಂದೂವರೆ ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ತಮಗೆ ಇಲ್ಲಿರುವ ಮಾಹಿತಿಯನ್ನು ಓದಿ ಹೇಳುತ್ತೇನೆ ಎನ್‌ಆರ್‌ಬಿಸಿ 26ರಲ್ಲಿ 420 ಲಕ್ಷ ರೂಪಾಯಿ ಲೈನ್ ಎಸ್ಟಿಮೇಂಟ ಇದ್ದದ್ದಕ್ಕೆ 11 ಕೋಟಿ 60 ಲಕ್ಷ ರೂಪಾಯಿಗಳ ಪೇಮೆಂಟ್ ಮಾಡುತ್ತಾರೆ. ಎನ್‌ಆರ್‌ಬಿಸಿ 27ರಲ್ಲಿ 250 ಲಕ್ಷ ರೂಪಾಯಿಗಳಿಗೆ 22 ಕೋಟಿ 75 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಎನ್‌ಆರ್‌ಬಿಸಿ 32 ರಲ್ಲಿ 390 ಲಕ್ಷ ರೂಪಾಯಿಗೆ 735 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಕಾಂಟ್ರಾಕ್ಟರಿಗೆ ಗುತ್ತಿಗೆಯನ್ನು ವಹಿಸಿದ ಮೇಲೆ, ಮೊದಲೇ ಇದನ್ನು ಹೇಳಿದ್ದರೆ 100 ಜನ ಗುತ್ತಿಗೆದಾರರು ಬಂದು ಕಾಂಪಿಟೀಷನ್ ಮಾಡುತ್ತಿದ್ದರು 1000 ಜನರು ಬಂದು ಕಾಂಪಿಟೀಷನ್ ಮಾಡುತ್ತಿದ್ದರು. 4 ಕೋಟಿ ರೂಪಾಯಿಗಳಿಗ ನೀವು ಒಂದು ಲೈನ್ ಎಸ್ಟಿಮೇಂಟ್ ಮಾಡಿದರೆ 5 ರಿಂದ 10 ಪರ್ಸೆಂಟ್ ವ್ಯತ್ಯಾಸ ಆಗುತ್ತದೆ.

ಅಧ್ಯಕ್ಷರು:- ಅಲ್ಲಿ ಮಣ್ಣಿನ ಸ್ವಭಾವ ಹೇಗೆ ಇದೆಯೋ?.. ಇಷ್ಟು ಹೆಚ್ಚುಕಡಿಮೆ ಆಗಬೇಕಾಗಿದ್ದರೆ.

ಶ್ರೀ ಜೆ. ಸಿ. ಮಾಧುಸ್ವಾಮಿ:- ಸ್ಪೆಸಿಫಿಕೇಷನ್ ಎಲ್ಲಾ ಕೊಟ್ಟು, ಅಲೆಲ್ಲಾ ಟ್ರೈಯಲ್ ಸೀಟ್ ತೆಗೆದುಕೊಂಡು, ಅಲ್ಲಿ ರಾಕ್ ಏನಿದೆ, ಅಲ್ಲಿ ಭೂಮಿ ಕುಸಿಯುತ್ತದೆಯೇ ? ಅಲ್ಲಿ ಸಾಫ್ಟ್ ರಾಕ್ ಇದೆಯೇ? ಹಾರ್ಡ್ ರಾಕ್ ಇದೆಯೇ ಎಂಬುದನ್ನು ನೋಡಿದ ಮೇಲೆಯೇ ಲೈನ್ ಎಸ್ಟಿಮೇಟ್‌ನ್ನು ಕೊಡುವುದು. ಅದರಲ್ಲಿಯೂ ಒಂದು 5-10ಪರ್‌ಸೆಂಟ್ ಹೆಚ್ಚು ಕಡಿಮೆ ಆಗಬಹುದು. ಮಣ್ಣಿನ ಸ್ವಭಾವ ಏನಿದೆಯೋ, ಚಿನ್ನದ ಸ್ವಭಾವ ಏನಿದೆಯೋ ಎಂಬುದು ಕೊಟ್ಟವರಿಗೆ ಗೊತ್ತು. ನಾನು ಟೆಕ್ನಿಕಲ್ ಎಕ್ಸ್‌ಪರ್ಟ್ ಅಲ್ಲ. ನನ್ನ ಹತ್ತಿರ ಇರುವ ಮಾಹಿತಿಗಳ ಪ್ರಕಾರ ಒಂದು ವರ್ಕ್‌ನ್ನು ಎಂಟ್ರೆಸ್ಟ್ ಮಾಡಿದಮೇಲೆ ಈ ತರಹ ರಿವಿಜನ್....

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಎಂದು ಹೇಳುವುದು ಸರಿಯಲ್ಲ. ಮಣ್ಣಿನ ಸ್ವಭಾವ ಎಂಬ ಬಗ್ಗೆ ಏನು ಬೇಕಾದರೂ ಮಾತನಾಡಿಕೊಳ್ಳಿ ಹೆಣ್ಣಿನ ಬಗ್ಗೆ ನೀವು ಕಂಪೇರ್ ಮಾಡುವ ಹಾಗಿಲ್ಲ.

ಅಧ್ಯಕ್ಷರು:- ಹೌದು ಅವರು ಹೇಳಿದ್ದು ಸರಿಯಲ್ಲ.It is correct. I uphold the objection.

ಶ್ರೀ ಜೆ.ಸಿ. ಮಾಧುಸ್ವಾಮಿ:- ಎಂದು ನಾನು ಹೇಳುವ ಹಾಗಿಲ್ಲವೇ? ನಾನೂ ಕೂಡ ಒಂದು ಹೆಣ್ಣಿನ ಹೊಟ್ಟೆಯಲ್ಲಿ ಹುಟ್ಟಿದವನು.

MR. SPEAKER:- objection sustained.

SRI J.C. MADHUSWAMY:- I have also born for a woman. ಇವರೊಬ್ಬರೇ ಹೆಣ್ಣುಮಕ್ಕಳ ಪರವಾಗಿ ಮಾತನಾಡುವವರೇ? ನನ್ನ ತಾಯಿ ಕೂಡ ಹೆಣ್ಣು. ಹೆಣ್ಣಿನ ಸ್ವಭಾವ ಹೇಗೆ ಇದೆ ಎಂದು ಗೊತ್ತಿಲ್ಲ ಎಂದುದು ತಪ್ಪೆ? ಮಹಿಳೆಯರ ಬಗ್ಗೆ ನಿಮಗೆ ಗುತ್ತಿಗೆ ಕೊಟ್ಟಿದ್ದಾರೆಯೇ?

ಅಧ್ಯಕ್ಷರು:- ಅವರು ಕಂಪೇರಿಟಿವ್ ಟರ್ಮ್‌ನಲ್ಲಿ ಮಾತನಾಡಿದ್ದಾರೆ.

ಗೊಂದಲ

ಶ್ರೀ ವಾಟಾಳ್ ನಾಗರಾಜ್:- ಮಾಧುಸ್ವಾಮಿಯವರು ಗಾದೆ ಮಾತನ್ನು ಬಳಸಿ ಹೇಳಿದರು. ವೇದಕ್ಕಿಂತ ಗಾದೆ ಬಹಳ ಪ್ರಾಮುಖ್ಯ ಎಂದು ಹೇಳುತ್ತಾರೆ. ವೇದ ಸುಳ್ಳಾಗಬಹುದು ಆದರೆ ಗಾದೆ ಸುಳ್ಳಾಗಲಾರದು. ಆದ್ದರಿಂದ ಗಾದೆ ಮಾತನ್ನು ಹೇಳಿದ್ದಕ್ಕೆ ತಾವುಗಳು ಸಿಟ್ಟು ಮಾಡಿಕೊಳ್ಳಬಾರದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ, ಮಣ್ಣಿಗೂ, ಹೆಣ್ಣಿಗೂ ಹೋಲಿಕೆ ಬಹಳ ಚೆನ್ನಾಗಿ ಮಾಡಿದ್ದಾರೆ. ಆದ್ದರಿಂದ ಆ ಮಾತು ಸರಿಯಲ್ಲ ಎಂದು ಹೇಳಬಾರದು. ಮಣ್ಣು

ಇಡೀ ದೇಶದ ಜನರನ್ನೆಲ್ಲಾ ಬದುಕಿಸಿದೆ. ಅಂಥ ಶ್ರೇಷ್ಠತೆಯನ್ನು ಹೆಣ್ಣಿಗೆ ಹೋಲಿಕೆ ಮಾಡಿದರೆ ಬೇಡ ಎಂದು ಹೇಳಿದರೆ ನಾವೇನು ಮಾಡುವುದು?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಹೆಣ್ಣನ್ನು ಮಣ್ಣಿಗೆ ಕಂಪೇರ್ ಮಾಡುವುದು ಬಹಳ ತಪ್ಪು.

ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು:- ನೀವು ಹೇಳಿದ್ದನ್ನು ನಾನು ಅಪ್‌ಹೋಲ್ಡ್ ಮಾಡಿದ್ದೇನೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:- ಮಾಧುಸ್ವಾಮಿಯವರು ಹೇಳಿದ್ದು, ಹೆಣ್ಣು, ಹೊನ್ನು, ಮಣ್ಣು ಎಲ್ಲವೂ ಅದೃಷ್ಟಕ್ಕೆ ಸಂಬಂಧಪಟ್ಟದ್ದುದ್ದು. ಅಲ್ಲಿ ಯುಕೆಪಿ ಯಲ್ಲಿ ಅದೃಷ್ಟ ಇದೆ...

ಅಧ್ಯಕ್ಷರು:- ಯುಕೆಪಿ ಅಲ್ಲ ಹೇಮಾವತಿ

ಶ್ರೀ ಜೆ.ಸಿ. ಮಾಧುಸ್ವಾಮಿ:- ನೀವು ಹೇಳಿದ ಹಾಗೆ ನಾನು ಬೇಕಾಗಿಲ್ಲ.

You are not ruling me in any way. -- -- --

ಶ್ರೀ ಅರಗ ಜ್ಞಾನೇಂದ್ರ:- ಅವರು ಹೇಮಾವತಿಯ ಕುರಿತು ಹೇಳಿಲ್ಲ, ಯುಕೆಪಿ ಕುರಿತು ಹೇಳುತ್ತಿದ್ದಾರೆ. ಅಲ್ಲಿನ ಮಣ್ಣು ಆ ಕಂಟ್ರಾಕ್ಟರ್ಸ್‌ಗೆ ಮುಂತಾದವರಿಗೆ ಅದೃಷ್ಟ ತಂದಿದೆ ಎಂದು ಹೇಳಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ನಾನು ಯುಕೆಪಿ ಕುರಿತು ಮಾತನಾಡುತ್ತಿದ್ದೇನೆ. ಈ ಶಾಸನ ಸಭೆಯ ಮುಂದೆ ಈ ವಿಚಾರವನ್ನು ಮಾತನಾಡಲೇ ಬೇಕೆಂದು ನಾನು ಯಾಕೆ ಬಯಸಿದ್ದೇನೆ ಅಂದರೆ, ಈ entrustment of work ನ್ನು ನಿಲ್ಲಿಸಬೇಕು. ಏನು ಎನ್‌ಟ್ರಸ್ಟ್ ಮಾಡುತ್ತಾ ಇದ್ದಾರೆ, ಸಣ್ಣ ಒಂದು ಜಮೀನಿಗೋಸ್ಕರ, ಐದು ಗುಂಟೆ, ಹತ್ತು ಗುಂಟೆಗೋಸ್ಕರ 5-10ಕೋಟಿ ವರ್ಕ್ ಕೊಟ್ಟು ಬಿಟ್ಟು, ಬೇಕಾದವರ ಕೈಯಲ್ಲಿ ಕೆಲಸ ಮಾಡಿಸುತ್ತೇವೆ. ಇದು ಸಂವಿಧಾನಕ್ಕೂ ವಿರೋಧ. ಇದರಲ್ಲಿ ಯಾವ ನೀತಿಯೂ ಇಟ್ಟುಕೊಂಡಿಲ್ಲ. ಇವರಿಗೆ ಬೇಕಾದವರಿಗೆ ಕೆಲಸವನ್ನು ಕೊಡುವುದು. ಅಲ್ಲಿಯ ಸ್ಟೇಟ್ ಇರಿಗೇಷನ್ ವಿಜಿಲೆನ್ಸ್‌ನವರು ಮುಖ್ಯಮಂತ್ರಿಯವರು ಕಳುಹಿಸಿದ ಕಮಿಟಿಯ ಮುಂದೆ ಹೇಳುತ್ತಾರೆ, 'ಇವೊತ್ತು ನಮ್ಮ ವರ್ಕ್ಸ್‌ನ್ನು ನಾವು ಗುರುತಿಸಲೇ ಇಲ್ಲ. ಕಂಟ್ರಾಕ್ಟರ್‌ರೇ ವರ್ಕ್ ಮಾಡಿಬಿಟ್ಟರು. ಮೇಲಿಂದ ಒತ್ತಡ ತಂದು ನನ್ನ ಹತ್ತಿರ ಪೇಮೆಂಟ್ ಮಾಡಿಸಿಕೊಂಡರು ಎಂದು ಹೇಳಿದ ರೆಕಾರ್ಡ್ ಇದೆ. ಇದನ್ನು ನಾನು ಹೇಳಲಿಲ್ಲ. 'we have not entrusted any work. ಅವರೇ ಕೆಲಸ ಮಾಡಿ ಬಿಟ್ಟು ನಮ್ಮ ಹತ್ತಿರ ಪ್ರೆಷರ್ ಮಾಡಿ ಬಿಲ್ ತೆಗೆದುಕೊಳ್ಳುತ್ತಿದ್ದಾರೆ, ಎಂದು ಹೇಳಿದ್ದಾರೆ. ಹಾಗಾದರೆ ಇದಕ್ಕೆಲ್ಲಾ ಯಾವ ಮಿತಿಯೂ ಇಲ್ಲವೇ? 2-3ಕೋಟಿಗಳಲ್ಲಿ ಆಗುವ ಕೆಲಸಕ್ಕೆ 11-12ಕೋಟಿ ಕೊಡುತ್ತಾರೆ ಅಂದರೆ ಏನು? ಇಡೀ ಭಾರತದಲ್ಲಿ ಪಬ್ಲಿಕ್ ಸೆಕ್ಟಾರ್‌ನಿಂದ ಬಡ್ಡಿ ಜಾಸ್ತಿ ಕೊಟ್ಟು ಯಾರಾದರೂ ತೆಗೆದುಕೊಂಡಿದ್ದರೆ

ಅದು ಕೆಬಿಜೆಎಲ್‌ನವರು. ತಮಗೆ ಗೊತ್ತಿರ ಬಹುದು ಐಡಿಬಿಐ ಬಾಂಡ್ ಕೂಡ 14 ಪರ್‌ಸೆಂಟ್ ಕ್ರಾಸ್ ಮಾಡಿದ್ದಕ್ಕೆ ರಿಸರ್ವ್ ಬ್ಯಾಂಕ್‌ನವರು ಆಬ್‌ಜೆಕ್ಟ್ ಮಾಡಿದರು. ಆದರೆ ಇದೊಂದಕ್ಕೆ ಮಾತ್ರ 17.5ಪರ್‌ಸೆಂಟ್ ಬಡ್ಡಿ ಕೊಟ್ಟು ಹಣವನ್ನು ಶೇಖರಣೆ ಮಾಡಲು ಒಪ್ಪಿಗೆ ಕೊಟ್ಟರು. ಎಷ್ಟು ಘನತರವಾದ ಉದ್ದೇಶಕ್ಕಾಗಿ ಅವರು ಕೊಟ್ಟರು?

ಅಧ್ಯಕ್ಷರು:- ಮಾನ್ಯ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವುಗಳು ತಮ್ಮ ತಮ್ಮಲ್ಲಿ ಮಾಡತಕ್ಕಂಥ ಪರಸ್ಪರ ಚರ್ಚೆಯನ್ನು ಸ್ವಲ್ಪ ಮೆಲುಧ್ವನಿಯಲ್ಲಿ ಮಾಡಿಕೊಳ್ಳಿ. ಅವರು ಉಪಯುಕ್ತವಾದಂಥ ಮಾತುಗಳನ್ನು ಹೇಳುತ್ತಿದ್ದಾರೆ ನನಗೆ ಕೇಳುವುದು ಕಷ್ಟವಾಗುತ್ತಿದೆ. ದಯಮಾಡಿ ಸಹಕರಿಸಿ.

ಶ್ರೀ ಜೆ. ಸಿ. ಮಾಧುಸ್ವಾಮಿ:- ಕೆಬಿಜೆಎಲ್ ದುಡ್ಡು ನಮಗೆ ಯಾರಿಗೂ ಬಹುಶ: ದಂಡ ಬೀಳುವುದಿಲ್ಲ ಎಂದು ತಿಳಿದುಕೊಂಡಿದ್ದಾರೆ. ಈ ಹಣವನ್ನು ನಾವೇ ವಾಪಸ್ ಕೊಡಬೇಕಾಗಿರುವುದು. ರಾಜ್ಯದ ಎಕ್ಸ್‌ಚೆಕರ್‌ನಿಂದ, ಟ್ರೆಜರಿ ಇಂದ ಇದು ವಾಪಸ್ ಹೋಗಬೇಕಾಗಿರುವುದು. ಇದು ಎಷ್ಟು ಯಥೇಚ್ಛವಾಗಿ ಖರ್ಚಾಗುತ್ತಿದೆ ಅಂದರೆ. ನಾನು ಇನ್ನೊಂದು ಮಾಹಿತಿಯನ್ನು ಕೊಡಬಯಸುತ್ತೇನೆ. ಸೋಲಾರ್ ಲ್ಯಾಂಪ್ಸ್ ಕೊಳ್ಳುವುದಕ್ಕೆ ಕೇಂದ್ರ ಸರಕಾರದವರು ನಿಯಮಗಳನ್ನು ಮಾಡಿದ್ದಾರೆ. ಆರ್‌ಡಿಪಿಆರ್‌ನಲ್ಲಿ ಒಂದು ಸರಕಾರಿ ಆದೇಶ ಇಶ್ಯೂ ಆಗಿದೆ. ಇಷ್ಟು ಹಣಕ್ಕೇ ಕೊಳ್ಳಬೇಕೆಂದು ಅದರಲ್ಲಿದೆ. 4600ರೂ.ಗಳು ಲ್ಯಾಂಪ್ ಪ್ರೆಸ್ ಇದ್ದರೆ 2000 ಸಬ್ಸಿಡಿ ಇದೆ, ಇನ್ನು 2600ರೂ.ಗಳು ಲ್ಯಾಂಪ್‌ಪ್ರೆಸ್ ಆಗುತ್ತದೆ. ಆದರೆ ಇವರು 9500ರೂ.ಗಳಿಗೆ ಕೊಳ್ಳುತ್ತಾರೆ. ಈ ಪ್ರಕಾರ 17-18ಲಕ್ಷ ರೂ.ಗಳ ಲ್ಯಾಂಪ್ಸ್ ಖರೀದಿ ಮಾಡುತ್ತಾರೆ. ಇದು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ. ಇವರು ಮೆಷಿನರಿಯನ್ನು ನೀವೇ ಯೂಸ್ ಮಾಡಿಕೊಂಡು ಕಂಟ್ರಾಕ್ಟ್ ಮಾಡಬೇಕೆಂದು ಟೆಂಡರ್ ಕೊಡುತ್ತಾರೆ. ಟೆಂಡರ್ ಅಗ್ರಿಮೆಂಟ್ ಆದಮೇಲೆ ಮೆಷಿನರಿಯನ್ನು ಇವರು ಕೊಟ್ಟು ಮುಂದಿನ ವರ್ಷ ಇದನ್ನು ಅನುಪಯುಕ್ತ ಎಂದು ಮಾಡಿಕೊಳ್ಳುತ್ತಾರೆ. ಹೀಗೆ ಕೋಟಿಗಟ್ಟಲೆ ರೂ.ಗಳ ಹಣದ ಅವ್ಯವಹಾರ. ಕಂಟ್ರಾಕ್ಟರ್‌ಗೆ ಆ ಕಂಡೀಷನ್‌ಗಳನ್ನು ಹಾಕದೇ ಟೆಂಡರ್ ಕರೆದಿದ್ದರೆ ನೂರಾರು ಜನ ಕಂಟ್ರಾಕ್ಟರ್‌ಗಳು ಅರ್ಜಿ ಹಾಕಿರುತ್ತಿದ್ದರು. ಇನ್ನೂ 10-20ಪರ್‌ಸೆಂಟ್ ಕಡಿಮೆ ಬಿಡ್‌ಗೆ ಟೆಂಡರ್ ಹಾಕುತ್ತಿದ್ದರು. ಕಡಿಮೆ ದುಡ್ಡಿಗೆ ಕೆಲಸ ಆಗುತ್ತಿತ್ತು. ಟೆಂಡರ್ ಕರೆಯಬೇಕಾದರೆ ಕಂಡೀಷನ್ಸ್. ಅದಕ್ಕೆ ಬೇಕಾಗುವ ಪ್ಲಾಂಟ್ ಅಂಡ್ ಮೆಷಿನರಿಯನ್ನು ನೀವೇ ಒದಗಿಸಿಕೊಳ್ಳಬೇಕೆಂದು ಹೇಳುತ್ತಾರೆ. ಇಷ್ಟು ಮಾಡಿ ಕೆಲಸ ಶುರುವಾದ ಮೇಲೆ ಆತನಿಂದ ಒಂದು ಅರ್ಜಿ ತೆಗೆದುಕೊಳ್ಳುತ್ತಾರೆ. ನಾನು ಇಷ್ಟು ಇನ್‌ವೆಸ್ಟ್ ಮಾಡಲು ಆಗುವುದಿಲ್ಲವಾದ ಕಾರಣ ದಯಮಾಡಿ ನೀವೇ ಕೊಡಿಸಿ ಎಂದು ಕೇಳಿಕೊಳ್ಳುವುದು. ಅನಂತರ ಇವರೇ ಸರಕಾರದ ಹಣದಲ್ಲಿ ಕೊಂಡು ಕೊಡಿಸಿ ಕೊಡುವುದು. ಒಂದು ವರ್ಷವಾದ ಮೇಲೆ ಈ ಲೈನಿಂಗ್ ಮೆಟೀರಿಯಲ್‌ಗೆ ವರ್ಕ್ಸ್‌ಗೆ ಉಪಯೋಗಿಸುವ ಪ್ಲಾಂಟ್‌ಮೆಷಿನರಿಗಳನ್ನು ಒಂದೆರಡು ಕೋಟಿ ರೂ.ಗಳನ್ನು ಕೊಟ್ಟು ಕಂಟ್ರಾಕ್ಟರ್‌ಗೆ ಕೊಡುತ್ತಾರೆ. ಒಂದು ವರ್ಷವಾದ ಮೇಲೆ ಇವುಗಳು ನಮಗೆ ಅನುಪಯುಕ್ತ ಎಂದು ಹೇಳಿ ಹರಾಜು ಮಾಡುತ್ತಾರೆ. ಆಗ ಅದು ಮೂರನೇ ಒಂದು ರೇಟ್‌ಗೂ ಕೂಡ ಹೋಗುವುದಿಲ್ಲ. ಹಾಗಾದರೆ ಇಂಥ ಅವ್ಯವಹಾರಗಳಿಗೆಲ್ಲಾ ಮುಕ್ತಾಯ

ಇಲ್ಲವೇ? ನಿಮ್ಮ ಆತ್ಮಸಾಕ್ಷಿಯನ್ನು ಕೇಳಿಕೊಳ್ಳಿ. ಈ ರಾಜ್ಯವನ್ನು ಏನು ಮಾಡುತ್ತಾ ಇದ್ದೀರಿ? ಈ ರಾಜ್ಯವನ್ನು ಏಕೆ ಇಷ್ಟು ದರೋಡೆ ಮಾಡಲು ಬಿಟ್ಟದ್ದೀರಿ ಅಥವಾ ನೀವೂ ಶಾಮೀಲಾಗಿದ್ದರೆ ಅದನ್ನು ಹೇಳಿಬಿಡಿ. ಇದು ಹುಚ್ಚುಮುಂಡೆ ಸರಕಾರ ನಾವು ಏನಾದರೂ ಮಾಡಿಕೊಳ್ಳ ಬಹುದು ಎಂದು ಹೇಳಿಬಿಡಿ. ಇದನ್ನು ಕಂಟ್ರೋಲ್ ಮಾಡುವುದು ಬೇಡವೇ? ಇದಕ್ಕೆ ಯಾರೂ ದಾಖಲೆಗಳನ್ನು ತರಿಸಿ ನೋಡಿ ಹೇಳುವುದಿಲ್ಲವೇ? ನಾನು ಮೊನ್ನೆ ಮಾನ್ಯ ಸಚಿವರ ಬಚ್ಚೇಗೌಡರವರನ್ನು ಕೇಳಿದೆ. ಅರ್ಬನ್ ವಾಟರ್ ಸಪ್ಲೈ ಅಂಡ್ ಸೀವರೇಜ್ ಬೋರ್ಡ್‌ನಲ್ಲಿ ಒಂದು ಗವರ್ನಮೆಂಟ್ ಆರ್ಡರ್ ಇದೆ. ಸ್ಟೋರ್ ಪರ್ಚೇಸ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾವ ಯಾವ ರೀತಿಯಲ್ಲಿ ಖರೀದಿ ಮಾಡಬೇಕೆಂದು ಇದೆ. ಯಾವುದೇ ಮೆಟೀರಿಯಲ್ ಖರೀದಿಗೆ ಇವರು ಟೆಂಡರ್ ಕರೆದಿಲ್ಲ. ಯಾಕೆ ಕರೆದಿಲ್ಲ ಅಂದರೆ ನಾವು ಎಸ್‌ಪಿಡಿ ರೇಟ್‌ನಲ್ಲಿ ಕೊಳ್ಳುತ್ತೇವೆ ಎಂದರು. ನಾವು ಒಂದು ಸಭೆಯಲ್ಲಿ ಕುಳಿತುಕೊಂಡು ಎಸ್‌ಪಿಡಿ ರೇಟ್ ಲಿಸ್ಟ್ ತೆಗೆದುಕೊಂಡು ಬನ್ನಿ ಅಂದರೆ, ಅದರಲ್ಲಿ ಐದಾರು ಪಟ್ಟು ಹೆಚ್ಚು ರೇಟ್ ಇರುವುದು ಕಾಣುತ್ತದೆ. 1994-95 ರಿಂದ ಈವರೆವಿಗೆ C.I.Sluice Valve 200mm -- -- -- ಎಸ್‌ಪಿಡಿ ರೇಟ್ 3812 ರೂ.ಗಳು ಆದರೆ ಇವರು ಕೊಟ್ಟಿರುವುದು 12, 547ರೂ.ಗಳು. 250ಎಂಎಂ ನದ್ದು ಎಸ್‌ಪಿಡಿ ರೇಟ್ 4461ರೂ.ಗಳು. ಇವರು ಕೊಟ್ಟಿರುವುದು 17, 918ರೂ.ಗಳು. 300ಎಂಎಂಗೆ ಎಸ್‌ಪಿಡಿ ರೇಟ್ ಇರುವುದು 5,354. 96. ಆದರೆ ಇವರು ಕೊಟ್ಟಿರುವುದು 25, 906 ರೂ.ಗಳು ಅಂದರೆ ಐದು ಸಾವಿರ ರೂ. ಎಸ್‌ಪಿಡಿ ರೇಟ್ ಇರುವ ಮಾಲಿಗೆ ಒಂದು ಸ್ಲೂಯಿಸ್ ವಾಲ್ವ್‌ಗೆ ಸರಕಾರದವರು 25ಸಾವಿರ ರೂ.ಗಳನ್ನು ಕೊಡುತ್ತಾರೆ ಇದಕ್ಕೆ ಏನಾದರೂ ಸರಕಾರದ ಆರ್ಡರ್ ಇದೆಯೇ? ಮೈಸೂರು ಲ್ಯಾಂಪ್ಸ್ ಎಂಬ ಒಂದು ಇಂಡಸ್ಟ್ರೀ ಸಿಂಕ್ ಆಯಿತು. ಒಂದು ಗವರ್ನಮೆಂಟ್ ಆರ್ಡರ್ ಇಶ್ಯೂ ಆಗಿ ಬಿಟ್ಟಿತು. ನೀವು ಮೈಸೂರು ಲ್ಯಾಂಪ್ಸ್ ತೆಗೆದುಕೊಳ್ಳಿ ಇರ್‌ರೆಸ್ಪೆಕ್ಟಿವ್ ಆಫ್ ರೇಟ್‌ಕಾಂಟ್ರಾಕ್ಟ್ ಎಂದು ಆದರೆ ಕಿರ್ಲೋಸ್ಕರ್ ಹತ್ತಿರ ಕೊಳ್ಳಲಿಕ್ಕೆ, ಬೇರೆ ಕಡೆಯಲ್ಲಿ ಕೊಳ್ಳಲಿಕ್ಕೆ ನಿಮ್ಮಲ್ಲಿ ಗವರ್ನ್‌ಮೆಂಟ್ ಆರ್ಡರ್ ಇದೆಯೇ? ಇಲ್ಲ. ಹಾಗಾದರೆ ಹೇಗೆ ಕೊಂಡಿದ್ದೀರಿ? ಕೇಳಿದರೆ ನಮ್ಮ ಇಷ್ಟು, ಎಂಡಿ ಮುಂದೆ ಇಟ್ಟಿದ್ದೇವೆ, ಬೋರ್ಡ್‌ನ ಮುಂದೆ ಇಟ್ಟಿದ್ದೇವೆ ಎಂದು ಹೇಳಬಹುದು. ಹಾಗಾದರೆ ಎಸ್‌ಪಿಡಿ ಏತಕ್ಕೆ ಇಟ್ಟುಕೊಂಡಿದ್ದೀರಿ? ಒಂದು ಸ್ಟೋರ್ ಪರ್ಚೇಸ್ ಡಿಪಾರ್ಟ್‌ಮೆಂಟ್ ಎಂದು ಇಟ್ಟುಕೊಂಡು ಅದನ್ನು ಮೀರಿ ಕೊಳ್ಳಬಾರದು ಎಂದು ಇರುವಾಗ ಹೀಗೆ ಮಾಡಬಹುದೇ? ತುಮಕೂರು, ತಿಪಟೂರು ಪಟ್ಟಗಳಿಗೆ ನಡೆದಂಥ ಪ್ಲಾನ್ಡ್ ಸ್ಕೀಂಗೂ ಕೂಡ ಇವೊತ್ತಿನ ವರೆಗೂ ಟೆಂಡರ್ ಕರೆದಿಲ್ಲ. ಯಾಕೆ ಎಂದು ಕೇಳಿದರೆ ನಾವು ಎಸ್‌ಪಿಡಿಗೆ ಕೊಡುತ್ತೇವೆ ನಮಗೆ ರಿಸ್ಕ್ ಬೇಡ ಎಂದು ಹೇಳುತ್ತಾರೆ. ಎಸ್‌ಪಿಡಿ ಧಾರಣೆ ಎಲ್ಲಿದೆ ಎಂದು ಕೇಳಿದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಐದುಪಟ್ಟು ಜಾಸ್ತಿ ಹಣವನ್ನು ಕೊಟ್ಟದ್ದು ಯಾಕೆ ಎಂದು ಕೇಳಿದರೆ ಅದು ಕಿರ್ಲೋಸ್ಕರ್ ಮೇಕ್ ಎಂದು ಹೇಳುತ್ತಾರೆ. ಹಾಗಾದರೆ ಐಎಸ್‌ಐ ಸ್ಟ್ಯಾಂಪ್‌ಗೆ ಬೆಲೆ ಇಲ್ಲವೇ? ನಿಮ್ಮ ಎಸ್‌ಪಿಡಿಗೆ ಬೆಲೆ ಇಲ್ಲವೇ? ಅಲ್ಲಿ ಕುಳಿತಿರುವವರೆಲ್ಲರೂ ನಾಮರ್ದ್ ಅಧಿಕಾರಿಗಳೇ? ಅವರನ್ನೆಲ್ಲಾ ಯಾಕೆ ಇಟ್ಟಿದ್ದೀರಿ? ಇವರ ಇಚ್ಛೆಯ ಹಾಗೆ ಮಾಡುವುದಾದರೆ ಅವರವರಿಗೆ ಬಿಟ್ಟುಬಿಡಿ. ನೀವು ಸರಕಾರವನ್ನು ನಡೆಸುವುದಾದರೂ ಏತಕ್ಕೆ ? ಸಾರ್ವಜನಿಕರ ಹಣವನ್ನು ಇಷ್ಟೊಂದು ದೋಚಲು ಬಿಡುತ್ತೀರಿ ? ನಾನು ಒಂದೊಂದು ಉದಾಹರಣೆಯನ್ನು

ಹೇಳಿದ್ದೇನೆ ಮಾತ್ರ ಲಕ್ಷಾಂತರ ರೂಪಾಯಿಗಳ ವ್ಯವಹಾರವಿದೆ. ಈ ಬಗ್ಗೆ ನಾನು ಮಾನ್ಯ ಬಚ್ಚೇಗೌಡರಿಂದ ಬಹಳ ನಿರೀಕ್ಷೆ ಮಾಡಿದ್ದೆ. ಕನಿಷ್ಟ ಆ ಇಲಾಖೆಯನ್ನು ತಹಬಂದಿಗೆ ತರುತ್ತಾರೆ ಎಂದು ಕೊಂಡಿದ್ದೆ. 3-4ತಿಂಗಳುಗಳ ಕಾಲ ಇಲೆಕ್ಷನ್ ಇತ್ತು. ನಾನು ಅವರ ಬಗ್ಗೆ ಬಾರಿ ಗೌರವವನ್ನು ಇಟ್ಟುಕೊಂಡಿದ್ದೇನೆ ಅವರು ಈಗಲಾದರೂ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದರೆ ಅವರ ಮೇಲೂ ಅನುಮಾನ ಪಡುವ ಪರಿಸ್ಥಿತಿಯು ಬರುತ್ತದೆ.

ಶ್ರೀ ಬಿ. ಎಸ್. ಬಚ್ಚೇಗೌಡ:- ಮಾನ್ಯ ಸದಸ್ಯರು ಹೇಳಿರುವಂಥಾದ್ದು ಅಂದಾಜು ಸಮಿತಿ ಮುಂದೆ ಇದೆ ಎಂದು ಕಾಣುತ್ತದೆ. ಅವರು ಈಗ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಅಲ್ಲಿ ಕೇಳಿದಂತಹ ಪ್ರಶ್ನೆಗೆ ಸರಿಯಾದ ಮಾಹಿತಿಯನ್ನು ನಮ್ಮ ಕಾರ್ಯದರ್ಶಿಯವರು ಕೊಟ್ಟಿದ್ದಾರೆ. ಎಸ್‌ಪಿ ಡಿ ರೇಟ್ ಏನು ಕಿರ್ಲೋಸ್ಕರ್ ರಿಂದ ಏನು ಕೊಂಡು ಕೊಂಡಿದ್ದೇವೆ ಅದರ ರೇಟ್ ಏನು ಅದರ ಗುಣಮಟ್ಟವೇನು ಇರಬೇಕೆಂಬ ಬಗ್ಗೆ ಸಾಕಷ್ಟು ಚರ್ಚೆಯಾಗಿಧೆ. ಅದರಲ್ಲಿ ಏನಾದರೂ ಲೋಪವಿದ್ದರೆ ತೋರಿಸಿ. ಅದನ್ನು ತನಿಖೆ ಮಾಡಲಿಕ್ಕೆ ಸಿದ್ಧವೆಂದು ತಪ್ಪಿಕೊಂಡು ಅವರ ಮುಂದೆ ಭರವಸೆ ಕೊಟ್ಟಿದ್ದಾರೆ. ಇದರ ಬಗ್ಗೆ ಕ್ರಮ ಜರುಗಿಸಿಲ್ಲ ಏನೂ ಆಗಿಲ್ಲವೆಂದು ಮಂತ್ರಿಗಳು ಸುಮ್ಮನಿದ್ದಾರೆಂದು ಹೇಳುವುದು ಸರಿಯಲ್ಲ. ನನ್ನ ಗಮನಕ್ಕೆ ತರದೇ ಇಂದು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಈ ರೀತಿಯ ಅವ್ಯವಹಾರ ಅಕ್ರಮ ನಡೆದಿರುವುದು ನನ್ನ ಗಮನಕ್ಕೆ ಬಂದಿಲ್ಲ. ಯಾವುದೇ ರೀತಿಯ ಆಪಾದನೆಯಾದರೆ ತನಿಖೆ ಮಾಡಿಸಿ ನ್ಯಾಯ ದೊರಕಿಸಿಕೊಡುವ ಬಗ್ಗೆ ನಾನು ಸದನಕ್ಕೆ ಭರವಸೆ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ತಾವೇ ಪ್ರಸ್ತಾಪ ಮಾಡಿದ್ದೀರಿ ಅದು ಸಮಿತಿಯ ಮುಂದೆ ಕೊಟ್ಟಿರುವುಂತಹ ಮಾಹಿತಿ ಎಂದು. 5000 ರೂಪಾಯಿ ಎಸ್‌ಪಿಡಿ ರೇಟ್ ಇರುವುದಕ್ಕೆ 25,000ರೂ ಕೊಟ್ಟಿದ್ದೇವೆ ಎಂದು ಇದಕ್ಕಿಂತ ಇನ್ನೇನು ಗುರುತರವಾದ ಆಪಾದನೆ ಮಾಡಬೇಕು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಸಮಿತಿಯ ಮುಂದೆ ಇದನ್ನು ಕೊಟ್ಟಿದ್ದಾರೆ. ಇದು ಸರ್ಟಿಫೈಡ್ ಕಾಪಿ. ನಾನೇಕೆ ಕೊಡಬೇಕು?.

ಶ್ರೀ ಬಿ.ಎಸ್. ಬಚ್ಚೇಗೌಡ:- ಮಾಹಿತಿ ಕೊಡಿ. ತಾವು ನನಗೆ ಕೊಟ್ಟಿಲ್ಲ. ತಾವು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಬರವಣಿಗೆಯಲ್ಲಿ ನನಗೆ ಕೊಡಿ ಇದರ ಬಗ್ಗೆ ವಿಚಾರಣೆಯಾಗಬೇಕು. ಇಂತಹ ಅಕ್ರಮ ನಡೆದಿವೆ ಎಂದು ತಿಳಿಸಿ. ತಮ್ಮ ಮುಂದೆ ಬಂದು ಹೇಳುತ್ತೇನೆಂದು ಹೇಳಿದಿರಿ. ಬರವಣಗೆಯಲ್ಲಿ ಕೊಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅವರು ಕೊಂಡಿರುವ ಪಟ್ಟಿಯನ್ನು ಅವರು ಕೊಂಡಿರುವ ಮೊತ್ತವನ್ನು ನಮಗೆ ಕೊಟ್ಟಿದ್ದಾರೆ. ಇದು ಸರಕಾರದಿಂದಲೇ ಕೊಟ್ಟಿರುವ ಮಾಹಿತಿಯಾದುದರಿಂದ ನಾನು ನಿಮಗೆ ಪರ್ಸನಲ್ ಆಗಿ ಕೊಡಬೇಕೆಂದು ಬಯಸಲಿಲ್ಲ, ಆದರೆ ಈ ರೀತಿ ನಡೆಯುತ್ತಿದೆ ಎಂದು ಇದನ್ನು ನೋಡಿ ಎಂದು ತಮಗೆ ನಾನು ಹೇಳಿದೆ. ಈಗಲೂ ನಾವು ನಿಮ್ಮ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇನೆ. ಇದು ತೆರಿಗೆ ಕಟ್ಟುವವರ ಹಣ. ನಾವು ಹೊಟ್ಟೆಗೆ ಇಲ್ಲದೆ ಸಾಯುತ್ತಿದ್ದೇವೆ. ಸ್ಲೂಯಿಸ್ ವಾಲ್ವ್ ಹಾಕಿದದರೆ ನೀವೇನು ಚಿನ್ನದ, ವಜ್ರದ ವಾಲ್ವ್ ಹಾಕುತ್ತಾರಾ? ಇಲ್ಲವೇ ಬೇರೆ ಕಂಪೆನಿಗೂ ಕಿರ್ಲೋಸ್ಕರ್‌ಗೂ ಅಂತಹ ವ್ಯಾತ್ಯಾಸವೇನೂ ಇರುತ್ತದೆಯೇ?

ಹಾಗಾದರೆ ಇವೆಲ್ಲಾ ಐ ಎಸ್ ಐ ಸ್ಟ್ಯಾಂಪ್ ಏಕೆ ಆಗುತ್ತಿದೆ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕು. ಏನಾದರೂ ಚಿನ್ನದ ವಾಲ್ವ್ ಹಾಕಿದ್ದರೆ ಸಂತೋಷವೆಂದು ಹೇಳಬಹುದಿತ್ತು. ಕಳೆದ 18 ವರ್ಷಗಳಲ್ಲಿ ಚಿನ್ನದ ರೇಟ್ ಇಷ್ಟು ಕಡಿಮೆಯಾಗಿರಲಿಲ್ಲವೆಂದು ಹೇಳುತ್ತಾರೆ. ಆ ಚಿನ್ನದ ವಾಲ್ವ್ ಹಾಕಿದ್ದರೂ ಕೂಡ 25000 ರೂಪಾಯಿಗಿಂತ ಕಡಿಮೆಗೆ ಹಾಕಬಹುದಿತ್ತು. ನನ್ನ ಗಮನಕ್ಕೆ ಬಂದಿಲ್ಲವೆಂದರೆ ಅದಕ್ಕೆ ನಾನು ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ನೀವೊಬ್ಬ ಸಮರ್ಥ ಮಂತ್ರಿಗಳಿದ್ದೀರಿ. ತಾವು ಇದನ್ನು ವಿಮರ್ಶೆ ಮಾಡಬೇಕು. ಸಾರ್ವಜನಿಕರ ಹಣವನ್ನು ಕಾಯುವುದಷ್ಟೇ ನಮ್ಮ ಕೆಲಸ. ನಾವು ಶಾಸಕರಾಗಿ ತಾವು ಮಂತ್ರಿಗಳಾಗಿ ಇದನ್ನು ಕಾಯಬೇಕಾಗುತ್ತದೆ. ಹೀಗೆ ಪೋಲಾಗಲಿ ಎಂದು ಬಿಟ್ಟುಕೊಂಡು ಹೋದರೆ ನಾಳೆ ಸರ್ಕಾರ ದಿವಾಳಿಯಾಗುತ್ತದೆ. ಒಂದೊಂದು ಸಿಟಿಗೆ 15-20 ಸ್ಲೂಯಿಸ್ ವಾಲ್ವ್ ಹಾಕುವ ಕಡೆ 20 ರಿಂದ 25000 ರೂ ವ್ಯತ್ಯಾಸ ತೋರಿಸಿ ಎಸ್ ಪಿ ಡಿ ರೇಟ್ಸ್ ಅನ್ನು ವಯೊಲೇಟ್ ಮಾಡಿ ಕೊಡುತ್ತಿದ್ದಾರೆ ಎಂದರೆ ಇದರಂತ ಇನ್ನೇನು ಆಪಾದನೆ ಮಾಡುವುದಕ್ಕಾಗುತ್ತದೆ.? ಆ ಕಡೆ ಹೋದರೆ ನಾಲೆಯಲ್ಲಿ ಲೂಟಿ; ಈ ಕಡೆ ಹೋದರೆ ವಾಲ್ವ್ ಪೈಪಿನಲ್ಲಿ ಲೂಟಿ, ಮತ್ತೊಂದು ಕಡೆ ಪಂಪ್ ಸೆಟ್‌ನಲ್ಲಿ ಲೂಟಿ. ಇದಕ್ಕೆ ಸರಕಾರ ಹೇಗೆ ನಡೆಯಬೇಕು? ನಮಗೇನೂ ಮಾರ್ಗವಿಲ್ಲದೆ ಇದನ್ನು ಇಲ್ಲಿ ಹೇಳಬೇಕಾದ ಪರಿಸ್ಥಿತಿ ಬಂದಿದೆ. ನಮ್ಮನ್ನೂ ಜನ ಇದರಲ್ಲಿ ಇದ್ದಾರೆಂದು ಹೇಳುತ್ತಾರೆ. ಇದು ವಿಧಾನ ಸಭೆಯ ಗೌರವದ ಪ್ರಶ್ನೆ. ಇಂತಹವುಗಳನ್ನು ಶಿಸ್ತಿತನ ಕ್ರಮಕ್ಕೆ ಒಳಪಡಿಸಬೇಕು. ರಾಜ್ಯದ ಐ. ಎಂ.ಎಲ್. ಐ ಎಂ. ಎಫ್. ಎಲ್. ಗಳಿಗೆ ಇರುವುದು ಒಂದು ಕೇಠೆಟಗರಿಯಲ್ಲಿ 2839 ಲಕ್ಷಲೀಟರ್, ಇನ್ನೊಂದು ಕೇಟಗರಿಯಲ್ಲಿ 1639 ಲಕ್ಷ ಲೀಟರ್ ಒಟ್ಟು 44.78. 74 ಲಕ್ಷ ಲೀಟರ್ ಆಗುತ್ತದೆ. ಇಷ್ಟು ಇರುವ ಕಡೆ ತಾವು ಅಕೌಂಟ್ ಹಾಕಿರುವುದು 1084 ಲಕ್ಷ ಲೀಟರ್ ಅಂದರೆ ನಾಲ್ಕನೇ ಒಂದು ಭಾಗ ಕೂಡ ಆಗುವುದಿಲ್ಲ. ಒಂದು ಕಡೆ ರೆವಿನ್ಯೂ ಬರುವಹಾಗಿಲ್ಲ. ಮತ್ತೊಂದು ಕಡೆ ಬಂದಿದ್ದನ್ನು ಉಳಿಸುವ ಹಾಗಿಲ್ಲ. ರಾಜ್ಯ ಸರಕಾರ ಹೇಗೆ ನಡೆಯುತ್ತದೆ.? ಇಲ್ಲಿ ಸರಕಾರದಲ್ಲಿ ಡಿಮ್ಯಾಂಡ್ ಮಾಡಿದವರಿಗೆ 800 ಕೋಟಿ ಎಕ್ಸ್‌ಟ್ರಾ ಕೊಡಬೇಕು. ಎಲ್ಲಾ ಎಲ್ ಒಸಿಗಳು ಫ್ರೀಜ್. ಯಾವುದೇ 3,4 ನೇ ಕಂತು ಇ ಎ ಎಸ್ ಗ್ರಾಂಟ್ ಇಲ್ಲ. ಲೋಕೋಪಯೋಗಿ ಇಲಾಖೆಯಿಂದ ಬರಬೇಕಾದ ಹಣ ಎಲ್ ಓ ಸಿ ಇಲ್ಲದೆ ಬರುತ್ತಿಲ್ಲ. ನಮ್ಮ ಕಾಲೇಜು 1992 ರಲ್ಲಿ ಪ್ರಾರಂಭವಾಗಿ ಅದು ಹಾಗೇ ನಿಂತಿದೆ. ಕೋರ್ಟ್ ಬಿಲ್ಡಿಂಗ್ ಲಿಂಟರ್ ಲೆವೆಲ್‌ಗೆ ಬಂದು 3 ವರ್ಷದಿಂದ ನಿಂತಿದೆ. ಒಂದೇ ಒಂದು ರೂಫ್ ಹಾಕುವುದಕ್ಕೆ ಹಣ ಬರುತ್ತಿಲ್ಲ. ಕೊಟ್ಟಿರುವುದೆಲ್ಲ ಹೀಗೆ ಬರಬೇಕಾದುದೆಲ್ಲಾ ಹಾಗೆ ಸಣ್ಣ ಚುನಾವಣೆಗೆ ಸಹಾಯ ಮಾಡುತ್ತಾರೆಂದು ಲಕ್ಷಾಂತರ ಲೀಟರ್‌ಗಳ ಪ್ರೊಡಕ್ಷನ್ ತೋರಿಸದೆ ಕೈಗಾರಿಕೆ ನಡೆಸುತ್ತಿರುವವರ ಮೇಲೆ ಕ್ರಮ ಜರುಗಿಸುವುದಕ್ಕೆ ನಿಮಗೆ ಆಗುತಿತರಲಿಲ್ಲವೇ? ಚುನಾವಣೆ ಸಮಯದಲ್ಲಿ ನಮ್ಮ ತಿಪಟೂರಿನಲ್ಲಿ 8 ಲಕ್ಷ ರೂಪಾಯಿ ಬೆಲೆಯ ಒಂದು ಲೋಡ್ ಲಿಕ್ಕರ್ಸ್ ಅನ್ನು ಹಿಡಿದರು. ಅದು ಯಾರದೆಂಬುದನ್ನು ಇವತ್ತಿನವರೆಗೂ ಹೇಳಲಿಲ್ಲ. ಅವನು ಇಂಥವು ಹತ್ತು ಲೋಡ್ ಹಿಡಿಯಲಿ ಬಿಡಿ ಎಂದು ಹೇಳುತ್ತಾನೆ. ಧಾಳಿ ಮಾಡಿ ಹಿಡಿದುದ್ದು ಪತ್ರಿಕೆಯಲ್ಲಿ ಕೂಡ ಬಂತು. ಇದು ಎಲ್ಲಿಂದ ಬರುತ್ತದೆಂದು ಇವರಿಗೆ ತಿಳಿಯುವಷ್ಟು ಶಕ್ತಿ ಇರಲಿಲ್ಲವೇ; ಅವರ ಅಂಗಡಿಯನ್ನು ಸೀಜ್ ಮಾಡಬಹುದಾಗಿತ್ತು ಏಕೆ ಅದನ್ನು ಮಾಡಲಿಲ್ಲ?. ಈ ರೀತಿ ಸರಕಾರ ನಡೆಸಬೇಕೇ? ಎಂದು ಕಡೆ ನಬಾರ್ಡ್ ಒಂದು ಕಡೆ ವಿಶ್ವ ಬ್ಯಾಂಕ್ ಇನ್ನೊಂದು ಕಡೆ ಭಾರತ ಸರಕಾರದವರು ಇನ್ನೊಂದು ಕಡೆ ನಿಮ್ಮ ಬಾಂಡ್‌ಗಳಿಗೆ

ಬಡ ದೇಶದ ಈ ರಾಜ್ಯದ ಜನ ಇನ್‌ವೆಸ್ಟರ್ಸ್‌ಗಳು. ರಾಜ್ಯದ ಜನ ಕೂಲಿ ಮಾಡಿ ಸ್ವಲ್ಪ ಉಳಿಸಿದ್ದನ್ನು ತಂದು ಇಲ್ಲಿ ಹಾಕುತ್ತಾರೆ. ಮಾನ್ಯ ನಿಜಲಿಂಗಪ್ಪನವರು ನನ್ನ ಹತ್ತಿರ 25-28 ಸಾವಿರ ರೂಪಾಯಿ ಉಳಿತಾಯ ಇದೆ ಅದನ್ನು ಕೃಷ್ಣ ಜಲಭಾಗ್ಯ ನಿಗಮಕ್ಕೆ ಹಾಕುತ್ತೇವೆಂದು ಹೇಳಿದಾಗ ನನಗೆ ನಾಚಿಕೆಯಾಯಿತು. ಆ ಹಣವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ. ಕಷ್ಟಪಟ್ಟು ಉಳಿಸಿದ ದುಡ್ಡನ್ನು ತೆಗೆದುಕೊಂಡು ಹೋಗಿ ಯಾರಿಗೆ ಕೊಡುತ್ತಿದ್ದೀರಿ; ಕಂಟ್ರಾಕ್ಟರ್‌ಗಳಿಗೆ, ಇಂಜನಿಯರ್ಸ್‌ಗಳಿಗೆ ಇಲ್ಲವೇ ಬೇರೆ ಯಾರಿಗಾದರೂ ಖರ್ಚು ಮಾಡುತ್ತಿದ್ದೀರಾ? ನೀರಂತೂ ಬರುವುದಿಲ್ಲ. ಆ ಪಾಪದವರ ಹಣವನ್ನು ನೀವು ಪೋಲು ಮಾಡುತ್ತೀರಿ. ಒಂದೊಂದು ರೂಪಾಯಿ ಉಳಿಸಿ ಅದನ್ನು ತಂದು ಇಲ್ಲಿಗೆ ಕಟ್ಟಿದರೆ ಅದನ್ನು ಲಕ್ಷಗಳಿಗೆ ಕೋಟಿಗಳಿಗೆ ಲೆಕ್ಕವಿಲ್ಲದೆ ಈ ರೀತಿಯಾಗುವುದಕ್ಕೆ ಬಿಟ್ಟರೆ ನಮ್ಮ ಜನರ ಗತಿ ಏನು? ಇದನ್ನು ತಮ್ಮ ಅರಿವಿಗೇ ಬಿಡುತ್ತೇನೆ. ಇನ್ನೂ ಅನೇಕ ವಿಚಾರಗಳು ಇವೆ. ನಾನು ನಿಯಮವನ್ನು ಮೀರುವುದಕ್ಕೆ ಇಚ್ಛಪಡುವುದಿಲ್ಲವೆಂದು ತಮಗೆ ತಮಗೆ ತಿಳಿದಿದೆ. ನನ್ನ ಕ್ಷೇತ್ರವಾದ ಚಿಕ್ಕನಾಯಕನ ಹಳ್ಳಿಯಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಈ ಸಲವಾದರೂ ಮಾಡಿಕೊಡಬೇಕೆಂದು ಮಾನ್ಯ ಬಚ್ಚೇಗೌಡರಲ್ಲಿ ವಿನಂತಿಸಿಕೊಳ್ಳುತ್ತೇನೆ. ಲೋಕೋಪಯೋಗಿ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಬಾರ್ಡಿನ ಹಣವನ್ನು ಇವರು ಸ್ವಂತದ ಹಣವೆಂದು ತಿಳಿದುಕೊಂಡಿದ್ದಾರೆ. ಯಾವ ಕ್ಷೇತ್ರಕ್ಕೇ ಬೇಕೋ ಯಾವ ತಾಲ್ಲೂಕಿಗೆ ಬೇಕೋ ಯಾರಿಗೆ ಬೇಕೋ ಅವರಿಗೆ ಕೊಡುತ್ತಿದ್ದಾರೆ. ಈ ಕಡೆಯಲ್ಲಿ ಟ್ರಾಫಿಕ್ ಇದೆಯೋ ಇಲ್ಲವೋ ಈ ರಸ್ತೆಯಾಗಬೇಕೋ ಇಲ್ಲವೋ ಎಂಬುದನ್ನು ಯಾರೂ ಬಂದು ನೋಡಲೂ ಇಲ್ಲ ಕೇಳಲೂ ಇಲ್ಲ. ಇಲ್ಲಿ ಕುಳಿತು ಯಾರೋ ಸಹಿ ಹಾಕಿದರು; ಲಿಸ್ಟ್‌ಗೆ ಅದನ್ನು ಸೇರಿಸಿದರು. ಇ ಎ ಎಸ್ ಗ್ರ್ಯಾಂಟನ್ನು ನಾವು ಖರ್ಚು ಮಾಡಿದರೆ ಇಲ್ಲಿಂದ ಒಂದು ತಕರಾರು ಬರುತ್ತದೇ ಇ ಎ ಎಸ್ ಅನುದಾನವನ್ನು ಪಿಡಬ್ಲ್ಯೂಡಿ ರಸ್ತೆಗೆ ಬಳಸಬೇಡಿ ಎಂದು ಹೇಳುತ್ತಾರೆ. ಮೈನ್ ರಸ್ತೆಗಳೆಲ್ಲಾ ಗುಂಡಿ; ಅದರ ಪಕ್ಕದ ರಸ್ತೆಗಳಿಗೆ ಟಾರ್ ಹಾಕುವ ಸ್ಥಿತಿಗೆ ಬಂದಿದೆ. ಮುಖ್ಯ ರಸ್ತೆಗಳಿಗೇನಾದರೂ ಮಾಡಿ ಎಂದರೆ ಪಿಡಬ್ಲ್ಯೂಡಿಯಲ್ಲಿ ಹಣ ಇಲ್ಲ. ನಬಾರ್ಡಿನಲ್ಲಿ ಅವರಿಗೆ ಬೇಕಾದ ರಸ್ತೆಗಳನ್ನು ಸೇರಿಸುವ ಹಾಗಿಲ್ಲ. ಇದನ್ನು ಇಂಜಿನಿಯರುಗಳ ಅಥವಾ ಸ್ಥಳೀಯ ಪ್ರತಿನಿಧಿಗಳ ವಿವೇಚನೆಗೆ ಬಿಡುವ ಹಾಗಿಲ್ಲ. ಇದರ ಲಿಸ್ಟ್ ಹೇಗೆ ಮಾಡುತ್ತಾರೋ ಗೊತ್ತಿಲ್ಲ. ಒಂದು ಕ್ಷೇತ್ರಕ್ಕೆ 2 ಕೋಟಿ ಮತ್ತೊಂದಕ್ಕೆ ಇಲ್ಲವೇ ಇಲ್ಲ. ಇದಕ್ಕೇನೂ ಅಕೌಂಟಬಲಿಟಿ ಇಲ್ಲವೇ? ನಾವೇನು ಈ ಶಾಸನ ಸಭೆಗೆ ಆರಿಸಿ ಬಂದಿಲ್ಲವೇ; ನಾವೇನು ಸ್ವಂತದ್ದನ್ನು ಕೇಳುತ್ತಿದ್ದೇವೆಯೇ? ನಬಾರ್ಡಿಗೆ ವಾಪಸ್ ಕಳುಹಿಸಬೇಕಾದರೆ ಕಟ್ಟಬೇಕಾದರೆ ನಾವ್ಯಾರೂ ತೆರಿಗೆ ಕಟ್ಟುವುದಿಲ್ಲವೇ? ನಮ್ಮನ್ನು ಯಾರೂ ನೋಡಿಕೊಳ್ಳುವುದೇ ಬೇಡವೇ? ಹಣವನ್ನು ಏನು ಮಾಡುತ್ತೀರಿ. ಆ ರಸ್ತೆಯಲ್ಲಿ ಓಡಾಡುವವರಿಗೆ ಟೋಲ್ ಕಲೆಕ್ಟ್ ಮಾಡಿ ಏನಾದರೂ ಕಟ್ಟುತ್ತೀರಾ? ಅಷ್ಟಾದರೂ ಮಾಡಬೇಕು. ನಬಾರ್ಡಿನ ರಸ್ತೆಯಲ್ಲಿ ಯಾರು ಓಡಾಡುತ್ತಾರೆ ಅವರಿಂದ ಹಣಕಲೆಕ್ಟ್ ಮಾಡಿಕಟ್ಟಿ. ಆ ಸಾಲವನ್ನು ನಮ್ಮ ರಾಜ್ಯ ಸರಕಾರದಿಂದ ಹಣಕೇಳಬಾರದು. ಇನ್ನು ಬಯಲು ಸೀಮೆ ಅಭಿವೃದ್ಧಿ ಮಂಡಲಿ ಬಗ್ಗೆ 70 ಜನ ನಿಂತು ಕೊಂಡು ಬೇಡಿಕೊಂಡೆವು. ನಾವು ಋಷ್ಯಶೃಂಗ್ ದಿಂದ ಕೆಳಿಗೆ ಇಳಿದೆವು. ಏನೂ ಆಗಲಿಲ್ಲ. ಮಾರ್ಚ್ ಮುಗಿಯಿತು. ಇವತ್ತಿನವರೆಗೆ ಅದಕ್ಕೆ ಒಂದು ರೂಪಾಯಿ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿಲ್ಲ ಹಣ ರಿಲೀಸ್ ಆಗಿಲ್ಲ ಬಯಲು ಸೀಮೆ ಅಭಿವೃದ್ಧಿ ಮಂಡಲಿ ಇದೆ ಯು.ಎ.ಎಸ್. ಡಿಪಿಎಪಿ ಇದೆ, ನಬಾರ್ಡ್, ಇದೆ ಅದು

ಮಾಡಲಿಲ್ಲ ಇದು ಮಾಡಲಿಲ್ಲವೆಂದು ಜನ ಬಂದು ಹೇಳುತ್ತಾರೆ. ದೇವಸ್ಥಾನದ ಹತ್ತಿರ ಗಂಟೆ ಅಲುಗಾಡಿಸಿದಂತಾಗಿದೆ. ಇದು ದೇವರನ್ನೂ ನಾವು ನೋಡಲಿಲ್ಲ ನಮಗೆ ಪ್ರಸಾದವೂ ಸಿಗಲಿಲ್ಲ. ಇದಕ್ಕೇನಾದರೂ ಮಾಡಬೇಕು. ಒಂದೊಂದು ಕ್ಷೇತ್ರಕ್ಕೆ 65 ಲಕ್ಷದ ಪ್ಲಾನ್ ಕಳುಹಿಸಿ ಎಂದು ಪತ್ರ ಬರೆದರು, ಅದು ಎಲ್ಲಿಗೆ ಹೋಯಿತೋ ಗೊತ್ತಿಲ್ಲ. ಆ ಲೆಟರ್ ಹೆಡ್ ಆದರೂ ಉಳಿಸಿದ್ದಿದ್ದರೆ ನಮಗೆ 50 ಪೈಸೆಯಾದರೂ ಉಳಿಯುತ್ತಿತ್ತು. ಬರೆದೂ ಬರೆದೂ ಕಾಯುತ್ತಾ ಕುಳಿತಿದ್ದೇವೆ. ಇದಕ್ಕೆ ಯಾರಾದರೂ ಉತ್ತರ ಹೇಳಬೇಕಲ್ಲವೇ? 10 ಲಕ್ಷ, 10 ಲಕ್ಷ ಲೋಕೋಪಯೋಗಿ ಇಲಾಖೆಗೆ ಬೇಕೆಂದು ಪತ್ರ ಬರೆಯುತ್ತಾರೆ. ಇನ್ನು 10 ಲಕ್ಷದ ಬಗ್ಗೆ ಇರಿಗೇಷನ್‌ಗೆ ನೇರವಾಗಿ ನೀವೆಲ್ಲ ಆ್ಯಕ್ಷನ್ ಪ್ಲಾನ್ ಕಳುಹಿಸಿ ಎಂದು ಬರೆಯುತ್ತಾರೆ. ಆ್ಯಕನ್ ತೆಗೆದು ಕೊಳ್ಳುವವರು ಯಾರು; ನಾವು ಪ್ಲಾನ್ ಮಾಡಿ ಏನು ಪ್ರಯೋಜನ?. 5-10 ವರ್ಷವಾದರೆ ಹಳ್ಳಿಗಳಲ್ಲಿನ ರಸ್ತೆಗಳಲ್ಲಿ ಓಡಾಡುವುದಕ್ಕೆ ರಸ್ತೆಗಳು ಇರುವುದಿಲ್ಲ. ತಾವೇನು ಆಡಳಿತ ಮಾಡಿದ್ದೀರಿ. ಇದಕ್ಕೆ ತಾವು ಜನರಿಂದ ವೋಟನ್ನು ನಿರೀಕ್ಷೆ ಮಾಡಬೇಕಾದ್ದು ಇಲ್ಲ. ಅವರು ಹೇಳಿರುವುದು ಸರಿಯಾಗಿಯೇ ಇದೆ. ಇದರಲ್ಲೇನೂ ಎರಡನೇ ಭಾವನೆ ಇಲ್ಲ. ತಾವು ಈಗಲಾದರೂ ಎಚ್ಚರ ಮಾಡಿಕೊಳ್ಳಬೇಕು. ನಾವು ಯಾರಿಗೋಸ್ಕರ ಇದ್ದೇವೆ.? ಯಾರು ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ; ಏತಕ್ಕೋಸ್ಕರ ನಾವು ಇಲ್ಲಿ ಕುಳಿತಿದ್ದೇವೆಂದು ಒಂದು ಕ್ಷಣ ಆತ್ಮಾವಲೋಕನ ಮಾಡಿಕೊಳ್ಳದೆ ಹೋದರೆ ಸರಿಯಾಗುವುದಿಲ್ಲ. ಹಿಂದೆ ಒಂದು ಕಾಲದಲ್ಲಿ ತುಂಬಾ ಆಸೆ ಇಟ್ಟುಕೊಂಡಿದ್ದೆವು. 20-23 ಜನ ಅಲ್ಲಿ ಕುಳಿತಾಗ ಏನಾದರೂ ವಾಪಸ್ ಬರಲಿ ರೈತರಿಗೆ ಕೆಲಸ ಮಾಡೋಣ ರಾಜ್ಯದ ಜನರಿಗೆ ಅನುಕೂಲ ಮಾಡಿಕೊಡೋಣವೆಂದು ಬಹಳ ಆಸೆ ಇಟ್ಟುಕೊಂಡಿದ್ದೆವು. ನಾವೆಲ್ಲ ಸೋತರೂ ನೀವು ಬರಲಿ ಎಂದು ಆಸೆ ಪಟ್ಟೆವು ಸಿಹಿ ಹಂಚಿದೆವು ನಾವೆಲ್ಲಾ. ನಮ್ಮ ಸರಕಾರ ಬಂತು;

12.40. ಪಿ. ಎಂ

ಯಾರಿಗೇನು ಎಂದು ಸಂತೋಷ ಪಟ್ಟೆವು. ತಾವು ಬಂದು ಮಾಡಿದ್ದೇನು; ಗುಡಿಸಿ ಗುಂಡಾಂತರ ಮಾಡಿದಿರಿ. ಕಾಂಗ್ರೆಸ್‌ನವರು ಒಂದಿಷ್ಟು ಮಾತನ್ನಾದರೂ ಕೇಳುತ್ತಿದ್ದರು. ಇಲ್ಲಿ ಯಾರಾದರೂ ನಿಂತು ಮಾತನಾಡಿದರೆ ಬೆಳಿಗ್ಗೆ ಒಂದು ತನಿಖೆಯಾದರೂ ಆ ಬಗ್ಗೆ ಆಗುತ್ತಿತ್ತು. ಇಬ್ಬರು ಮೂವರು ಅಧಿಕಾರಿಗಳ ಮೇಲೆ ಅವರು ಕ್ರಮವನ್ನಾದರೂ ತೆಗೆದುಕೊಳ್ಳುತ್ತಿದ್ದರು. ಇವರು ಏನೂ ಮಾಡುವುದಿಲ್ಲ. ನಮಗಿಂತ ಅಧಿಕಾರಿಗಳೇ ಇವರಿಗೆ ಹತ್ತಿರ. ನಾವು ಹೋಗುವುದಕ್ಕೆ ಮೊದಲೇ ಅಲ್ಲಿ ಅಧಿಕಾರಿಗಳು ಹೋಗಿ ಕುಳಿತು ಮಾತನಾಡುತ್ತಿರುತ್ತಾರೆ. ನಾವು ಪ್ರತಿನಿಧಿಗಳಾಗಿ ಯಾರ ಮೇಲೆ ದೂರು ಹೇಳುವ ಪರಿಸ್ಥಿತಿಯಲ್ಲಿಲ್ಲ. ಏಕೆಂದರೆ ಎಲ್ಲಾ ಅವರಿಗೆ ಸಂಬಂಧಪಟ್ಟವರೇ ಆಗಿರುತ್ತಾರೆ. ನಾವು ಹಾಲಿನಲ್ಲಿ ಅಥವಾ ವೆರಾಂಡದಲ್ಲಿ ಕುಳಿತು ಮಾತನಾಡಿದರೆ ಅವರು ನೇರವಾಗಿ ಅಡಿಗೆ ಮನೆಗೆ ಹೋಗಿ ಮಾತನಾಡುತ್ತಿರುತ್ತಾರೆ. ಎಲ್ಲರೂ ಅವರಿಗೆ ವಿಶ್ವಾಸವಾಗಿರುವವರು, ಹೆಂಗಸರ ಕಡೆಯವರು, ಗಂಡಸರ ಕಡೆಯವರು, ಮಕ್ಕಳ ಕಡೆಯವರೆಲ್ಲಾ ಪ್ರಮುಖ ಸ್ಥಾನಗಳಲ್ಲಿ ಇರುವವರೆ. ನಮಗಿಂತ ಅವರಿಗೆ ಆಕ್ಸೆಸ್ ಜಾಸ್ತಿ. ನಾವು ಹೇಳುವುದರಲ್ಲಿ ಏನೂ ಪ್ರಯೋಜನವಿಲ್ಲವೆಂದು ನಾನು ತೀರ್ಮಾನಕ್ಕೆ ಬಂದಿದ್ದೇನೆ. ಜೊತೆಗೆ ಮತ್ತೊಂದು ಗಹನವಾದಂತಹ ವಿಚಾರವನ್ನು ಕೇಳುವುದಕ್ಕೆ ಇಷ್ಟು ಪಡುತ್ತೇನೆ. ಕಳೆದ ಮೂರು ತಿಂಗಳುಗಳಿಂದ ಚುನಾವಣೆ ಕೆಲಸಕಾರ್ಯಗಳಲ್ಲಿ ಶಾಸಕರು ಮತ್ತು ಅಧಿಕಾರಿಗಳು ನಿರತರಾಗಿದ್ದ ಕಾರಣ ಕನಿಷ್ಠ

ಮಾರ್ಚ್ ಅಂತ್ಯದೊಳಗೆ ಮುಗಿಯಬೇಕಾಗಿದ್ದ ಭಾಗ್ಯಜ್ಯೋತಿ ಸ್ಕೀಮ್ ಅವಧಿಯನ್ನು ಒಂದೆರಡು ತಿಂಗಳ ಕಾಲವಾದರೂ ವಿಸ್ತರಿಸಿ ಆ ಯೋಜನೆ ಪೂರ್ಣಗೊಳ್ಳಲು ಅನುಕೂಲ ಮಾಡಿಕೊಡಬೇಕು. ಅಧಿಕಾರಿಗಳು ಮತ್ತು ಶಾಸಕರು ಕಳೆದ 3 ತಿಂಗಳಿನಿಂದ ಚುನಾವಣೆ ಪ್ರಯುಕ್ತ ಕೆಲಸಮಾಡಲು ಆಗಲಿಲ್ಲ. ಹೀಗಾಗಿ ನಾವು ನೈಜವಾಗಿ ಕೆಲಸಗಳನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಆ ಅವಧಿಯೊಳಗೆ ನಾವು ಮುಗಿಸುತ್ತೇವೆ ಎಂದು ಸುಳ್ಳು ಹೇಳಲೇ ಬೇಕಾಗುತ್ತದೆ. ಆ ಸ್ಥಿತಿಯನ್ನು ದಯಮಾಡಿ ನಿರ್ಮಾಣ ಮಾಡಬೇಡಿರಿ. ಕಳೆದ ಬಾರಿ ಎರಡು ಮೂರು ಸಲ ಈ ರೀತಿ ಅವಧಿ ವಿಸ್ತರಣೆ ಮಾಡಲಾಗಿದೆ. ಮುಂದಿನ ಮೇ ಅಥವಾ ಜೂನ್ ತಿಂಗಳ ಅಂತ್ಯದವರೆಗೆ ಈ ಅವಧಿಯನ್ನು ವಿಸ್ತರಣೆ ಮಾಡಿ ಆ ಸ್ಕೀಂ ಪ್ರೋಗ್ರೆಸ್‌ಗೆ ಸಂಬಂಧಪಟ್ಟವರು ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಭಾಗ್ಯಜೋತಿ ಸ್ಕೀಂನಲ್ಲಿ ಒಂದು ಕ್ಷೇತ್ರಕ್ಕೆ ಒಂದು ಸಾವಿರದಷ್ಟು ಪ್ರಮಾಣದಲ್ಲಿ ಕೊಡಬೇಕಾಗಿದೆ. ಈಗ 15 ದಿವಸಗಳಿಂದ ಈಚೆಗೆ ಲಿಸ್ಟ್ ತಯಾರಾಗುತ್ತಿದೆ. ಯಾವುದೇ ತಾಲ್ಲೂಕಿನಲ್ಲಿ ಕಂಟ್ರಾಕ್ಟರರು ಒಂದು ಸಾವಿರ ಭಾಗ್ಯಜ್ಯೋತಿಗಳನ್ನು ಹದಿನೈದು ದಿವಸಗಳಲ್ಲಿ ಮಾಡುವುದಕ್ಕಾಗುವುದಿಲ್ಲ. ಅದನ್ನಾದರೂ ಮುಂದಕ್ಕೆ ಹಾಕಿ ಈ ವರ್ಷದ ಟಾರ್ಗೆಟನ್ನು ಮುಗಿಸಬೇಕು. ನಾನು ತಹಶೀಲ್ದಾರರ ಬಗ್ಗೆ ಮಾತನಾಡಿದೆ. ತಾವು ಸ್ವಲ್ಪ ಸಾಮರ್ಥ್ಯ ಇರುವವರನ್ನು ಹಾಗೂ ಸ್ಥಳದಲ್ಲೇ ತೀರ್ಮಾನ ತೆಗೆದುಕೊಳ್ಳುವಂತಹವರನ್ನು ಹಾಕಬೇಕು. ನಾನು ಈ ಮಾತನ್ನು ಖಂಡಿತ ಯಾರ ಮೇಲಿನ ದ್ವೇಷದಿಂದ ಹೇಳುತ್ತಿಲ್ಲ. ಏನಾದರೂ ಸಮಸ್ಯೆ ಬಂದರೆ ಡೆಪ್ಯುಟಿ ಕಮಿಷನರ್‌ರವರಿಗೆ ಫೋನು ಹಿಡಿದುಕೊಂಡು ಕುಳಿತುಕೊಳ್ಳುತ್ತಾರೆ. ಅಷ್ಟನ್ನು ಬಿಟ್ಟರೆ ತಹಶೀಲ್ದಾರರು ಬೇರೆ ಏನೂ ಕೆಲಸ ಮಾಡುತ್ತಿಲ್ಲ. ಅವರು ಸುಮಾರು 20-25 ವರ್ಷಗಳಿಂದ ಬೆಳೆದು ಬಂದ ಸಂಪ್ರದಾಯವನ್ನು ಮೀರುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಅವರು ಇನ್ನೊಬ್ಬರ ಮಾತನ್ನು ಕಟ್ಟಿಕೊಂಡೇ ಕೆಲಸ ಮಾಡಿದವರು. ಅವತ್ತು ತಹಶೀಲ್ದಾರರು ಹೇಳುತ್ತಿದ್ದರು, ಈಗ ಅವರು ಅಸಿಸ್ಟೆಂಟ್ ಕಮಿಷನರ್ ಅವರನ್ನೋ ಅಥವಾ ಡೆಪ್ಯುಟಿ ಕಮಿಷನರ್‌ರವನ್ನೋ ಏನು ಮಾಡಲಿ ಎಂದು ಕೇಳುತ್ತಾರೆ. ತಾಲ್ಲೂಕು ಮ್ಯಾಜಿಸ್ಟ್ರೇಟರ್ ಆಗಿ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕಾಗಲಿಲ್ಲ ಎಂದು ನಾವು ಇಲ್ಲಿ ಕೂಗಾಡುತ್ತೇವೆ. ನೀವು ಅವರನ್ನು ತರಬೇತುಗೊಳಿಸಲೇ ಇಲ್ಲ. ಎಫ್.ಡಿ. ಎ ಆಗಿದ್ದವರನ್ನು ತಂದು ತಹಶೀಲ್ದಾರ್ ಎಂದು ಇಲ್ಲಿ ತಂದು ಕುಳ್ಳಿರಿಸಿಬಿಟ್ಟಿರಿ. ಅವರು ಅಲ್ಲಿಯೇ ಸೊಗಸಾಗಿದ್ದಾರೆ. ಫೋನ್ ಮಾಡುವುದು, ಡಿಸಿ ಮೇಲೆ ಅಥವಾ ಎಂಎಲ್‌ಎ ಮೇಲೆ ಹೇಳುವುದು ಸುಮ್ಮನೆ ಕುಳಿತುಕೊಳ್ಳುವುದು ಇಷ್ಟೇ ಅವರು ಮಾಡುವುದು. ದಯಮಾಡಿ ಮತ್ತೆ ಆ ಪರಿಸ್ಥಿತಿಯನ್ನು ತಪ್ಪಿಸಬೇಕು ಮತ್ತು ಅವರಿಗೆ ಜವಾಬ್ದಾರಿ ನಿಗದಿ ಮಾಡಬೇಕು. ನಾನು ಮತ್ತೊಮ್ಮೆ ಒತ್ತಿ ಹೇಳಬಯಸುವುದೇನೆಂದರೆ ಶಾಸಕರಿಂದ ಹಾಗೂ ಸಮಿತಿ ಸದಸ್ಯರಿಂದ ಬಗರ್ ಹುಕುಮ್ ಯೋಜನೆಯಲ್ಲಿ ವಿಳಂಬವಾಗಲಿಲ್ಲ. ಅದು ವಿಳಂಬವಾಗಲು ಕಾರಣವೇನೆಂದರೆ ಅಲ್ಲಿ ಸರ್ವೇಯರ್ಸ್ ಇಲ್ಲ, ರೆಕಾರ್ಡ್ಸ್ ಬಿಲ್ಡ್‌ಅಪ್ ಮಾಡುವವರಿಲ್ಲ. ಆದುದರಿಂದ ಆ ಕಡೆ ತಾವು ಆಲೋಚನೆ ಮಾಡಬೇಕು. ಮತ್ತೆ ಈ ವ್ಯವಸ್ಥೆಯನ್ನು ತೆಗೆದುಕೊಂಡು ಹೋಗಿ ಅಧಿಕಾರಿಗಳ ಕೈಗೆ ಕೊಡುತ್ತೇವೆ ಎಂದರೆ ಅದು ನಿಮ್ಮ ಹಣೆ ಬರಹ ಅಷ್ಟೇ ಅವರಿಗೆ ಬೇಕಾಗಿರುವುದೂ ಕೂಡ ಅದೇ. ನಾವು ಅಲ್ಲಿ ಕುಳಿತು ಅಧ್ಯಕ್ಷಗಿರಿ ಮಾಡುವುದು ಅವರಿಗೆ

ಇಷ್ಟವಿಲ್ಲ. ನನ್ನ ಕ್ಷೇತ್ರದ ಒಂದು ಸಣ್ಣ ಉದಾಹರಣೆಯನ್ನು ಇಲ್ಲಿ ಹೇಳುತ್ತೇನೆ. ಈ ಯೋಜನೆಯಲ್ಲಿ ನಾನು ಮತ್ತು ಜಯಚಂದ್ರ ಅವರು ಸುಮಾರು 2160-2170 ಅರ್ಜಿಗಳನ್ನು ಪ್ರೋಸೆಸ್ ಮಾಡಿ 5 ವರ್ಷವಾಯಿತು. ಈವರೆಗೆ ಕೇವಲ 700 ಸಾಗುವಳಿ ಚೀಟಿಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ತಿಂಗಳೊಳಗೆ ಇನ್ನೂ 200 ಸಾಗುವಳಿ ಚೀಟಿಗಳನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. 5 ವರ್ಷದಿಂದ ನಾವು ಮಂಜೂರು ಮಾಡಿರುವ ರೆಕಾರ್ಡ್ಸ್‌ಗೆ ಸಾಗುವಳಿ ಚೀಟಿ ಕೊಟ್ಟಿಲ್ಲ. ಅದರಲ್ಲಿ ರೀ - ಅಪ್ರೋಪ್ರಿಯೇಷನ್ ಎಷ್ಟು ಇಷ್ಟು ಎಕರೆಯಲ್ಲಿ ಇಷ್ಟು ಎಕರೆಯನ್ನು ಕಡಿತ ಮಾಡಿ ಇಷ್ಟು ಎಕರೆ ಉಳಿಸುತ್ತಿದ್ದೇನೆ ಎಂದು ಒಂದು ಪಹಣಿಯಲ್ಲಿ ಬರೆಯುವುದಕ್ಕೆ ನಾಲ್ಕೈದು ವರ್ಷಗಳಾಗುತ್ತವೆ. ಅಸಿಸ್ಟೆಂಟ್ ಕಮಿಷನರ್ ಆಫೀಸ್‌ನಲ್ಲಿ ಎರಡೆರಡು ವರ್ಷ ರೆಕಾರ್ಡ್ಸ್ ನಿಂತಿವೆ. ಅದನ್ನು ನೀವು ರಿವ್ಯೂ ಮಾಡಲಿಲ್ಲ. ರೆವಿನ್ಯೂ ಇಲಾಖೆ ಏನಾಗಿದೆ ಎಂದು ನೀವು ಹೋಗಿ ನೋಡಿ ಅದನ್ನು ನಿರ್ವಹಣೆ ಮಾಡಲಿಲ್ಲ. ನಿಮಗೆ ಒಬ್ಬ "ಡಿಸಿ ಅಥವಾ ಎಸಿ" ಹತ್ತಿರ ಕೆಲಸ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲವೇ? ಇದನ್ನು ಈಗಲಾದರೂ ಯೋಚನೆ ಮಾಡಬೇಕಾಗಿದೆ. ತಾವು ಮಾರ್ಚ್ ಅಂತ್ಯದ ವೇಳೆಗೆ ಕೆಇಬಿ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳದೆ ಹೋದರೆ ಈಗ ಜನ ಏನು ಸ್ವಲ್ಪ ಓಟ್ ಹಾಕಿದ್ದಾರೆ. ಆ ಆಸೆಯನ್ನೂ ಕೂಡ ಮುಂದಿನ ಚುನಾವಣೆಯಲ್ಲಿ ಇಟ್ಟುಕೊಳ್ಳಬೇಡಿ. ಅದನ್ನು ಬಿಟ್ಟುಬಿಡಿ. It is dissolved ಎಂದು ಒಂದು ರೆಸಲ್ಯೂಷನ್ ಮಾಡಿ ಅದನ್ನು ಬಿಟ್ಟುಬಿಟ್ಟರೆ ನಿಮಗೂ ಚುನಾವಣೆಗಾಗಿ ಖರ್ಚು ಮಾಡಬೇಕಾದ ಒಂದಿಷ್ಟು ದುಡ್ಡು ಉಳಿದುಕೊಳ್ಳುತ್ತದೆ. ಯಾರೋ ಗೆಲ್ಲುವವರು ಗೆದ್ದುಕೊಳ್ಳುತ್ತಾರೆ. ಏನಾದರೂ ಮತ್ತೊಮ್ಮೆ ಚುನಾವಣೆಗೆ ಹೋಗಬೇಕು, ಜನರ ಬಳಿ ಮತ ಕೇಳಲು ಹೋಗಬೇಕು ಎನ್ನುವ ಸ್ಥೈರ್ಯ ಅಥವಾ ಮಾನಸಿಕ ತಯಾರಿ ನಿಮಗಿದ್ದರೆ ಈಗಲಾದರೂ ಕೆಇಬಿ ಬಗ್ಗೆ ಸ್ವಲ್ಪ ಗಮನ ಹರಿಸಿ, ತುಮಕೂರು ಕೋಲಾರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಪ್ರದೇಶಗಳ ಬಗ್ಗೆ ಕೆಇಬಿ ಅಧಿಕಾರಿಗಳನ್ನು ಕುಳ್ಳಿರಿಸಿಕೊಂಡು ಚರ್ಚೆ ಮಾಡಿ. ಯಾವ ಯಾವ ಸ್ಟೇಷನ್‌ಗಳು ಅಲ್ಲಿ ಸೇರಿಕೊಂಡಿದೆ, ಎಂಬುದನ್ನು ವಿಚಾರ ಮಾಡಿ. ತಾವು ರೆಗ್ಯುಲರೈಜೇಷನ್ ಮಾಡುತ್ತೇವೆ ಎಂದು ಮಾಡಿದಿರಿ. ಅಲ್ಲಿಗೆ ಒಂದು ಟ್ರಾನ್ಸ್‌ಫಾರ್ಮರ್ ಹಾಕುವಷ್ಟು ವಿವೇಚನೆ ಕೊಡನಿಮಗಿಲ್ಲ.

ಅಧ್ಯಕ್ಷರು:- ಇವರು ಚರ್ಚೆ ಮಾಡಿ ತೀರ್ಮಾನ ಮಾಡಿ ಅವರಿಗೆ ಹೇಳಬೇಕಷ್ಟೆ. ಅವರ ಜೊತೆ ಕುಳಿತು ಚರ್ಚೆ ಮಾಡಿದರೆ ಮತ್ತೆ ಮಾಮೂಲಿ ಇದೇ ಆಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ:- ನಂತರ ಕೆಇಬಿಯಲ್ಲಿರುವಂತಹ ಡೆಪಾಸಿಟ್ ಮತ್ತು ಫೀಸ್ ಸ್ವಲ್ಪಮಟ್ಟಿಗೆ ರೆಗ್ಯುರಲೈಸ್ ಮಾಡಬೇಕಾಗುತ್ತದೆ. ಇದನ್ನೆಲ್ಲಾ ತಾವು ಮಾಡಬೇಕೆಂದು ಹೇಳಿ ಹೇಮಾವತಿ ನಾಲಾ ವಲಯ ಮತ್ತು ಎನ್‌ಆರ್‌ಬಿಸಿಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. 128 ಮತ್ತು 129ನೇ ವಲಯದಲ್ಲಿ ಕೆಲಸ ಮುಗಿದ ನಂತರ ಟೆಂಡರ್ ಕರೆದಿದ್ದಾರೆ. ಚೀಫ್ ಇಂಜನಿಯರ್‌ರವರು ಆ ವರ್ಕ್‌ನ್ನು ಸ್ಟೇ ಮಾಡಿದ್ದಾರೆ. ಈ ರೀತಿಯ ವಿಪರೀತಗಳಾಗುತ್ತಿರುವುದನ್ನು ತಾವು ತಡೆಗಟ್ಟದೆ ಹೋದರೆ ನಾವು ನಮ್ಮ ಮುಂದಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ನನ್ನ ಕ್ಷೇತ್ರದಲ್ಲಿ 65 ಲಕ್ಷದ ಒಂದು ಸೇತುವೆ ಕುಸಿದಿದೆ. ಅಲ್ಲಿ ಮೋಟಾರು ವಾಹನಗಳು ಓಡಾಡುತ್ತಿಲ್ಲ. ಇದಕ್ಕೆ ಸಂಬಂಧಪಟ್ಟವರ ಮೇಲೆ ಯಾರೂ

ಕ್ರಮ ಜರುಗಿಸಿಲ್ಲ. ಈ ವಿಷಯ ಪತ್ರಿಕೆಯಲ್ಲಿ ಬಂದು ತಿಂಗಳುಗಳೇ ಕಳೆದಿದೆ. ದಯಮಾಡಿ ತಾವು ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಜನ ಇವತ್ತು ನಿಮ್ಮನ್ನು ಮತ್ತು ನಮ್ಮನ್ನೆಲ್ಲಾ ಸೇರಿಸಿ ಇವರೆಲ್ಲಾ ಇಷ್ಟಿಷ್ಟು ಹಣ ತೆಗೆದುಕೊಂಡು ಶಾಮೀಲಾಗಿದ್ದಾರೆ ಎಂದು ಬರವಣಿಗೆಯಲ್ಲಿ ಬರೆದು ಹಂಚುತ್ತಿದ್ದಾರೆ. ಒಂದು ವೇಳೆ ನಾನು ಮಾಡಿಲ್ಲ ಎಂದು ಸೀತಾ ಮಾತೆಯ ಹಾಗೆ ಬೆಂಕಿಯಲ್ಲಿ ನಿಂತುಕೋ ಎಂದರೆ ನಾನು ಅದಕ್ಕೂ ತಯಾರಿದ್ದೇನೆ. ಏಕೆಂದರೆ ಈ ಬಗ್ಗೆ ನಾವು ಬೇರೇನನ್ನೂ ಹೇಳುವುದಕ್ಕಾಗುವುದಿಲ್ಲ. ನಮಗೆಲ್ಲಾ ಈ ಪಾಪದೊಳಗೆ ತೆಗೆದುಕೊಂಡು ಹೋಗಿ ಹಾಕುತ್ತಿದ್ದಾರೆ ಎಂಬುದು ನನಗೆ ಗೊತ್ತಾಗಿಲ್ಲ. ನಾವು ಇವರ ವಿಶ್ವಾಸಮತ ಯಾಚನೆಯಲ್ಲಿ ಬೆಂಬಲವಾಗಿ ನಿಂತೆವು. ಅದಕ್ಕೆ ಕಾರಣ ಈ ಒಂದು ಸರ್ಕಾರದ ವ್ಯವಸ್ಥೆ ಕನಿಷ್ಠ 5 ವರ್ಷದ ವರೆಗಾದರೂ ಉಳಿದುಕೊಳ್ಳಬೇಕು ಎಂಬುದು ಒಂದು. ಮತ್ತೊಂದು ನಾವೆಲ್ಲರೂ ಗೆದ್ದು ಬಂದು ಇನ್ನೂ ಕೇವಲ ಒಂದು ವರ್ಷವಾಗಿದೆ ಮತ್ತೆ ಚುನಾವಣೆ ಆದರೆ ಅದನ್ನು ಎದುರಿಸಲು ನಮಗೆ ಸ್ವಲ್ಪ ಸಾಮರ್ಥ್ಯ ಕಡಿಮೆ. ಮತ್ತೆ ಯಾರು ಚುನಾವಣೆಗೆ ಹೋಗುತ್ತಾರೆ ಎಂಬುದು ಮತ್ತೊಂದು. ಮೂರನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಬಹಳ ಗೌರವವಿದೆ. ನಾವೆಲ್ಲಾ ಅವರ ಬಗ್ಗೆ ಬಹಳ ರೆಸ್ಪೆಕ್ಟ್ ಇಟ್ಟುಕೊಂಡಿದ್ದವರು. ಸೋಷಿಯಲಿಸ್ಟ್ ಸಿದ್ಧಾಂತದಿಂದ ಅವರು ಬಂದವರು, ಅವರು ಏನಾದರೂ ಮಾಡುತ್ತಾರೆ ಎಂದು ನಾವು ಅಂದುಕೊಂಡಿದ್ದೆವು. ಆದರೆ ಏತಕ್ಕೋ ಏನೋ ಅವರಿಗೆ ಎಲ್ಲಾ ಗೊತ್ತಿದೆ, ಸಾಮರ್ಥ್ಯ ಇದೆ, ವಿವೇಚನೆ ಇದೆ, ಇಲ್ಲಿರುವವರೆಲ್ಲಾ ಪ್ರಪಂಚ ಜ್ಞಾನವನ್ನು ಓದಿ ಪಡೆದುಕೊಂಡಿದ್ದಾರೆ. ಆದರೆ ಕೆಲಸ ಮಾಡಬೇಕು ಎನ್ನುವಂಥದ್ದು ಇಲ್ಲ. ಒಂದು ಕಡೆ ಒಥೆಲೋ ಹ್ಯಾಮ್ಲೆಟ್ ಮಧ್ಯೆ ನಿಂತುಬಿಟ್ಟಿದ್ದಾರೆ. One does without thinking, another thinks without doing, Votholo does without thinking. Hamlet thinks without doing. ಎಂಬ ಶೇಕ್ಸ್‌ಪಿಯರ್ ಕಥೆಯನ್ನು ಅವರು ಓದಿದ್ದಾರೆ. ಆ ಎರಡನ್ನೂ ಏನಾದರೂ ಮಾಡಿ ಅವರು ಒಂದು ಕಡೆಗೆ ತರಬೇಕು. ಯೋಚನೆಯನ್ನೂ ಮಾಡಿ ಕೆಲಸವನ್ನೂ ಮಾಡಿದಾಗ ಮಾತ್ರ ರಾಜಕಾರಣ ಸ್ವಲ್ಪಮಟ್ಟಿಗೆ ಹಸನಾಗುತ್ತದೆ. ಅದು ಆಗದೇಹೋದರೆ ಹ್ಯಾಮ್ಲೆಟ್ ಆದ ಹಾಗೆಯೇ ಆಗಬೇಕಾಗುತ್ತದೆ.

MR. SPEAKER:- They have to do or not to do ಅಂದು ನಿಂತು ಬಿಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅಧ್ಯಕ್ಷರೇ, to do or not do ಎಂದು ಒಂದು ಸಾಲಿಬಾಕ್ Solitoquy ಹೇಳಿಕೊಂಡು ಕಾಲ ಕಳೆದು, 3 ಅಥವಾ 5 ವರ್ಷ ಕಾಲ ಮುಗಿಸಿ ನಾನೂ ಅದನ್ನು ಪೂರ್ಣಗೊಳಿಸಿದೆ ಎಂಬ ಸಮಾಧಾನದಲ್ಲಿ ಹೋಗಬಹುದು. ಅದನ್ನು ಬಿಟ್ಟರೆ ನಾಡಿನ ಜನ ಏನನ್ನು ನಿರೀಕ್ಷೆ ಮಾಡಿದ್ದಾರೆ ಆ ಸಮಾಧಾನ ಇವರಿಗೆ ಉಳಿಯುವುದಿಲ್ಲ ಎಂದು ಹೇಳುತ್ತೇನೆ. ಇಷ್ಟೆಲ್ಲಾ ಆದರೂ ಈ ಸರ್ಕಾರ ಮಾಡಿರುವ ತಪ್ಪುಗಳನ್ನು ಚಿಂತನೆ ಮಾಡಿ ಅವುಗಳನ್ನು ತಿದ್ದಿಕೊಳ್ಳುವ ಸ್ಥಿತಿಯಲ್ಲಿದೆ ಎಂದು ಭಾವಿಸಿಕೊಂಡು ತೀಕ್ಷ್ಣವಾಗಿ ವಿರೋಧ ಮಾಡುವುದಕ್ಕೆ ಬಯಸದೆ ದಯಮಾಡಿ ಸರ್ಕಾರ ತನ್ನ ತಪ್ಪನ್ನು ತಿದ್ದಿಕೊಂಡು ಈ ಸರ್ಕಾರವನ್ನು ಕಳೆಯದೆ ಉಳಿಸಿಕೊಳ್ಳಬೇಕು. ನಿಮಗಾಗಿ ನಾವು ಈ ಸರ್ಕಾರದ ಪರವಾಗಿ ಇಲ್ಲಿ ಕುಳಿತು ಧರಣಿ ಮುಷ್ಕರಗಳನ್ನು ಮಾಡಿ ಆಚೆಗೆ ಹಾಕಿಸಿಕೊಂಡಿರಲಿಲ್ಲವೇ?. ದಯವಿಟ್ಟು ನಮ್ಮದನ್ನೂ ಸ್ವಲ್ಪ

ನೆನಪು ಮಾಡಿಕೊಳ್ಳಿ; ಕೇವಲ 20-23 ಜನ ಇದ್ದಂತಹ ಕಾಲದಲ್ಲಿ ಒದ್ದು ಆಚೆಗೆ ಹಾಕಿಸಿಕೊಳ್ಳುವಂತಹ ಕಾಲದಲ್ಲಿ ನಾವೆಲ್ಲಾ ಇದ್ದವರು. ಈಗ ನೀವು ಜನಗಳ ಹತ್ತಿರ ಥೂ, ಛೀ ಎನಿಸಿಕೊಳ್ಳುವಂತಹ ಸ್ಥಿತಿಗೆ ನಮ್ಮನ್ನು ತಂದರೆ ಅದು ತಪ್ಪಾಗುತ್ತದೆ. "ರಾತ್ರಿಯೆಲ್ಲಾ ಕಾಯ್ದುಕೊಂಡದ್ದನ್ನು ನಾಯಿ ಕಚ್ಚಿಕೊಂಡು ಹೋಯಿತು" ಎನ್ನುವ ಹಾಗೆ ಮಾಡಬೇಡಿ ಎಂದು ಕೇಳಿಕೊಂಡು ನಾನು ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಶ್ರೀರಂಗದೇವರಾಯಲು (ಗಂಗಾವತಿ):- ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾಗಿ ಹೈಸ್ಕೂಲ್ ಬಗ್ಗೆ ಸದನದಲ್ಲಿ ಮಾತನಾಡಬೇಕೆಂದು ನಿರ್ಧರಿಸಿದ್ದೇನೆ. ಏಕೆಂದರೆ ಇವರು ಪ್ರೈಮರಿ ಸ್ಕೂಲ್ಸ್ ಮತ್ತು ಮಿಡಲ್ ಸ್ಕೂಲ್ಸ್ ಬಗ್ಗೆ ಮಾತನಾಡಿದರು. ಆದರೆ ಹೈಸ್ಕೂಲ್ಸ್ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲವೆಂದು ನನಗನಿಸುತ್ತದೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ಏಳನೇ ತರಗತಿಯಲ್ಲಿ ಸಾಧಾರಣವಾಗಿ ಎರಡೂವರೆ ಸಾವಿರದಿಂದ ಮೂರು ಸಾವಿರದವರೆಗೆ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ನನ್ನ ಕ್ಷೇತ್ರದಲ್ಲಿ 15 ರಿಂದ 20ರವರೆಗೆ ಹೈಸ್ಕೂಲ್‌ಗಳಿವೆ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಏಳನೇ ತರಗತಿ ಪಾಸಾದ ನಂತರ ಪೋಷಕರು ಹೆಣ್ಣು ಮಕ್ಕಳನ್ನು ದೂರದ ಶಾಲೆಗಳಿಗೆ ಕಳುಹಿಸುವುದು ಬಹಳ ಕಡಿಮೆ. ಆದಕಾರಣ ಹಳ್ಳಿಗಳಲ್ಲಿ ಹೆಚ್ಚು ಪ್ರೌಢಶಾಲೆಗಳನ್ನು ತೆರೆಯುವುದಕ್ಕೆ ತಾವು ಒತ್ತಡ ತರಬೇಕೆಂದು ನಾನು ಹೇಳುತ್ತಿದ್ದೇನೆ. ಸಾಧಾರಣವಾಗಿ ನಮ್ಮ ಗಂಗಾವತಿಯಲ್ಲಿ ಸುಮಾರು ಐದೂವರೆಯಿಂದಿ ಆರು ಸಾವಿರ ರೂಪಾಯಿಗಳ ಕೆಎಸ್‌ಆರ್‌ಟಿಸಿ ರೆವಿನ್ಯೂ ಟ್ಯಾಕ್ಸ್ ಬರುತ್ತಿದೆ. ಎಸ್‌ಸಿ ಎಸ್‌ಟಿ ಹಾಸ್ಟೆಲ್‌ಗಳನ್ನು ಕಡಿಮೆ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ಹೈಸ್ಕೂಲ್‌ಗಳನ್ನು ಜಾಸ್ತಿ ಮಾಡಿ ಸುಮಾರು ಒಂದು ಕಿಲೋಮೀಟರ್‌ನಷ್ಟು ದೂರದಿಂದ ಬರುವಂತಹ ಹುಡುಗರಿಗೆ ಸಬ್ಸಿಡಿ ದರದಲ್ಲಿ ಸೈಕಲ್ಸ್ ಕೊಡಿಸಿದರೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಎರಡನೆಯದಾಗಿ ರೈತರ ಪರಿಸ್ಥಿತಿ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿ ವಿಜಯನಗರ ಕಾಲದಿಂದಲೂ ಇರುವಂತಹ 5 ಕಾಲುವೆಗಳಿವೆ. ನೇರವಾಗಿ ನದಿಯಿಂದ ಆ ಕಾಲುವೆಗಳ ಮುಖಾಂತರ ನಮಗೆ ನೀರಾವರಿ ಸೌಲಭ್ಯ ಆಗುತ್ತಿದೆ. ನಾನು ಮಾನ್ಯ ದೇವೇಗೌಡರನ್ನು ಮತ್ತು ಈಗಿನ ನೀರಾವರಿ ಮಂತ್ರಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದೆ. ಆದರೆ ಅಲ್ಲಿ ಆದಂತಹ ಕೆಲಸ ಶೂನ್ಯ. ನಾವು ಉಸ್ಕಿನ್ನಿಯಲ್ಲಿ ವಾಟರ್ ಡೈವರ್ಟ್ ಮಾಡಿ ಸಾಧಾರಣ 10 ಸಾವಿರ ಎಕರೆ ಪ್ರದೇಶವನ್ನು ನೀರಾವರಿ ಮಾಡಿಕೊಳ್ಳುತ್ತಿದ್ದೇವೆ. ಇದಕ್ಕೆ ಸುಮಾರು ಹನ್ನೊಂದೂವರೆ ಕೋಟಿ ರೂಪಾಯಿ ಬೇಕಾಗುತ್ತದೆ. ಇದರಿಂದಾಗಿ ಸುಮಾರು 25- 30 ಸಾವಿರ ಎಕರೆಗೆ ನೀರಾವರಿ ಆಗುತ್ತದೆ ಎಂಬ ಅಂದಾಜಿದೆ. ಇದನ್ನು ಇವರು ಏತಕ್ಕೆ ಮಾಡಬಾರದು? ಇನ್ನು ಲೆಫ್ಟ್ ಬ್ಯಾಂಕ್ ಕೆನಾಲ್ ಬಗ್ಗೆ ಮೊನ್ನೆ ತಾನೇ ಇಲ್ಲಿ ಪ್ರಶ್ನೆ ಎತ್ತಿದ್ದರು; ಅದಕ್ಕೆ ಪ್ರಕಾಶ್‌ರವರು ಉತ್ತರ ಕೊಟ್ಟರು. ಪ್ರತಿ ವರ್ಷ ನಮ್ಮ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ ಆಗುತ್ತಿರುವ ಸಮಸ್ಯೆಗಳು ಬಹಳ ವಿಚಿತ್ರವಾದವುಗಳು. ಈ ಕಡೆ ನೋಡಿದರೆ ನದಿಯಲ್ಲಿ ಮರಳು ತುಂಬುತ್ತಿದೆ. ನೀವು ಕೈಗಾರಿಕೆಗಳಿಗೆ ನೀರು ಕೊಡುತ್ತಿದ್ದೀರಿ. ಆದರೆ ರೈತರ ಸಮಸ್ಯೆ ಬಗ್ಗೆ ಯಾರೂ ಕಾಳಜಿ ವಹಿಸುತ್ತಿಲ್ಲ. ನಾನು ಪ್ರತಿಯೊಂದು ಕಾಡಾ ಮೀಟಿಂಗ್‌ನಲ್ಲಿ ಕೂಡ ಕೇಳುತ್ತಿದ್ದೆ, ನೀವು ಕೈಗಾರಿಕೆಗಳಿಗೆ ಎಷ್ಟು ನೀರನ್ನು ಕೊಡುತ್ತೀರಿ ಅಷ್ಟು ನೀರಿನಿಂದ ನಿಮಗೆ ಎಷ್ಟು ಅಮೌಂಟ್ ಬರುತ್ತದೆ ಅದನ್ನು ನೀವು

ಆ ಇಂಡಸ್ಟ್ರೀಸ್ ಕಡೆಯಿಂದ ಕ್ಲೈಂ ಮಾಡಿ ಅದರಿಂದ ಲಿಫ್ಟ್ ಇರಿಗೇಷನ್ ಆಗಲಿ ಅಥವಾ ಪಿಕಪ್ಸ್‌ಗಳನ್ನು ಮಾಡಿ ಏತಕ್ಕೆ ನೀರನ್ನು ಡೈವರ್ಟ್ ಮಾಡಬಾರದು ಎಂದು ನನಗೆ ಒಂದು ಪ್ರಶ್ನೆ ಏನೆಂದರೆ ಕೇವಲ ರಾಯಚೂರು ಜಿಲ್ಲೆಯಲ್ಲಿ ಮಾತ್ರ ನೀರಿನ ಅಭಾವ ಇದೆ ಎಂದರೆ ಆ ಕಲ್ಪನೆ ಬಹಳ ತಪ್ಪು. ಸ್ಟಾರ್ಟಿಂಗ್ ಪಾಯಿಂಟ್‌ನಿಂದ ಎಂಡವರೆಗೆ ಕೆನಾಲ್ ಕೆಳಗಡೆ ಭಾಗದಲ್ಲಿ ಇರುವಂತಹ ಎಲ್ಲ ರೈತರಿಗೂ ನೀರಿನ ಸಮಸ್ಯೆ ಇದೆ. ಮೊನ್ನೆ ತಾನೇ ಕೊಪ್ಪಳ ಮತ್ತು ರಾಯಚೂರಿನಲ್ಲಿ ರೈತರು ನಾವು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಈಗಾಗಲೇ ಬೀದರ್ ಮತ್ತು ಗುಲ್ಬರ್ಗಾದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯವನ್ನೂ ನಾವು ಕೇಳಿದ್ದೇವೆ. ಆದುದರಿಂದ ತಾವು ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮೊದಲೇ ಆ ಕಡೆ ಗಮನ ಕೊಡಬೇಕು. ಮೊನ್ನೆ ಕಾಲುವೆ ಒಡದ ಮೇಲೆ ಎಷ್ಟು ಎಕರೆ ಗದ್ದೆ ಹಾಳಾಗಿದೆ, ಅಲ್ಲಿನ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಇದುವರೆಗೆ ಯಾರೂ ಕೂಡ ಹೋಗಿ ನೋಡಿಲ್ಲ. ಯಾರಾದರೂ ಆತ್ಮಹತ್ಯೆ ಮಾಡಿಕೊಂಡರೆ ಆಗ ಹೋಗಿ ನೋಡುತ್ತಾರೆಯೇ ವಿನಃ ಅದಕ್ಕೆ ಮುಂಚೆ ಯಾವ ಸರ್ಕಾರಿ ಅಧಿಕಾರಿಗಳೂ ಆ ಕಡೆ ಹೋಗಿ ನೋಡುವುದಕ್ಕೆ ಇಷ್ಟಪಡುತ್ತಿಲ್ಲ. ರೈತರು ಜಿಲ್ಲಾಧಿಕಾರಿಯವರಿಗೆ ನಾವು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂಬುದಾಗಿ ಸೂಚನೆ ಕೊಟ್ಟಿದ್ದಾರೆ. ಇನ್ನೊಂದು ವಿಚಾರವೆಂದರೆ ನಮ್ಮಲ್ಲಿ "ಗಂಗಾವತಿ ಷುಗರ್ಸ್" ಎಂಬ ಒಂದು ಸಕ್ಕರೆ ಕಾರ್ಖಾನೆ ಇದೆ. ಆ ಬಗ್ಗೆ ನಾಳೆ ಅವಕಾಶ ಕೊಟ್ಟರೆ ನಾನು ಅದನ್ನು ಪ್ರತ್ಯೇಕವಾಗಿ ಪ್ರಸ್ತಾಪ ಮಾಡುತ್ತೇನೆ. ಆದರೆ ಇವತ್ತು ನಾನು ಹೇಳಬಯಸುವುದೇನೆಂದರೆ ಸುಮಾರು 10- 15 ಸಾವಿರ ಎಕರೆ ನೀರಾವರಿ ಪ್ರದೇಶದಲ್ಲಿದ್ದಂತಹ ಗದ್ದೆಯಲ್ಲಿ ನಾವು ಕಬ್ಬನ್ನು ಹಾಕಿದ್ದರೆ ಹೆಚ್ಚು ನೀರು ಉಳಿತಾಯ ಆಗಿ ಅಚ್ಚುಕಟ್ಟು ಪ್ರದೇಶದ ಮೇಲ್ಭಾಗದಲ್ಲಿರುವಂತಹ ರೈತರ ಜಮೀನಿಗೆ ನೀರನ್ನು ಕೊಡಲು ಸಾಧ್ಯವಾಗುತ್ತದೆ. ನೀವು ಸಕ್ಕರೆ ಕಾರ್ಖಾನೆಯನ್ನು ಮುಚ್ಚಿದರೆ ಮತ್ತೆ 15 ಸಾವಿರ ಎಕರೆ ಪ್ರದೇಶವನ್ನು ನೀರಾವರಿ ಮಾಡಿ ಗದ್ದೆಯಲ್ಲಿ ಕಬ್ಬಿಗೆ ಬದಲಾಗಿ ಭತ್ತ ಬೆಳೆಯಲು ಎಷ್ಟು ಹೆಚ್ಚಿನ ಪ್ರಮಾಣದಲ್ಲಿ ನೀರು ಬೇಕಾಗುತ್ತದೆ ಮತ್ತು ಬೇರೆಯವರಿಗೆ ಎಷ್ಟು ನೀರನ್ನು ಕೊಡಲು ಸಾಧ್ಯವಾಗುತ್ತದೆ ಎಂಬುದನ್ನು ದಯಮಾಡಿ ಯೋಚನೆ ಮಾಡಿ ಆ ಸಕ್ಕರೆ ಕಾರ್ಖಾನೆ ಮುಚ್ಚದಂತೆ ಉಳಿಸಿಕೊಳ್ಳಬೇಕಾಗುತ್ತದೆ. ನಾವು ತೆಂಗು ಬೆಳೆಯುತ್ತೇವೆ. ಬರೀ ಎರಡು ರೂಪಾಯಿಗೆ ನಾವು ಕೊಡುತ್ತೇವೆ. ಸಪೋಟಾ ಬೆಳೆಯುತ್ತೇವೆ. 6 ರೂಪಾಯಿಗೆ ಒಂದು ಕೆ.ಜಿ. ಕೊಡುತ್ತೇವೆ. ನಾವು ಏನು ಫ್ರೂಟ್ಸ್ ಬೆಳೆಯುತ್ತೇವೆ, ಅದು ಐದಾರು ರೂಪಾಯಿಗಿಂತ ಜಾಸ್ತಿ ಹೋಗುತ್ತಿಲ್ಲ. ಬಜಾರ್‌ನಲ್ಲಿ ನಮಗೆ 2-3 ರೂಪಾಯಿ ನಮಗೆ ಸಿಗುತ್ತದೆ. ನಮ್ಮ ಗಂಗಾವತಿಯಲ್ಲಿ 30-40 ಪರ್‌ಸೆಂಟ್ ಬೆಳೆಯುತ್ತೇವೆ. ನಾವು 93 ರಲ್ಲಿ ನಾವು ಬೆಳೆದ ಬೆಳೆಗೆ ರೇಟು ಕಡಿಮೆಯಾಗುತ್ತದೆ ಎಂದು ಸರ್ಕಾರದವರು ಪ್ರಯತ್ನ ಮಾಡಿದರು. ನಾನು ಹೋದ ಸಲ ಅಗ್ರಿಕಲ್ಚರ್ ಮಿನಿಸ್ಟರ್ ಮೇಲೆ ಸಾಕಷ್ಟು ಒತ್ತಡ ತಂದೆ. ರೇಟು ಬಹಳ ಕುಸಿದು ಬಿದ್ದಿತ್ತು. ಆದರೆ ನಮ್ಮವರು ಏನು ಮಾಡಿದರು, ಅದರ ಬಗ್ಗೆ ನಾವು ಕಾಳಜಿ ವಹಿಸಬೇಕು. ರಾಜ್ಯಪಾಲರ ಭಾಷಣದಲ್ಲಿ ರೈತರ ಬಗ್ಗೆ ಏನೂ ತೋರಿಸಿಲ್ಲ. ನಾನು ವ್ಯಕ್ತಿಗತವಾಗಿ ಹೇಳಬೇಕಾದರೆ ನಮ್ಮಲ್ಲಿ ಎರಡು ಲಕ್ಷದ ಮೂರು ಸಾವಿರ ಫ್ಲೋಟಿಂಗ್ ಪಾಪ್ಯುಲೇಷನ್ ಇದೆ. ಅಲ್ಲಿ 30 ಮಂದಿ ಕಾನ್ಸ್‌ಟೇಬಲ್‌ಗಳು ಇದ್ದಾರೆ. ಡಿಎಸ್‌ಪಿಗಳು ಮೂರು-ನಾಲ್ಕು ಮಂದಿ ಬಂದು ಹೋಗುತ್ತಾರೆ. ಉಳಿದವರು ಏನು ನೈಟ್ ಡ್ಯೂಟಿ ಹೇಗೆ ಮಾಡುತ್ತಾರೆ? ಲಾ ಅಂಡ್ ಆರ್ಡರ್‌ನ್ನು ಹೇಗೆ ಕಂಟ್ರೋಲ್ ಮಾಡುತ್ತಾರೆ? ನಾನು ಬಹುತೇಕ

ಗೃಹಸಚಿವರನ್ನು ಸಹಾ ಭೇಟಿಯಾಗಿದ್ದೇನೆ. ನಾನು ಅವರ ಹತ್ತಿರ ಹೋಗಿ ಬಂದಿದ್ದೇನೆ. ಏನೂ ಆಗಿಲ್ಲ. 93 ರಲ್ಲಿ ನಮಗೆ ಎರಡು ಪೋಲೀಸ್ ಸ್ಟೇಷನ್‌ಗಳನ್ನು ಸ್ಯಾಂಕ್ಷನ್ ಮಾಡುವುದಕ್ಕೆ ಶಿಫಾರಸ್ಸು ಮಾಡಿದರು. ಇವತ್ತಿನವರೆಗೂ ಏನೂ ಮಾಡಿಲ್ಲ ತಾವೇ ಹೇಳಿ. 30 ಮಂದಿ ಪೋಲಿಸರು ಎರಡೂವರೆ ಲಕ್ಷ ಜನಸಂಖ್ಯೆಯನ್ನು ಹೇಗೆ ಕಂಟ್ರೋಲ್ ಮಾಡುತ್ತಾರೆ? ಒಂದು ಕಡೆ ಫ್ಲೇನ್‌ಕಾರ್ಡ್ಸ್ ಅವೆಲ್ಲಾ ಎನ್‌ಕರೇಜ್ ಮಾಡುತ್ತಿದ್ದಾರೆ. ನಾವು ಡಕಾಯಿತಿಯವರನ್ನು ನಾವೇ ಪ್ರಿಪೇರ್ ಮಾಡುವುದಕ್ಕೆ ಅನುಕೂಲವಾಗುತ್ತವೆ. ಪೋಲೀಸರು ಏನೂ ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ. ಅಲ್ಲಿ ಪೋಲೀಸ್ ಸ್ಟೇಷನ್ ಬೇಕಾಗುತ್ತದೆ. ಮತ್ತೆ ನಮ್ಮ ಹೆಚ್. ಕೆ. ಡಿ. ಬಿ. ಬಗ್ಗೆ ಮಾತನಾಡಬೇಕಾದರೆ ಅದನ್ನು ನಾನು ಸಾಕಷ್ಟು ನೋವಿನಿಂದ ಮಾತನಾಡುತ್ತಿದ್ದೇನೆ. ನಮ್ಮ ವೀರೇಂದ್ರಪಾಟೀಲರು ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕಾದರೆ ಮೊದಲು 50 ಕೋಟಿ, ಆಮೇಲೆ 60 ಕೋಟಿ, ಹೀಗೆಯೇ ಹತ್ತತ್ತು ಕೋಟಿ ರೂಪಾಯಿ ಜಾಸ್ತಿ ಮಾಡಬೇಕು ಎಂದು ಇದ್ದರು. ಈ ಸರ್ಕಾರ ಬಂದ ಮೇಲೆ 45 ಕೋಟಿ ರೂಪಾಯಿ ಬಂತು. ಈಗ 27 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಆದರೆ ಈಗ ಬರೀ ಹೈದರಾಬಾದ್-ಕರ್ನಾಟಕಕ್ಕೆ ಇದರಿಂದ ಏನು ಡೆವಲಪ್‌ಮೆಂಟ್ ಮಾಡುವುದಕ್ಕಾಗುತ್ತದೆ? ಇದರ ಬಗ್ಗೆ ಯೋಚಿಸಬೇಕು. 27 ಕೋಟಿ ರೂಪಾಯಿಯಲ್ಲಿ ನಬಾರ್ಡ್‌ನಿಂದಲೇ ಹೆಚ್ಚು ಅಮೌಂಟನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದಿಂದ ಏನು ಕೊಟ್ಟಿದ್ದಾರೆ. ಇದನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಮ್ಮ ಇಡೀ ರಾಜ್ಯದಲ್ಲಿಯೇ ರಾಯಚೂರು ಡಿಸ್ಟ್ರಿಕ್ಟ್ ಎಜ್ಯುಕೇಷನಲಿ ಬಹಳ ಹಿಂದುಳಿದಿರುವುದು. ಆಮೇಲೆ ನಮ್ಮಲ್ಲಿ ಗಂಗಾವತಿ, ಕೊಪ್ಪಳ ಡಿಸ್ಟ್ರಿಕ್ಟ್ ಹೊಸದಾಗಿ ಆಗಿದೆ. ಅದು ಬಹಳ ಹಿಂದುಳಿದ ಡಿಸ್ಟ್ರಿಕ್ಟ್ ಎಂದು ಹೇಳಿ ಹೈದರಾಬಾದ್-ಕರ್ನಾಟಕಕ್ಕೆ ಅಮೌಂಟನ್ನು ಹೆಚ್ಚು ಕೊಡಬೇಕೆಂದು ಆಶಿಸಿ ಒಟ್ಟಿಗೆ ಹೇಳಬೇಕಾದರೆ ರಾಜ್ಯಪಾಲರ ಭಾಷಣದಲ್ಲಿ ಮನುಷ್ಯ ಜೀವಂತ ಉಳಿಯಬೇಕಾದರೆ ಏನಾದರೂ ತಿನ್ನುತ್ತಾನೆ. ತಿಂದು ತನ್ನ ಜೀವನವನ್ನು ಉಳಿಸಿಕೊಳ್ಳಬೇಕು ಎನ್ನುವ ಹಾಗೆ ರಾಜ್ಯಪಾಲರ ಭಾಷಣ ಇದೆ. ಇದರಿಂದ ಯಾರಿಗೂ ಉಪಯೋಗವಾಗುತ್ತಿಲ್ಲ. ಯಾರಿಗಾದರೂ ತೃಪ್ತಿ ಇದೆಯೇ? ವ್ಯವಸಾಯ ಖಾತೆಗೂ ತೃಪ್ತಿ ಇಲ್ಲ. ಇಲ್ಲಿ ಇಂಡಸ್ಟ್ರೀಸ್‌ಗೂ ತೃಪ್ತಿ ಇಲ್ಲ. ಸಾಮಾನ್ಯ ರೈತರಿಗೂ ತೃಪ್ತಿ ಇಲ್ಲ ಎಂದು ಹೇಳಿ ನಾನು ಇದನ್ನು ವಿರೋಧಿಸಿ ತಾವು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಮಾಡಿದ್ದಕ್ಕೆ ನಾನು ಕೃತಜ್ಞತೆಯನ್ನು ಹೇಳುತ್ತಾ ನಾವು ಶಾಸಕರಾಗಿ ಆಯ್ಕೆಯಾದನಂತರ ಇದು 4ನೇ ರಾಜ್ಯಪಾಲರ ಭಾಷಣ. ಹಿರಿಯರು ಮತ್ತು ಗೌರವಾನ್ವಿತ ಸದಸ್ಯರಾದ ಮಾನ್ಯ ವಾಟಾಳ್‌ನಾಗರಾಜ್‌ರವರ ಕೃಪೆಯಿಂದ ಆ ನಾಲ್ಕು ಭಾಷಣಗಳನ್ನು ಕೇಳಲಿಕ್ಕೆ ಆಗಲಿಲ್ಲ. ಅವರ ಹೋರಾಟದ ಬಗ್ಗೆ ನಮಗೆ ತುಂಬಾ ಗೌರವ ಇದೆ. ಆದರೆ ಸದನಲ್ಲಿ ರಾಜ್ಯಪಾಲರ ಭಾಷಣ ಆಗುತ್ತಿರುವಾಗ ಈಗ ಜಾಗಟೆಗಳ ಸದ್ದುಗಳನ್ನು ಸಹಾ ನಾವು ಕೇಳುತ್ತಿದ್ದೇವೆ. ಆದರೆ ಭವಿಷ್ಯದಲ್ಲಿ ಡೋಲುಗಳೂ ಸಹಾ ಬರಬಹುದು ಎಂದು ಹೇಳುವ ವ್ಯಸನ ಸಹಾ ಇದೆ. ನನಗೆ ತಾವು ಎಷ್ಟು ಸಮಯವನ್ನು ನಿಗದಿ ಮಾಡಿದ್ದೀರಿ ಎಂದು ನಾನು ಕೇಳುತ್ತಾ ನನಗೆ ಎಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು:- ನನಗೆ ಒಂದು ಅಂದಾಜು ಇದೆ. ನೀವೆಷ್ಟು ಮಾತನಾಡಬಹುದು ಎಂದು, ಮಾತನಾಡಿ.

ಶ್ರೀ ಡಿ.ಎಸ್. ಮಾದಪ್ಪ:- ನಾನು ಶಾಸಕನಾದ ಮೇಲೆ ಈ ಸಭೆಯಲ್ಲಿ ಸಭೆಯಲ್ಲಿ ನಾಲ್ಕೈದು ಆಶ್ವಾಸನೆಗಳನ್ನು ನನ್ನ ಜಿಲ್ಲೆಯ ಬಗ್ಗೆ ಕೊಟ್ಟಿದ್ದರು. ಮಾನ್ಯ ನಾಗೇಗೌಡರ ಮೇಲೆ ನನಗೆ ಬಹಳಷ್ಟು ಗೌರವ ಇದೆ. ನನ್ನ ಜಿಲ್ಲೆಯಲ್ಲಿ ಒಂದು ಚಿಕ್ಕ ಅಣೆಕಟ್ಟು 20 ವರ್ಷಗಳ ಹಿಂದೆ ಪ್ರಾರಂಭವಾಯಿತು. ಅದು ಚಿಕ್ಕಲಿಹೊಳೆವಾದು ಮೂರೂವರೆ ಕೋಟಿ ರೂಪಾಯಿ ಅಂದಾಜಿನಲ್ಲಿ ಪ್ರಾರಂಭವಾದ ಆ ಚಿಕ್ಕಲಿಹೊಳೆ ಇಲ್ಲಿಯವರೆಗೂ ಪೂರ್ತಿಯಾಗಲಿಲ್ಲ. ಈಗಾಗಲೇ ಸುಮಾರು 14 ಕೋಟಿ ರೂಪಾಯಿಗಳನ್ನು ಅದಕ್ಕೆ ಹಣವನ್ನು ವ್ಯಯಮಾಡಿದ್ದಾರೆ. ಇನ್ನೂ ಮೂರು ಕೋಟಿ ರೂಪಾಯಿ ಬೇಕು ಎಂದು ಹೇಳುತ್ತಿದ್ದಾರೆ. ಮಾನ್ಯ ನಾಗೇಗೌಡರು ಈ ಸದನದಲ್ಲಿ ನನಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಇನ್ನು 15 ದಿವಸಗಳಲ್ಲಿ ಅದರಲ್ಲೇನು ಅವ್ಯವಹಾರ ನಡೆದಿದೆ, ಅದನ್ನು ಪೂರ್ತಿ ಮಾಹಿತಿಯನ್ನು ಕೊಡುತ್ತೇವೆ ಎಂದು ಹೇಳಿದ್ದರು. ನಮಗೆ ತುಂಬಾ ಸಂತೋಷವಾಗಿತ್ತು. ಆದರೆ ಒಂದು ವರ್ಷವಾದರೂ ಸಹಾ ಇನ್ನೂ ಅದರ ಬಗ್ಗೆ ಯಾವ ಒಂದು ಕಾರ್ಯಕ್ರಮವನ್ನೂ ಹಾಕದೆ ಏನು 20 ವರ್ಷಗಳ ಹಿಂದೆ ಕೇವಲ ಒಂದು ಸಾವಿರ ಎಕರೆ ಜಮೀನಿಗೆ ನೀರಾವರಿ ಯಾಗುತ್ತಿತ್ತೋ ಅಷ್ಟೇ ಜಮೀನಿಗೆ ನೀರು ಆಗುತ್ತಿದೆ. ಸುಮಾರು 14 ಕೋಟಿ ರೂಪಾಯಿ ಹಣ ಈಗಾಗಲೇ ಅಲ್ಲಿ ಅದು ಅವ್ಯವಹಾರವಾಗಿದೆ ಎಂದು ಹೇಳಲಿಕ್ಕೆ ಬಹಳ ವ್ಯಸನವಾಗುತ್ತದೆ. ನಂತರ ನನ್ನ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ಎಂ.ಸಿ. ನಾಣಯ್ಯನವರು ಈ ಸದನದಲ್ಲೊಂದು ಭರವಸೆಯನ್ನು ಕೊಟ್ಟರು.

ಶ್ರೀ ಸಿ. ಬೈರೇಗೌಡ:- ಅಲ್ಲಿ ಬರಪೊಳೆ ಎನ್ನುವ ಯೋಜನೆ ಕೂಡ ಇದೆ. ಅದೇನಾಯಿತು ಎಂದು ಸ್ವಲ್ಪ ದಯವಿಟ್ಟು ಹೇಳಿ.

ಶ್ರೀ ಡಿ. ಎಸ್. ಮಾದಪ್ಪ:- ಬರಪೊಳೆ ಯೋಜನೆಯನ್ನು ಮಾಡಲಿಕ್ಕೆ ಜಿಲ್ಲೆಯಲ್ಲಿ ಬಹಳಷ್ಟು ವಿರೋಧ ಇತ್ತು. ಬರಪೊಳೆ ಯೋಜನೆ ಪ್ರಾರಂಭವಾಗಲಿಲ್ಲ. ಆದರೆ ಚಿಕ್ಕಲಿಹೊಳೆ ಮಾನ್ಯ ಗುಂಡುರಾಯರ ಕನಸು 1978ರಲ್ಲಿ ಪ್ರಾರಂಭವಾಗಿದ್ದು ಇನ್ನೂ ಸಹ ಪೂರೈಕೆಯಾಗಲಿಲ್ಲ. ಏನು ಎಡದಂಡೆ ಒಂದೇ ನಾಲೆಯನ್ನು ಪ್ರಾರಂಭ ಮಾಡಿದ್ದಾರೆ. ಆ ನಾಲೆಯೂ ಸಹಾ ಪೂರ್ತಿಯಾಗಿಲ್ಲ. ಪ್ರಾರಂಭ ಸ್ವಲ್ಪ ಆಗಿದೆ. ಅಷ್ಟೇ ಆಗಿದೆ. ಮಧ್ಯದಲ್ಲಿ 400 ಮೀಟರ್ ಜಾಗವನ್ನು ಸರ್ಕಾರಕ್ಕೆ ಅಕ್ವೈರ್ ಮಾಡಲಿಕ್ಕೆ ಇನ್ನು 20 ವರ್ಷವಾದರೂ ಸಹ ಅದು ಆಗಲಿಲ್ಲ. ಹಾಗಾಗಿ ಸುಮಾರು ಹತ್ತು ಕೋಟಿ ರೂಪಾಯಿಗಿಂತಲೂ ಹೆಚ್ಚು ಅವ್ಯವಹಾರ ನಡೆದಿದೆ. ಅದರ ಬಗ್ಗೆ ಏನನ್ನೂ ಈ ಸರ್ಕಾರ ಮಾಡಲಿಲ್ಲ; ಅದಾದನಂತರ ನನ್ನ ಜಿಲ್ಲೆಯ ಉಸ್ತುವಾರಿ ಸಚಿವರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ನಮ್ಮ ಜಿಲ್ಲೆಯಲ್ಲಿ ನಡೆದ ಇನ್ನೊಂದು ದೊಡ್ಡ ಭ್ರಷ್ಟಾಚಾರ ಏನು ಅಂತರರಾಜ್ಯದ ಕೈವಾಡ ಇದೆ, ಸುಮಾರು ಎರಡು ಕೋಟಿ ಗಿಂತಲೂ ಹೆಚ್ಚು ಈ ನಕಲಿ ಛಾಪಾ ಕಾಗದದ ಬಗ್ಗೆ ನಾನು ಪ್ರಸ್ತಾಪ ಮಾಡಿದಾಗ ಅದನ್ನು ಸಿ.ಓ.ಡಿ. ತನಿಖೆಗೆ ಹಾಕಿದ್ದರು. ಸಿ.ಓ.ಡಿ ತನಿಖೆಗೆ ಹಾಕಿದಾಗ ಇದರಲ್ಲಿ ಏನಾದರೂ ಪ್ರಕರಣ ಬೆಳಕಿಗೆ ಬರಬಹುದುಎಂದು ನಾವು ಆಸೆಪಟ್ಟರೆ ಆ ಸಿ.ಓ.ಡಿ. ತನಿಖೆಗೆ ಬಂದಂಥ ಅಧಿಕಾರಿಗಳು ಯಾರು ಮೊದಲನೇ

ಅಪರಾಧಿ ಇದ್ದಾನೆ, ಆತನ ಜೊತೆಯಲ್ಲಿ ರಾಜಾರೋಷವಾಗಿ ನಗರದ ಒಂದು ದೊಡ್ಡ ಹೋಟೆಲ್‌ನಲ್ಲಿ ಊಟ ಮಾಡಿ ಹೋದವನು ಇನ್ನು ಮೂರು ತಿಂಗಳು ನಾಲ್ಕು ತಿಂಗಳಿಂದ ಆ ಕಡೆ ಬರಲಿಲ್ಲ. ಹಾಗಾಗಿ ಈ ಸದನದಲ್ಲಿ ಕೆಲವು ಆಶ್ವಾಸನೆಗಳನ್ನು ಕೊಟ್ಟಿದ್ದನ್ನು ಈಡೇರಿಸುತ್ತಾರೆ ಎಂದು ಹೇಳಿ ಮೊದಲಿಗೆ ನಮಗೆ ನಂಬಿಕೆ ಇತ್ತು. ಆದರೆ ನಡೆದುಬಂದಂಥ ದೃಶ್ಯಗಳನ್ನು ನೋಡಿದಾಗ ಎಲ್ಲಾ ಆಶ್ವಾಸನೆಗಳಾಗಿಯೇ ಉಳಿಯುತ್ತವೆ. ಇದನ್ನು ನಾವು ನಮ್ಮ ಕ್ಷೇತ್ರಕ್ಕೆ ಹೋಗಿ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ, ಇದು ಆಗಬಹುದು ಎಂದು ಹೇಳಿದರೆ ಅದೆಲ್ಲಾ ಪೊಳ್ಳಾಗುತ್ತಿದೆ. ನಾನು ನನ್ನ ಜಿಲ್ಲೆಯ ಪೋಲೀಸ್ ವ್ಯವಸ್ಥೆಯ ಬಗ್ಗೆ ಹೇಳಿದರೆ ಅದು ಇಡೀ ರಾಜ್ಯದ ಒಂದು ಸ್ಯಾಂಪಲ್ ಎನ್ನಬಹುದು. ನನ್ನ ಜಿಲ್ಲೆ ಶಾಂತಿಗೆ ಪ್ರೀತಿಗೆ ಹೆಸರಾದ ಜಿಲ್ಲೆ. ಬಹಳ ಶಿಸ್ತಿನ ಜಿಲ್ಲೆ ಎಂದು ನಾವು ಹೇಳಿಕೊಳ್ಳುತ್ತಿದ್ದೇವೆ. ಆದರೆ ಕಳೆದ ಒಂದು ವರ್ಷದಲ್ಲಿ ನನ್ನ ಜಿಲ್ಲೆಯಲ್ಲಿ ನಡೆದ ಕೊಲೆಗಳು ನನ್ನ ಜಿಲ್ಲೆಯಲ್ಲಿ ನಡೆದ ದಾಂಧಲೆಗಳು ಮತ್ತು ಪೋಲೀಸರ ಕಾರ್ಯಕ್ರಮ ನೋಡಿದರೆ ಬಹಳ ವ್ಯಸನವಾಗುತ್ತಿದೆ. ಈ ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆ ಇದೆಯೇ ಅಥವಾ ಪೋಲೀಸ್ ಜನರ ಸಹಕಾರಕ್ಕಾಗಿ ಇದೆಯೇ ಅಥವಾ ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇದೆಯೇ ಅಥವಾ ಯಾವ ಕಾರಣಕ್ಕಾಗಿ ಇದೆ ಎನ್ನುವುದನ್ನು ನೋಡಿದರೆ ವ್ಯಸನವಾಗುತ್ತಿದೆ. ಮೊದಲನೆಯದಾಗಿ ನಾನು ಏನು ಸ್ಟಾಂಪ್ ಹಗರಣದ ಪ್ರಕರಣವನ್ನು ಹೇಳಿದ್ದೆ. ಆ ಸ್ಟಾಂಪ್ ಹಗರಣದ ಮೊದಲನೇ ಆರೋಪಿ ಆತ ಜಾಮೀನಿನಿಂದ ಹೊರಗೆ ಬರುತ್ತಾನೆ. ಜಾಮೀನಿನಲ್ಲಿ ಹೊರಗೆ ಬಂದಾಗ ಆತನಿಗೆ ಪೋಲೀಸ್ ರೆಸ್ಟ್ರಿಕ್ಷನ್ ಇರುತ್ತದೆ. ಆತ ಮಡಿಕೇರಿ ನಗರದಲ್ಲಿಯೇ ಇರಬೇಕು ಎಂದು ಇರುತ್ತದೆ. ಆದರೆ ಆ ವ್ಯಕ್ತಿ ತನ್ನ ಹಳ್ಳಿಯಲ್ಲಿರುತ್ತಾನೆ. ಆಗ ಆ ಆರೋಪಿಯ ಮನೆಯಲ್ಲಿ ಕೆಲಸಕ್ಕಿರುವ ಒಬ್ಬ ಗಿರಿಜನ ಯುವತಿಯ ಕೊಲೆಯಾಗುತ್ತದೆ. ಅದನ್ನು ಬಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಾರೆ, ಊರಿನ ಜನರು ಹೋರಾಟ ಮಾಡುತ್ತಾರೆ. ಪುನ: ಪೋಸ್ಟ್ ಮಾರ್ಟಂ ಮಾಡಿದಾಗ ಅದು ಕೊಲೆ ಎಂದು ಆಗುತ್ತದೆ. ಆ ಕೊಲೆ ಎಂದು ಆಪಾದನೆ ಆದ ಮೇಲೆ ಆತನ ಮೇಲೆ 302ನೇ ವಿಧಿಯನ್ನು ಹಾಕುತ್ತಾರೆ. ಆದರೆ ಆತನನ್ನು ಬಂಧಿಸುವುದಿಲ್ಲ. ನಂತರ ಸುಮಾರು ಎಂಟು ತಿಂಗಳ ಹಿಂದೆ ನನ್ನ ಜಿಲ್ಲೆಯಲ್ಲಿ ಎರಡು ಬಾಲಕ ಬಾಲಕಿಯರ ಕೊಲೆ ಆಯಿತು. ಹತ್ತು ವರ್ಷದ ಪ್ರಾಯದವರ ಜೋಡಿ ಕೊಲೆ ಆಯಿತು. ಆ ಕೊಲೆಯ ಬಗ್ಗೆ ಸಿ.ಓಡಿ ತನಿಖೆ ಆಗಬೇಕೆಂದು ಹೇಳಿ ಈ ಸದನದಲ್ಲಿ ಪ್ರಸ್ತಾಪ ಮಾಡಿದೆ. ಸಿ. ಓಡಿ ತನಿಖೆ ಆಯಿತು. ಆದರೆ ಸಿ ಓಡಿ ತನಿಖೆ ಪ್ರಾರಂಭವೇ ಆಗಲಿಲ್ಲ. ಈ ರೀತಿ ನೀವು ಸಿ ಓಡಿ ತನಿಖೆಗೆ ಹಾಕಬೇಕೆಂದು ಒತ್ತಾಯ ಮಾಡುತ್ತೇವೆ. ಸಿಓಡಿ ತನಿಖೆ ಸಾಮಾನ್ಯ ವ್ಯವಸ್ಥೆಗಿಂತಲೂ ಬಹಳ ಹಳಸು ಎಂಬ ಅಭಿಪ್ರಾಯ ಜಿಲ್ಲೆಯಲ್ಲಿ ಬಂದು ಬಿಟ್ಟಿದೆ. ಸುಮಾರು ಪ್ರತಿವಾರದಲ್ಲಿ ಒಂದು ಕೊಲೆ ಆಗುತ್ತದೆ. ಪ್ರತಿ ಒಂದು ವಾರದಲ್ಲಿ ಒಂದು ಆತ್ಮಹತ್ಯೆ ಆಗುತ್ತದೆ. ನಿಜವಾಗಿ ಆತ್ಮಹತ್ಯೆ ಆದರೆ ಅದನ್ನು ಕೊಲೆ ಎಂದು ಹೇಳುತ್ತಾರೆ. ನಿಜವಾದ ಕೊಲೆಯಾದರೆ ಅದನ್ನು ಆತ್ಮಹತ್ಯೆ ಎಂದು ಹೇಳುವಂತಹ ರೀತಿಯಲ್ಲಿ ಕೆಲವು ಪ್ರಕರಣಗಳು ನಡೆಯುತ್ತವೆ. ಈ ರೀತಿ ನನ್ನ ಜಿಲ್ಲೆಯಲ್ಲಿ ಪೋಲೀಸ್ ವ್ಯವಸ್ಥೆ ಹದಗೆಟ್ಟಿದೆ. ಮೊನ್ನೆ ಮೊನ್ನೆಯಾಗಿ ನಾನು ಈ ಪೋಲೀಸರ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆ ಕೊಟ್ಟು ಊರಿಗೆ ಹೋಗಿದ್ದೆ. ಯಾವ ವಿಷಯಕ್ಕಾಗಿ ನಾನು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆನೋ ಕೆಲವು ಆಪಾದನೆ ಮಾಡಬೇಕಾಗಿತ್ತು, ಅದೇ ವ್ಯಕ್ತಿಗಳು ನಾನು ಹೋದಾಗ ಹಾಡು ಹಗಲೇ ಪಿಕ್ಚರ್ ಶೈಲಿಯಲ್ಲಿ ಸುಮಾರು ಎಂಟು ಹತ್ತು ಜನ ಹದಿನೆಂಟು

ಇಪ್ಪತ್ತು ಗುಂಡುಗಳನ್ನು ಹೊಡೆದು ಐದಾರು ಜನರನ್ನು ಆಸ್ಪತ್ರೆಗೆ ಹಾಕಿದ್ದರು. ಇದನ್ನೆಲ್ಲವನ್ನೂ ನೋಡಿದಾಗ ನನ್ನ ಜಿಲ್ಲೆಯಲ್ಲಿ ಪೋಲೀಸ್ ವ್ಯವಸ್ಥೆ ಬಹಳ ಹಾಳಾಗಿದೆ. ಅದು ಕೇವಲ ನನ್ನ ಜಿಲ್ಲೆಗೆ ಮಾತ್ರ ಸೀಮಿತವಲ್ಲ; ಇಡೀ ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆ ಈ ರೀತಿ ಇದೆ ಎಂದು ನಾನು ಹೇಳಲಿಕ್ಕೆ ನನಗೆ ವ್ಯಸನವಾಗುತ್ತದೆ. ನನ್ನ ಜಿಲ್ಲೆಯಲ್ಲಿ ನಾನು ವಿದ್ಯುತ್ತಿನ ಬಗ್ಗೆ ಹೇಳುತ್ತೇನೆ. ನಮ್ಮ ಜಿಲ್ಲೆಯಿಂದ ಕರ್ನಾಟಕಕ್ಕೆ ಮಾತ್ರವಲ್ಲ, ತಮಿಳುನಾಡಿಗೆ ಸಹ ನೀರನ್ನು ಕೊಡುತ್ತೇವೆ. ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ವಿದ್ಯುತ್ತನ್ನು ಕೊಡುವಂತಹ ಸಂಪನ್ಮೂಲಗಳು ಇವೆ. ನನ್ನ ಜಿಲ್ಲೆಯಲ್ಲಿ ಇವತ್ತು ವಿದ್ಯುತ್ ಶರಾವತಿಯಿಂದ ಬರಬೇಕಾದರೆ ವಿತರಣೆ ಮತ್ತು ಸಂಪರ್ಕ ಇವುಗಳಿಗೆ ಆಗುವಂತಹ ನಷ್ಟ ಏನು ಇದೆ, ಸರ್ಕಾರದ ದಾಖಲೆ ಪ್ರಕಾರ ಅದು 20 ಪರ್ಸೆಂಟ್ ಇರಬಹುದು, ಆದರೆ ವಾಸ್ತವವಾಗಿ ಅದು 30ಕ್ಕಿಂತಲೂ ಹೆಚ್ಚಿಗೆ ಇದೆ. ನಮ್ಮ ಜಿಲ್ಲೆಯಲ್ಲಿಯೇ ನಮ್ಮ ಜಿಲ್ಲೆಗೆ ಆಗುವಷ್ಟು ಮತ್ತು ಪರ ಜಿಲ್ಲೆಗೆ ಆಗುವಷ್ಟು ವಿದ್ಯುತ್ತನ್ನು ಮಾಡುವಂತಹ ಸಂಪತ್ ವ್ಯವಸ್ಥೆ ನಮ್ಮಲ್ಲಿದೆ. ಆದರೆ ಜನರ ವಿಶ್ವಾಸವನ್ನು ತೆಗೆದುಕೊಳ್ಳದೇ ಜನ ಪ್ರತಿನಿಧಿಗಳ ವಿಶ್ವಾಸವನ್ನು ತೆಗೆದುಕೊಳ್ಳದೇ ಸರ್ಕಾರ ಗುಟ್ಟು ಗುಟ್ಟಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ. ಅದರಿಂದ ಕೊಡಗಿನ ಜನ; ಏನೋ ಸಂಶಯ ಪಟ್ಟು ಯಾವುದೇ ಯೋಜನೆಗಳನ್ನು ಹಾಕಲಿಕ್ಕೆ ಹೋದರೂ ಪ್ರತಿಭಟನೆ ಮಾಡುತ್ತಿದ್ದಾರೆ. ನನ್ನ ಬೇಡಿಕೆ ಇಷ್ಟೇ. ತಾವು ಯೋಜನೆಗಳನ್ನು ಹಾಕುವಾಗ, ಅಲ್ಲಿಯ ಜನ ಪ್ರತಿನಿಧಿಗಳನ್ನು, ಅಲ್ಲಿಯ ಜನತೆಯನ್ನು ತಾವು ತಮ್ಮ ಜೊತೆಗೆ ಸೇರಿಸಿಕೊಳ್ಳಬೇಕು. ಇದರಿಂದ ಕೊಡಗು ಜಿಲ್ಲೆಗೆಲ್ಲದೆ ಸುಮಾರು ಕನಿಷ್ಟ ಮುರ್ನ್ನಾಲ್ಕು ಹತ್ತಿರದ ಜಿಲ್ಲೆಗಳಿಗೆ ವಿದ್ಯುತ್ತ್ನನ್ನು ಕೊಡುವಷ್ಟು ನೈಸರ್ಗಿಕ ಸಂಪತ್ತು ಇದೆ. ಕಾರಣ ಇವತ್ತು ವಿದ್ಯುತ್ತಿನ ಬೇಡಿಕೆ ಎಲ್ಲಾ ಕಡೆ ಇದೆ. ಇಡೀ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಇದೆ. ಇವತ್ತು ನಾವು ಮಾರ್ಚ್ ತಿಂಗಳ ಪ್ರಾರಂಭದಲ್ಲಿದ್ದೇವೆ. ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗುತ್ತಾರೆ. ಈ ಪರೀಕ್ಷೆಯ ಸಂದರ್ಭದಲ್ಲಿ ಬೆಳಿಗ್ಗೆ 5.30 ಅಥವಾ 6 ಗಂಟೆಗೆ ವಿದ್ಯುತ್ ಕಡಿತ ಆಗುತ್ತದೆ. ಪುನಃ ಸಂಜೆ ಮಕ್ಕಳು ಪಾಠಕ್ಕೆ ಕೂರಲು ಪ್ರಾರಂಭ ಮಾಡಿದಾಗ ಏಳು ಗಂಟೆಗೆ ವಿದ್ಯುತ್ ಕಡಿತ ಆಗುತ್ತದೆ. ಈ ರೀತಿ ವಿದ್ಯುತ್ ಕಡಿತದ ಬಗ್ಗೆ ನನ್ನ ಹಿಂದೆ ಮಾತನಾಡಿದಂತಹ ಬಹಳಷ್ಟು ಸದಸ್ಯರು ಹೇಳಿದ್ದಾರೆ. ಹಾಗಾಗಿ ವಿದ್ಯುತ್ ಬಗ್ಗೆ ನಿಜವಾಗಿ ರಾಜ್ಯದಲ್ಲಿ ವಿದ್ಯುತ್ತಿನ ಕೊರತೆಯನ್ನು ನೀಗಬೇಕು ಎಂದರೆ ನಮ್ಮ ಜಿಲ್ಲೆಯಲ್ಲಿ ಸಂಪತ್ತು ಇದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ನಂತರ ಕೊಡಗಿನಲ್ಲಿ ಕೊಡಗು ಪ್ರತ್ಯೇಕ ಆಗಬೇಕು ಎಂಬ ಕೂಗು ಇದೆ. ಈ ಕೂಗಿಗೆ ಕಾರಣ ಸರ್ಕಾರ ನಡೆದುಕೊಳ್ಳು ವಂತಹ ಕೆಲವು ರೀತಿ. ಕೊಡಗಿನಲ್ಲಿ ಉತ್ತಮವಾಗಿ ಟೀ ಬೆಳೆಯುವಂತಹ 20 ಸಾವಿರ ಎಕರೆ ಜಾಗ ಇದೆ. ಸರ್ಕಾರ ಹಿಂದೆ ಸುಮಾರು ಒಂದು ಕೋಟಿ 20 ಲಕ್ಷ ಖರ್ಚು ಮಾಡಿ ಈ ಆರಣ್ಯ ತೋಪು ನಿಗಮದ ಮುಖಾಂತರ ಸುಮಾರು 50 ಹೆಕ್ಟೇರ್ ಟೀ ಅನ್ನು ಬೆಳೆದರು. ಈ ಟೀ ಕೇವಲ ರಾಜ್ಯಕ್ಕೆ ಅಲ್ಲ ಇಡೀ ರಾಷ್ಟ್ರದಲ್ಲಿ ಅತಿ ಉತ್ತಮ ಟೀ ಬೆಳೆಸುವಂತಹ ವ್ಯವಸ್ಥೆ ಇದೆ ಎಂದು ಹೇಳಿ ಇದರ ರಿಪೋರ್ಟ್ ಇದೆ. ಆದರೂ ಆ ಟೀ ಯೋಜನೆಯನ್ನು ಇವತ್ತು ಸರ್ಕಾರ ಕೈಬಿಟ್ಟಿದೆ. ಯಾವುದೇ ತರಹದ ಪ್ರಗತಿಪರವಾದಂತಹ ಯೋಜನೆಗಳಾಗಲೀ ಅಥವಾ ಅಭಿವೃದ್ಧಿ ನನ್ನ ಜಿಲ್ಲೆಯಲ್ಲಿ ಇರದ ಕಾರಣ ಜನ ಇವತ್ತು ಪ್ರತ್ಯೇಕದ ಕೂಗನ್ನು ಕೇಳುತ್ತಿದ್ದಾರೆ. ಕಾರಣ ಸರ್ಕಾರದ ಈ ಅಸಡ್ಡೆಯ ನೀತಿ. ನಮ್ಮ ಜಿಲ್ಲೆಯಲ್ಲಿ ಇಂಜನಿಯರಿಂಗ್ ಕಾಲೇಜುಗಳಾಗಲೀ, ಮೆಡಿಕಲ್ ಕಾಲೇಜುಗಳಾಗಲೀ ಯಾವ ಕಾಲೇಜುಗಳೂ ಇಲ್ಲ. ಆದರೆ ನಮ್ಮ ಜಿಲ್ಲೆ ಇಡೀ

ರಾಜ್ಯಕ್ಕೆ ಬಹಳಷ್ಟು ಸಂಪತ್ತನ್ನು ಕೊಡುತ್ತದೆ. ನೀರನ್ನು ಕೊಡುವಂತಹ ಜಿಲ್ಲೆ. ಹೀಗಾಗಿ ನಮ್ಮ ಜಿಲ್ಲೆಯಲ್ಲಿ ಪ್ರತ್ಯೇಕದ ಕೂಗು ಕೇಳಿ ಬರುತ್ತಿದೆ. ನಾನು ಹೆಚ್ಚಿಗೆ ಹೇಳುವುದಾದರೆ, ನಮ್ಮ ಕೊಡಗು ಜಿಲ್ಲೆಯಲ್ಲಿ ಪ್ರತಿ ಐದು ಕಿಲೋಮೀಟರ್‌ಗೆ ಒಂದು ಹೈಸ್ಕೂಲು ಇದೆ. ಬಹಳ ಸಂತೋಷದಿಂದ ಹೇಳುತ್ತೇನೆ. ಸುಮಾರು ಸಣ್ಣ ಜಿಲ್ಲೆ, ಸುಮಾರು 70 ಹೈಸ್ಕೂಲುಗಳು ಇವೆ. ಆದರೆ ಸರ್ಕಾರೀ ಹೈಸ್ಕೂಲುಗಳು ಇರುವುದು ಕೇವಲ 15. ಉಳಿದೆಲ್ಲಾ ಶಾಲೆಗಳು ಏಡೆಡ್ ಶಾಲೆಗಳು ಆಗಿವೆ. ನಮ್ಮ ಹಿರಿಯರು ಅದಕ್ಕೆ ಬೇಕಾದಷ್ಟು ಜಾಗಗಳನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಹಿರಿಯರು ಕೊಟ್ಟಂತಹ ಜಾಗವನ್ನು, ಆ ಶಾಲೆಯ ಅಧಿಕಾರದ ವ್ಯವಸ್ಥೆಗೆ ತರುವಂತಹ ಕಾರಣ ನಮ್ಮಲ್ಲಿ 32 ತರಹ ಟೆನ್ಯೂರ್‌ಗಳು ಇವೆ. ಈ ಶಾಲೆಯನ್ನು ಸಂಪತ್ತನ್ನಾಗಿ ಮಾಡಬೇಕು. ಶಾಲೆ ಹೆಚ್ಚಿಗೆ ಬರುವಂತಹ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ಆಗಬೇಕು. ರೆವಿನ್ಯೂ ಇಲಾಖೆ ಇದರ; ಬಗ್ಗೆ ಗಮನ ಕೊಡಬೇಕು. ಪೋಲೀಸ್ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಕೊಯಮತ್ತೂರಿನಲ್ಲಿ ಏನು ಬಾಂಬ್ ಸರಣಿ ನಡೆಯಿತು, ಇದನ್ನು ಮಾಡಿದಂತಹವರು ಮಲ್ಲಾಪುರ ಜಿಲ್ಲೆಗೆ ಸೇರಿದವರು ಎಂದು ಗೊತ್ತಿತ್ತು. ಆ ಜಿಲ್ಲೆ ನಮ್ಮ ಕೊಡಗು ಜಿಲ್ಲೆ ಹತ್ತಿರ ಇದೆ. ಸುಮಾರು 15 ಜನ ಯುವಕರು ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕಿನನಲ್ಲಿ ಹುಲಿಕೇರಿ ಗ್ರಾಮದ ಒಂದು ಹಳ್ಳಿಯಲ್ಲಿ ಬಂದಿದ್ದರು. ಇದರ ಮಾಹಿತಿಯನ್ನು ಪೋಲೀಸರಿಗೆ ಕೊಟ್ಟು ಆ ಗ್ರಾಮದ ಯುವಕರು ಎಲ್ಲಾ ಸಜ್ಜಾಗಿ ಅವರನ್ನು ಹಿಡಿದು ಕೊಡುವ ಸಾಧ್ಯತೆ ಇದ್ದರೂ ಸಹ ಪೋಲೀಸರು ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಹಾಕದೇ ಇದ್ದುದ್ದರಿಂದ ಅಂತಹ ಐ, ಎಸ್,ಐ,ಗೆ ಸೇರಿದಂತಹ ಆ ಯುವಕರು ಪುನಃ ಅಲ್ಲಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಇವತ್ತು ಆ ಜಿಲೆಯಲ್ಲಿ ಪೋಲೀಸ್ ವ್ಯವಸ್ಥೆ ಸರಿ ಇದ್ದಿದ್ದರೆ ಆ ಅಪರಾಧಿಗಳನ್ನು ಹಿಡಿದಿದ್ದರೆ ಪೋಲೀಸ್ ಇಲಾಖೆಗೆ ಒಂದು ಹೆಮ್ಮೆ ಒಂದು ಹೆಚ್ಚಿನ ಗೌರವ ಬರುತ್ತಿತ್ತು. ಕಾರಣ ಇಂತಹ ರಾಷ್ಟ್ರದ್ರೋಹಿಗಳು ಅಗುವಂತಹ ಜಾಗ, ಕಳ್ಳ ಸಾಗಣಿಕೆದಾರರು ಅಡಗುವಂತಹ ಜಾಗ ನಮ್ಮ ಕೊಡಗು ಜಿಲ್ಲೆ ಆಗಿ ಹೋಗಿದೆ. ಇದಕ್ಕೆಲ್ಲಕ್ಕೂ ಕಾರಣ ನಮ್ಮ ಜಿಲ್ಲೆಯ ಪೋಲೀಸ್ ವ್ಯವಸ್ಥೆ. ನಮ್ಮ ಜಿಲ್ಲೆಯಲ್ಲಿರುವಂತಹ ಉನ್ನತ ಪೋಲೀಸ್ ಅಧಿಕಾರಿ ಇವತ್ತು ಆ ಜಿಲ್ಲೆಯ ಬಡ ಜನತೆಯ ರಕ್ಷಣೆ ಕೊಡುವ ಬದಲು ಶ್ರೀಮಂತ ವರ್ಗದವರೊಡನೆ ಶಾಮಾಲಿಗಿ, ಕಳ್ಳ ಸಾಗಾಣಿಕೆದಾರರ ಮತ್ತು ಈ ಐ ಎಸ್ ಐ ಏಜೆಂಟುಗಳವರಿಗೆ ಬೆಂಬಲ ಕೊಡುತ್ತಿದ್ದಾರೆಂದು ಹೇಳುವುದಕ್ಕೆ ಬಹಳ ವ್ಯಸನ ಆಗುತ್ತದೆ. ಜಿಲ್ಲೆಯಲ್ಲಿ ಬಸ್ ಸಂಚಾರದ ಬಗ್ಗೆ, ಕೆಎಸ್‌ಆರ್‌ಟಿಸಿ ವಿಚಾರದ ಬಗ್ಗೆ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕೇವಲ ಒಂದೇ ಒಂದು ಬಸ್ ಡಿಪೋ ಇದೆ. ನಮ್ಮ ಜಿಲ್ಲೆಯಲ್ಲಿ ಕನಿಷ್ಠ ಸೋಮವಾರಪೇಟೆ ತಾಲ್ಲೂಕಿನಲ್ಲೋ ಅಥವಾ ವಿರಾಜಪೇಟೆ ತಾಲ್ಲೂಕಿನಲ್ಲೋ ಒಂದು ಕೆಎಸ್‌ಆರ್‌ಟಿಸಿ ಬಸ್ ಡಿಪೋನ ಅವಶ್ಯಕತೆ ಇದೆ. ಕಾರಣ ನಮ್ಮ ಜಿಲ್ಲೆಯಿಂದ ಬಹಷ್ಟು ಜನ ಕಾಫಿ ಬೆಳೆ ಮತ್ತು ಇತರ ಬೆಳೆಗಳು ಇರುವುದರಿಂದ ಬೆಂಗಳೂರು ಮತ್ತಿತರ ಕಡೆಗೆ ಪ್ರಯಾಣ ಮಾಡಬೇಕಾಗಿರುವುದರಿಂದ ಬಸ್‌ಗಳ ಅವಶ್ಯಕತೆ ಇದೆ. ಇಷ್ಟು ಹೇಳಿ ನನಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

+ಶ್ರೀ ಕೆ ಎಸ್. ಪುಟ್ಟಣ್ಣಯ್ಯ ಪಾಂಡವಪುರ:- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ಪರ ವಿರೋಧ ಎನ್ನುವ ಪ್ರಶ್ನೆಗಿಂತಲೂ ಸರ್ಕಾರದ ನಿಷ್ಕ್ರಿಯೆ, ಸರ್ಕಾರದ

ಬೇಜವಾಬ್ದಾರಿ, ಸರ್ಕಾರದ ಹೊಣೆಗಾರಿಕೆ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಇವರು ಹೇಳಿದರು ಚುನಾವಣೆಯಲ್ಲಿ ನಮಗೆ ಪಾಠ ಕಲಿಸಿದ್ದಾರೆ. ಎಂದು ನಾವು ಇನ್ನು ಮೇಲೆ ಸರಿಯಾಗಿ ಇರುತ್ತೇವೆ ಎಂದರು. ಈ ಪಕ್ಷ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ನಾವು ಪದೇ ಪದೇ ಕಚ್ಚಾಡುತ್ತಿದ್ದೇವೆ. ನಾವು ರಾಜ್ಯದ ಹಿತದೃಷ್ಟಿಯಿಂದ ಇನ್ನು ಮೇಲೆ ಪೂರ್ಣ ಪ್ರಮಾಣದಲ್ಲಿ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆಂದು ಹೇಳಿ ಈ ದೊಡ್ಡ ಕೆರೆ ಮೈದಾನದಲ್ಲಿ ಫೈಲ್ವಾನರು ಕೈ ಹಿಡಿದುಕೊಳ್ಳುತ್ತಾರಲ್ಲಾ ಹಾಗೆ ಎಲ್ಲರೂ ಕೈ ಹಿಡಿದುಕೊಂಡು ಕರ್ನಾಟಕದ ಜನತೆಯ ಮುಂದೆ ಪ್ರಮಾಣ ಮಾಡಿದರು.

1. 10. ಪಿ.ಎಂ

ಅವರ ಕೈ ನೋಡಿದರೆ ಒಂದು ರೀತಿ ಕಾನ್‌ಕ್ರೀಟ್ ಹಾಕಿದ ರೀತಿಯಲ್ಲಿ ಕಾಣಿಸುತ್ತಿತ್ತು. ಇವರು ಎಂದೆಂದಿಗೂ ಯಾವುದೇ ಕಾರಣಕ್ಕೂ ಕಚ್ಚಾಡುವುದಿಲ್ಲ, ಈ ರಾಜ್ಯಕ್ಕೆ ಏನಾದರೂ ಒಂದು ಗತಿ ಕಾಣಿಸುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಈಗ ನೋಡಿದರೆ ರಾಜ್ಯಕ್ಕೆ ಒಂದು ಗತಿಯನ್ನೇ ಕಾಣಿಸಿದ್ದಾರೆ. ಈಗಾಗಲೇ ಎಲ್ಲಾ ಪಕ್ಷಗಳು ಒಡೆದು ಬೇಕಾದ ಕಡೆ ಹೋಗುತ್ತಿದ್ದಾರೆ, ಈಗ ಚುನಾವಣೆಗೆ ನಾವು ಹೋದರೆ, ನಮ್ಮನ್ನು ಯಾರೂ ಬಿಡುವುದಿಲ್ಲ ಎಂದು ಹೇಳಿ ಕಾಲ ಕಳೆಯುವಂತಹ ತೀರ್ಮಾನ ಮಾಡಿದ್ದಾರೆ ಎಂದು ಕಾಣಿಸುತ್ತದೆ. ಆದರೆ, ಸನ್ಮಾನ್ಯ ಸಭಾಧ್ಯಕ್ಷರೆ, ಈ ಈ ರೀತಿಯ ಚುನಾವಣೆಗಳು ಆಗುತ್ತಿದ್ದರೆ, ಇನ್ನು ಮುಂದೆ ಯಾರೂ ಚುನಾವಣೆ ನಡೆಸುವುದಿಲ್ಲ. ಪ್ರತೀ ಐದು ವರ್ಷಕ್ಕೊಮ್ಮೆ ಚುನಾವಣೆಗಳು ಮಹತ್ತರವಾದ ಕೆಟ್ಟ ರೀತಿಯ ಬದಲಾವಣೆಗಳು ಆಗುತ್ತಿವೆ. ಬದಲಾವಣೆಗಳಲ್ಲಿ ಹೆಂಡ, ಸಾರಾಯಿ, ಜಾತಿ, ಯಾವ ಮಟ್ಟಕ್ಕೆ ಕೆಲಸ ಮಾಡುತ್ತಿದೆ ಎಂದರೆ, ಪ್ರಜಾಪ್ರಭುತ್ವ ನಾಶ ಆಗುವಂತಹ ಪರಿಸ್ಥಿತಿಗೆ ಹೋಗುತ್ತಿದೆ. ಆದುದರಿಂದ ಎಲ್ಲಾ ಪಕ್ಷಗಳು, ಹಾಗೂ ನಾವು ಇದರ ಬಗ್ಗೆ ಚಿಂತನೆ ಮಾಡಬೇಕು. ಮುಕ್ತ ಚುನಾವಣೆ, ಪ್ರಾಮಾಣಿಕತೆ ಚುನಾವಣೆ ನಡೆಯುವಂತಹ ದಿಕ್ಕಿನಲ್ಲಿ ಕೆಲಸ ಮಾಡದೇ ಇದ್ದರೆ, ಪ್ರತಿ ಹಳ್ಳಿಯಲ್ಲೂ, ಪ್ರತಿ ಚುನಾವಣೆಯಲ್ಲಿ 18 ವರ್ಷಕೊಳ್ಳಳಪಟ್ಟ ಮತದಾರರನ್ನೂ ನೂರು ನೂರು ಜನ ಕುಡಿಯತಕ್ಕಂಥವರನ್ನು ಸೃಷ್ಟಿ ಮಾಡುತ್ತಿದ್ದೇವೆ ಅಷ್ಟೇ. ಆದುದರಿಂದ ರಾಜಕೀಯ ಪಕ್ಷಗಳಿಗೆ ಸಮಾಜದ ಭಯ ಇರಬೇಕು. ಸಮಾಜದ ಹಿತ ಚಿಂತನೆ ಇರಬೇಕು. ಆದುದರಿಂದ ಇನ್ನು ಇರುವಂತಹ ಒಂದೂವರೆ ವರ್ಷಗಳ ಕಾಲವಾದರೂ ಆಡಳಿತಾತ್ಮಕವಾಗಿ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಒಂದು ರಾಜಕೀಯ ಪಕ್ಷವನ್ನು ತಿರಸ್ಕಾರ ಮಾಡಿ, ಇನ್ನೊಂದು ರಾಜಕೀಯ ಪಕ್ಷವನ್ನು ಅಧಿಕಾರಕ್ಕೆ ತಂದರೆ, ಮಹತ್ತರವಾದ ಬದಲಾವಣೆಯ ಕೆಲಸವನ್ನು ಮಾಡಬೇಕು. ಆದುದರಿಂದ ತಾವು ಬಹಳ ಗಂಭೀರವಾಗಿ ಇದರ ಬಗ್ಗೆ ಆಲೋಚನೆ ಮಾಡಬೇಕು. ತಾವು ಹೇಳಿದಿರಿ ಆಡಳಿತದಲ್ಲಿ ಪಾರದರ್ಶಕತೆ, ಏನು ಆಡಳಿತ ಮಾಡುತ್ತೀರಿ ಎಂಬುದು ನನಗೂ ಅರ್ಥ ಆಗುತ್ತಿಲ್ಲ. ಆಡಳಿತದಲ್ಲಿ ಯಾವುದೇ ಬದಲಾವಣೆ ಇಲ್ಲ, ಯಾವುದೇ ಹೊಸ ಚಿಂತನೆ ಇಲ್ಲ, ಅದೇ ಜನರು, ಅದೇ ಕಛೇರಿ, ಅದೇ ಕಛೇರಿಗೆ ಅದೇ ಜನ ಹೋಗುತ್ತಿದ್ದಾರೆ ಹಿಂದಿನ ಸರ್ಕಾರಗಳು ಯಾವ ರೀತಿ ಇತ್ತು ಅದೇ ರೀತಿ ಇದೆ. ಆಡಳಿತದಲ್ಲಿ ಕನಿಷ್ಠ ಬದಲಾವಣೆ ಎಂದರೆ, ಸಾರ್ವಜನಿಕರು ಕಛೇರಿಗೆ ತಿರುಗದಂತೆ ಅವರವರ ಸ್ಥಳದಲ್ಲೇ ಕೆಲಸ ಆಗತಕ್ಕಂತಹ ವಿಚಾರದ ಚಿಂತನೆ ಮಾಡದರೆ, ಅದು ಆಡಳಿತದ ಬದಲಾವಣೆ. ನಂತರ ಅವರ ಕಾರ್ಯಕ್ರಮಗಳು,

ಉದಾಹರಣೆಗೆ ವಿದ್ಯುಚ್ಛಕ್ತಿ. ಕೊಡದೇ ಇರುವಂತಹ ಕರೆಂಟ್‌ಗೆ ರೈತರಿಗೂ 300 ರೂ. ನಿಗದಿ ಮಾಡಿದ್ದಾರೆ. ಸನ್ಮಾನ್ಯ ಸಭಾಧ್ಯಕ್ಷರೆ, ಒಂದು ವಿಚಾರವನ್ನು ತಮಗೆ ತಿಳಿಸುತ್ತೇನೆ, ಯಾರೋ ಒಬ್ಬ ಕುಡಿದು ಬಂದು ಬೆಂಗಳೂರಿನಲ್ಲಿ, ಬೆಂಗಳೂರು ಬಸ್‌ಸ್ಟ್ಯಾಂಡ್‌ಗೆ ಬಿಡು ಎಂದು ಕಾರಿನಲ್ಲಿ ಕುಳಿತುಕೊಂಡನಂತೆ ತಕ್ಷಣ ಡ್ರೈವರ್ ಬಂದು ಕಾರಿನ ಬಾಗಿಲು ತೆಗೆದು, ಇದೇ ಬೆಂಗಳೂರು ಬಸ್ ಸ್ಟ್ಯಾಂಡ್ ಇಳಿಯಿರಿ ಎಂದನಂತೆ. ಹಾಗೆಂದು ಕೂಡಲೇ ಇಳಿದುಬಿಟ್ಟು ನೂರು ರೂಪಾಯಿ ಅವರ ಕೈಯಿಗೆ ಕೊಟ್ಟನಂತೆ. ಇಷ್ಟು ಬೇಗ ನನ್ನ ಬೆಂಗಳೂರು ಬಸ್ ಸ್ಟ್ಯಾಂಡ್‌ಗೆ ನನ್ನನ್ನು ಕರೆದುಕೊಂಡು ಬಂದು ಬಿಟ್ಟು ಎಂದು ಅವರ ಕಾರಿನ ನಂ. ಬರೆದು ಕೊಂಡನಂತೆ. ಇನ್ನೊಂದೂ ನಾನು ಈ ಕಾರು ಹತ್ತುವುದಿಲ್ಲ, ಇಷ್ಟು ಜೋರಾಗಿ ಓಡಿಸಿಕೊಂಡು ಬಂದು, ಬೆಂಗಳೂರು ಬಸ್‌ಸ್ಟ್ಯಾಂಡ್‌ಗೆ ಬಿಟ್ಟ ಎಂದು. ಆ ರೀತಿ ಕೊಡದೇ ಇರುವಂತಹ ವಿದ್ಯುಚ್ಛಕ್ತಿಗೆ ನಾವು 300 ರೂ. ಕೊಡಬೇಕಾಗಿದೆ. ಓಡಿಸದೇ ಇರುವ ಕಾರಿಗೆ ಅವನು ಕುಡಿದು 300 ರೂ. ಕೊಟ್ಟ, ನಾವು ಕೊಡದೇ ಇರುವಂತಹ ವಿದ್ಯುಚ್ಛಕ್ತಿಗೆ 300 ರೂ. ಕೊಡುವ ಪರಿಸ್ಥಿತಿ ಬಂದಿದೆ. ಆದುದರಿಂದ ಯಾವುದೇ ರೀತಿಯಾದಂತಹ ಬದಲಾವಣೆ ಇಲ್ಲ. ನಂತರ ಉತ್ಪಾದನೆ ಏನು ಸ್ಥಗಿತಗೊಂಡಿದೆ, ಅದನ್ನು ಜಾಸ್ತಿ ಉತ್ಪಾದನೆ ಮಾಡುವಂತಹ ಕೆಲಸ ಆಗಲಿಲ್ಲ. ನಂತರ ಯಾವುದೇ ನಿರ್ವಹಣೆಯಲ್ಲಿ ಬದಲಾವಣೆ ಆಗಲಿಲ್ಲ. ಸಮಿತಿಗಳನ್ನು ಮಾಡಿ ಎಲ್ಲಾ ತಿಳುವಳಿಕೆ ಕೊಟ್ಟರು, ಆದರೆ ಯಾವುದೇ ರೀತಿಯಾದಂತಹ ಬದಲಾವಣೆ ಮಾತ್ರ ಆಗಲಿಲ್ಲ. ಸನ್ಮಾನ್ಯ ಸಭಾಧ್ಯಕ್ಷರೆ, ಇವರು ವಿದ್ಯುಚ್ಛಕ್ತಿ ವಿಚಾರದಲ್ಲಿ 900 ಕೋಟಿ ರೂ. ಹೊಸ ತೆರಿಗೆಯನ್ನು ಕೊಟ್ಟಿದ್ದೇವೆ. ಹೊಸ ತೆರಿಗೆಯನ್ನು ಕೊಟ್ಟಿದ್ದರೂ ಸಹಾ ಟ್ರಾನ್ಸ್‌ಫಾರ್‌ಮರ್ ಇಲ್ಲ, ವೈರ್ ಇಲ್ಲ, ಯಾವುದೇ ಮೆಟರೀಯಲ್ಸ್ ಇಲ್ಲ, ಪಂಪ್‌ಸೆಟ್ ಕಲೆಕ್ಷನ್ ಇಲ್ಲ, ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗೆ ಗಂಗಾ ಕಲ್ಯಾಣ ಯೋಜನೆಗಳು ಯಾವುದು ಆಗಿಲ್ಲ. ಸುಮ್ಮನೆ ಆಶ್ವಾಸನೆಗಳು ಪುಸ್ತಕದಲ್ಲಿ ಲಿಖಿತದಲ್ಲಿ ಇದೆ. ಆಡಳಿತಾತ್ಮಕವಾಗಿ ಚಿಂತನೆ ಮಾಡಿದರೆ, ಅತ್ಯಂತ ಗಂಭೀರವಾಗಿ ಕೆಲಸಗಳು ನಡೆಯುತ್ತಿಲ್ಲ. ಇದಕ್ಕೆ ಕಾರಣ ಏನು ಎಂದರೆ, ಇವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ, ಅದೇನೆಂದರೆ. ಐದು ವರ್ಷ ನಮ್ಮನ್ನು ಇಟ್ಟುಕೊಳ್ಳುತ್ತಾರೆ, ನಮ್ಮನ್ನು ಕಳುಹಿಸಿ ಇನ್ನೊಬ್ಬರನ್ನು ಕರೆಯುತ್ತಾರೆ. ಎಂದು ತಿಳಿದುಕೊಂಡಿದ್ದಾರೆ, ಆದರೆ ಈ ಆಡಳಿತದ ಜವಾಬ್ದಾರಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಕೇಬಿಯಲ್ಲಿ ಕರೆಂಟ್ ಇಲ್ಲದೇ ಇದ್ದರೂ ಅವರಿಗೆ ಕರೆಂಟ್ ಹೊಡೆಯುತ್ತಿದೆ. ಕರೆಂಟ್ ಹೊಡೆದಿರುವುದಕ್ಕೆ ಅವರಿಗೆ ಮತದಾರರು ಅವರಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯದ ಹೆದ್ದಾರಿಗಳಲ್ಲಿ ರಸ್ತೆಗಳ ಬಗ್ಗೆ. 30 ವರ್ಷಗಳ ಹಿಂದೆ ಯಾವ ಯಾವ ರೀತಿ ವಾಹನಗಳು ಓಡಾಡುತ್ತಾ ಇದ್ದವು, 30 ವರ್ಷ ಆದಮೇಲೆ ಎಷ್ಟು ಜಾಸ್ತಿ ವಾಹನಗಳು ಓಡಾಡುತ್ತಿವೆ, ಇವತ್ತು ಪಿಡಬ್ಲ್ಯೂಡಿ ಅವರ ಜಿಲ್ಲಾಪರಿಷತ್ ಆಗಬಹುದು, ಯಾವುದೇ ರೋಡ್ ಆಗಬಹುದು, 20 ಎಂ ಎಂ ನಲ್ಲಿ ಮಾಡುತ್ತಿದ್ದಾರೆ. ಕನಿಷ್ಠ 40 ಎಂ ಎಂ ಗೆ ಹೋಗಬೇಕು. ಸುಮಾರು 30 ವರ್ಷಗಳಿಂದ ಇವತ್ತಿನವರೆವಿಗೂ ಹತ್ತು ಪಟ್ಟು ವಾಹನಗಳ ಸಂಖ್ಯೆ ಜಾಸ್ತಿ ಆಗಿವೆ. ಈಗಾಗಲೇ ವಾಹನಗಳ ಸೆನ್ಸ್‌ಸ್ ನಡೆಯುತ್ತಿದೆ. ಆದರೆ ಯಾವುದೇ ರೀತಿಯಾದಂತಹ ಬದಲಾವಣೆ ಇಲ್ಲ. ಕನಿಷ್ಠ 40 ಎಂ ಎಂ ಮಾಡಬೇಕು, ಡ್ರೈನೇಜ್ ಇರಬೇಕು. ಏಕೆಂದರೆ, ಡಾಂಬರೀಕರಣ ಎಲ್ಲಿ ಮಾಡಿದರೂ ಅಲ್ಲಿ ಏನಾದರೂ ಮಳೆ ನೀರು ನಿಂತು

ಕೊಂಡರೆ, ಆ ಡಾಂಬರೀಕರಣ ಸರ್ವನಾಶವಾಗುತ್ತದೆ. ಡ್ರೈನೇಜ್ ಮಾಡಲಿಲ್ಲ ಅಂದರೆ ಇಡೀ ರಸ್ತೆ ನಾಶವಾಗುತ್ತದೆ. ಈಗಾಗಲೆ ಶಾಸನ ಸಭೆಯಲ್ಲಿ ಈ ವಿಷಯವನ್ನು ಎರಡು ಸಾರಿ ಪ್ರಸ್ತಾಪ ಮಾಡಿದ್ದೆವು. ಆದರೆ ಯಾವುದೇ ಸರ್ಕಾರ ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಲಿಲ್ಲ. ಪಿಡಬ್ಲ್ಯೂಡಿ ನಲ್ಲಿ ಏನಾಗಿದೆ ಎಂದರೆ, ಡ್ರೈನೇಜ್ ಮಾಡತಕ್ಕಂತಹ ವ್ಯವಸ್ಥೆಗೆ ಹಣವನ್ನು ಒದಗಿಸತಕ್ಕಂತಹ ಯೋಜನೆಯಾಗಲಿ, ಯೋಚನೆಯಾಗಲಿ ಇಲ್ಲ. ಅದರಲ್ಲಿ ಒಂದು ಪಿಡಬ್ಲ್ಯೂಡಿ ರೋಡ್, ಇನ್ನೊಂದು ಜಿಲ್ಲಾಪರಿಷತ್ ರೋಡ್, ಇನ್ನೊಂದು ಇರಿಗೇಷನ್ ಟ್ರ್ಯಾಕ್ ರೋಡ್, ಇನ್ನೊಂದು ಎಪಿಎಂಸಿ ರೋಡ್, ಇನ್ನೊಂದು ಶುಗರ್‌ಸೆಸ್ ರೋಡ್, ಹಾಗೂ ಮಲೆನಾಡು ಅಭಿವೃದ್ಧಿ ರಸ್ತೆ. ಒಂದು ತಲೆ ಐದು ಜನರಿಗೆ ಕೆರೆಯುವುದಕ್ಕೆ ಇದು ಯಾರಿಗೆ ಸೇರಿದೆ, ಅದು ಯಾರಿಗೆ ಸೇರಿದೆ ಎಂಬುದು ಯಾರಿಗೂ ಗೊತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ ನೀರು ಹೋಗುವ ಜಾಗ ಹೇಮಾವತಿಗೆ ಸೇರುತ್ತದೆ, ಮೇಲಿನ ಸೇತುವೆ ಜಿಲ್ಲಾಪಂಚಾಯಿತಿಗೆ ಸೇರುತ್ತದೆ. ಆದರೆ ಆ ಸೇತುವೆ ಕಳಚಿ ಕೆಳಗೆ ಬಿದ್ದಿದೆ. ಈ ಸೇತುವೆಯನ್ನು ರಿಪೇರಿ ಮಾಡಿ ಎಂದು ಹೇಳಿದರೆ, ಅದು ಜಿಲ್ಲಾಪರಿಷತ್ ಸೇರಿದ್ದು, ನಾವು ಕೆಳಗೆ ನೀರು ಬಿಡುತ್ತೇವೆ ಅದು ಮಾತ್ರ ನಮ್ಮದು ಎಂದು ಹೇಳುತ್ತಾರೆ. ಈಗಾಗಲೇ ನಾವು. ಸನ್ಮಾನ್ಯ ನೀರಾವರಿ ಮಂತ್ರಿಗಳಿಗೆ ಇರಿಗೇಷನ್ ಟ್ರ್ಯಾಕ್ ಬಗ್ಗೆ ಯಾವುದಾದರೂ ಒಂದು ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ, ಆದರೆ ಇದೂವರೆವಿಗೂ ಯಾವುದೇ ರೀತಿಯಾದಂತಹ ತೀರ್ಮಾನವನ್ನು ತೆಗೆದುಕೊಂಡಿಲ್ಲ. 1986ನೇ ಇಸವಿಯಿಂದ ಅದಕ್ಕೆ ಹಣವನ್ನಾದರೂ ಕೊಡುವ ಯೋಚನೆ ಮಾಡಿದ್ದೀರೋ? ಕರ್ನಾಟಕದಲ್ಲಿ 20 ಸಾವಿರ ಕಿ.ಮೀ., ಮಂಡ್ಯ ಜಿಲ್ಲೆಯಲ್ಲಿ 1,200 ಕಿ. ಮೀ ಕಬ್ಬಿನ ಸಾಗಾಣಿಕೆ, ಗೊಬ್ಬರದ ಸಾಗಾಣಿಕೆ, ಭತ್ತದ ಸಾಗಾಣಿಕೆ ಇವೆಲ್ಲವೂ ರೈತರಿಗೆ ಸಂಬಧಪಟ್ಟಂಥ ರಸ್ತೆಗಳು. ಇವುಗಳಿಗೆ ಇದೂವರೆಗೂ 10 ರೂ. ಅನುದಾನ ಬಿಡುಗಡೆ ಆಗಿಲ್ಲ. ಯಾವ ಕೆಲಸವೂ ಸಹ ನಡೆಯುತ್ತಿಲ್ಲ. ಆದುದರಿಂದ ರಸ್ತೆ ಯಾರ್‍ಯಾರಿಗೆ ಸೇರಿದೆ, ದಕ್ಕೆ ಎಷ್ಟು ಹಣ ಅನುದಾನ ಬಿಡುಗಡೆಯಾಗಬೇಕು, ಯಾವ ರೀತಿ ಬದಲಾವಣೆ ಮಾಡಬೇಕು ಎಂಬುದನ್ನು ಕನಿಷ್ಠ ಚಿಂತನೆಯನ್ನೂ ಸಹ ಮಾಡಿಲಿಲ್ಲ. ಮಾನ್ಯ ಸಭಾಧ್ಯಕ್ಷರೆ, ಪಂಚಾಯಿತಿ ವ್ಯವಸ್ಥೆಯಲ್ಲಿ ಒಂದೂವರೆ ಲಕ್ಷ, ಎರಡು ಲಕ್ಷ ರೂ. ಕೊಡುತ್ತಾರೆ. ಎಲ್ಲಾ ಪಂಚಾಯಿತಿಯಲ್ಲೂ 30 ಸಾವಿರ 40 ಸಾವಿರ ರೂಪಾಯಿ ಕರೆಂಟ್ ಚಾರ್ಜ್ ಬಾಕಿ ಇದೆ. ಆದುದರಿಂದ ಬೀದಿ ದೀಪಗಳನ್ನೂ ಸಹ ಕೊಡುವ ಪರಿಸ್ಥಿತಿಯಲ್ಲಿ ಅಲ್ಲ. ಆದುದರಿಂದ ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿ ಯಾವ ಮಟ್ಟದ ಚಿಂತನೆಯನ್ನು ಮಾಡಿದ್ದೀರೋ ನಮಗಂತೂ ತಿಳಿಯುತ್ತಿಲ್ಲ. ವಿಕೇಂದ್ರಿಕರಣನೋ, ಅಥವಾ ವಿಕೃತೀಕರಣನೋ ಗೊತ್ತಿಲ್ಲ. ಸನ್ಮಾನ್ಯ ಶ್ರೀ ನಾಗೇಗೌಡರು ಹಾಗೂ ಶ್ರೀ ಶಿವರಾಮೇಗೌಡರು ಬಹಳ ಸಂತೋಷದಿಂದ ಇದ್ದಾರೆ. ಕಾರಣ ಅವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. 80 ದಿವಸದಿಂದ ಇದ್ದಂತಹ ಸಮಸ್ಯೆಯನ್ನು ಗಂಡ-ಹೆಂಡತಿ ಮಾಡುವಂತಹ ಕೆಲಸ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಮದುವೆ ಮಾಡಿಸುವುದೇನು 24 ಗಂಟೆಯೊಳಗೆ ಮಾಡಿಸುತ್ತೇನೆ ಎಂದು. ಏನೋ ಯಾವುದೋ ತೂಬಿನೊಳಗೆ ನೀರು ಬಿಟ್ಟ ಹಾಗಿ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಅವರಿಬ್ಬರನ್ನು ಗಂಡ ಹೆಂಡತಿ ಮಾಡಬೇಕಾದರೆ, ವಿಟೋ ಚಲಾವಣೆ ಮೂಲಕ ಸುಮಾರು ಏಳು ತಿಂಗಳು, ಅರ್ಧ ಟಿಎಂಸಿ ನೀರೇ ಕಳೆದಿದೆ ಇಬ್ಬರಿಗೂ.

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ):- ಸನ್ಮಾನ್ಯ ಪುಟ್ಟಣ್ಣಯ್ಯ ನವರೆ, ನೀವೂ ಇದ್ದೀರಿ, ನಾನೇನೋ ನಿನ್ನೆ ಅನಿರೀಕ್ಷಿತವಾಗಿ ಯಾರಿಗೊ ಹುಷಾರಿರಲಿಲ್ಲ ಎಂದು ಸದನಕ್ಕೆ ಬರುವುದಕ್ಕೆ ಆಗಲಿಲ್ಲ. ಪತ್ರಿಕೆಗಳಲ್ಲಿ ಈ ಸುದ್ದಿಯನ್ನು ಓದಿ ಬಹಳ ವ್ಯಸನವಾಯಿತು. ಸಭಾಧ್ಯಕ್ಷರೆ, ಆ ದಿವಸ ಸುಮಾರು ನಾಲ್ಕು ಐದು ಗಂಟೆಗಳ ಕಾಲ ಸನ್ಮಾನ್ಯ ನಾಗೇಗೌಡರು ಒಪ್ಪಿಕೊಂಡು ಬಂದಿದ್ದಾರೆ ಎಂದು ಹೇಳಿ ವನವಾಸ ಪಟ್ಟೆವು. ಇವರು ಹೇಳಿದ ಹಾಗೆಯೇ ನೂರು ಎಕರೆಗೆ ನೀರು ಬಿಡಿಸಬಹುದಾಗಿತ್ತೋ ಏನೋ, ಆ ಗಂಡನ್ನು ಒಪ್ಪಿಸುವ ಹೊತ್ತಿಗೆ. ಅಷ್ಟೆಲ್ಲಾ ಮಾಡಿರುವಾಗ ಶಿವರಾಮೇಗೌಡರು ಇದರಲ್ಲಿ ಸೇರಿದ್ದರು ಎಂದು ಹೇಳುವ ಸೌಜನ್ಯ ಕೂಡ ಇವರು ತೋರಿಸಲಿಲ್ಲ. ಅದೂ ನಮ್ಮ ಮುಖಂಡರಿಗೆ. ಫೋಟೋ ಕೂಡ ನನ್ನನ್ನು ಬಿಟ್ಟು ಇವರೇ ತೆಗೆಸಿಕೊಂಡರು.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ:- ನಾವೆಲ್ಲಾ ಗಲಾಟೆ ಮಾಡಿ, ಪ್ರಸ್ತಾಪ ಮಾಡಿ, ಸರ್ಕಾರದ ಮೇಲೆ ಒತ್ತಾಯ ತಂದು, ಮದುವೆ ಮಾಡಿಸುತ್ತೇವೆ ಎಂದು ಹೇಳಿದ ಮೇಲೆ ಒಪ್ಪಿಕೊಂಡರು. ಸನ್ಮಾನ್ಯ ನಾಗೇಗೌಡರು ಮದುವೆ ಮಾಡಿಸುವಾಗ ಮದುವೆಗೆ ಬನ್ನಿ ಎಂದು ಹೇಳುವಂತಹ ಸೌಜನ್ಯ ಕೂಡ ಇರಲಿಲ್ಲ. ಆದರೆ ಅದರ ಪ್ರಸ್ತಾಪ ಮಾಡದೇ ಇರುವವರನ್ನೆಲ್ಲಾ ಕರೆದುಕೊಂಡು ಹೋಗಿ ಮದುವೆ ಮಾಡಿಸಿದ್ದಾರೆ.

ಮಾನ್ಯ ಸದಸ್ಯರು:- ಎಲ್ಲೆಲ್ಲಿ ಈ ರೀತಿಯ ಘಟನೆಗಳು ನಡೆಯುತ್ತವೆ ಅಲ್ಲಿಗೆ ಸನ್ಮಾನ್ಯ ನಾಗೇಗೌಡರೇ ಪೌರೋಹಿತ್ಯವಹಿಸುವಂತೆ ತಾವು ಜವಾಬ್ದಾರಿ ತೆಗೆದುಕೊಳ್ಳಬೇಕು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ:- ಈ ರೀತಿಯ ಘಟನೆಗಳು ಆಗುವುದೂ ಬೇಡ, ಪೌರೋಹಿತ್ಯವನ್ನು ವಹಿಸಿಕೊಳ್ಳುವುದು ಬೇಡ.

ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಎಂ ಮಾಮನಿರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು

ಶ್ರೀ ಎಸ್ ಕೃಷ್ಣಪ್ಪ:- ಸನ್ಮಾನ್ಯ ಉಪಾಧ್ಯಕ್ಷರೆ, ಎಲ್ಲರಿಗಿಂತ ನಮ್ಮ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಅವರು ಜಾಸ್ತಿ ಮಾತನಾಡಿದರು. ಬಹುಶ: ಇವರನ್ನು ಕರೆದುಕೊಂಡು ಹೋಗಿ ಮದುವೆ ಮಾಡಿದ್ದರೆ, ಇವರಿಗೂ ಸ್ವಲ್ಪ ಗಮನ ಬರುತ್ತಿತ್ತೋ ಏನೋ. ಇವರ ಮನೆ ಮುಂದೆ ಸತ್ಯಾಗ್ರಹ ವಹಿಸಿ, ಇದೇ ಶ್ರೀ ನಾಗೇಗೌಡರು ಮಧ್ಯಸ್ತಿಕೆ ವಹಿಸಿ ಇವರಿಗೂ ಒಂದು ಮದುವೆ ಮಾಡಿಸಿಬಿಡಬಹುದಾಗಿತ್ತು. ಇಂತಹ ಒಂದು ಒಳ್ಳೆಯ ಅವಕಾಶವನ್ನು ಅವರು ಕಳೆದುಕೊಂಡು ಬಿಟ್ಟರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅದಕ್ಕೆ ನಿಮ್ಮ ಶಿಫಾರಸ್ಸು ಬೇಕಾಗಿಲ್ಲ.

ಶ್ರೀ ಕೆ ಎಸ್ ನಾಗೇಗೌಡ:- ಉಪಾಧ್ಯಕ್ಷರೇ, ನಾನು ಮುಂದಿನ ಮದುವೆ ಮಾಡಿಸಿದರೆ ಅದು ಶ್ರೀರಾಮರೆಡ್ಡಿಯವರದ್ದು. ಅವರು ಅದಕ್ಕೆ ಒಪ್ಪಿಕೊಳ್ಳಲಿ. ನಮ್ಮ ಬೈರೇಗೌಡರನ್ನು ಜೊತೆ ಸೇರಿಸಿಕೊಂಡು ಅವರಿಗೊಂದು ಹೆಣ್ಣು ನೋಡಿ ಮದುವೆ ಮಾಡದೇಹೋದರೆ ಆಗ ನನ್ನನ್ನು ಕೇಳಲಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಮದುವೆಯಿಲ್ಲದೆ ಬದುಕುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಕೆ ಎನ್ ನಾಗೇಗೌಡ:- ಸಾರ್, ಮಾನವಜನ್ಮದಲ್ಲಿ ಮದುವೆಯಾಗದೇ ಹೋದರೆ ಅವರಿಗೆ ಮುಕ್ತಿಯಿಲ್ಲ, ಯಾರೇ ದೊಡ್ಡವರನ್ನು ಕೇಳಿ ಹೇಳುತ್ತಾರೆ ಹೆಣ್ಣುಗಂಡು ಸೇರಿದರೆ ಮಾತ್ರ ಒಂದು ಜೀವ ವಿನಹ ಒಬ್ಬರೇ ಇದ್ದರೆ ಜೀವ ಅಲ್ಲ. ಆದ್ದರಿಂದ ದಯವಿಟ್ಟು ಈ ಸದನದಲ್ಲಿ ಪುಟ್ಟಣಯ್ಯನವರು ಭಾಷಣ ಮಾಡುವಾಗ ಹೇಳಬೇಕು. ಯಾವರೀತಿ ಮಂಡ್ಯದ್ದು ವಹಿಸಿದರೋ ಆ ರೀತಿ ಶ್ರೀರಾಮರೆಡ್ಡಿಯದು ವಹಿಸದೇಹೋದರೆ ಪಕ್ಷಪಾತವಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ನಿಂಗೇಗೌಡ- ಶೈಲಜರ ಮದುವೆ ಮಾಡಿಸಿದಂತೆ ಶ್ರೀರಾಮರೆಡ್ಡಿಗೂ ಮತ್ತೊಬ್ಬ ಕನ್ಯೆಯ ಕೈ ಹಿಡಿಸತಕ್ಕ ಪ್ರಸ್ತಾಪ ಇಲ್ಲಿ ಆಗಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾಗೇಗೌಡ ಶಿವರಾಮೇಗೌಡರನ್ನು ನಂಬಿ ಈ ದೇಶದಲ್ಲಿ ಯಾರಾದರೂ ಏನಾದರೂ ಮಾಡಿದರೆ ಬದುಕಲಿಕ್ಕೆ ಉಂಟಾ? ಹೌಸಿಂಗ್‌ಬೋರ್ಡ್‌ದ್ದು ಅಧ್ಯಕ್ಷಸ್ಥಾನ ಸಿಕ್ಕಿಬಿಟ್ಟರೆ ವಾಟಾಳ್‌ನಾಗರಾಜ್, ನನಗೆ, ಪುಟ್ಟಣಯ್ಯನವರಿಗೆ ಒಂದು ಮನೆ ಕಟ್ಟಿಸಿಕೊಡುತ್ತೇವೆ ಎಂದು ನಮಗೆ ಆಶ್ವಾಸನೆ ಕೊಟ್ಟು

ಉಪಾಧ್ಯಕ್ಷರು:- ಶಿವರಾಮೇಗೌಡರೇ, ಶ್ರೀ ರಾಮರೆಡ್ಡಿಯವರಿಗೆ ಮನೆ ಕಟ್ಟಿಸಿಕೊಟ್ಟರೆ ಅವರು ಮದುವೆಯಾಗುತ್ತಾರೆ.

ಶ್ರೀ ಕೆ ಎನ್ ನಾಗೇಗೌಡ:- ನಾನು ಸೀರಿಯಸ್ಸಾಗಿ ಹೇಳುತ್ತಿದ್ದೇನೆ, ಹುಡುಗಿಯನ್ನು ನಾನೂ ಭೈರೇಗೌಡರು ನೋಡುತ್ತೇವೆ. ಮನೆ ಕಟ್ಟಿಸಿಕೊಡುವ ಜವಾಬ್ದಾರಿಯನ್ನೂ ನಾವು ವಹಿಸಿಕೊಳ್ಳುತ್ತೇವೆ. ತಾಳಿ ಸೀರೆ ಬಟ್ಟೆ ತರುವ ಜವಾಬ್ದಾರಿಯನ್ನೂ ನಾವು ವಹಿಸಿಕೊಳ್ಳುತ್ತೇವೆ. ಊಟದ ಜವಾಬ್ದಾರಿಯೂ ನಮ್ಮದು. ಬರೀ ಮದುವೆ ಆಗುವ ಜವಾಬ್ದಾರಿ ಅವರು ವಹಿಸಿಕೊಂಡರೆ ಸಾಕು.

ಶ್ರೀಮತಿ ಬಿ.ಟಿ.ಲಲಿತಾನಾಯಕ್:- ಹುಡುಗಿ ನೋಡುವ ಕೆಲಸ ನಾನು ಮಾಡುತ್ತೇನೆ.

ಶ್ರೀ ಕೆ ಎನ್ ನಾಗೇಗೌಡ:- ಆಗಬಹುದು. ಶ್ರೀರಾಮರೆಡ್ಡಿ ಈಗ ಮದುವೆ ಆಗುವ ಬಗ್ಗೆ ಒಪ್ಪಿಕೊಳ್ಳಲೇಬೇಕು ಇಲ್ಲದಿದ್ದರೆ ಅವರ ಬಗ್ಗೆ ಅನುಮಾನ ಪಡಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ಮದುವೆ ಆಗುವುದಿಲ್ಲ. ನಾಗೇಗೌಡರಂತಹವರು ಗುಮಾನಿಪಡುವುದರಿಂದ ನನಗೇನೂ ನಷ್ಟವಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್:- ಶ್ರೀ ರಾಮರೆಡ್ಡಿ ಮದುವೆಯಾಗದಿರುವುದರಿಂದ ಯಾರಿಗಾಗರೂ ತೊಂದರೆಯಾಗಿದೆಯಾ ಎಂಬುದು ತೀರ್ಮಾನವಾಗಬೇಕು.

ಶ್ರೀ ಸಭಾಧ್ಯಕ್ಷರು ರಮೇಶ್‌ಕುಮಾರ್ ಅವರು ಪೀಠವನ್ನುಕರಿಸಿದರು

ಶ್ರೀ ಕೆ.ಎಸ್ ಪುಟ್ಟಣ್ಣಯ್ಯ:- ನಿಜವಾಗಿ ಹೇಳಬೇಕೆಂದರೆ ಶ್ರೀರಾಮರೆಡ್ಡಿ ಮದುವೆ ಆಗದಿರುವುದು ಒಳ್ಳೆಯದು. ಏತಕ್ಕೆಂದರೆ ಈ ತರಹದ ವ್ಯವಸ್ಥೆಯಲ್ಲಿ ಮದುವೆ ಮಾಡಿಕೊಂಡ

ಗಂಡಹೆಂಡತಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಈಗ ಬಹಳ ಮುಖ್ಯವಾದದ್ದು, ನೀರಾವರಿ ಸಚಿವರೇ, ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಉದ್ದೇಶ ಸಫಲವಾಗಲಿಲ್ಲ. ಬಹಳ ತ್ವರಿತಗತಿಯಲ್ಲಿ ತಾವು ಸುಮಾರು 90 ಕೋಟಿ ರೂ ಕೆಲಸ ಮಾಡಿ ಯಾವುದು 460 ಮೀಟರ್ ಸುರಂಗ ಆಗ ಬೇಕಾಗಿತ್ತೋ ಅದು ಆಗದೇ ಆಧುನೀಕರಣದ ಕಲ್ಪನೇನೆ ಆಗದಂತಾಗಿದೆ. ಈಗಾಗಲೇ ಎಲ್ಲಾ ಕೆಲಸ ಸ್ಥಗಿತಗೊಂಡಿದೆ. ತಕ್ಷಣ ಎಲ್ಲಾ ಕೆಲಸ ಶುರು ಮಾಡಬೇಕು ಮತ್ತು ಆಧುನೀಕರಣದ ಬಗ್ಗೆ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದು ಪೂರ್ಣವಾಗಿ ಮುಕ್ತಾಯವಾಗಬೇಕು. ಇಲ್ಲದೇ ಇದ್ದರೆ ಕಡೇ ಭಾಗದ ರೈತರಿಗೆ ಪುನಃ ಅನ್ಯಾಯ ಮಾಡಿದಂತಾಗುತ್ತದೆ. ರೈತರು 500 ಕೋಟಿಗಳ ಬೆಳೆಯನ್ನು ನಷ್ಟ ಮಾಡಿಕೊಂಡು ಕೆಲಸ ಪೂರೈಸಿಕೊಡದಿದ್ದರೆ ಆಧುನೀಕರಣದ ಕಲ್ಪನೆ ಬಗೆಹರಿದಂತಾಗುವುದಿಲ್ಲ. ಆದ್ದರಿಂದ ಸಮರೋಪಾದಿಯಲ್ಲಿ ಈ ವಿಷಯದಲ್ಲಿ ಕೆಲಸ ಮಾಡಬೇಕು. ಆಮೇಲೆ ರಾಜ್ಯಪಾಲರ ಭಾಷಣದಲ್ಲಿ ಕೃಷಿ ಬಗ್ಗೆ ಏನೂ ಯೋಚನೆ ಮಾಡಲಿಲ್ಲ. ನೂರಕ್ಕೆ 70 ಪರ್ಸೆಂಟ್ ಇರುವ ರೈತರ ಬಗ್ಗೆ ಅತಿವೃಷ್ಟಿ ಅನಾವೃಷ್ಟಿಯಾಗಬಹುದು, ಬೆಲೆ ನೀತಿ ಆಗಬಹುದು, ತೋಟಗಾರಿಕೆ ಬೆಳೆಗಳಿಗೆ ಆಗಬಹುದು. ಉದಾಹರಣೆಗೆ ಇವತ್ತು ಬೆಂಗಳೂರು ಜಿಲ್ಲೆ, ಮೈಸೂರು, ಮಂಡ್ಯ ಧಾರವಾಡ ಜಿಲ್ಲೆಗಳ ವೀಳ್ಯದೆಲೆ ಬೆಳೆಯುತ್ತಿವೆ. ಅಧ್ಯಕ್ಷರೇ, ಚನ್ನಪಟ್ಟಣದಲ್ಲಿ ಒಂದು ಚಳುವಳಿ ಮಾಡಿ ತಮ್ಮ ಅಡ್ರೆಸ್‌ಗೂ ಒಂದು ಕಾಗದ ಬರೆದಿದ್ದಾರೆ. 100 ಎಲೆಗಳ ಒಂದು ಕಟ್ಟು 50 ರೂ ಆಗಿದೆ. ವೀಳೆದೆಲೆಯಲ್ಲಿ ಮೂರು ತರಹ ಬರುತ್ತದೆ. ಒಂದು, ಚಿಗುರೆಲೆ, ಇನ್ನೊಂದು ಮಿಶ್ರತಳಿ, ಓರಾನೆಯದು ಒರಟು. ವೀಳೆದೆಳೆ ಕೃಷಿ ಬಹಳ ಕಷ್ಟಕರವಾದದ್ದು. ಇವತ್ತು ಒಂದು ಪಾನ್‌ಬೀಡಾ 5 ರೂನಿಂದ 100 ರೂವರೆಗೆ ಇದೆ. ವೀಳೆದೆಲೆ ಇಲ್ಲದಿದ್ದರೆ ಪಾನ್‌ಬೀಡಾ ಆಗುವುದೇ ಇಲ್ಲ. ನಮ್ಮ ದೇಹಕ್ಕೆ ಹೃದಯ ಹೇಗೆ ಮುಖ್ಯವೋ ಹಾಗೆ ವೀಳೆದೆಲೆ ಇಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ತೋಟಗಾರಿಕೆ ಇಲಾಖೆ ಅಂತಹ ವೀಳೆದೆಲೆಗೆ ಕನಿಷ್ಟ ಬೆಲೆ ನಿಗದಿಮಾಡುವ ಕೆಲಸ ಮಾಡುವುದಕ್ಕೆ ಆಗಿಲ್ಲ. ಅದರ ಮಂತ್ರಿಗಳು ಪಾರ್‌ಫುಟ್‌ನಲ್ಲಿ ಕೆಲಸ ಮಾಡಬೇಕು. ಇಡೀ ದೇಶದಲ್ಲಿ ಮಾರ್ಕೆಟ್ ಸ್ಟಡಿ ಮಾಡಬೇಕು. ಅತ್ಯಂತಕಡಿಮೆ ದರದ ನೋವಿಗೆ ಸಿಕ್ಕಿಹಾಕಿಕೊಂಡ ರೈತನಿಗೆ ಏನು ಮಾಡಬೇಕು ಎಂಬುದನ್ನು ಯೋಚಿಸಬೇಕು. ಹೆಚ್ಚು ಮಳೆಯಾಧಾರಿತ ಪ್ರದೇಶದ ರೈತರು ಈ ಬೆಳೆ ಬೆಳೆಯುವುದು. 7 ಗುಂಟೆ 8 ಗುಂಟೆ 10 15 ಗುಂಟೆ - ಇದಕ್ಕೆ ಹನಿನೀರಾವರಿ ನೂರರಷ್ಟು ಸಬ್ಸಿಡಿ ಕೊಡಬೇಕು. ಇದರ ಬಗ್ಗೆ ಆಯಾ ಜಾಗದಲ್ಲೇ ಮಾರ್ಕೆಟ್ ಇರಬೇಕು, ಅಂತಹ ಯಾವುದೇ ಚಿಂತನೆ ಇಲ್ಲ. ಆದ್ದರಿಂದ ತೋಟಗಾರಿಕೆ ಬಗ್ಗೆ ಬಹಳ ಚಿಂತನೆ ಮಾಡಬೇಕು. ಇನ್ನು ಶಿಕ್ಷಣದ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಮಾತನಾಡುತ್ತಾರೆ. ಶಿಕ್ಷಣ ಸಾಮಾಜೀಕರಣ ಆಗದೇ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಇಡೀ ಆಡಳಿತ ಅವರ ಕೈಗೆ ಸಿಕ್ಕಿಹಾಕಿಕೊಂಡಿದೆ. ಶಿಕ್ಷಣ ಪೂರ್ಣ ಸಮಾಜದ ಸ್ವತ್ತಾಗಬೇಕು. ಶಿಕ್ಷಣ ಮಾಡುವ ಎಲ್ಲರಿಗೂ ಸಮಾಜದ ಪೂರ್ಣ ಪರಿಚಯ ಇಲ್ಲದೆ ನೋವಿನ ವರ್ಗದ ಜನರ ವಿಚಾರವೇ ಗೊತ್ತಿಲ್ಲದೆ ಆಡಳಿತಾತ್ಮಕವಾಗಿ ಆಗಬಹುದು ಬೇರೆ ಯಾವುದೇ ವಿಚಾರದಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ರಾಷ್ಟ್ರೀಯ ಯೋಜನೆಗಳ ಮೂಲಕ ಶಿಕ್ಷಣದಲ್ಲಿ ನಾನಾ ರೀತಿಯ ಬದಲಾವಣೆ ಮಾಡಿದರು. ಯಾರಿಗೂ ಗೊತ್ತಿಲ್ಲ ಅದು. ಉದಾಹರಣೆಗೆ ಕೃಷಿ ಬಗ್ಗೆ ಯಾರಿಗೆ ಗೊತ್ತು? ಶೆಡ್‌ನಲ್ಲಿ ಜೀವನ ಮಾಡುವ ಬಡತನದ ಜೀವನ ಬಗ್ಗೆ ಯಾರಿಗೆ ಗೊತ್ತು? ಆದ್ದರಿಂದ ಶಿಕ್ಷಣ ಸಾಮಾಜೀಕರಣ ಆಗಬೇಕು. ಹೊಸಕಟ್ಟಡ ಕಟ್ಟದಿದ್ದರೂ ಪರವಾಗಿಲ್ಲ

ಕರ್ನಾಟಕದಲ್ಲಿನ ಎಲ್ಲಾ ಶಾಲೆಗಳ ಹಳೇಕಟ್ಟಡಗಳನ್ನಾದರೂ ಕನಿಷ್ಟ ರಿಪೇರಿಮಾಡುವಂತಹ ಕೆಲಸ ವನ್ನಾದರೂ ಮಾಡಬೇಕು. ಮಾನ್ಯ ನೀರಾವರಿ ಮಂತ್ರಿಗಳಾದ ತಾವು ಈಗ ಒಂದು ಅಬ್ಸರ್‌ವೇಷನ್ ಸ್ಕ್ವಾಡ್ ಹಾಕಿದಿರಿ. ಯಾವ ದೊಡ್ಡ ದೊಡ್ಡ ನಾಲೆಗಳು ಇರುತ್ತವೆ, ಅವುಗಳು ಒಡೆಯುವುದಕ್ಕೆ ಮುಂಚೆ ತಾಂತ್ರಿಕ ಪರಿಣಿತಿ ಇರತಕ್ಕಂಥ ಒಂದು ತಂಡವನ್ನು ಕಳುಹಿಸಿ, ಆ ಸ್ಕ್ವಾಡ್ ತಿರುಗಾಡುತ್ತಾ ತಕ್ಷಣದಲ್ಲೇ ಸರ್ಕಾರಕ್ಕೆ ಮಾಹಿತಿ ಕೊಡಬೇಕು. ನಾಲೆಗಳು ಒಡೆದ ನಂತರ ಆಗತಕ್ಕಂಥ ಅನಾಹುತಗಳನ್ನು ತಪ್ಪಿಸಬೇಕು ಎಂದು ಕೆಲವು ಡೆಲಿಕೇಟ್ ನಾಲೆಗಳನ್ನು ನೀವು ಗುರುತು ಮಾಡಿದಿರಿ. ತುಂಗಭದ್ರಾ ನಾಲೆ ಮತ್ತೆ ಒಡೆಯಿತು. ಅಬ್ಸರ್ವೇಶನ್ ಸ್ಕ್ವಾಡ್ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಒಂದು ಸಾರಿ ನಾಲೆ ಒಡೆದರೆ ಸುಮಾರು ಏಳು ಲಕ್ಷ ಎಕರೆಯಷ್ಟು ಜಮೀನಿಗೆ ನೀರು ಕೊಡುವುದಕ್ಕೆ ಹದಿನೈದು ದಿವಸಗಳಷ್ಟು ತಡವಾಗುತ್ತದೆ, ಅಷ್ಟೊಂದು ಅನಾನುಕೂಲವಾಗುತ್ತದೆ. ಆದುದರಿಂದ, ಅಬ್ಸರ್ವೇಶನ್ ಸ್ಕ್ವಾಡ್ ಮಾಡಿದ ನಂತರ ಅದಕ್ಕೆ ಪೂರ್ಣ ಜವಾಬ್ದಾರಿ ಕೊಡಬೇಕು. ಅವರು ಪೂರ್ಣವಾಗಿ ಜವಾಬ್ದಾರಿ ಯುತವಾಗಿ ತಮ್ಮ ಕೆಲಸ ಮಾಡದೆ ಹೋದರೆ ಅವರನ್ನು ಹೊಣೆಗಾರರನ್ನಾಗಿ ಮಾಡಬೇಕು. ಇಲ್ಲದಿದ್ದರೆ ಕೇವಲ ಪತ್ರಿಕೆಗಳ ಮೂಲಕ ಅಬ್ಸರ್ವೇಶನ್ ಸ್ಕ್ವಾಡ್ ಮಾಡಿದ್ದೇವೆಂದು ಹೇಳಿದರೆ ಆಗುವುದಿಲ್ಲ. ಈಗಾಗಲೇ ನಾಲೆ ಒಡೆಯಿತು, ವಿ.ಸಿ. ನಾಲೆ ನಾಳೆ ಒಡೆಯಬಹುದು. ಏಕೆಂದರೆ, ಇಂಜನಿಯರಿಂಗ್ ಮತ್ತು ನೀರಾವರಿ ಇಲಾಖೆಗಳು ಕಳಪೆ ಕಾಮಗಾರಿ ಇಲಾಖೆಗಳಾಗಿದ್ದು ಅದನ್ನು ಯಾರಿಂದಲೂ ಸರಿಪಡಿಸದಿರುವಷ್ಟು ಕೆಟ್ಟು ಹೋಗಿದೆ. ಇದು ಎಲ್ಲರಿಗೂ ಗೊತ್ತಿದೆ. ಯಾವುದೇ ಕಾರಣಕ್ಕೂ ಸರಿಪಡಿಸದಿರುವಷ್ಟು ಕೆಟ್ಟುಹೋಗಿದೆ. ಆದ್ದರಿಂದ, ಇದನ್ನು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಚಿಂತನೆಯಾಗಬೇಕು. ಇಲ್ಲದಿದ್ದರೆ ಪೂರ್ಣವಾಗಿ ಇಂಜಿನಿಯರಿಂಗ್ ಇಲಾಖೆಗೆ ಜವಾಬ್ದಾರಿ ಕೊಡಬೇಕು. ಇಂತಹ ಕಳಪೆ ಕಾಮಗಾರಿಯಿಂದ ರೈತರು ಬಳಲುತ್ತಿರುವುದರಿಂದ ಇದರಿಂದ ಅವರ ಇಡೀ ಆರ್ಥಿಕ ಪರಿಸ್ಥಿತಿ ಮೇಲೆ ಭಾರಿ ಪರಿಣಾಮವುಂಟಾ ಗುವುದರಿಂದ ಅತ್ಯಂತ ಹೊಣೆಗಾರಿಕೆ ಇರುವುದು ನೀರಾವರಿ ಇಲಾಖೆ ಮೇಲೆಯೇ. ಅದು ಸರಿಯಿಲ್ಲದಿದ್ದರೆ ಮತ್ತು ಯಾವುದೇ ಉತ್ತಮ ಗುಣಮಟ್ಟದ ಕೆಲಸ ಮಾಡಲಿಲ್ಲವೆಂದರೆ ಏನು ಸಾಧ್ಯವಾಗುತ್ತದೆ? ಅದರಲ್ಲಿ ಇನ್ನೊಂದು ಅತಿ ಮುಖ್ಯವಾದುದು ಸಣ್ಣ ನೀರಾವರಿ. ಸಣ್ಣ ನೀರಾವರಿಗೆ ಇವರು 80 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಇಡೀ ಕರ್ನಾಟಕದಾದ್ಯಂತ ಇರುವ ಸಣ್ಣ ನೀರಾವರಿ ಯೋಜನೆಗಳನ್ನು 80 ಕೋಟಿ ರೂಪಾಯಿಗಳಲ್ಲಿ ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ರಾಜ್ಯಾದ್ಯಂತ ಬಹಳಷ್ಟು ಏತ ನೀರಾವರಿ ಯೋಜನೆಗಳಿದ್ದು, ಸುಮಾರು 36,000 ಕೆರೆಗಳಿರುವುದರಿಂದ ಮೈನರ್ ಇರಿಗೇಷನ್ ಎಂಬ ಹೆಸರು ತೆಗೆದು ಮೈನಸ್ ಇರಿಗೇಷನ್ ಎಂದು ಮಾಡಿದರೆ ಭಾರಿ ಒಳ್ಳೆಯದು. ಏಕೆಂದರೆ, ಈಗ ಉದಾಹರಣೆಗೆ, 1250 ಟಿಎಂಸಿ ಮೇಜರ್ ಇರಿಗೇಷನಲ್ಲಿ ಬರುತ್ತದೆ, ಸುಮಾರು 50,000 ಕೆರೆಗಳೇನಾದರೂ ಇದ್ದಿದ್ದರೆ 2,000 ಟಿಎಂಸಿಯಷ್ಟು ನೀರು ಸಂಗ್ರಹಿಸಬಹುದಿತ್ತು. 2000 ಟಿಎಂಸಿಯಷ್ಟು ನೀರನ್ನು ನಾವು ಸಂಗ್ರಹಿಸಿದ್ದರೆ ನಮಗೆ ವಿದ್ಯುಚ್ಛಕ್ತಿ ಏನಾ ಬೇಕಾಗಿರಲಿಲ್ಲ. ಒಂದು ಟಿಎಂಸಿಯಲ್ಲಿ ಸುಮಾರು ನಾಲ್ಕು ಸಾವಿರದಷ್ಟು ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಬಹುದು, ಹಾಗೆಯೇ ಒಂದು ಟಿಎಂಸಿಯಲ್ಲಿ ಹತ್ತು ಸಾವಿರದಷ್ಟು ಎಕರೆ ಪ್ರದೇಶದಲ್ಲಿ ಸೆಮಿ ಡ್ರೈ ಕ್ರಾಫ್ ಬೆಳೆದು ಇನ್ನೂರು ಎಕರೆಗಳಿಗೆ ನೀರು ಒದಗಿಸಬಹುದಾಗಿತ್ತು, ಅನಂತರ, ಎಲ್ಲಾ ಬಾವಿಗಳಲ್ಲೂ ನೀರು ಇರುತ್ತಿತ್ತಲ್ಲದೆ ಎಲ್ಲಾ ಪಂಪುಸೆಟ್ಟುಗಳಿಗೂ ಯಾವುದೇ

ರೀತಿಯ ತೊಂದರೆಯಿರುತ್ತಿರಲಿಲ್ಲ ಮುಖ್ಯವಾಗಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಬರುತ್ತಿರಲಿಲ್ಲ. ಆದುದರಿಂದ, ಮೇಜರ್ ಇರಿಗೇಷನ್‌ಗೆ ತಾವು ಹೆಚ್ಚು ಒತ್ತು ಕೊಡಬೇಕಾಗಿತ್ತು. ಮೈನರ್ ಇರಿಗೇಷನ್ ಇಲಾಖೆ ಈ ರಾಜ್ಯದ ಮಳೆ ಆಧಾರಿತ ಪ್ರದೇಶದಲ್ಲಿ ಅತಿ ಮುಖ್ಯವಾದ ಕೆಲಸ ಮಾಡಲಿಲ್ಲ. ಉದಾಹರಣೆಗೆ, ನಾನೊಮ್ಮೆ ಬಳ್ಳಾರಿಗೆ ಹೋಗಿದ್ದಾಗ ಅಲ್ಲಿ ಒಂದು ಕೆರೆಯೂ ಕಾಣಿಸಲಿಲ್ಲ. ಆದುದರಿಂದ, ಇದಕ್ಕೆ ಹೆಚ್ಚು ಒತ್ತು ಕೊಡತಕ್ಕಂಥ ಕೆಲಸ ಮಾಡಬೇಕು. ಇನ್ನು ಪಶುಸಂಗೋಪನೆ ಕುರಿತು ಹೇಳುವುದಾದರೆ ಇದರ ಬಗ್ಗೆ ಎಷ್ಟೇ ಭಾಷಣ ಮಾಡಿದರೂ ಏನೂ ಪ್ರಯೋಜನವಾಗುತ್ತಿಲ್ಲ. ಮುಂದಿನ ಐವತ್ತು ವರ್ಷಗಳಿಗೆ ಡೀಸೆಲ್ ಇರುವುದಿಲ್ಲ, ಏನು ಮಾಡುತ್ತೀರಿ? ಅದಕ್ಕಾಗಿ ನಾಡ ತಳಿಗಳಿಗೆ, ಸಾಂಸ್ಕೃತಿಕ ತಳಿಗಳಿಗೆ ತಾವು ಒತ್ತು ಕೊಡಬೇಕು. ಮುಂದಿನ ಐವತ್ತು ವರ್ಷಗಳಲ್ಲಿ ಡೀಸೆಲ್ ಇರುವುದಿಲ್ಲವಾದ್ದರಿಂದ ಯಾವ ತಳಿಗಳನ್ನು ಇಟ್ಟಿದ್ದೀರಿ? ತಾವೀಗ ಹಳ್ಳಿಕಾರ, ಕಿಲಾರಿ, ಜವಾರಿ, ಅಮೃತ ಮಹಲ್ ಮುಂತಾದ ತಳಿಗಳನ್ನು ಉಳಿಸುವ ದಿಕ್ಕಿನಲ್ಲಿ ಕೆಲಸ ಮಾಡಬೇಕು. ಒಂದು ಕರು ಹಾಕಿದರೆ ಅವರಿಗೆ ಕನಿಷ್ಠ 250 ರೂಪಾಯಿಗಳನ್ನು ಕೊಟ್ಟರೆ ಅವರಿಗೂ ಆ ಬಗ್ಗೆ ಆಸಕ್ತಿ ಸೃಷ್ಟಿಯಾಗುತ್ತದಾದ್ದರಿಂದ ಇದನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಹೇಳಿದೆವು. ಆದರೆ, ಯಾವುದೇ ಕಾರ್ಯಕ್ರಮ ಅನುಷ್ಠಾನಕ್ಕೆ ಬರಲಿಲ್ಲ. ನಾಳೆ ಏನು ಮಾಡುತ್ತೀರಿ? ನಾಳೆ ದಿವಸ ಪೂರ್ಣ ಪ್ರಮಾಣದಲ್ಲಿ ಎಲ್ಲಾ ಪದಾರ್ಥಗಳನ್ನು ಗಾಡಿಯಲ್ಲೆ ಹಾಕಿಕೊಂಡು ಹೋಗಬೇಕಾಗದಂಥ ಪರಿಸ್ಥಿತಿ ಬಂದರೆ ನೀವೇನು ಫಾರಿನ್‌ನಿಂದ ತರಿಸುತ್ತೀರಾ? ವಿಲಾಯಿತಿ ದನಗಳನ್ನು ಉಪಯೋಗಿಸುತ್ತೀರಾ? ವಿಲಾಯಿತಿ ದನಗಳು ಉಳುಮೆಗಾಗಲೀ, ಗಾಡಿ ಹೊಡೆಯುವುದಕ್ಕಾಗಲೀ ಏನೂ ಪ್ರಯೋಜನವಿಲ್ಲ, ಕೇವಲ ಅದರಿಂದ ಹಾಲು ಕರೆದುಕೊಳ್ಳಬಹುದಷ್ಟೆ. ಆದರೆ, ಎಪ್ಪತ್ತು ಭಾಗ ದಷ್ಟಿರುವ ರೈತರುಗಳಾದ ನಮಗೆ ತಲಾವಾರು ಇಪ್ಪತ್ತು ಗುಂಟೆಯಷ್ಟು ಜಮೀನು ಬರುತ್ತದಾದ್ದರಿಂದ ಅಷ್ಟು ಜಮೀನಿಗೋಸ್ಕರ ನಾವು ಟ್ರಾ ಕ್ಟರ್ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಆದುದರಿಂದ, ನಮಗೆ ಹಾಲು ಕರೆಯುವಂಥ ಮತ್ತು ಭೂಮಿ ಉಳುವಂಥ ತಳಿಯ ರಾಸು ಬೇಕಾಗಿದೆ. ಅದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನಾಡಿದರೂ ಸರ್ಕಾರ ನಿರ್ಲಕ್ಷಿಸಿದೆ ಪಶುಸಂಗೋಪನೆ ಅತ್ಯಂತ ಜವಾಬ್ದಾರಿಯುತ ಕೆಲಸವಾಗಿರುವುದರಿಂದ, ನಾವು ಅವುಗಳನ್ನು ನಾಶ ಮಾಡಿಕೊಳ್ಳುತ್ತಾ ಹೋಗುತ್ತಿದ್ದರೆ, ಅಲ್ಲದೆ ಮುಂದೆ ಡೀಸೆಲ್ ಇಲ್ಲದಿದ್ದರೆ ಯಾವುದರಲ್ಲಿ ಸಾಗಾಣಿಕೆ ಮಾಡುವುದು? ಪದಾರ್ಥಗಳನ್ನು ಸಾಗಾಣಿಕೆ ಮಾಡುವುದಕ್ಕೆ ಹಿಂದೆ ನಾವು ಕತ್ತೆಗಳನ್ನು ಉಳಿಸಿಕೊಂಡಿದ್ದೆವು. ನಾನು ಚಿಕ್ಕ ವಯಸ್ಸಿನವನಾಗಿದ್ದಾಗ ಎಲ್ಲಾ ಪದಾರ್ಥಗಳನ್ನು ಕತ್ತೆ ಮೇಲೆ ಹೇರಿಕೊಂಡು ಸಾಗಾಣಿಕೆ ಮಾಡುತ್ತಿದ್ದರು. ಈಗಲೂ ಕೆಲವು ಕಡೆಗಳಲ್ಲಿ ಈ ರೀತಿ ಸಾಗಾಣಿಕೆ ಮಾಡಲಾಗುತ್ತಿದೆಯೆಂದು ಹೇಳುತ್ತಾರೆ, ನಾನು ನೋಡಿಲ್ಲ. ಮೊದಲು ಅವರೇ ನಮ್ಮ ಟ್ರಾನ್ಸ್‌ಪೋರ್ಟೇಷನ್ ಮಿನಿಸ್ಟರ್ ಆಗಿದ್ದವರು ಈಗ ದನಗಳನ್ನು ಸಾಂಸ್ಕೃತಿಕವಾಗಿ ಉಳಿಸಿಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ, ಇದಕ್ಕೆ ಹೆಚ್ಚು ಒತ್ತು ಕೊಡತಕ್ಕಂಥ ಕೆಲಸ ಮಾಡಬೇಕು, ಎರಡು ವರ್ಷಗಳಲ್ಲಿ ಹೆಚ್ಚು ತಳಿಗಳನ್ನು ಬೆಳೆಯುಬೇಕು.

ಶ್ರೀ ಬಿ. ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ವಿಷಯವನ್ನು ಸದನದಲ್ಲಿ 2-3 ಬಾರಿಯಾದರೂ ಪ್ರಸ್ತಾಪಿಸಿರುವುದರಿಂದ ಅದರೆ ಬಗ್ಗೆ ಈಗಾಗಲೇ ಚರ್ಚಿಸಿ ಕ್ರಮ ತೆಗೆದುಕೊಂಡಿದ್ದು, ಈ ಸಾಲಿನ ಬಜೆಟ್‌ನಲ್ಲಿ ನೀವು ಹೇಳುವ ಬಹಳ ವಿಚಾರಗಳನ್ನು ಸೇರಿಸಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಇನ್ನು ಸಾರಿಗೆ ಇಲಾಖೆ ಕುರಿತು ಹೇಳುವುದಾದರೆ, ಮಾನ್ಯ ಸಾರಿಗೆ ಮಂತ್ರಿಗಳು ಸದನದಲ್ಲಿರುವುದರಿಂದ, ಅವರು ಕಳೆದ ಎರಡು ವರ್ಷಗಳಿಂದ ನಮ್ಮೆಲ್ಲರನ್ನೂ ಕರೆದು ಮೀಟಿಂಗ್ ಮಾಡಿದಾಗ ಕೆಲವು ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನಾವೂ ಕೊಟ್ಟಿದ್ದೇವೆ, ಅವರೂ ಹೇಳಿದ್ದಾರೆ. ಎರಡು ಸಲಹೆಗಳ ಆಧಾರದ ಮೇಲೆ ಹೇಳುವುದಾದರೆ, ಗ್ರಾಮೀಣ ಪ್ರದೇಶದ ಜನರಿಗೆ ಏನೂ ಬೇಕಿಲ್ಲ, ನಮಗೆ ಮೈಸೂರಿನಿಂದ ಬೆಂಗಳೂರಿಗೆ ಬೇಗ ಹೋಗುವ ವಾಹನಗಳೇನೂ ಬೇಕಿಲ್ಲ. ನಮಗೆ ಸಿಟಿ ಸರ್ವಿಸ್ ಮಾದರಿಯಲ್ಲಿ ಹಳ್ಳಿಗಳಲ್ಲಿ ಅಂದರೆ 20-25 ಗ್ರಾಮಗಳಿಗೆ ಸದಾ ಒಂದು ಬಸ್ ಓಡಾಡುತ್ತಿರಬೇಕು. ಆಯಾ ಕ್ಷೇತ್ರಕ್ಕನುಗುಣವಾಗಿ 6-8 ಬಸ್ಸುಗಳನ್ನು ಕೊಟ್ಟರೆ ನಮ್ಮ ಸಮಸ್ಯೆ ಬಗೆಹರಿಯುತ್ತದೆ. ಇಡೀ ರಾಜ್ಯದಲ್ಲಿರುವ ಖಾಸಗಿ ಹಾಗೂ ಸರ್ಕಾರಿ ಬಸ್ಸುಗಳನ್ನು ಲೆಕ್ಕ ಹಾಕಿದರೆ 350ರಿಂದ 400 ಬಸ್ಸುಗಳನ್ನು ಒದಗಿಸಿಕೊಟ್ಟರೆ ಸಮಸ್ಯೆಯನ್ನು ಬಗೆಹರಿಸಬಹುದು. ಈಗಾಗಲೇ ಈ ನಿಟ್ಟಿನಲ್ಲಿ ಎರಡು ವರ್ಷಗಳಿಂದ ಮೀಟಿಂಗ್ ಮಾಡಿದ್ದೀರಿ, ನಿಮಗೆ ಅನುಭವ ತುಂಬಾ ಜಾಸ್ತಿಯಿದ್ದರೂ ಏನೂ ಕಾರ್ಯಕ್ರಮ ಆಗಿಲ್ಲ. ತಾವೇನಾದರೂ ಇನ್ನು ಮುಂದೆ ನಮ್ಮನ್ನು ಕರೆದು ಮೀಟಿಂಗ್ ಮಾಡಿದರೆ ತಾವು ಏನು ಮಾತನಾಡುತ್ತೀರಿ, ಅದು ಅನುಷ್ಠಾನಕ್ಕೆ ಬರುವುದಿದ್ದರೆ ಮಾತ್ರ ನಮ್ಮನ್ನು ದಯವಿಟ್ಟು ಕರೆದು ಮೀಟಿಂಗ್ ಮಾಡಿ, ಇಲ್ಲದಿದ್ದರೆ ತಾವು ಮೀಟಿಂಗ್ ಕರೆಯಬಾರದು, ನಾವು ಸುಮ್ಮನಿದ್ದು ಬಿಡುತ್ತೇವೆ. ಸರ್ಕಾರದ ಆಡಳಿತಾವಧಿ ಇನ್ನೂ ಒಂದೂವರೆ ವರ್ಷದಷ್ಟು ಕಾಲವಿರುವುದರಿಂದ ಪಾರದರ್ಶಕವಾಗಿ ಅಭಿವೃದ್ಧಿಯತ್ತ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ನೆಗ್‌ಲೆಕ್ಟ್ ಆಗಿರುವುದೆಂದರೆ ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ. ಇದಕ್ಕೆ ಬಹಳ ಕಡಿಮೆ ಹಣ ಕೊಡುತ್ತಿದ್ದೀರಿ, ಇದರಿಂದಾಗಿ ಯಾವುದೇ ಕೆಲಸ ಆಗುತ್ತಿಲ್ಲ. ಕ್ರೀಡೆ ಬಗ್ಗೆ ಪ್ರಪಂಚದ ಎಲ್ಲಾ ದೇಶಗಳು ಯೋಚಿಸುತ್ತವೆ. ಉದಾಹರಣೆಗೆ ಬ್ರೆಜಿಲ್ ದೇಶವನ್ನೇ ತೆಗೆದುಕೊಂಡರೆ ವರ್ಲ್ಡ್ ಕಫ್‌ನಲ್ಲಿ ಹನ್ನೆರಡು ಸಾರಿ ಪಾಲ್ಗೊಂಡಿದೆ, ಮತ್ತು ನಮ್ಮ ದೇಶಕ್ಕಿಂತ ಆ ದೇಶಕ್ಕೆ ಹೆಚ್ಚು ಸಾಲದ ಹೊರೆ, ಅತ್ಯಂತ ಹೆಚ್ಚು ಬಡತನವಿದ್ದರೂ ಆ ದೇಶಕ್ಕೆ ಮುಂದಿನ ಯುವ ಜನಾಗಂದ ಬೆಳವಣಿಗೆ ಬಗ್ಗೆ ಚಿಂತನೆ ಇದೆ. ಮೊದಲು ಹಳ್ಳಿಗಳಲ್ಲಿ ಒಂದು ಸೆಟ್, ಬ್ಯಾಟು, ಬಾಲ್ ಕೊಡುತ್ತಿದ್ದರು. ಈಗ ಏನೂ ಕೊಡುತ್ತಿಲ್ಲ, ಯಾವುದೇ ಆಸಕ್ತಿ ಇಲ್ಲ, ಯುವ ಜನಾಗಂದವರೆಲ್ಲರನ್ನೂ ಮುದುಕರನ್ನಾಗಿ ಮಾಡಿದ್ದೀರೆಂದೆನಿಸುತ್ತದೆ. ಅದೇನೆಂದು ಗೊತ್ತಿಲ್ಲ, ಇದರ ಅಭಿವೃದ್ಧಿಗಾಗಿ ಹೆಚ್ಚು ಹಣ ಕೊಟ್ಟಿಲ್ಲ, ಕೆಲಸವೂ ಇಲ್ಲ. ಏಕೆಂದರೆ, ಯಾವುದೇ ದೇಶದ ಒಬ್ಬ ವ್ಯಕ್ತಿ ಆರೋಗ್ಯದಿಂದಿದ್ದರೆ ಮಾತ್ರ ಆ ದೇಶದಲ್ಲಿ ಉತ್ತಮ ಪ್ರಜೆಯಾಗುವುದಕ್ಕೆ ಸಾಧ್ಯ. ಅದರ ಪರಿಕಲ್ಪನೆಯೇ ಬಹಳ ದೊಡ್ಡದಾಗಿರುವುದರಿಂದ ಅದರ ಬಗ್ಗೆ ತಾವು ಯೋಚಿಸಬೇಕು. ಬರೀ ಓದಿಸಿ ಶರೀರದಲ್ಲಿ ಯಾವುದೇ ಶಕ್ತಿಯಿಲ್ಲದಿದ್ದರೆ ಏನು ಮಾಡುತ್ತೀರಿ? ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿ, ಈ ಮೂವರಲ್ಲಿ ಯಾರು ಹೆಚ್ಚು? ಮೂವರೂ ಬೇಕು. ಶಕ್ತಿ ಇರಬೇಕು, ಹಣ ಬೇಕು ಮತ್ತು ಜ್ಞಾನವೂ ಬೇಕು. ಮೂರು ಇದ್ದರೆ ಮಾತ್ರ ಒಬ್ಬ ಮನುಷ್ಯ. ನೀವು ಎಲ್ಲರನ್ನೂ ಕೊಟ್ಟು ನಿಂತುಕೊಳ್ಳುವುದಕ್ಕೆ ಶಕ್ತಿ ಇಲ್ಲದಿದ್ದರೆ ಏನು ಮಾಡುತ್ತೀರಿ? ಆದುದರಿಂದ, ನಾನು ತಮಗೆ ಆಗಲೇ ಹೇಳಿರುವಂತೆ, ಏಳನೇ ತರಗತಿಯಿಂದ ಕಡ್ಡಾಯವಾಗಿ ವ್ಯಾಯಾಮ ಮಾಡುವುದನ್ನು ಇಂಟ್ರಡ್ಯೂಸ್ ಮಾಡಬೇಕು, ಇಲ್ಲದಿದ್ದರೆ ಪಾಸ್ ಮಾಡುವುದಕ್ಕಾಗುವುದಿಲ್ಲವೆಂಬ ತೀರ್ಮಾನಕ್ಕೆ ಬಂದರೆ ಯುವ ಜನಾಂಗ ಉತ್ತಮವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಮಹಿಳೆಯರ ಬಗ್ಗೆ ಹೇಳುವುದಾದರೆ, ಮಹಿಳೆ ಆಯೋಗಗಳನ್ನು ರಚನೆ ಮಾಡಿ ಮಹಿಳೆಯರ ಹಿತಚಿಂತನೆ ಮಾಡುತ್ತೇವೆಂದು ಹೇಳಿದ್ದಾರೆ. ಸದನದಲ್ಲಿ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಿದ್ದಾರೆ. ಮಹಿಳೆಯರಿಗೆ ಉದ್ಯೋಗ ಕೊಡುವುದಕ್ಕೋಸ್ಕರ ಜೆಮ್ ಕಟಿಂಗ್ಸ್ ಕರ್ನಾಟಕಕ್ಕೆ ಬಂದಿತು. ಜೆಮ್ ಕಟಿಂಗ್ಸ್ ಉದ್ಯಮದಲ್ಲಿ ದಿವಸಕ್ಕೆ 500ರಿಂದ 600 ರೂಪಾಯಿಗಳಷ್ಟು ಹಣ ಸಿಗುತ್ತಿತ್ತು. ಇದರಿಂದ ಸಾವಿರಾರು ಮಹಿಳೆಯರು ಬದುಕುತ್ತಿದ್ದರು. ದೇಶದಲ್ಲಿ ಇದಕ್ಕೆ ದೊಡ್ಡ ಮಾರುಕಟ್ಟೆಯಿದ್ದರೂ ಯಾವುದೇ ಕಾರಣದಿಂದ ಇದು ಬಾಗಿಲು ಹಾಕಲ್ಪಟ್ಟು ಎರಡು ತಿಂಗಳುಗಳಾದವು. ಈಗಾಗಲೇ ಎರಡು ಮೀಟಿಂಗ್‌ಗಳಾದವು. ಸದರಿ ಉದ್ಯಮ ಪ್ರಾರಂಭಿಸುವುದಕ್ಕೆ ಕೆ.ಎಸ್.ಎಫ್.ಸಿ.ಯಿಂದ ಸಾಲ ತೆಗೆದುಕೊಂಡಿರುವುದರಿಂದ ಬಾಕಿ ಹಣ ಕಟ್ಟ ಬೇಕಾಗಿರುವುದರಿಂದ ಯಾವುದೇ ಕೆಲಸ ಆಗುತ್ತಿಲ್ಲ. ಮಹಿಳೆಯರ ಬಗ್ಗೆ ಯಾವುದೇ ರೀತಿಯ ಚಿಂತನೆಯಿಲ್ಲದೆ ಸುಮ್ಮನೆ ಮಹಿಳಾ ಆಯೋಗವೆಂದರೆ ಏನು ಮಾಡುತ್ತೀರಿ? ಯಾವ ಮಹಿಳೆಯರಿಗೆ ತಾವು ಉದ್ಯೋಗ ತರಬೇತಿ ಕೊಟ್ಟಿದ್ದೀರಿ? ಕನಿಷ್ಠ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಉದ್ಯೋಗಿಗಳಿಗೆ ಭದ್ರತೆಯಿಲ್ಲ. ಇದರ ಬಗ್ಗೆ ಸರ್ಕಾರ ಅತ್ಯಂತ ಗಂಭೀರವಾಗಿ ಚಿಂತಿಸಬೇಕು. ಎರಡನೆಯದಾಗಿ, ಕೃಷಿ ಕಾರ್ಮಿಕರ ಬಗ್ಗೆ ಹೇಳಿದ್ದೀರಿ. ಜವಾಹರ್ ರೋಜ್‌ಗಾರ್ ಯೋಜನೆಯ ಇ.ಎ.ಎಸ್.ನಲ್ಲಿ 155 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ, ಒಂದು ಕೋಟಿ ಕಾರ್ಮಿಕರಿದ್ದಾರೆ. ಆ ಕೂಲಿ ಎಷ್ಟು ದಿವಸಕ್ಕಾಗುತ್ತದೆಂದರೆ, ನೂರು ಮಾನವ ದಿನಗಳಿಗೆ ಕನಿಷ್ಠ ಉದ್ಯೋಗ ಕೊಡತಕ್ಕಂಥ ಚಿಂತನೆ ಮಾಡಿ ಕೂಲಿ ಕೊಟ್ಟರೆ ಆರು ದಿವಸಗಳಿಗೇ ಒದಗಿಸಿರುವ ಹಣ ತೀರಿ ಹೋಗುತ್ತದೆ. ವರ್ಷ ಪೂರ್ತಿ ಹಂಚಿಕೆ ಮಾಡುವುದಾದರೆ ಒಬ್ಬರಿಗೆ 30-35 ಪೈಸೆ ಸಿಗುತ್ತದೆ. ಇದು ಉದ್ಯೋಗ ಭರವಸೆ ಯೋಜನೆ! ನೀವು ಇನ್ನೂ ಯುವಕರಿರುವುದರಿಂದ ಏನಾದರೂ ಮಾಡಬೇಕೆಂದಿರುವಿರಾದರೆ ಒಂದು ಸಲಹೆ ಕೊಡುತ್ತೇನೆ. ಏನೆಂದರೆ ತಾವು ಒಂದು ವಿಮಾ ಯೋಜನೆ ಇಂಟ್ರಡ್ಯೂಸ್ ಮಾಡಿ. ಇದಕ್ಕೆ ಕೇಂದ್ರ ಸರ್ಕಾರ ಶೇಕಡ 50ರಷ್ಟು ಮತ್ತು ರಾಜ್ಯ ಸರ್ಕಾರ ಶೇಕಡ 50ರಷ್ಟು ಹಣ ಕೊಟ್ಟರೆ ನಮ್ಮ ಊರಿನಲ್ಲಿ ಗದ್ದೆಯಲ್ಲಿ ನಾಟಿ ಮಾಡುವ ಚಿಕ್ಕತಾಯಿ ಎಂಬುವಳು ಹತ್ತು ವರ್ಷಕ್ಕೆ ದುಡಿಯಲು ಶುರು ಮಾಡಿದ್ದರೆ ಆಕೆ 45 ವರ್ಷಗಳ ತನಕ ದುಡಿಯುತ್ತಾಳೆ. ನೀವು ವಿಮೆಯನ್ನು ಪರಿಚಯ ಮಾಡಿಸುವುದರಿಂದ ಮಹಿಳೆಯರಿಗೆ ಅನುಕೂಲವಾಗುತ್ತದೆ. ಇದರಿಂದ ಆಕೆಗೆ 45-50 ವರ್ಷವಾದ ಮೇಲೆ ಒಂದು 50 ಸಾವಿರ ಹಣ ಒಟ್ಟಿಗೆ ಸಿಗುತ್ತದೆ. ಇದರಿಂದ ಆಕೆಗೆ ತನ್ನ ಜೀವನವನ್ನು ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ. ಈ ರೀತಿ ನೀವು ಮಹಿಳಾ ಆಯೋಗಗಳ ಬಗ್ಗೆ ಚಿಂತನೆ ಮಾಡಬೇಕು. ಅದುಬಿಟ್ಟು ಸುಮ್ಮನೆ ಯಜಮಾನರಿಗೆ 75 ರೂ. ವೃದ್ಧಾಪ್ಯ ವೇತನ, ವಿಧವೆಯರಿಗೆ 75 ರೂ. ವಿಧವಾವೇತನ ಕೊಡುವುದರಿಂದ ಯಾವುದೇ ರೀತಿಯ ಪ್ರಯೋಜನ ಇಲ್ಲ. ಜೀವನದ ಭದ್ರತೆ ಬಗ್ಗೆ, ನೀವು ಚಿಂತನೆ ಮಾಡುವುದಾದರೆ ನಿಮಗೆ ಕೃಷಿ ಕಾರ್ಮಿಕರ ಬಗ್ಗೆ ಚಿಂತನೆ ಇದ್ದರೆ, ಕೃಷಿ ವಿಮೆಯನ್ನು ಪರಿಚಯ ಮಾಡಿ. ಇವತ್ತು ಕೃಷಿ ಬಗ್ಗೆ, ಅದರ ಆಗುಹೋಗುಗಳ ಬಗ್ಗೆ ಮಾತನಾಡದೆ ಇದ್ದರೂ ಸಹ ಅದಕ್ಕೊಂದು ಇಲಾಖೆ ಅದಕೊಬ್ಬ ಮಂತ್ರಿ. ಅದು ಕೇವಲ ಸಂಘಟಿತ ಕಾರ್ಮಿಕರ ಇಲಾಖೆಯಾಗಿದೆ. ಅಸಂಘಟಿತ ಕಾರ್ಮಿಕರ ಬಗ್ಗೆ ಯಾವುದೇ ಚಿಂತನೆ ಮಾಡಿಲ್ಲ ಆದುದರಿಂದ ತಾವು ದಯವಿಟ್ಟು, ಇನ್ನೂ ಮುಂದಾದರೂ ಇರುವ ಒಂದೂವರೆ ವರ್ಷದಲ್ಲಿ ನಿಮ್ಮ ಸರ್ಕಾರಕ್ಕೆ ಜವಾಬ್ದಾರಿಯುತವಾಗಿ ಏನಾದರೂ ಮಾಡಬೇಕು ಎಂದು ಇದ್ದರೆ,

1.40. ಪಿ. ಎಂ.

ಅದೊಂದು ಮಸೂದೆಯನ್ನಾದರೂ ಜಾರಿಗೆ ತನ್ನಿ. ಅದೊಂದು ಬದಲಾವಣೆಯನ್ನು ಮಾಡಿ ಎಂದು ಹೇಳುತ್ತಾ, ಸರ್ಕಾರ ಈಗಲಾದರೂ ತನ್ನ ಎಲ್ಲಾ ಪಂಚೇಂದ್ರಿಯಗಳನ್ನು ಅತ್ಯಂತ ಜವಾಬ್ದಾರಿಯುತವಾಗಿ ತೆರೆದು, ಕೆಲಸ ಮಾಡಿ, ಈಗ ಹೋಗಿರತಕ್ಕ ಮಾನ ಮರ್ಯಾದೆಯನ್ನಾದರೂ ವಾಪಸ್ಸು ಪಡೆಯಲಿಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ಹೇಳಿ, ಹಾಗೂ ಅಧ್ಯಕ್ಷರ ಪರವಾಗಿ ಅವರಿಗೆ ಎಚ್ಚರಿಕೆಯನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. J.A. FERNANDEZ (Nominated):- Mr Speaker, I am tht last Speaker; hopefully not the least. I must apologise for having begun rather on a negative note because from the Governor's Address - thank God he is not here, for which we have to thank him for, it would appear that we have lost our prime position as far as Information Technology is concerned. Our neighbouring State. Andhra Pradesh. has positively scored over us. we have so far been maintaining a fairly high standard but the lack of political will perhaps has contributed considerably to our losing our prime position. I think everybody is aware of the remarks recently made by the great Industrialist Mr. Ratan Tata. I think his opininon is most relevant. I sincerely hope that the assurances given by His Excellency the Governor that the Government will be able to improve upon perfor formance. perhaps a Minister or a senior Government official could be made responsible for developing this area and ensuring that prospective investments are not turned away. There is a serious credibility gap between our promises and our performances. We have very poor roads, but to my impression the quality of our orads are suspect. It might be a good idea if we call upon the Border Roads organisation to help us build better roads. Possibly send our staff over there to get right training so that for what we pay, we get back quality of value.

We have a problem with the power sector with the delay in the Cogentrix Project. The Government cannot speed up the case as the High Court intervention is a further set back to the State's progress as far as the power generation is concerned and this is likely to frighten away further investment by foreign or multinationals as they are called. A great deal more of professionalism is required in this sector. Apart from Cogentrix, we also need to build up other infrastructural facilities

which are totally lacking at the moment. Unless we have proper water supply electricity, education, food in the State, we will be lagging behind.

Mr. Speaker with your permission, I would like to make a request to the Government to look into the matter of Stamp Duty for Christian wills. obtaining grant of Probate is mandatory for the entire Christian community in this country. But the probate duties are abnormally high. Exemption is only upto Rs.1000/ - property value. with Rs. one thousand, we do not even get a house on rent. It is 5% for property valued at Rs. three lakhs and progressively increased at 10% for property of higher value and almost every property Roady is valued much more that Rs. ten lakhs. The Supreme Court has held that there must be some nexus between the services rendered by the Courts and the Court fee charged. In this case, there is practically no work for the Courts. Hardly and nexus at all between the work of the Courts and the rate of stamp duty. Porbate matters are hardly ever contested. while it is interesting to note that in the eviction suit/litigation court fee is hardly Rs. 20/ those who are supposed to receive the Legacies will be very badly affected unless some action is taken by our Government to reduce the Stamp Duty, Perhaps a minimum of Rs. 500 and progressively raised to Rs.5,000/-, Otherwise the Legacies which are given to the people, will not reach them. As you know Mr. Speaker Sir, your property value is so high, if 5-6 people are beneficiaties under the Christian will. most of them eventually will get into the Legal Practitioners - I cannot call them Practitioners, it is difficult word to use what they do is, they obtain An Agreement to sell so that the amount that could be collected as advance is paid towards stamp duty. Then comes legal wranglings as the beneficiaries are deprived of what the person in his good intended to give them.

We are very happy to note that housing for the economically weaker sections will be in the region of Rs. Twentdy lakhs for the shelterless. we have asked for 200 houses for our community under 'Ashrays' and some lands so that we, who have given our life blood to this country, who have fought shoulder to shoulder with Indian brothers and sisters, - have no hopes, in regard to the recent survey made by the

Karnataka Minorities Development Corporation, and 35% in slum areas and roughly 65% of our people are living in rented homes and landlord exploit us by not giving us rent receipts and onen nignt they physically evict us; but we have not means to fight. Unfortunate development has taken place particnlarly in the periphery of the city.

It is hoped that the request made by us, we will get assurance from the Government that at least 200 houses under the Ashrays will be given to us. Unfortunately - as a nominated member I was told that I am not entitled to any Ashraya scheme house but my people should be considered for the purpose. What I want is that some concession should be given to us. The other factor is, some MLA'S from rural areas are getting Rs. 30 lakhs for road develoment. If we are given something like this to develop anarea where a bulk supply of land is given to us, and I am sure our community will be grateful to the Government. we one grateful indeed for the concessions given to us in the field of education. But this is the next most important aspect on our living conditions. I appeal, through you, Sir to the Government to help us on this matter.

In the matter of State Transport, this is another area which needs a lot of looking into. We welcome the introduction of new Volvo Buses but whether they will really prove economical and profit bearing in the long run, is difficult to state, because the roads are choked even as it is and the introduction of large big buses, long wheeled, will further create problems in the movement of traffic in Bangalore City unless projects of the fly-overs etc are complected in time. we have one suggestion on this. Since these vehicles are coming into Bangalore for the first time and made hare, perhaps the State Transport conld be given the facility to pay abont 30-40% of the value of the bus of truck in the intial stages on a daily basis, based on the guarantee given by the manufacturers, a proportionate amount can be worked out so that there is no heavy capital outlay on the part of the K.S.R.T.C. To give an example, let us take a bus costs Rs. 10 lakhs on road. Since it is a capital intensive, the KSRTC can pay Rs. 3 or 4 lakhs initially and adjust the remaining amout by paying no a daily or weekly basis over a period of 3 or 4 years depending upon the collections and on what guarantee the manufacturer gives on the longevity of the bus. The maintenance of the bus

sould also be the responsibility of the manufacturer so as to reduce the exiisting costs and dependence on various other suppliers to keep the vehicles on the road. A similar scheme can also be introduced for batteries, tyres and other high valued items so that a minimum guarantee is ensured and the liability of the KSRTC is reduced.

Anohter point is about inter-State routes. To the best of my kowledge, we have been taken for a ride by our neighbouring States by approximately 75%, It you consider the route parity in place of the mileage partiy, we can neutralise that mistake. Take for example: Bangalore- Madras route. we have a route of 35 KMS in Karnataka state and 300 KMS in Tamil Nadu. On the basis of mileage parity the agreement has been worked out. We can operate only one bus as against Tamil Nadu's ten buses. You can easily figure out the amount of money that we are losing as a result of this rather unfortunate agreement. It is high time to revise it. we always seem to be at the losing end with our neighbouring States in these matters.

About new automobile manufacturing units coming up, I wonder if the manufacturing mix is correct, as we have seen from various journals and newspapers many of the vehicles are being manufactured in India now are in buyers' market, not in sellers' market. Maruthi-800 car has 80% share in the market. why can't we bring Maruthi Company into Karnataka rather the thinking of other companies to compete with our own product? At the same time unemployment is not likely to reduce much. As far as public sector undertakings are concerned, it is time a stragight forward positive decision is taken because peoples money cannot be squandered away just for the sake of a few. Perhaps, some of the employees of the public sector undertakings could be made to work in the new companies that are coming up and introduce some voluntary retirment scheme and reduce the burden on the exchequer.

The other aspect is about Education. I appeal to this Government, through you Sir, to scrap the Education Act because it creates more problems than it can solve. I don't believe why we need to go to government schools when we cannot produce quality education. Our government schools are outstanding examples of lack of quality education in this country. Atleast, if you really wish to bring the education

standard up, right from now, I think, we should insist that every employee recruited in to the government service has to send his children to a government school. Anybody drawing a salary from the Karnataka Government should follow suit. Otherwise, there is no means by which the educational standards of our state can be improved. At the same time, it is not advisable to put restrictions on private educational institutions Let them flourish. The govenment should paly a supportive role because if we are to bring literacy to this country during the next 4 or 5 years and make education a fundamental right, we can never hope to achieve it wiht the existing regulations and unfortunate restrictions that are placed on the bringing up our educating children.

My learned friend Mr. Kagodu Thimmappa made a point about Convent Schools. Let me tell you that Convent Schools are not meant for everybody. But I can also assure you Mr. Speaker Sir, that almost on every floor of this corridor I am being approached with requests to get children put into the so-called Convent schools. please don't condemn the convent schools. They are providing a tremendous contribution to the education system in our country not only in Karnataka but throughout the country. we control 20% of the education system in India. Unfortunately, we could not get even half percent representation of our people in the government, in the Assemblies or in Parliament. Here there is some way by which the Christian community should be given some kind of a representation. May be the Constitution can be suitably amended. At the time of our independence we said we don't want any held. we want to stand side by side with other communities. Except Anglo-Indian community which has representation here, no other Christain has any means of entering the Assembly or the Lok Sabha unless be is an outstanding brillint person and being a small community, it is difficult to produce such outstanding leaders. So, I would request the state government to do some thing to help us in this respect.

As far as master plan for tourism is concerned, the accommodation packages need to be reoriented towards the lower income groups. Right now the tourism guest-houses are beyoud the reach of normal tourists who draw salary in government or private organisations. I can assure you that tremendous potential in tourism will come from the lower income groups. we should cater to them. Recently, we had an

International Reunion of our community. Many of our people felt that the tourists rates in Karnataka are very high not only for the foreigners but also for the local people. I think, we should do something to reduce the costs and to improve the tourist lodges we have to Cnsure that facilities are available to all without much expenditure.

As far as the development of Kannada is concerned, I am sorry to say that it has taken three years to produce a video-casette. we have received audio-casttes, but it is not worth talking about. They just don;t make you learn kannada language any better. I sincerely trust that the minister concerned to ensure that we will have a video-cassette to enable poor literate kannada people like me to be able to understand the language better.

On the question of Minority Development Corporation, it is unfortunate that we are not able to get loans sanctioned through banks though they are recommeded by the Minority Development Corporation. The banks always come out with some cock and bull story about the vilability not being there. So far, we have not received and loans from the Corporation.

MR. SPEAKER:- You are minority amongst the minorities.

SRI J.A. FERNANDES:- At least I must get something. I must be given some special consideration being minority among the other minorities. You will agree with me. Banks are not giving. I would suggest, instead of giving it to scheduled banks or nationalised banks, the Karnataka State Apex Bank to honour the recommendation of the Minority Development Corporation. On this issue, some other problems are also faced. Tahasildar's certificate has to be obtained for income and for community. How is a tahasildar going to tell you that your salary is Rs. 50, Or Rs.100 or Rs. 2000? He doesn't want to know that also wants So this tahasildar's certificate should be removed. we are making mockery of our people. we are teaching them to be corrupt by going to a Tahasildar paying money and get certificate about his community and his income. Hoe does a tahasildar know whether he is a Christian or an Anglo-Indian? Why not a Parsish Priest is authorised to give certificate to Christian people and Anglo-Indian guild or organisation to

give certificate to the community and place the onus on the persons wanting the loan? Make penal provision for making false declarations. Please halp me because I am a Minority.

Another thing is production of ration cards. You have to produce ration cards. On the hand we are trying to reduce the preme on the public distribution System. Even to get a passport we are asked to produce ration cards. wheris the meaning of having a ration card as a condition for obtaining a passport? why should we not remove this? Many of our people will prefer not to have ration cards so that the pressure on the government to issue ration cards will reduce. This is what I would like to suggest.

Regarding reimbursement of fees to Anglo-Indian students, I am grateful to the Government for having introduced this. On behalf of the community I thank you very much. If little more is provided, the benefits of the scheme for the lst to 10 the standard can be really reaped in the higher education in the variouss disciplines.

With this I would like to thank the Government and the Hon'ble Speaker for the opportunity given and I sincerely hope that will get assurances from the Hon'ble Chief Minister on the points I have made especially on the housing issue.

ಅಧ್ಯಕ್ಷರು:- ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ವಿಷಯದಲ್ಲಿ ಪ್ರಾರಂಭವಾದ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಮಧ್ಯಾಹ್ನ 3.00 ಗಂಟೆಗೆ ಸರ್ಕಾರದ ಪರವಾಗಿ ಮುಖ್ಯ ಮಂತ್ರಿಗಳು ಉತ್ತರ ಕೊಡಲಿದ್ದಾರೆ. ನಾಳೆ ಬೆಳಿಗ್ಗೆ 11.30ಕ್ಕೆ 1998-99ನೇ ಸಾಲಿನ ಮುಂಗಡ ಪತ್ರವನ್ನು ಹಣಕಾಸಿನ ಸಚಿವರು ಮಂಡಿಸಲಿದ್ದಾರೆ. ದೂರದರ್ಶನದಲ್ಲಿ ಇದರ ನೇರ ಪ್ರಸಾರವಿರುತ್ತದೆ. ಪತ್ರಿಕಾ ಛಾಯಾಗ್ರಾಹಕರಲ್ಲಿ ನನ್ನ ವಿನಂತಿ ಏನೆಂದರೆ, ನೇರ ಪ್ರಸಾರಕ್ಕೆ ಅಡ್ಡಿಯಾಗಲಾರದಂತೆ ತಾವು ಏನು ಫೋಟೋಗಳನ್ನು ತೆಗೆದುಕೊಳ್ಳುವುದಕ್ಕೆ ಅಪೇಕ್ಷೆ ಪಡುತ್ತೀರೋ, ಅವುಗಳನ್ನು ಪ್ರಾರಂಭದಲ್ಲೇ ತೆಗೆದುಕೊಂಡು ನಂತರ ನೇರ ಪ್ರಸಾರಕ್ಕೆ ಅವಕಾಶ ಮಾಡಿಕೊಡಬೇಕು; ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಈಗ ಸದನವನ್ನು ಮುಂದೂಡುತ್ತಿದ್ದೇನೆ, ಪುನ: 3.00 ಗಂಟೆಗೆ ನಾವು ಸಮಾವೇಶಗೊಳ್ಳಲಿದ್ದೇವೆ.

(ಸದನವು ಮಧ್ಯಾಹ್ನ 2.00 ಗಂಟೆ 02 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನ: ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರು ಶ್ರೀರಮೇಶ್ ಕುಮಾರ್ ರವರು ಅಧ್ಯಕ್ಷರ ಪೀಠವನ್ನಂಕರಿಸಿದರು

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ:-

+ಶ್ರೀ . ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸುತ್ತಾ, ಅದರ ಮೇಲೆ ಮಾಡಿದ ಎಲ್ಲಾ ವಿಶ್ಲೇಷಣೆ, ಟೀಕೆ, ಸರ್ಕಾರದ ಮೇಲೆ ಮಾಡಿದ ಎಲ್ಲಾ ಆರೋಪಗಳು, ಆಪಾದನೆಗಳು ಮತ್ತು ಸರ್ಕಾರದ ವಿಫಲತೆಯ ಬಗ್ಗೆ ಪುಂಕಾನುಪುಂಕವಾಗಿ ನಮ್ಮ ಗೌರವಾನ್ವಿತ ವಿರೋಧಪಕ್ಷಗಳ ನಾಯಕರು ಹೇಳಿದ್ದನ್ನು ಕೇಳಿದ್ದೇನೆ. ಸಾಮಾನ್ಯವಾಗಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ನನ್ನ ವಿಚಾರಗಳ ಬಗ್ಗೆ ಗೇಲಿ ಮಾಡುತ್ತಾರೆ. ನಾವೇನೋ ಹೇಳಿದರೆ, ನೀವು ಕೃಷ್ಣಾ ಮೇಲ್ದಂಡೆದ್ದು ಹೇಳಲಿಲ್ಲ, ವಿದ್ಯುತ್ ಬಗ್ಗೆ ಹೇಳಲಿಲ್ಲ, ಗೊಬ್ಬರದ ಬಗ್ಗೆ ಹೇಳಲಿಲ್ಲ, ಗೊಬ್ಬರದ ಬಗ್ಗೆ ಹೇಳಲಿಲ್ಲ, ಬರೀ ಆ ಶಂಕರಚಾರ್ಯರು ಇತರರ ಬಗ್ಗೆ ಪುಸ್ತಕ ತೆಗೆದುಕೊಂಡು ಬಂದು ಹೇಳುತ್ತೀರಿ ಎಂದು ಹೇಳುತ್ತಾರೆ. ಆದರೆ ನನ್ನ ವಿಚಾರದ ತರಹ ನಂಜೇಗೌಡರಂತಹವರು ಕೆಲವರು ಇದು ಸರಿ ಎಂದು ಒಪ್ಪುವಂತಹವರು ಇರುತ್ತಾರೆ. ಯಡಿಯೂರಪ್ಪನಂತಹವರಿಗೆ, ರಕ್ತದ ಒತ್ತಡವೇನೋ ಒಂದೊಂದು ಸಾರಿ ಕೋಪಗೊಂಡು ಏನೂ ಆಗಿಲ್ಲ, ಏನು ಮಾಡೇ ಇಲ್ಲ, ಸರ್ಕಾರವೇ ಇಲ್ಲವೆಂದು ಹೇಳಿ ಹೊರಗೆ ಹೋಗುತ್ತಾರೆ. ಆದುದರಿಂದ ನಾನು ಇಲ್ಲಿ ಶಂಕರಚಾರ್ಯರಿಂದಲೇ ಪ್ರಾರಂಭ ಮಾಡುತ್ತೇನೆ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು):- ತಾವು ದಾರಿ ತಪ್ಪಿಸುವ ಕೆಲಸವನ್ನೇ ಮಾಡುತ್ತೀರೆಂಬುದು ನನಗೆ ಗೊತ್ತಿತ್ತು.

ಶ್ರೀ.ಜೆ.ಹೆಚ್.ಪಟೇಲ್:- ಯಡಿಯೂರಪ್ಪನವರು ಜನತಾದಳ ಎಲ್ಲಿದೆ ಎಂದು ಕೇಳಿದರು, ದೇವರು ಇದ್ದಾನೆಂದು ನಾವೆಲ್ಲಾ ನಂಬಿದ್ದೇವೆ, ಇದುವರೆವಿಗೆ ತೋರಿಸಿದವರ್‍ಯಾರನ್ನೂ ನಾನು ಕಂಡಿಲ್ಲ. ಹಾಗೆಯ, ಜನತಾ ದಳ ಒಂದೊಂದು ಸಾರಿ ದೇವರು ಪ್ರತ್ಯಕ್ಷವಾದಂತೆ ಆಗುತ್ತದೆ, ಕೆಲವೊಂದು ಸಾರಿ ಅಪ್ರತ್ಯಕ್ಷವಾಗುತ್ತದೆ. ಅದು ಯಾವಾಗ ಪ್ರತ್ಯಕ್ಷವಾಗುತ್ತದೆ, ಯಾವಾಗ ಅಪ್ರತ್ಯಕ್ಷವಾಗುತ್ತದೆಂದು ಹೇಳುವುದು ಕಷ್ಟ. ಆದುದರಿಂದ, ನಾನು ಶಂಕರಚಾರ್ಯರವನ್ನು ನೋಡಿದವನಲ್ಲ, ಅವರಿಂದ ಕೇಳಿದವನೂ ಅಲ್ಲ, ನಾನು ನಮ್ಮ ಗುರುಗಳಿಂದ ತಿಳಿದುಕೊಂಡ ಪ್ರಕಾರ ಶಂಕರಾಚಾರ್ಯರು ಏನು ಹೇಳಿದರೆಂದರೆ, ಜಗತ್ತಿನ ಸೃಷ್ಟಿಗೆ ಮತ್ತು ಜಗತ್ತು ಇದೆ ಎನ್ನುವುದನ್ನು ನನ್ನ ಆತ್ಮ ಒಪ್ಪಬೇಕೇ ಹೊರತು ನನ್ನ ಕಣ್ಣನ್ನು ನಂಬುವುದಿಲ್ಲ, ಕಿವಿಯನ್ನು ನಂಬುವುದಿಲ್ಲ, ನನ್ನ ಈ ಪಂಚೇಂದ್ರಿಯಗಳನ್ನು ನಂಬುವುದಿಲ್ಲ, ನನ್ನ ಆತ್ಮವನ್ನು ನಾನು ಒಪ್ಪುತ್ತೇನೆ. ಎಂದು ಹೇಳಿದರು ಕಣ್ಣನ್ನು ನಂಬಿದವರು ಕಂಡಿದ್ದೆ ಎಂದು ಹೇಳಬಹುದು, ಕಿವಿಯನ್ನು ಹೊಂದಿದವರು ಶಬ್ದವನ್ನು ಕೇಳಬಹುದು, ಅವರು ಈಗ ಕಣ್ಣಿಲ್ಲ ಎಂದಾಕ್ಷಣ ದೃಶ್ಯವಿಲ್ಲವೆಂದಲ್ಲ, ವಸ್ತುವಿಲ್ಲವೆಂದಲ್ಲ, ಕಿವಿ ಇಲ್ಲವೆಂದಾಕ್ಷಣ ನಾದವಿಲ್ಲವೆಂದಲ್ಲ, ನಾಲಿಗೆ ಇಲ್ಲವೆಂದಾಕ್ಷಣ ರುಚಿ ಇಲ್ಲವೆಂದಲ್ಲ, ಚರ್ಮ ಇಲ್ಲವೆಂದಾಕ್ಷಣ ಸ್ಪರ್ಶವಿಲ್ಲವೆಂದಲ್ಲ. ಲಕ್ವ ಹೊಡೆದವನಿಗೆ ಚರ್ಮವಿದ್ದರೂ ಸ್ಪರ್ಶವಿರುವುದಿಲ್ಲ, ಕಣ್ಣಿದ್ದರೂ ಕುರುಡರಾಗಿರುತ್ತಾರೆ, ಕಿವಿ ಇದದ್ದರೂ ಕಿವುಡರಾಗಿರುತ್ತಾರೆ. ಹಾಗಾಗಿರುವುದರಿಂದ

ಇವತ್ತು ಸರ್ಕಾರ ಏನು ಮಾಡಿದೆ ಎಂದು ಕಣ್ಣಿದ್ದು ನೋಡಿದರೆ ಪ್ರೈಮರಿ ಶಾಲೆಗಳು ಕಾಣುತ್ತದೆ, ನಾವು ಕಟ್ಟಿಸಿರುವ ಆಸ್ಪತ್ರೆಗಳು ಕಾಣಿಸುತ್ತವೆ, ಕವಿ ಇದ್ದರೆ ಆಸ್ಪತ್ರೆಗಳು ಕಾಣಿಸುತ್ತವೆ, ಏನೂ ಕಾಣಲಿಲ್ಲವೆಂದರೆ, ನೀವು ಕುರುಡರಿರಬಹುದು ನಾನೇನು ಮಾಡುವುದಕ್ಕೆ ಹೋಗಲಿ.? ಹಾಗೆಯೇ ನಮ್ಮ ಶಾಲೆಗಳ ಮಕ್ಕಳ ಆಟಪಾಠಗಳ ನಿನಾದವನ್ನು ಕೇಳದಿರುವಂಥ ಕಿವಿಡರಾಗಿದ್ದರೆ ಅದಕ್ಕೆ ನಾನೇನು ಹೇಳಲಿ? ಸಮಾಜದಲ್ಲಿ ಕೆಲಸ ನಡೆಯುತ್ತಿದೆ, ಯುಕೆಪಿಯಲ್ಲಿ ಆಗಿರುವ ಕೆಲಸವನ್ನು ನೋಡುವುದಕ್ಕೆ ಕಣ್ಣಿಲ್ಲದಿದ್ದರೆ, ಯುಕೆಪಿಯಲ್ಲಿ ಕೆಲಸವಾಗಿಲ್ಲವೆಂತಲಾ? ನಾನು ನೋಡಿಲಿಲ್ಲವೆಂದರೆ ದೇವರಿಲ್ಲವೆಂತಲಾ? ಆದಕ್ಕೆ ಒಬ್ಬ ಗುರುಗಳು ಹೇಳಿದರು.

ಶ್ರೀ. ಹೆಚ್.ಎನ್. ನಂಜೇಗೌಡ:- ಕ್ಷಮಿಸಿ, ಪ್ರಾರಂಭದಲ್ಲೇ ಮಧ್ಯಪ್ರವೇಶ ಮಾಡುತ್ತಾರೆಂದು ಭಾವಿಸಬೇಡಿ, ಈಗ ಮಾಧುಸ್ವಾಮಿಯವರು ಮಾತನ್ನಾಡಿದ್ದನ್ನು ನಾನು ಒಂದಕ್ಷರ ಬಿಡದಂತೆ ನಾನು ಕುಳಿತು ಕೇಳಿದೆ; ನಾಗೇಗೌಡರು ಇರಲಿಲ್ಲ, ಅವರು ಏನು ಹೇಳಿದರು ಎಂದರೆ, ಲೈನ್ ಎಸ್ಟಿಮೇಟ್ ಎರಡು ಕೋಟಿ ಮಾಡಿಬಿಟ್ಟಿದ್ದಾರೆ, ನಿಜವಾಗಿ ಕೊಡುವಾಗ ಹನ್ನೊಂದು ಕೋಟಿ ಕೊಟ್ಟಿದ್ದಾರೆ, ಈ ಎಲ್ಲಾ ಅಂಕಿಅಂಶಗಳ ವಿವರಗಳನ್ನು ಅವರು ಕೊಟ್ಟರು. ಇನ್ನು ಕೆಲವು ಸ್ಟೋರ್ಸ್ ಪರ್ಚೇಸ್ ಕಮಿಟಿ ಐದು ಸಾವಿರ ಇರುವುದಕ್ಕೆಲ್ಲಾ ಇಪ್ಪತ್ತೈದು ಸಾವಿರ ದವರೆಗೆ ರೇಟ್ ಕೊಟ್ಟಿದ್ದಾರೆ, ಹೀಗೆ ಅವರು ಗುರುತರವಾದ ಮಾತುಗಳನ್ನು ಕೂಡ ಹೇಳಿದ್ದಾರೆ.

ಶ್ರೀ. ಜೆ. ಹೆಚ್. ಪಟೇಲ್:- ಜನತಾದಳ ಎಲ್ಲಿದೆ, ಈ ಸರ್ಕಾರ ಎಲ್ಲಿದೆ ಎಂದು ಕೇಳಿದವರಿಗೆ ನಾನು ಉತ್ತರವನ್ನು ಹೇಳುತ್ತಿದ್ದೇನೆ; ಬಿಲ್ ಮಾಡಿದವರ ಅಥವಾ ಕಮಿಷನ್ ತೆಗೆದುಕೊಂಡವರ ವಿಚಾರವನ್ನಲ್ಲ ನಾನು ಹೇಳುತ್ತಿರುವುದು. ಅದಕ್ಕೇ ಶಂಕರಾಚಾರ್ಯರು ಹೇಳಿದ್ದೇನೆಂದರೆ, ದೇವರಿದ್ದಾನೆಂದು ಹೇಳಿದ್ದು ನನ್ನ ಆತ್ಮಕ್ಕೆ ಮಾತ್ರ. ನನ್ನಲ್ಲಿ ಆತ್ಮವಿದ್ದರೆ ಅಲ್ಲಿ ದೇವರಿದ್ದಾನೆ, ಬರಿ ಕೈಕಾಲುಕಿವಿ ಇದ್ದರೆ ಅಲ್ಲ. ಆ ಇದಕ್ಕೆ ಮಾನಿಸಂ ಎನ್ನುತ್ತಾರೆ. ಇದಕ್ಕೆ ಶಂಕರಚಾರ್ಯರ ತತ್ವ ಒಂದೇ. ಜಗತ್ತಿನ ಸೃಷ್ಟಿಗೆ, ದೇವರ ಕಲ್ಪನೆಗೆ, ಎಲ್ಲಾ ರೀತಿಯ ಜೀವಗಳು ಬದುಕಿರುವುದಕ್ಕೆ ಒಂದೇ ಜೀವ, ಅದು ಚೈತನ್ಯ, That is called spiritualism. ಆ ಸ್ಪಿರಿಚ್ಯುಲಿಸಂ ಹತ್ತನೇ ಶತಮಾನದಲ್ಲಿ ಬಂತು. Spiritualism is prevalent in every conntry all over the world. ಕಾರ್ಲ್‌ಮಾರ್ಕ್ಸ್ ಹತ್ತೊಂಭತ್ತನೆ ಶತಮಾನದಲ್ಲಿ ಹುಟ್ಟಿದಾಗಲೇ ಒಂದು ಹೊಸ ವಾದ ಬಂದದ್ದು. ಅಲ್ಲಿಯವರೆಗೆ ಬಂದಿರಲಿಲ್ಲ. ಕಾರ್ಲ್‌ಮಾರ್ಕ್ಸ್ ಏನು ಹೇಳಿದ್ದೆಂದರೆ, ನಿನ್ನನ್ನು ದೇವರು ಸೃಷ್ಟಿಮಾಡಿದ ಎಂದು ಹೇಳುವುದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ, ನಿಮಗೆ ತಿಳಿದಂತೆ ದೇವರುಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರಿ. ಆದರೆ ಆ ದೇವರುಗಳನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ, ಈಗ ಈ ಭೂ ಮಂಡಲಕ್ಕೆ ಐದುನೂರು ಕೋಟಿ ವರ್ಷ ವಯಸ್ಸಾಗಿದೆ. ಐನೂರು ಕೋಟಿ ವರ್ಷದಲ್ಲಿ ನಾನೂರು ಹತ್ತು ಕೋಟಿ ವರ್ಷಗಳ ಕಾಲ ನೀರಿರಲಿಲ್ಲ, ತೊಂಭತ್ತು ಕೋಟಿ ವರ್ಷ ನೀರಿತ್ತು. ನೀರು ಬಂದ ಮೇಲೆ ಅಮೀಬಾ ಎನ್ನುವುದು ಒಂದು ಸ್ವಯಂಬು, ಅದೇ ಹೆಣ್ಣು, ಅದೇ ಗಂಡು. ಆ ಅಮಿಬಾದಿಂದ ಪ್ರಾಣಿ, ಸಸ್ಯ ಇವೆಲ್ಲಾ ಜೀವಿಗಳು ಉದ್ಭವವಾಗಿ ಅಲ್ಲಿಂದ ಚತುಷ್ಪಾದಿಗಳು ಅದು ಇದು ಎಲ್ಲಾ ಬಂದವು. ಮಾನವನ ರೂಪಕ್ಕೆ ಬರುವುದಕ್ಕೆ ಮುಂಚೆ ಪಶುಗಳು ಹೇಗೆ ನಡೆಯುತ್ತವೆಯೋ ಹಾಗೆ ಮೊದಲು ಇವನು

ಕೈಯನ್ನು ಊರಿ ನಡೆಯುತ್ತಿದ್ದ. ಕೋತಿಗಳು ಈಗ ಹೇಗೆ ನಡೆಯುತ್ತವೆಯೋ ಹಾಗೆ ನಡೆಯುತ್ತಿದ್ದ. ಕೈ ಊರದೇ ನಿಂತುಕೊಳ್ಳುವುದಕ್ಕೆ ಅದೂ ಒಂದು ಕಾಲವಾಯಿತು. ಈ ಕಪಿ ಮಾನವನಿಂದ ಮಾನವನ ರೂಪಕ್ಕೆ ಬಂದದ್ದು ವಿಜ್ಞಾನಿಗಳ ಪ್ರಕಾರ ಕೇವಲ 17 ಲಕ್ಷ ವರ್ಷಗಳ ಹಿಂದೆ, ಭೌತಶಾಸ್ತ್ರದ ವಿಜ್ಞಾನಿಗಳ ಪ್ರಕಾರ ಇದು ಕಂಡು ಬಂದದ್ದು ಜರ್ಮನಿಯ ಹತ್ತಿರ ಇದ್ದಂತಹ ಗವಿಗಳಲ್ಲಿ. ಆಗ ಅವನು ಕೈಯ್ಯನ್ನು ಉಪಯೋಗಮಾಡುತ್ತಿದ್ದ. ಆಗ ಅವನು ಇದ್ದಂತಹ ಪ್ರದೇಶವನ್ನು 'ಟೆಂಪರೇಟ್ ಜೋನ್' ಎಂದು ಕರೆಯುತ್ತೇವೆ. ಅತ ಅತಿ ಚಳಿಯಾದಂತಹ ಕಡೆಯೂ ಇರಲಿಲ್ಲ, ಅತಿ ಉಷ್ಣವಾದಂತಹ ಕಡೆಯೂ ಇರಲಿಲ್ಲ. ಆದರೂ ಈ ಮಾನವ ನೆಲೆಸುತ್ತಾ ನೆಲೆಸುತ್ತಾ ಎಲ್ಲಿ ನದಿ ನೀರು ಇತ್ತು, ಎಲ್ಲಿ ಮಹಾನ್ ಪರ್ವತಗಳಿದ್ದವೋ ಅಲ್ಲಿ ನೆಲೆಸುತ್ತಾ ಬಂದ. ಅದಾದ ಮೇಲೆ ಈಜಿಪ್ಟ್‌ನ ಹತ್ತಿರ ಮತ್ತು ಚೈನಾದ ಯಾಂಗ್‌ಟಿಸಿಕಿಯಾಂಗ್ ನದಿಯ ಪಕ್ಕದಲ್ಲಿ ಹಾಗೂ ಗಂಗಾ ನದಿಯ ಪಕ್ಕದಲ್ಲಿ, ಈ ಮೂರು ನದಿಗಳ ಪ್ರದೇಶದಲ್ಲಿ ಮಾನವ ಸಮೂಹ ಅಥವಾ ಸಮಾಜ ಸಂಘಜೀವಿ ಆದ. ಆಗ ಪ್ರಾರಂಭದಲ್ಲೇ ಅವನು ಕೈ ಉಪಯೋಗಿಸುತ್ತಿದ್ದುದ್ದರಿಂದ ಯಾರು ಬಲಾಢ್ಯರು ಇದ್ದರು, ಯಾರಿಗೆ ಶಕ್ತಿ ಜಾಸ್ತಿ ಇತ್ತು, ಅವರು ಆಳುತ್ತಿದ್ದರು. ಅಲ್ಲಿಂದ ಅವನು ಯಂತ್ರಗಳನ್ನು ಉಪಯೋಗ ಮಾಡುವುದಕ್ಕೆ ಶುರು ಮಾಡಿದ. ಆ ಯಂತ್ರಗಳು ಕಲ್ಲಿನಿಂದ ಈಗ ಮಿಸೈಲ್‌ವರೆಗೆ ಬಂದಿರಬಹುದು, ಲೇಸರ್ ಬೀಮ್‌ವರೆಗೆ ಬಂದಿರಬಹುದು. ಹೀಗೆ ಮಾನವ ಬೆಳೆಯುತ್ತಾ ಬಂದ. ಕಾರ್ಲ್ ಮಾರ್ಕ್ಸ್‌ನ ಪ್ರಕಾರ ನಾವು ನೀರಿನಲ್ಲಿ ಬಂದು ಅಲ್ಲಿಂದ ಅಮೀಬಾದಿಂದ ಬಂದು, ಪ್ರಾಣಿಗಳಿಂದ ಬಂದು, ಈಗ ಹೀಗಾಗಿ ಈ ಸ್ಥಿತಿಯಲ್ಲಿದ್ದೇವೆ. ಈಗ ಈ ತರಹ ಒಂದು ಸರ್ಕಾರ ಮಾಡಿದ್ದೇವೆ. ಶಂಕರಚಾರ್ಯರು ಹೇಳಿದಂತೆ ಈ ಮಹಾನ್ ಚೈತನ್ಯ ಪುರುಷರು ಏನೂ ಮಾಡಲಿಲ್ಲ ಎನ್ನುತ್ತಾರೆ. ನಿಮಗೆ ಕಣ್ಣಿದ್ದೂ ಕಾಣುವುದಿಲ್ಲ, ಕಿವಿಯಿದ್ದರೂ ಕೇಳುವುದಿಲ್ಲ, ನಾಲಿಗೆಯಿದ್ದರೂ ರುಚಿಯಿಲ್ಲ. ಆದ್ದರಿಂದ ನೀವು ಬರೀ ಟೀಕ, ಆರೋಪ, ಅಪಾದನೆ ಇವುಗಳನ್ನೇ ಮಾಡುತ್ತಾ ಕಾಲ ಕಳೆದುಕೊಂಡು ಬಂದಿದ್ದೀರಿ. ಜಗತ್ತಿನ ಸ್ಥಿತಿಯನ್ನು ನೋಡಿದರೆ ಇವತ್ತು ಯಾರೂ ಆಟಂಬಾಂಬ್ ಉಪಯೋಗಿಸುವ ಸ್ಥಿತಿಯಲ್ಲಿ ಇಲ್ಲ. ಅದು ಸದ್ದಾಂ ಹುಸೇನ್ ಬಗ್ಗೆಯಾಗಬಹುದು ಅಥವಾ ಇನ್ನಾರ ಬಗ್ಗೆಯಾದರೂ ಆಗಬಹುದು. ಯಾರೂ ಕೂಡ ಇವತ್ತು ಆಟಂಬಾಂಬ್ ಉಪಯೋಗಿಸುವ ಸ್ಥಿತಿಯಲ್ಲಿಲ್ಲ. ಕ್ಲಿಂಟನ್‌ರಂತಹ ಶಕ್ತಿವಂತರೂ ಕೂಡ ಇಂದು ಆ ಸ್ಥಿತಿಯಲ್ಲಿ ಇಲ್ಲ. ಹಿಂದೆ ಒಂದು ಕಾಲಕ್ಕೆ ಯೆಲ್ಸಿನ್ನೋ, ಕ್ರುಶ್ಚೋವೋ ಇದ್ದರೆ ಇವರೇನಾದರೂ ಗಲಾಟೆ ಮಾಡಿದರೆ, ಅವರು ನಮ್ಮ ಸಹಾಯಕ್ಕೆ ಬರುತ್ತಾರೆ, ಇವರು ಗಲಾಟೆ ಮಾಡಿದರೆ ಅವರು ಸಹಾಯಕ್ಕೆ ಬರುತ್ತಾರೆ ಎನ್ನತಕ್ಕಂಥ ಒಂದು ಭೌಗೋಳಿಕ ಪರಿಸ್ಥಿತಿ ಇದ್ದು ಆಗಿನ ಕಾಲದಂತಹ ಗ್ಲೋಬಲೈಸೇಷನ್ which was divided between two forces, ಈಗ ಅದು ಇಲ್ಲ ಆದ್ದರಿಂದ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ಶಂಕರಾಚಾರ್ಯರಿಗೆ ವಾರಾಣಾಸಿಯಲ್ಲಿ ಒಬ್ಬ ಮಹಿಳೆ ಒಂದು ಪ್ರಶ್ನೆಯನ್ನು ಕೇಳಿದಳು. ಇದರಲ್ಲಿ ಸತ್ಯಯಾವುದು? ಮಿಥ್ಯ ಯಾವುದು ಎಂದು ಒಳ್ಳೆಯ ಚಂದ್ರನ ಬೆಳಕು ಇರುತ್ತದೆ. ಒಂದು ಬೋಗುಣಿಯಲ್ಲಿ ನೀರು ತಂದು ಇಟ್ಟಾಗ ಚಂದ್ರನ ಪ್ರತಿಬಿಂಬವನ್ನು ಆಕೆ ಅದರಲ್ಲಿ ಕಾಣುತ್ತಾಳೆ. ಇದರಲ್ಲಿ ಯಾವುದು ಸತ್ಯ? ಈ ಬೋಗುಣಿಯಲ್ಲಿರುವ ಚಂದ್ರನಾ ಅಥವಾ ಮೇಲೆ ಆಕಾಶದಲ್ಲಿರುವ ಚಂದ್ರನಾ ಎಂದು ಆಕೆ ಕೇಳುತ್ತಾಳೆ. ಆ ಮಹಿಳೆ ಶಂಕರಾಚಾರ್ಯರನ್ನು spiritualism, which is truth ಎಂದು ಚಾಲೆಂಜ್ ಮಾಡುತ್ತಾಳೆ. ಆಗ ಶಂಕರಾಚಾರ್ಯರು ಹೇಳಿದ ಮಾತು ಸರ್ವಕಾಲಕ್ಕೂ

ಸತ್ಯ. ಆಗ ಅವರು ಏನು ಹೇಳಿದರು ಎಂದರೆ, ಬೋಗುಣಿಯಲ್ಲಿ ಕಾಣತಕ್ಕಂತಹ ಚಂದ್ರ ಮಿಥ್ಯ, ಆಕಾಶದಲ್ಲಿರತಕ್ಕಂತಹ ಚಂದ್ರ ಸತ್ಯ. ನನ್ನ ಆತ್ಮದಲ್ಲಿರತಕ್ಕಂತಹ ದೇವರು ಸತ್ಯ, ಇಲ್ಲಿ ಬೋಗುಣಿಯಲ್ಲಿ ಕಾಣತಕ್ಕಂಥ ಪ್ರತಿಬಿಂಬಗಳೇನಿವೆ, ಸತ್ಯದ ರಿಫ್ಲೆಕ್ಷನ್ಸ್ ಏನಿವೆ, ಸತ್ಯದ ಎಮೇಜಸ್ ಏನಿವೆ ಅವು ಸತ್ಯವಲ್ಲವೆಂದು ಹೇಳಿ, ಈಗ ಬೋಗುಣಿಯಲ್ಲಿನ ನೀರನ್ನು ನೀನು ಚೆಲ್ಲಿದರೆ, ಚಂದ್ರಾ ಹೋಗುತ್ತಾನೆಯೇ ಎಂದು ಅವರು ಮಹಿಳೆಯನ್ನು ಕೇಳಿದರು. ಆಗ ಚಂದ್ರ ಹೋಗುವುದಿಲ್ಲ, ಅದರ ಪ್ರತಿಬಿಂಬ ಮಾತ್ರ ಹೋಗುತ್ತದೆ. ಆದ್ದರಿಂದ ಮಹಾನುಭಾವರಿಗೆ ನಾನು ಇಷ್ಟೇ ಅರಿಕೆ ಮಾಡಿಕೊಳ್ಳುತ್ತೇನೆ, ನೀವು ಸತ್ಯವನ್ನು ಕಾಣಲು ತಯಾರಿದ್ದರೆ ಇಲಾಖಾವಾರು ಉತ್ತರಗಳನ್ನು ನಾನು ಈಗ ಹೇಳುತ್ತೇನೆ. ನೀವು ಏನೂ ಉತ್ತರ ಹೇಳುವುದೇ ಬೇಡ ಎನ್ನುವುದಾದರೆ ನಾನು ಏನನ್ನೂ ಹೇಳುವುದಿಲ್ಲ. ಯಾವುದು ಸತ್ಯ? ಯಾವುದು ಬಿಂಬ? ಯಾವುದು ಮಿಥ್ಯ ಎಂಬುದನ್ನು ಸ್ವಲ್ಪ ದಯವಿಟ್ಟು ಸಹೃದಯದಿಂದ ನೀವು ನೋಡಿದರೆ, ನಾನು ಹೇಳಿದ್ದು ನಿಮಗೆ ಕಾಣುತ್ತದೆ. ನಿಮಗೆ ಅದು ಕಾಣುವುದೇ ಇಲ್ಲ ಎನ್ನುವುದಾದರೆ, ನಾನೇಕೆ ನಿಮಗೆ ಅದನ್ನು ತೋರಿಸಲಿಕ್ಕೆ ಹೋಗಲಿ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗ ನಾನು ಉತ್ತರ ಕೊಡಲು ಪ್ರಾರಂಭಿಸುತ್ತೇನೆ. ಶಂಕರಾಚಾರ್ಯರನ್ನು ಬಿಟ್ಟು ಈಗ ಕಾರ್ಲ್‌ಮಾರ್ಕ್ಸ್‌ಗೆ ಬರುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಗಳು ಕೇವಲ ರಾಜಕಾರಣಿಯಲ್ಲ, ಅವರು ಸ್ವಲ್ಪ ಹರಿಕಥೆಯನ್ನೂ ಕೂಡ ಕಲಿತಿದ್ದಾರೆ ಎನಿಸುತ್ತದೆ.

ಶ್ರೀ ಜೆ.ಹೆಚ್. ಪಟೇಲ್:- ಜೈಲಿನಲ್ಲಿ ನಾನಿದ್ದಾಗ ನನಗೆ ಬೇರೆ ಕೆಲಸ ಇರಲಿಲ್ಲವಲ್ಲಾ, ಅಲ್ಲಿ ಇದನ್ನೆಲ್ಲಾ ಓದಿಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಪ್ರಾರಂಭದಲ್ಲೆ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ನಾನು ಹೇಳಬಯಸುತ್ತೇನೆ. ಇವತ್ತು ರಾಷ್ಟ್ರದಲ್ಲಿ ಚುನಾವಣೆಗಳ ಕಾಲದಲ್ಲಾಗಲೀ, ಬೇರೆ ಕಾಲದಲ್ಲಾಗಲೀ, ಅದು ಧಾರ್ಮಿಕ ಸಂಘರ್ಷಗಳು ಇರಬಹುದು, ಕಾರ್ಮಿಕರ ಸಂಘರ್ಷಗಳು ಇರಬಹುದು ಅಥವಾ ಗ್ರಾಮಾಂತರದಲ್ಲಿ ಬರತಕ್ಕಂತಹ ವೈಯಕ್ತಿಕ ಪ್ರತಿಷ್ಠೆಗಳ ಸಂಘರ್ಷ ಇರಬಹುದು, ಆ ಸಂಘರ್ಷಗಳ ಕಾರಣದಿಂದ ಸಮಾಜದಲ್ಲಿ ಏನು ಅವ್ಯವಸ್ಥೆ ಆಗುತ್ತಿತ್ತೋ, ಆ ಅವ್ಯವಸ್ಥೆ. ಸಂಪೂರ್ಣ ಹತೋಟಿಯಲ್ಲಿದೆ ಎಂದು ನಾನು ಹೇಳಬಯಸುತ್ತೇನೆ. ಅವ್ಯವಸ್ಥೆ ಇಲ್ಲವೇ ಇಲ್ಲ ಎಂದು ನಾನು ಹೇಳುವುದಿಲ್ಲ; ಆದರೆ ಅದು ಸಂಪೂರ್ಣ ಹತೋಟಿಯಲ್ಲಿದೆ. ಪಕ್ಕದ ರಾಜ್ಯಗಳನ್ನು ನಾನು ಹೋಲಿಸುವುದಕ್ಕೆ ಹೋಗುವುದಿಲ್ಲ ಅಥವಾ ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯಗಳ ಕಾನೂನು ಸುವ್ಯವಸ್ಥೆಯೊಂದಿಗೆ ನಾನು ಹೋಲಿಸುವುದಕ್ಕೆ ಹೋಗುವುದಿಲ್ಲ. ಅವು ಕೂಡ ಇಂಡಿಯಾ ದೇಶದಲ್ಲಿ ಇರತಕ್ಕವೇ. ಅಲ್ಲಿ ಐತಿಹಾಸಿಕ ಕಾರಣಗಳಿಗೋಸ್ಕರ ಘರ್ಷಣೆಗಳು, ಕೊಲೆ, ಸುಲಿಗೆ, ದಲಿತರ ಮೇಲೆ, ಮಹಿಳೆಯರ ಮೇಲೆ, ಹಿಂದುಳಿದವರ ಮೇಲೆ, ಅಲ್ಪಸಂಖ್ಯಾತರ ಮೇಲೆ ಆಗುತ್ತಿದೆ ಅದು ಅಲ್ಲಿಯ ಒಂದು ಇತಿಹಾಸ. ಆದರೆ ಇಲ್ಲಿ ಎಲ್ಲೆಲ್ಲಿ ಒಂದೊಂದು ಮಹಾನ್ ಅಂದೋಳನಗಳಾಗಿವೆ, ಅಂತಹ ಕಡೆ ಇವತ್ತು ದೇಶದಲ್ಲಿ ಎಲ್ಲಿ ತೆಗೆದುಕೊಂಡರೂ, ಅದು ವೆಸ್ಟ್ ಬೆಂಗಾಲ್‌ನ ಚೈತನ್ಯ ಮೂವ್‌ಮೆಂಟ್ ಇರಬಹುದು, ಅಥವಾ ನಮ್ಮ ರಾಜ್ಯದ ಬಸವಣ್ಣನ ಮೂವ್‌ಮೆಂಟ್ ಇರಬಹುದು, ಕರ್ನಾಟಕದಲ್ಲಿ ಬೇರೆ ಎಲ್ಲಾ ರಾಜ್ಯಗಳಿಗಿಂತ ನಾವು ಮುಂದಿದ್ದೇವೆ. ಒಂದು ವಿಷಯದಲ್ಲಿ ಮಾತ್ರ ನಾವು

ಎರಡನೆಯವರಾಗುತ್ತಿದ್ದೇವೆ. ಸಾಕ್ಷರತೆಯಲ್ಲಿ ಕೇರಳ ರಾಜ್ಯ ಪ್ರಥಮ ಸ್ಥಾನದಲ್ಲಿದೆ. We are trying to become no.2. ಆ ಕಾರಣದಿಂದ ಇವತ್ತು ಸಮಾಜದಲ್ಲಿ ಶಾಂತಿ ಇದೆ, ಸಣ್ಣ ಪುಟ್ಟ ಕಳ್ಳತನಗಳು, ವೈಯಕ್ತಿಕ ದ್ವೇಷಗಳ ಕಾರಣ ಆಗುವ ಘರ್ಷಣೆಗಳು ಇದ್ದೇ ಇವೆ. ವ್ಯಕ್ತಿಯ ವಿರಸವನ್ನು ಸಂಪೂರ್ಣವಾಗಿ ತೆಗೆದು ಹಾಕುವುದಕ್ಕೆ ದೇವರಿಗೂ ಸಹಾ ಬಹಳ ಕಷ್ಟವಾಗಿದೆ. ಆದ್ದರಿಂದ ನಮ್ಮ ಸರ್ಕಾರ ನಮ್ಮ ಕೈಲಾದುದ್ದನ್ನು ಮಾಡುತ್ತಿದೆ. ಇವತ್ತು ನಮ್ಮ ಪೊಲೀಸ್ ವ್ಯವಸ್ಥೆ ಚೆನ್ನಾಗಿದೆ ಮಾನ್ಯ ಯಡಿಯೂರಪ್ಪನವರು ಇದನ್ನು ಒಪ್ಪಬಹುದು, ಅವರು ಇದನ್ನು ಒಪ್ಪುವುದಿಲ್ಲ ಎಂದು ನಾನು ಹೇಳುವುದಿಲ್ಲ. I am not that prejudiced ನಮ್ಮ ರಾಜ್ಯದಲ್ಲಿ ಅಲ್ಲಿ ಇಲ್ಲಿ ಸಣ್ಣ ಪುಟ್ಟ ಘಟನೆಗಳಾಗಿರಬಹುದು, ಕಸ್ಟೋಡಿಯಲ್ ಡೆತ್ ಆಗಿರಬಹುದು, ಸಣ್ಣ ಪುಟ್ಟ ಗಲಭೆಗಳಾಗಿರಬಹುದು. ನಾನು ಹಿಂದಿನ ಸರ್ಕಾರದಲ್ಲಿ ಹೀಗೆ ಆಗಿತ್ತು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಹಿಂದಿನ ಸರ್ಕಾರವೂ ಇದೇ ಜನ, ಇದೇ ಮೆಟೀರಿಯಲ್ ಅನ್ನೇ ಹೊಂದಿತ್ತು. ಆದರೆ ಕಳೆದ ಮೂರು ವರ್ಷಗಳಲ್ಲಿ ಜತನಾದಳ ಸರ್ಕಾರ ಬಂದ ಮೇಲೆ ಎಲ್ಲಾ ಕೂಡ ನಾವು ಫೈರಿಂಗ್ ಮಾಡಿಸಿಲ್ಲ, ಎಲ್ಲೂ ಸಾಮೂಹಿಕವಾಗಿ ಸಾವಿರಾರು ಜನರನ್ನು ನಾವು ಜೈಲಿಗೆ ಹಾಕಿಲ್ಲ. ಸಣ್ಣ ಚಳುವಳಿಗಳಾಗಿವೆ ಅಷ್ಟೆ. ಅವು ಭಾಷೆಯ ಬಗ್ಗೆ ಇರಬಹುದು, ಮತ್ತೊಂದರ ಬಗ್ಗೆ ಇರಬಹುದು, ಯಾವುದೋ ಮಸೀದಿ ಬಗ್ಗೆ ಇರಬಹುದು, ಈದ್ಗಾ ಮೈದಾನದ ಬಗ್ಗೆ ಬರಬಹುದು; ಮೊನ್ನೆ ನಡೆದ ಚುನಾವಣೆಗಳನ್ನು ಶಾಂತಿಯುತವಾಗಿ ನಡೆಸುವಲ್ಲಿ we stand No. 1 in the country. we have manged without any violence. ಎಲ್ಲಾ ಏನೂ ತೊಂದರೆಯಾಗದಂತೆ ನಾವು ಚುನಾವಣೆಗಳನ್ನು ನಡೆಸಿದ್ದೇವೆ. ಯಾರೋ ಕಿಡಿಗೇಡಿಗಳು ಎಲ್ಲೋ ಒಂದು ಕಡೆ ಪೋಲಿಂಗ್ ಬೂತ್‌ಗೆ ನುಗ್ಗಿ ಚೀಟಿ ಹರಿದರು ಎಂಬುದನ್ನು ಬಿಟ್ಟರೆ, ಬಂದೂಕು ಹಾರಿಸುವುದು ಮತ್ತೊಂದು ರೀತಿಯ ಘಟನೆಗಳು ಇಲ್ಲಿ ನಡೆದಿಲ್ಲ ಉತ್ತರ ಪ್ರದೇಶದಲ್ಲಿ ರಿಗ್‌ವೇದಿಗಳಿದ್ದಾರೆ ಎಂದು ಯಾರೋ ಹೇಳಿದರು. ರಿಗ್‌ವೇದಿಗಳು ಯಾರು ಅಂದರೆ ಯಾರು ರಿಗ್ ಮಾಡಿ ಓಟು ತೆಗೆದುಕೊಳ್ಳುತ್ತಾನೋ ಅವನು ರಿಗ್‌ವೇದಿ. ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಇಂತಹವರಿದ್ದಾರೆ. ನಾನು ಈ ಪಾರ್ಟಿ ಆ ಪಾರ್ಟಿ ಎಂದು ಹೇಳುತ್ತಿಲ್ಲ, ಅವರೆಲ್ಲಾ ರಿಗ್‌ವೇದಿಗಳು.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಮುಖ್ಯಮಂತ್ರಿಗಳೇ, ನಮ್ಮ ರಾಜ್ಯದಲ್ಲಿ ಪೆಗ್‌ವೇದಿಗಳೂ ಇದ್ದಾರೆ.

ಶ್ರೀ ಜೆ. ಹೆಚ್. ಪಟೇಲ್:- ಸಾಮವೇದಿಗಳು ಅಂದರೆ ಸಾರಾಯಿ ಕುಡಿಸುವವರು ಅಂತ. ನೀವು ಪೆಗ್‌ವೇದಿಗಳು ಅಂದರಲ್ಲ, ವೇದಗಳಿಗೆ ಹಾಗೆಲ್ಲಾ ಇಂಗ್ಲೀಷ್ ಅನ್ನು ಸೇರಿಸಲಿಕ್ಕೆ ಹೋಗಬಾರದು. ದುಡ್ಡು, ತೋಳ್ಬಲದಿಂದ ಹೋಗುವವರಿಗೆ ಅಥರ್ವಣವೇದಿಗಳು ಅನ್ನುತ್ತಾರೆ. ವಿನೋದದಿಂದ ಅವರು ಇದಕ್ಕೆ ಹೋಲಿಸಿರಬಹುದು. ಆದರೆ ಇದನ್ನು ಬರೆದಿರತಕ್ಕವರು ಬಹಳ ದೊಡ್ಡ ವಿಜ್ಞಾನಿಗಳು. ಹೀಗಾಗಿ ಋಗ್ವೇದಗಳು ಬೇರೆ, ಸಾಮವೇದಗಳು ಬೇರೆ, ಅವರ್ತಣ ವೇದಗಳು ಬೇರೆ ಇದ್ದಾಗಲೂ ಇಲ್ಲಿ ನಮ್ಮ ರಾಜ್ಯದಲ್ಲಿ ಯಾವ ವೇದಿಗಳ ಕೆಲಸವೂ ನಡೆಯಲಿಲ್ಲ. ಇಲ್ಲಿ ಸಣ್ಣಪುಟ್ಟ ಅಪರಾಧಗಳು ಇದ್ದರೂ ಕೂಡ ಮಾನವೀಯ ಸಮಾಜದಲ್ಲಿ ಲಾ ಅಂಡ್

ಆರ್ಡರ್ ಸಿಚ್ಯುಏಷನನ್ನು. ಶಾಂತಿ ಸ್ಥಾಪನೆಯನ್ನು ಕಾಪಾಡಿಕೊಂಡು ಬರುವುದರಲ್ಲಿ ಬಹಳ ಯಶಸ್ವಿಯಾಗಿದ್ದೇವೆ ಎಂದು ಹೇಳಬಯಸುತ್ತೇನೆ. ತಾವು ಇದನ್ನು ಅಹಂಕಾರದ ಮಾತು ಎಂದು ತಿಳಿಯಬೇಡಿ, ಇದು ವಾಸ್ತವದ ಮಾತು. ಯಾವ ರಾಜ್ಯದಲ್ಲಿ ಸಂಸ್ಕೃತಿ ಇಲ್ಲದಿರತಕ್ಕಂಥ ಜನ ಇರುತ್ತಾರೋ ಅಲ್ಲಿ ಕೇವಲ ಸರ್ಕಾರ ಒಂದೇ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಮ್ಮ ರಾಜ್ಯದ ಜನರು, ಅವರ ಸಂಸ್ಕೃತಿಯ ಮೂಲ ಬಹಳ ಉನ್ನತ ಮಟ್ಟದ್ದಾಗಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲಾಗಿದೆ, ಅದರಲ್ಲಿ ನಮ್ಮ ಸರ್ಕಾರದ ಕೆಲಸವು ಸಹ ಅಷ್ಟೇ ವಿಚಕ್ಷಣೆಯಿಂದ ಆಗಿದೆ. ಇನ್ನು ಪೊಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ, ಅಲ್ಲಿ ಕೆಟ್ಟವರು ಇರಬಹುದು, ಆದರೆ, ಸರ್ವೆಸಾಮಾನ್ಯವಾಗಿ ನಮ್ಮ ಪೊಲೀಸ್ ಇಲಾಖೆ ಬಹಳ ಉತ್ತಮವಾಗಿ ಕೆಲಸ ಮಾಡಿದೆ; ಎಲ್ಲಾ ಆವೇಶಕ್ಕೆ, ಅತಿಕ್ರಮಣಕ್ಕೆ ಹೋಗಿಲ್ಲ, ಎಂತಹ ಸಂದರ್ಭ ಬಂದರೂ ಪೊಲೀಸರೇ ಹೊಡೆಸಿ ಕೊಂಡಿದ್ದಾರೆಯೇ ಹೊರತು ಗುಂಡು ಹಾರಿಸುವುದಕ್ಕೆ ಹೋಗಿಲ್ಲ. ಇನ್ನು ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಇನ್ನು ಕೆಲವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಪೊಲೀಸರಿಗೆ ಆಗತಕ್ಕಂಥ ತೊಂದರೆ, ಪೊಲೀಸರಿಂದ ಆಗಿರತಕ್ಕಂಥ ಅನಾಚಾರದ ಬಗ್ಗೆ ಹೇಳಿದ್ದಾರೆ. ಅವುಗಳನ್ನು ನಾವು ಇವತ್ತು ನಿಗಾವಹಿಸಿ ನೋಡುತ್ತಿದ್ದೇವೆ. ಇವತ್ತು ಯಾರು ನಮ್ಮ ಸಮಾಜವನ್ನು ನಾವು ಇವತ್ತು ನಿಗಾವಹಿಸಿ ನೋಡುತ್ತಿದ್ದೇವೆ. ಇವತ್ತು ಯಾರು ನಮ್ಮ ಸಮಾಜವನ್ನು ರಕ್ಷಣೆ ಮಾಡಬೇಕೋ ಅವರಿಗೆ ಮೊದಲು- ನಾವು ಸಮಾಧಾನದಿಂದ ಇದ್ದೇವೆಂದಾದರೆ ಮಾತ್ರ ಅವರು ರಕ್ಷಣೆ ಮಾಡುತ್ತಾರೆಯೇ ವಿನ: ಇಲ್ಲದಿದ್ದರೆ ಮಾಡುವುದಿಲ್ಲ, ಅದಕ್ಕೋಸ್ಕರ ಆ ಬಗೆಗೆ ನಮ್ಮ ರಾಜ್ಯದಲ್ಲಿ ಮೊದಲನೇ ಬಾರಿಗೆ ಪೊಲೀಸರ ಮಕ್ಕಳಿಗೆ ಶಾಲೆಯನ್ನು ತೆರೆದಿದ್ದೇವೆ. ಈ ರೀತಿ ಪೊಲೀಸರ ಮಕ್ಕಳಿಗೆ ಯಾವ ರಾಜ್ಯದಲ್ಲೂ ಶಾಲೆ ತೆರೆದಿಲ್ಲ. ಈ ರೀತಿ ಶಾಲೆಯನ್ನು ಏಕೆ ತೆರೆದಿದ್ದೇವೆ ಎಂದರೆ- ದೊಡ್ಡದೊಡ್ಡ ಶ್ರೀಮಂತರ ಮಕ್ಕಳು ಐ.ಎಫ್.ಎಸ್, ಐ.ಎ.ಎಸ್. ಅಥವಾ ಐ.ಪಿ.ಎಸ್. ಮಾಡಬಹುದು, ಆದರೆ ಒಬ್ಬ ಪೊಲೀಸ್ ಪೇದೆ ಅವನ ಬಡತನಕ್ಕೆ ಅವನ ಮಗ ಅಥವಾ ಮಗಳನ್ನು ಕಾನ್ವೆಂಟ್ ಶಾಲೆಗೆ ಕಳುಹಿಸುವುದಕ್ಕೆ ಆಗುತ್ತದೆಯೇ? ಇದರಿಂದ ಅವರಿಗೋಸ್ಕರ? ನಮ್ಮ ರಾಜ್ಯದಲ್ಲಿ ವಿಶೇಷವಾದ ಶಾಲೆಯನ್ನು ಸ್ಥಾಪನೆ ಮಾಡಿದ್ದೇವೆ. ಇನ್ನು ಪೊಲೀಸರ ಹೌಸಿಂಗ್ ಬಗ್ಗೆ ಹೇಳುವುದಾದರೆ, ಬಹಳ ಸಲ ಕೆಲವು ಪೊಲೀಸರು ಸ್ಲಂಗಳಲ್ಲಿ ವಾಸ ಮಾಡುತ್ತಿರುತ್ತಾರೆ. ಅವರು ಇರತಕ್ಕಂಥ ವಾತಾವರಣವೇ ಅವರನ್ನು ಕೆಲವು ಸಲ ಇತರೇ ಮನುಷ್ಯರಂತೆ ವರ್ತಿಸುವುದಕ್ಕೆ ಬಿಡುವುದಿಲ್ಲ. ಅದಕ್ಕೋಸ್ಕರ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್ ಎಂದು ಮಾಡಿ ಈಗ ಸುಮಾರು ಶೇಕಡ 35-36 ರಷ್ಟು ಹೌಸಿಂಗ್ ಅವರಿಗೆ ಮಾಡಿದ್ದೇವೆ. ಶೇಕಡ 60-65 ವರೆಗೆ ಅವರಿಗೆ ವಸತಿಯ ಸೌಲಭ್ಯವನ್ನು ಕಲ್ಪಿಸಿಕೊಟ್ಟು, ಅವರ ಮಕ್ಕಳು ಶಾಲೆಗೆ ಹೋಗುತ್ತಿದ್ದು, ಅವರು ಸಮಾಧಾನದಿಂದ ಇದ್ದರೆ, ಅವರು ನಮ್ಮ ಸಮಾಜವನ್ನು ರಕ್ಷಣೆ ಮಾಡುವುದರಲ್ಲಿ ಇನ್ನೂ ಹೆಚ್ಚಿಗೆ ಯಶಸ್ವಿಯಾಗುತ್ತಾರೆ ಎನ್ನುವ ವಿಶ್ವಾಸದ ಮೇಲೆ ನಾವು ಮುಂದೆ ಹೋಗುತ್ತಿದ್ದೇವೆ. ಇನ್ನು ಬೆಂಗಳೂರು ಸಿಟಿಯಲ್ಲಿ ನಾವು, 'ಹೊಯ್ಸಳ' ಎಕ್ಸ್‌ಪೆರಿಮೆಂಟ್ ಪ್ರಾರಂಭ ಮಾಡಿದ ಮೇಲೆ ಎಷ್ಟೋ ಕಳ್ಳತನ, ದರೋಡೆ, ಚೈನುಗಳನ್ನು ಕಿತ್ತುಕೊಂಡು ಹೋಗುವುದು, ಇತ್ಯಾದಿ ಬಹಳ ಮಟ್ಟಿಗೆ ಕಡಿಮೆ ಆಗಿವೆ. ಈಗ ಇಲ್ಲವೇ ಇಲ್ಲ ಎಂದು

ಹೇಳುತ್ತಿಲ್ಲ. ಆದರೂ ಒಂದು ತರಹ ಭಯ ಕಳ್ಳತನ ಮಾಡುವವರಲ್ಲಿ ಇದೆ. ಇನ್ನು ಪಕ್ಕದ ರಾಜ್ಯದ ಯಾರನ್ನೋ ದೂರುತ್ತೇನೆಂದು ತಿಳಿಯಬಾರದು. ಪಕ್ಕದ ರಾಜ್ಯಗಳಿಂದ ಬರತಕ್ಕಂಥ Certain segments of terrorism. ಎಂದು ಕೋಲಾರ, ಪಾವಗಡ, ಬೀದರ್ ಪಕ್ಕದ ಗಡಿಭಾಗದ ಹಳ್ಳಿಗಳಲ್ಲಿ ಸ್ವಲ್ಪ ಹಿಂಸಾಚಾರ ಕೆಲವು ವ್ಯಕ್ತಿಗಳಿಂದ ನಡೆಯುತ್ತಿದೆ. ಆ ಹಿಂಸಾಚಾರವನ್ನು ನಡೆಸುವಂಥ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಬೆಳೆಯುವುದಕ್ಕೆ ನಾವು ಅವಕಾಶ ಕೊಟ್ಟಿಲ್ಲ. ಅದಕ್ಕೋಸ್ಕರ 'ಬಾರ್ಡರ್' ಏರಿಯಾ ಡೆವಲಪ್‌ಮೆಂಟ್ ಕಮಿಟಿ' ಎಂದು ಮಾಡಿ, ನಮ್ಮ ಅಡಿಶನಲ್ ಚೀಫ್ ಸೆಕ್ರೆಟರಿಯವರು ಹೋಗಿ, ಎಲ್ಲಿ ಶಾಲೆ ತೆರೆಯುಬೇಕು, ಎಲ್ಲಿ ಪೊಲೀಸ್ ಠಾಣೆ ಬೇಕು, ಎಲ್ಲಿ ರಸ್ತೆ ಸರಿಪಡಿಸಬೇಕು, ಇವೆಲ್ಲವುಗಳನ್ನೂ ಮಾಡಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆ, ಸಮಾಜದ ಸಂರಕ್ಷಣೆ ಇವತ್ತು ಆದಷ್ಟು ನಮ್ಮ ಮನಸ್ಸಿಗೆ ಸಮಾಧಾನ ಆಗುವ ಮಟ್ಟಿಗೆ ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಲವು ಸನ್ಮಾನ್ಯ ಸದಸ್ಯರುಗಳು ಈ ಪೊಲೀಸ್ ಇಲಾಖೆ ಬಗ್ಗೆ ಮಾತನಾಡಿರುವುದನ್ನು ನೋಟ್ ಮಾಡಿ ಕೊಂಡಿದ್ದೇನೆ. ಎಲ್ಲೋ ಕೆಲವು ಕೊಲೆಯಾಗಿರುವಂಥವು, ಅದರ ಬಗ್ಗೆ ಇನ್‌ವೆಸ್ಟಿಗೇಷನ್ ಆಗದೇ ಇರುವಂಥವು, ಅಥವಾ ಕೆಲವು ಕಡೆ ಬಾಂಬ್ ಸ್ಫೋಟ ಆಗಿರುವಂಥದ್ದಕ್ಕೆ ನೇರವಾಗಿ ಬೇರೆ ದೇಶದ ಕೈವಾಡವಿದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಆ ರೀತಿಯ ಕೈವಾಡಗಳು ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಇದೆ. ಈ ರೀತಿಯ ಕೈವಾಡಗಳು ಬಾಂಬೆಯಲ್ಲಿ ಬಹಳಷ್ಟು ಕೆಲಸ ಮಾಡುತ್ತಿದೆ. ನಾನು ಒಂದು ಸಲ ನನ್ನ ಸ್ನೇಹಿತರನ್ನು ಕರೆದುಕೊಂಡು ಎಂಟೈರ್ ಕೋಸ್ಟಲ್ ಏರಿಯಾವನ್ನು ನೋಡಿಕೊಂಡು ಬಂದೆವು. ಕರಾವಳಿ ಪ್ರದೇಶದಲ್ಲಿ ಕೋಸ್ಟಲ್ ಗಾರ್ಡ್ಸ್, ಎಂದು ಇರುತ್ತಾರೆ. ಈ ರೀತಿ ಕೇರಳದಲ್ಲಿ ಮತ್ತು ತಮಿಳುನಾಡಿನಲ್ಲಿ ಇವೆ. ಆದರೆ ನಮ್ಮಲ್ಲಿ 'ಕೋಸ್ಟಲ್ ಗಾರ್ಡ್ಸ್' ಎಂದು ಪೊಲೀಸ್ ಹಾಕಿಲ್ಲ. ಆದರೆ ಅದನ್ನು ನಮ್ಮ ರೆಗ್ಯೂಲರ್ ಪೊಲೀಸರೇ ಕಾರ್ಯ ನಿರ್ವಹಿಸುತ್ತಾರೆ. ಕರಾವಳಿ ಪ್ರದೇಶದಲ್ಲಿ 'ಕೋಸ್ಟಲ್ ಗಾರ್ಡ್ಸ್' ಅವಶ್ಯಕ ಏಕೆಂದರೆ ನಮ್ಮ Navy officer who is the chief admiral and who is in-charge of southern India, ಅವರ ಜೊತೆಗೆ ನನ್ನನ್ನು ಮತ್ತು ನನ್ನ ಸ್ನೇಹಿತರನ್ನು ಕರೆದುಕೊಂಡು ಹೋಗಿದ್ದೆ. ಅವರು ತೋರಿಸಿದ್ದಾರೆ. ಇಂತಿಂಥ ಕಡೆ ಬೊಂಬಾಯಿಯಂಥ ಅಪರಾಧಿಗಳು ಬಂದು ನೆಲೆಸುವುದಕ್ಕೆ ಅನುಕೂಲವಾಗುವಂಥ ಸ್ಥಳಗಳು ಇವು ಇವನ್ನೆಲ್ಲಾ ಗಾರ್ಡ್ ಮಾಡಬೇಕೆಂದು ಅದರ ಪ್ರಕಾರ, ಕಳೆದ we are going according to their advice. ಒಂದೂವರೆ ವರ್ಷದಲ್ಲಿ ಕಳವು ಆಗಿದ್ದಂಥ, ದರೋಡೆ ಆದಂಥ ಸುಮಾರು 28 ಕೋಟಿ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ರಿಕವರಿ ಮಾಡಿ ಸಂಬಂಧಪಟ್ಟವರಿಗೆ ತಲುಪಿಸಿದ್ದೇವೆ. ಇದಿಷ್ಟು ಕಾನೂನು ಮತ್ತು ಸಂರಕ್ಷಣೆಯ ವ್ಯವಸ್ಥೆ ಬಗ್ಗೆ ಆಯಿತು. ಇನ್ನು ಮನುಷ್ಯನಿಗೆ ಅನ್ನ, ನೀರು ಮತ್ತು ಸೂರು ಇವು ಮೂರು ಬಹಳ ಅವಶ್ಯಕವಾಗಿದೆ. ಇವು ಇಲ್ಲದಿದ್ದರೆ ಮನುಷ್ಯನಿಗೆ ಬಹಳ ಕಷ್ಟವಾಗುತ್ತದೆ. ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ - ಆಶ್ರಯ, ಇಂದಿರಾ ಆವಾಸ್, ಮತ್ತು ಅಂಬೇಡ್ಕರ್ ಈ ಮೂರು ಯೋಜನೆಗಳಡಿಯಲ್ಲಿ ಹಿಂದಿನ ಸರ್ಕಾರ ಮತ್ತು ನಮ್ಮ ಸರ್ಕಾರದಿಂದ ಎಷ್ಟೆಷ್ಟು ಮನೆಗಳನ್ನು ಯಾವ ಯಾವ ವರ್ಷಗಳಲ್ಲಿ ಕಟ್ಟಿಸಿದ್ದಾರೆ ಎನ್ನುವ ಕೆಲವಾರು ಅಂಕಿಅಂಶಗಳನ್ನು ಕೊಡುತ್ತೇನೆ. 1991-91ರಲ್ಲಿ 5179 ಮನೆಗಳು, 1992-93ರಲ್ಲಿ 7888 ಮನೆಗಳು, 1993-94ರಲ್ಲಿ

64894 ಮನೆಗಳು, 1994-95ರಲ್ಲಿ 77930 ಮನೆಗಳು, 1995-96ರಲ್ಲಿ 81387 ಮನೆಗಳು, 1996-97ರಲ್ಲಿ 1,26,730 ಮನೆಗಳನ್ನು ಕಟ್ಟಿಸಲಾಗಿದೆ ಮತ್ತು ಅದನ್ನು ಫಲಾನುಭವಿಗಳಿಗೆ ಕೊಡಲಾಗಿದೆ. ಈ ವರ್ಷ ಜನವರಿಯಿಂದ ಮಾರ್ಚ್ ತಿಂಗಳ ವರೆಗೆ ಒಂದು ಲಕ್ಷ ಮನೆಗಳನ್ನು ಕಟ್ಟಿಸಲಾಗಿದೆ. ಅದಕ್ಕೆ ನಾನು ಇದು ಮಾಡಬಹುದಾಗಿತ್ತು, ಮಾಡಬೇಕೆಂದು ಇಚ್ಛಿಪಟ್ಟಿದ್ದೇವೆ, ನಾವು ಈ ತರಹ ಯೋಜನೆ ಮಾಡಿದ್ದೇವೆಂದು ಅಂತೆಕಂತೆಗಳನ್ನು ಹೇಳುತ್ತಿಲ್ಲ. ಇದು ನಿಜವಾದ ಪರ್ಫಾರ್ಮೆನ್ಸ್ ಆಗಿದ್ದು ಇಷ್ಟು ಮನೆಗಳನ್ನು ಫಲಾನುಭವಿಗಳಿಗೆ ಕೊಟ್ಟಿದ್ದೇವೆ. ಮತ್ತು ಫಲಾನುಭವಿಗಳೇ ನಿಂತು ಮನೆಗಳನ್ನು ಕಟ್ಟಿಸಿರುವಂಥದ್ದಾಗಿದೆ. ಒಂದು ಯೂನಿಟ್ ಕಾಸ್ಟ್ ಮೊದಲು 13 ಸಾವಿರ ರೂ. ಇತ್ತು, ಆ ನಂತರ 15 ಸಾವಿರ ರೂ.ಗಳು ಆಯಿತು ಈಗ ಅದು ಒಂದು ಯೂನಿಟ್ ಕಾಸ್ಟ್ 20 ಸಾವಿರ ರೂ.ಗಳಿಗೆ ಫಿಕ್ಸ್ ಮಾಡಿದ್ದೇವೆ. ವಾಸಿಸುವುದಕ್ಕೆ ವಸತಿ ಇಲ್ಲದಿದ್ದಾಗ ಸ್ಲಂಗಳಲ್ಲಿ ಕಷ್ಟಪರಿಸ್ಥಿತಿಯಲ್ಲಿ ಜೀವನ ಮಾಡತಕ್ಕಂಥ ಆ ಮನುಷ್ಯರಿಗೆ ಸಾಮಾಜಿಕ ರೋಗಗಳು ಹುಟ್ಟಿಕೊಳ್ಳುತ್ತವೆ. ಪ್ರಾಣಿಗಳಂತೆ ಬದುಕತಕ್ಕಂಥ ಮನುಷ್ಯರಿಗೆ ಆಗ ಎಲ್ಲಾ ಸಾಮಾಜಿಕ ರೋಗಗಳು ಬರುತ್ತವೆ. ಸಾಮಾಜಿಕ ರೋಗಗಳು ಹುಟ್ಟದಂತೆ ತಡೆಯಬೇಕಾದರೆ, ಅವರ ಆರೋಗ್ಯವನ್ನು ರಕ್ಷಣೆ ಮಾಡುವುದಕ್ಕೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸಿಕೊಡುವುದು ಬಹಳ ಮುಖ್ಯ. ಅವರುಗಳಿಗೆ ಶುದ್ಧವಾದ ಕುಡಿಯುವ ನೀರು ಮತ್ತು ವಾಸಿಸುವುದಕ್ಕೆ ಮನೆ ಒದಗಿಸಿಕೊಟ್ಟರೆ ಬಹುಶ: ಆರೋಗ್ಯ ಇಲಾಖೆಯಲ್ಲಿ ಔಷಧಿಯನ್ನು ಖರೀದಿಸುವುದನ್ನು ಕಡಿಮೆ ಮಾಡಬಹುದು. These are all certain basic concepts. ಆದ್ದರಿಂದ ಶುದ್ಧವಾದ ಕುಡಿಯುವ ನೀರು, ವಾಸಿಸುವುದಕ್ಕೆ ಒಂದು ಮನೆ, ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಇಷ್ಟು ಮಾಡಿದರೆ ಸಾಕಿತ್ತು. ನಾವು ಎಷ್ಟು ಇದಕ್ಕೆ ಖರ್ಚು ಮಾಡಿದ್ದೇವೆ? ಇದಕ್ಕೆ ಏನು ಖರ್ಚು ಮಾಡಿದ್ದೇವೆ ಎಂದು ಹೇಳುವುದು ಬೇಕಾಗಿರಲಿಲ್ಲ. ಮೊದಲನೇ 10 ವರ್ಷದಲ್ಲಿ 'ಚೈನಾ' ದೇಶವು ತನ್ನ ಪ್ರಜೆಗಳಿಗೆ ಏನು ಮಾಡಿತು ಎಂಬುದನ್ನು ಇಲ್ಲಿ ಗಮನಿಸಬಹುದು. ನಾನು ಸ್ವತ: 2-3 ಸಲ ಆ ದೇಶಕ್ಕೆ ಹೋಗಿ ನೋಡಿದ್ದೇನೆ. ಅವರ ಆದೇಶದಲ್ಲಿ ಮೊದಲು ಶೇಕಡ 100 ರಷ್ಟು ಅಕ್ಷರಜ್ಞಾನವುಳ್ಳವರನ್ನಾಗಿ ಮಾಡಿದ್ದಾರೆ, ಒಂದು ಹೊತ್ತಿನ ಊಟಕ್ಕೆ ಅಶ್ಯೂರೆನ್ಸ್ ಕೊಟ್ಟಿದ್ದಾರೆ, ಇವತ್ತು ಆ ದೇಶದಲ್ಲಿ 105 ರಿಂದ 108 ಕೋಟಿ ಜನ ಇದ್ದಾರೆ ಅವರೆಲ್ಲಾ ಒಂದು ಶಿಸ್ತಿನ ಆಧಾರದ ಮೇಲೆ ಬದುಕುತ್ತಿದ್ದಾರೆ. ಏಕೆಂದರೆ ಆ ಶಿಸ್ತು, ಆ ಕಾನೂನಿನ ಪರವಾಗಿ ಇರತಕ್ಕಂಥ ಗೌರವ ಮತ್ತು ಭಯ ಅವರ ಶಿಕ್ಷಣದಿಂದ ಬಂದಿದೆ. ಅವರು ನಂಬಿರತಕ್ಕಂಥ ಸಿದ್ಧಾಂತಗಳಿಂದ ಬಂದಿದೆ. ಅವರು ಹೋಗುತ್ತಾ ಇರತಕ್ಕಂಥ ದಾರಿಯಲ್ಲಿ ಬಂದಿದೆ. ಅವರು ಅವುಗಳನ್ನು ಆ ಪ್ರಾರಂಭದ ದಿನಗಳಲ್ಲಿ ಮಾಡಿರತಕ್ಕಂಥದ್ದಾಗಿದೆ. ಆದರೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ದೊರೆತ 50 ವರ್ಷಗಳ ನಂತರವೂ ಶೇಕಡ 40 ಭಾಗದ ಜನರನ್ನು ಅನಕ್ಷರಸ್ಥರನ್ನಾಗಿ ಇಟ್ಟುಕೊಂಡು ಒಂದು ಸುಭದ್ರ ಸರ್ಕಾರವನ್ನು ಕೊಡುತ್ತೇವೆಂದು ಹೇಳಿದರೆ, ಆ ದೇಶದ ಜನರು ನಮ್ಮನ್ನು ನೋಡಿನಗುವುದಿಲ್ಲವೇ? ನಮ್ಮ ದೇಶದಲ್ಲಿ ಇನ್ನೂ ಕೂಡ ಶೇಕಡ 40 ರಷ್ಟು ಜನ ಹೆಬ್ಬೆಟ್ಟು ಒತ್ತುವವರು ಇರುವಾಗ - ನೀವು ಚಂದ್ರಲೋಕಕ್ಕೆ ಹೋಗಿ ಮಾಡುವುದಾದರೂ ಏನು ಇದೆ? ಇನ್ನೂ ಕೂಡ ಶೇಕಡ 39 ರಷ್ಟು ಜನ ಒಂದು ಹೊತ್ತಿನ ಊಟದಲ್ಲಿ ಜೀವನ ಕಳೆಯುತ್ತಿರುವಾಗ ಇನ್‌ಫಾರ್ಮೇಷನ್ ಟೆಕ್ನಾಲಜಿಯಲ್ಲಿ ಬಹಳ ಮುಂದೆ ಹೋಗಿದ್ದೇವೆಂದು ಹೇಳಿದರೆ ಏನು

ಪ್ರಯೋಜನೆ? ಆದ್ದರಿಂದ ಈ ಸಂಬಂಧಗಳ ಬಗ್ಗೆ 'ಆಡಿಗರ' ಭಾಷೆಯಲ್ಲಿ ಹೇಳುವುದಾದರೆ "juxtaposition" ಎಂದು ಇಂಗ್ಲೀಷಿನಲ್ಲಿ ಹೇಳುತ್ತಾರೆ. "ತಾರತಮ್ಯಗಳನ್ನು ಹೊಂದಿಸತಕ್ಕಂಥ ಜ್ಞಾನ" ಅದು ಅಲ್ಲದೇ ಇರುವುದರಿಂದ ಎಲ್ಲರಿಗೂ ವಸತಿ ಒದಗಿಸುವುದಕ್ಕೆ ಇನ್ನೂ ಬಹಳ ಕೆಲಸವಿದೆ. ಕಳೆದ ಬಾರಿ ಸುಮಾರು 1 ಲಕ್ಷದ 25 ಸಾವಿರ ಮನೆಗಳನ್ನು ಕೊಟ್ಟಿದ್ದೇವೆ, ಈ ಸಲ ಮಾರ್ಚ್ ತಿಂಗಳ ಕೊನೆಯ ವೇಳೆಗೆ ಪುನಃ ಒಂದು ಲಕ್ಷದ 25 ಸಾವಿರ ಮನೆಗಳನ್ನು ಮಾಡುತ್ತೇವೆ.

3.40.ಪಿ.ಎಂ.

ಇನ್ನೂ ಇದೆ. ಎಲ್ಲಾ ಮುಗಿಯಿತು ಎಂದು ಹೇಳುವುದಿಲ್ಲ. ಅದರ ಕಡೆ ಗಮನ ಇದೆ. ಆದರೆ ಕಡೆ ನಾವು ಆಸಕ್ತಿ ವಹಿಸಿ ಕೆಲಸ ಮಾಡುವುದಕ್ಕೆ ತಯಾರಿದ್ದೇವೆ. ಅದೇ ರೀತಿಯಲ್ಲಿ ಈ ನಿರುದ್ಯೋಗದ ಬಗ್ಗೆ ಬಹಳ ಮಾತನಾಡುತ್ತಾರೆ. ಕೈಗಾರಿಕೆ ಮತ್ತು ವಾಣಿಜ್ಯದ ಬಗ್ಗೆ ಹೇಳುವುದಾದರೆ ನಾವು ಸಣ್ಣ ಕೈಗಾರಿಕೆಗಳನ್ನು ಮರೆತಿದ್ದೇವೆ, ಗುಡಿ ಕೈಗಾರಿಕೆಗಳಂತೂ ಇಲ್ಲ. ಕೈಗಾರಿಕೆಗಳು ಗುಡಿಗಳಾಗಿವೆಯೇ ಹೊರತು, ಗುಡಿ ಕೈಗಾರಿಕೆಗಳು ಇಂದು ಇಲ್ಲ. ಪ್ಲಾಸ್ಟಿಕ್ ಚಪ್ಪಲಿಗಳು ಚಪ್ಪಲಿ ಮಾಡುವವನು ಸತ್ತ, ಪ್ಲಾಸ್ಟಿಕ್ ಕೊಡಗಳು ಬಂದು ಕುಂಬಾರ ಸತ್ತ; ಅಲ್ಯೂಮಿನಿಯಂ ಕಿಟಕಿಗಳು ಬಂದು ಬಡಗಿ ಸತ್ತ, ಟಾಟಾ ಕಂಪನಿ, ಬಿರ್ಲಾ ಕಂಪನಿಯವರು, ಮಲ್ಟಿ ನ್ಯಾಷನಲ್ ಕಂಪನಿಯವರು ಬಂದು ಇವತ್ತು ನಿಮ್ಮ ನೇಗಿಲು ಎಲ್ಲಾ ಮಾಡುತ್ತಿರುವುದರಿಂದ ಕಮ್ಮಾರರು ಸತ್ತರು. ನಮ್ಮ ಊರಿನಲ್ಲಿಯೂ ಸಹ ಒಬ್ಬ ಕಮ್ಮಾರ ಇದ್ದ, ಅವನು ಸತ್ತ ಮೇಲೆ ಅವನ ಮಕ್ಕಳು ಯಾರು ಕಮ್ಮಾರ ಕೆಲಸವನ್ನು ಮಾಡುತ್ತಿಲ್ಲ. ಇದೆಲ್ಲಾ ನಿಮ್ಮೆಲ್ಲರ ಗಮನಕ್ಕೆ ಬಂದಿದೆ. ಆದರೆ ಗುಡಿ ಕೈಗಾರಿಕೆಗಳು, ಸಣ್ಣ ಸಣ್ಣ ಕೈಗಾರಿಕೆಗಳು ಹೇಗೆ ಸಾಯಿತ್ತಿವೆಂದರೆ ಒಂದು ಸಣ್ಣ ಗುಂಡು ಸೂಜಿಯನ್ನು ಮಾಡುವುದಕ್ಕೆ ಅಮೇರಿಕನ್ ಕಂಪನಿಯವರು ಬಂದರೆ, ನಮ್ಮ ಕರ್ನಾಟಕದಲ್ಲಿರತಕ್ಕಂತಹ ಬಿಜಾಪುರದ ಇಂಡಸ್ಟ್ರೀಯ ಎಸ್ಟೇಟ್‌ನಲ್ಲಿ ಗುಂಡು ಸೂಜಿಯನ್ನು ತಯಾರು ಮಾಡಿದರೆ ಯಾರು ತೆಗೆದುಕೊಳ್ಳುತ್ತಾರೆ.? ಯಾರೂ ತೆಗೆದುಕೊಳ್ಳುವುದಿಲ್ಲ. ಮುಖಕ್ಕೆ ಹಾಕುವಂತಹ ಪೌಡರೆ ಮಾಡುವುದಕ್ಕೆ, ಲಿಫ್‌ಸ್ಟಿಕ್ ಮಾಡುವುದಕ್ಕೆ, ಸಾಮಾನ್ಯ ಜನರು ಬಳಕೆ ಮಾಡುವಂತಹ ಸೋಪು, ಹಲ್ಲುಪುಡಿ ಎಲ್ಲಾದ್ದಕ್ಕೂ, ಆಲುಗೆಡ್ಡೆಯ ಚಿಪ್ಸ್ ಮಾಡುವುದಕ್ಕೆ ಮಲ್ಟಿ ನ್ಯಾಷನಲ್ ಕಂಪನಿಗಳು ಬಂದು, ಮಾನ್ಯ ಯಡಿಯೂರಪ್ಪನವರೇ, ನಾವು, ನೀವು ಚಿಕ್ಕವರು ಆಗಿದ್ದಾಗ ಚಿಪ್ಸ್, ಟಿಫ್ಸ್ ಗೊತ್ತೇ ಇರಲಿಲ್ಲ. ಈಗ ಎಲ್ಲದ್ದಕ್ಕೂ ಮಲ್ಟಿ ನ್ಯಾಷೆನಲ್ ಕಂಪನಿಗಳು ಬಂದು ನಮ್ಮ ಕೈಗಾರಿಕೆಗಳು ಸಾಯುತ್ತಿರುವಾಗ ಹೇಗೆ are you going to save them? ಈಗ ಕೆಲವು ಕೋ ಸೆಕ್ಟರ್‌ನಲ್ಲಿ, ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಬೇಕು. ಪವರ್ ಜನರೇಷನ್‌ಗೆ ಬೇಕು. ನಮ್ಮ ಸ್ಟೀಲ್ ಪ್ರೊಡಕ್ಷನ್ ಇಂಪ್ರೂವ್ ಮಾಡುವುದಕ್ಕೆ ಬೇಕು. infra-structure development Airports development ಮೂಲಭೂತವಾದಂತಹ ಸೌಲಭ್ಯಗಳನ್ನು ಡೆವಲಪ್‌ಗೆ ಬೇಕು. ಆದರೆ ಎಲ್ಲದ್ದಕ್ಕೂ ಇವತ್ತು ಅವರು ಬಂದು ಮಾಡಬೇಕೆಂದು ಹೇಳಿ 45 ವರ್ಷ ಪೂರ್ವಕಡೆಗೆ ಹೋಗಿ ಎಂದು ಮಾಡಿ, ಈಗ 5 ವರ್ಷಗಳಿಂದ ಈಚೆಗೆ ಪಶ್ಚಿಮ ಕಡೆಗೆ ಹೋಗಿ ಎಂದು, ಈಗ ಯಾವ ಕಡೆಗೆ ಉತ್ತರಕ್ಕೆ ಹೋಗಬೇಕೋ, ದಕ್ಷಿಣಕ್ಕೆ ಹೋಗಬೇಕೋ ಎಂದು ಎಲ್ಲಿಗೂ ಹೋಗದೇ ಇರುವಂತಹ ಪರಿಸ್ಥಿತಿಯ ಬಂದಿದೆ. ನಾಲ್ಕು

ಕಡೆಗಳಲ್ಲಿಯೂ ಕೈ ಕಂಬ ಇದೆ ಯಾವ ಕಡೆಗೆ ಹೋಗಬೇಕೆಂದು ಗೊತ್ತಿಲ್ಲ. ಇವತ್ತು ತಮಗೆ ಯಾವ ಕಡೆಗೆ ಹೋಗಬೇಕೆಂದು ಹೇಳುವವರು ಯಾರದರೂ ಗೊತ್ತಿದ್ದರೆ, ಈ ದೇಶವನ್ನು ಉಳಿಸುತ್ತೇವೆಂದರೆ, ನಾಳೆ ದಿವಸ ಶ್ರೀ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿ ಈ ಎಲ್ಲಾ ಗೊಂದಲಗಳಿಂದ ನಾನು ಒಂದು ಸರಿಯಾದ ದಾರಿಗೆ ಈ ದೇಶದವರನ್ನು ತೆಗೆದುಕೊಂಡು ಹೋಗುತ್ತೇನೆಂದರೆ ನಮ್ಮದ್ದು ಏನೂ ಅಭ್ಯಂತರವಿಲ್ಲ. ದಾರಿಯನ್ನು ತಪ್ಪಿಸಿದವರು ಯಾರು? ಯಾವ ಐತಿಹಾಸಿಕ ಕಾರಣಗಳಿಂದ, ಯಾರ ಒಂದು ದೋಷದಿಂದ ಈಗ ಈ ರೀತಿಯಾಯಿತು ಎಂದು ಹುಡುಕುವುದಲ್ಲ. ನೀವು ತಿಪ್ಪೆಯನ್ನು ಹುಡುಕುತ್ತಾ ಎಷ್ಟು ಕರಡಿದರೂ ಅಷ್ಟೇ ಸಗಣಿಯ ವಾಸನೆಯೇ ಬರುತ್ತದೆ. ಅದನ್ನು ಹುಡುಕುವುದಲ್ಲ. ಇದಕ್ಕೆ ಪರಿಹಾರ ಏನು? ನಮಗೆ ದಾರಿಯನ್ನು ತೋರಿಸುವಂಥವರು ಯಾರಿದ್ದಾರೆ? ಅವರು ಬರಲಿ. ದಾರಿ ತೋರಿಸತಕ್ಕಂತಹ, ಈ ದೇಶಕ್ಕೆ ಒಂದು ಮಾರ್ಗವನ್ನು ಕಂಡು ಹಿಡಿಯುತಕ್ಕಂತಹ ಪುಣ್ಯಾತ್ಮ ಯಾರೇ ಬರಲಿ ಅದಕ್ಕೆ ನಾವು ವೈಚಾರಿಕವಾಗಿ ವಿರೋಧವಿಲ್ಲ. ರಾಜಕೀಯವಾಗಿ ಅಲ್ಲಿ ಇಲ್ಲಿ ಸಣ್ಣ ಉದಾಹರಣೆಯನ್ನು ಕೊಟ್ಟು ಹೇಳಬಹುದು ಅದನ್ನು ತಪ್ಪಾಗಿ ತಿಳಿದುಕೊಂಡು ಕೆಲವರು ಗಲಾಟೆಯನ್ನು ಮಾಡಿರಬಹುದು. ಅದಲ್ಲ. Basically, our party is concerned about what is next and who has to guide us? ಇವತ್ತು. ಮಹಾತ್ಮಗಾಂಧಿಜೀಯಂಥರು ಇಲ್ಲ, ಮಾನ್ಯ ಜಯ ಪ್ರಕಾಶ್ ನಾರಾಯಣ ನಂಥವರು ಇಲ್ಲಿ ಯಾರೂ ಇಲ್ಲ. ಇದು ಒಬ್ಬರಿಂದ ಆಗಲಿಲ್ಲ. ಆ ರೀಲೆಯಾಗಿ ನೋಡುವಾಗ ವಸತಿ ಮತ್ತು ವಾಣಿಜ್ಯ ಇಲಾಖೆಯ ಬಗ್ಗೆ ಒಂದೇ ಒಂದು ಲಿಸ್ಟ್‌ನ್ನು ಓದುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇನ್‌ವೆಸ್ಟ್‌ಮೆಂಟ್ ಯಾರ್‍ಯಾರದು ಬಂದಿದೆ ಅಂದರೆ Tayota I phase Rs. 600 Crores, TVS suzuki Scooters Rs. 150 Crores, volvo I phase Rs. 300 Crores, Telco Rs. 350 Crores, Leela International convention centre Rs. 300 Crors, Iindal Vijayanagar Fertilizers Rs. 1000 crores, Mukunds Steels Rs. 350 Crores, MICO Rs. 300 Crores, Infosys Rs. 150 Crores, wipro Rs. 300 Crores, HPCL oil pipeline between Bangalore and Mangalore Rs. 670 Crores. ನಾನು ಹೇಳುತ್ತಿರುವುದು ಆಗಿರುವುದು. ಆಗುತ್ತದೆ, ಆಗಬಹುದಾದ ಯೋಜನೆಗಳೆಂದು ಅಲ್ಲ. Rs. , Crore investment is already here in Karnataka. Those who want to see it, may see it, But ಇದರ ಕಾನ್ಸಿಕ್ವೆನ್‌ಷಿಯಲ್ ಇನ್‌ವ್ರೆಸ್ಟ್‌ಮೆಂಟ್ may be Rs. 35000 crores. ಅದನ್ನು ನಾನು ಹೇಳುತ್ತಿಲ್ಲ. 35000 ಕೋಟಿ ರೂಪಾಯಿಗಳು, 500,00 ಕೋಟಿ Actual money invested in these industries. ರೂಪಾಯಿಗಳು ಬಂತು ಎಂದು ಹೇಳುತ್ತಿಲ್ಲ. ಈ ಇಂಡಸ್ಟ್ರೀರಿಸಣ್ಣ ಪುಟ್ಟ ancilliaries ಅವು ಇವು ಆದರೂ ಕೂಡ ಐದು ಲಕ್ಷ ಜನರಿಗೆ ಕೆಲಸವನ್ನು ಕೊಡತಕ್ಕಂತಹ ಸಂಭವ ಇದೆ. ನಮ್ಮ Unemployed army is such a huge army. ಅದಕ್ಕೆ ನಾವು ಇವತ್ತು ಏನಾದರೂ ಬೇಸಿಕ್ ಆಗಿ ನಮ್ಮ ನಿರುದ್ಯೋಗಿಗಳಿಗೆ ಏನಾದರೂ ಕೆಲಸವನ್ನು ಕೊಡುವಂಥ ಆಲೋಚನೆಯನ್ನು ಮಾಡದೇ ಇದ್ದರೆ ಅವರು ಐ.ಎಸ್.ಐ.ಗೆ ಗುರಿಯಾಗುತ್ತಾರೆ. ಅವರು ಪೀಪಲ್ಸ್ ವಾರ್‌ಗೂಪ್‌ಗೆ ಗುರಿಯಾಗುತ್ತಾರೆ. ಅವರು ಕಾಶ್ಮೀರದ ಉಗ್ರಗಾಮಿಗಳು ಗುಂಪಿಗೆ ಬಲಿಯಾಗುತ್ತಾರೆ. ಅಥವಾ ಬಹಳ ದೊಡ್ಡ ಮಾರ್ಕ್ಸ್‌ನ ಹೆಸರಿನಲ್ಲಿ

ಹಿಂಸಾಚಾರಿಗಳಾಗುವುದಕ್ಕೆ ಹೋಗುತ್ತಾರೆ. ಏಕೆಂದರೆ, because of this basic reason. ಏನೂ ಕೆಲಸ ಇಲ್ಲ. ಹಳ್ಳಿಯಲ್ಲಿ ಹುಟ್ಟಿರುತ್ತಾರೆ. ಕೆಲಸಕ್ಕೆ ಎಂದು ಮೊದಲು ದಾವಣಗೆರೆ ಬರುತ್ತಾರೆ ಅಲ್ಲಿ ಕೆಲಸ ಸಿಗುವುದಿಲ್ಲ. ಕೊನೆಗೆ ಬೆಂಗಳೂರಿಗೆ ಬರುತ್ತಾರೆ ಇಲ್ಲಿಯೂ ಸಹ ಕೆಲಸ ಸಿಗುವುದಿಲ್ಲ ಬೊಂಬಾಯಿಗೆ ಹೋಗುತ್ತಾರೆ ತಕ್ಷಣ ಈ ರೀತಿಯಾದಂತಹ ಕೆಲವು ಜನರು ಅವರನ್ನು ಎಂಪ್ಲಾಯಿ ಮಾಡುವಂಥವರು ಸಿಕ್ಕುತ್ತಾರೆ. ನಿರುದ್ಯೋಗಿಗಳ ಬಗ್ಗೆ ಯೋಜನೆಯನ್ನು ಮಾಡುವಾಗ ಈ ಇನ್‌ವೆಸ್ಟ್‌ಮೆಂಟ್‌ನ್ನು ಓದಿದೆ. ದಿಸ್ ಈಸ್ ನೋ ಆ್ಯನ್ಸರ ಟುದಿ ಕಂಟ್ರಿ ಇದರಲ್ಲಿ 5 ಲಕ್ಷ ಜನರಿಗೆ ಕೆಲಸ ಸಿಗಬಹುದು. ಆದರೆ This is no answer for the couting. ಇದಕ್ಕೆ ನಾವು ಏನಾದರೂ ಒಂದು ಹೊಸ ವಿಧಾನವನ್ನು ಚೈನ್‌ದಲ್ಲಿ ದೇಶದಲ್ಲಿ ಯಾವ ರೀತಿಯಲ್ಲಿದೆಯೋ ಹಾಗೆಯೇ ಅಂದರೆ ಪಾಲಿಟಿಕ್ಸ್ ಬೇರೆ, Completely contrulled democracy. ನಮ್ಮದ್ದು absolutely uncontrolled. ಇಂಡಸ್ಟ್ರೀಯಲ್ ಗ್ರೋತ ಬಗ್ಗೆ ಹೇಳುವಾಗ ಬೆಂಗಳೂರಿನಲ್ಲಿ ಮೊನ್ನೆಯ ದಿವಸ ರತನ ಟಾಟಾರವರು ಒಂದು ಭಾಷಣವನ್ನು ಮಾಡಿ ಎಲ್ಲಾ ಸಾಫ್ಟವೇರ್ ಇಂಡಸ್ಟ್ರೀ, ಎಲ್ಲಾ ವೈಜ್ಞಾನಿಕ ಸಂಸ್ಥೆಗಳು, ವೈಜ್ಞಾನಿಕ ಉದ್ಯಮಗಳೆಲ್ಲಾ ಹೈದರಬಾದ್‌ಗೆ ಶಿಫ್ಟವಾಗುತ್ತದೆಂದು ಹೇಳಿದರು. ಅವರು ಹೇಳಿರುವಂಥದ್ದು ಸರಿಯಾದುದು ಅಲ್ಲ. ಎಲ್ಲೋ ಅವರಿಗೆ ಯಾವುದೋ ಒಂದು ವಿಷಯದಲ್ಲಿ ಮನಸ್ಸು ಸರಿಯಾಗಿಲ್ಲವೆಂದು ಹೇಳಿರಬಹುದು. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಸಿಟಿ ಈ ವತ್ತು ಓವರ್ ಪಾಪ್ಯುಲೇಷನ್ ಆಗಿದೆ ಒತ್ತಡವಿದೆ. ಸಿವಿಕ್ ಕಮ್ಯೂನಿಟಿ ಬಗ್ಗೆ, ಟ್ರಾನ್ಸ್‌ಪೋರ್ಟೇಷನ್ ಬಗ್ಗೆ ಬಹಳ ಒತ್ತಡ ಇದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಬೇರೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂದು ಮಾಡಿದ್ದೇವೆ. ಮೆಗಾಸಿಟಿ ಪ್ರಾವಿಷನ್ಸ್ ಎಲ್ಲಾ ಮಾಡಿದ್ದೇವೆ. ಕೆಲಸ ನಡೆಯುತ್ತಿದೆ. ಆದರೆ ಎಲ್ಲಾ ಆಗಿದೆ ಎಂದು ಹೇಳುತ್ತಿಲ್ಲ. ಇನ್ನೂ ಫ್ಲೈ ಓವರ್ಸ್ ಆಗಬೇಕು, ರೈಲ್ ಸಿಸ್ಟಂ ಮಾಡಬೇಕು ಇವೆಲ್ಲಾ ಯೋಜನೆಗಳು ಇವೆ. ಆದರೆ ಇವತ್ತು ಇಂಡಸ್ಟ್ರೀಯಲ್ ಗ್ರೋತ್ ಬಗ್ಗೆ ಅದರ ಹಿನ್ನೆಲೆಯಲ್ಲಿ ನಾನು ಹೇಳುವುದಾದರೆ, industrial growth has come down from previous five-year plan. Industrial growth, ಅದು 6.2 ಇದ್ದದ್ದು 5.3ಕ್ಕೆ ಬಂದಿದೆ, ಗ್ರೋತ್ ಕಡಿಮೆಯಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ನಮ್ಮ ಕಾರಣದಿಂದ ಎಂದು ಅಲ್ಲ. ಅದಕ್ಕೆ ಹಲವಾರು ಕಾರಣಗಳಿವೆ. ಆದುದರಿಂದ ನಾವು ಇವತ್ತು, ಈ ಸದನ ಇಡೀ 5 ಕೋಟಿ ಕನ್ನಡಿಗರ ಸಮಗ್ರ ಸುಧಾರಣೆಗೆ ಏನು ಮಾಡಬೇಕು, ಬೆಂಗಳೂರಿನಲ್ಲಿ ಏನು ಮಾಡಬೇಕು, ಹುಬ್ಬಳ್ಳಿಯಲ್ಲಿ ಏನು ಮಾಡಬೇಕು ಎಂಬ ಬಗ್ಗೆ ವಿಚಾರ ಮಾಡಬೇಕಾಗಿದೆ. ಕೆಲವರು ಉತ್ತರ ಕರ್ನಾಟಕ ಎಂದು ಹೇಳುತ್ತಾರ; ಉತ್ತರ ಕರ್ನಾಟಕ ಎಂದು ಜಪ ಮಾಡುತ್ತಾ ಕುಳಿತ್ತಿದ್ದಾರೆ. ನಾನು ಯಾವ ಕರ್ನಾಟಕದವನು? ನೀವು ಯಾವ ಕರ್ನಾಟಕದವರು? ನೀವೇನು ಕರ್ನಾಟಕಕ್ಕೆ ಸೇರಿಲ್ಲವೆ? ಉತ್ತರ ಕರ್ನಾಟಕ ಒಂದಾನೊಂದು ಕಾಲಕ್ಕೆ ಐತಿಹಾಸಿಕವಾಗಿ ಬೇರೆ ಬೇರೆ ರಾಜ್ಯಗಳಿಗೆ ಸೇರಿತ್ತು. ಹೈದರಾಬಾದಿಗೆ ಅಷ್ಟು ಸೇರಿತ್ತು, ಮದ್ರಾಸಿಗೆ ಅಷ್ಟು ಸೇರತ್ತು, ಬೊಂಬಾಯಿಗೆ ಅಷ್ಟು ಸೇರಿತ್ತು. ನಾವು ಹಳೇ ಮೈಸೂರಿನಲ್ಲಿ ಮಹಾರಾಜರ ಬೆನವಲೆಂಟ್ ಕಿಂಗ್ ಇದ್ದ. ವಿಶ್ವೇಶ್ವರಯ್ಯನವರಂಥ ದಿವಾನರು ಇದ್ದರು. ಸರ್ ಮಿರ್ಜಾ ಇಸ್ಮಾಯಿಲ್ ಅಂಥವರು ಇದ್ದರು. ಆ ಕಾರಣದಿಂದ ಅಲ್ಲೆಲ್ಲಾ ನೀರಾವರಿ ಅವು ಇವು ಡೆವಲಪ್ ಆದವು. ಇದರಲ್ಲಿ ಎಲ್ಲಾ ಪ್ಲಾನ್

ಮಾಡಿ ಮಾಡಿದ್ದಾರೆ. ಶ್ರೀ ಖರ್ಗೆಯವರು ಗುಲ್ಬರ್ಗದವರು ಎಂದು ಗುಲ್ಬರ್ಗ ಹಿಂದೆ ಉಳಿದಿರಬೇಕೆಂದು ಮಾಡುತ್ತೇವೆಯೆ? ಯಾರಾದರೂ ಹಾಗೆ ಮಾಡಿದ್ದಾರೆಯೆ? entire irrigational investment in North Karnataka, industrial investment right from telco, sugki ಇವೆಲ್ಲ ಇವತ್ತು ಉತ್ತರ ಕರ್ನಾಟಕದಲ್ಲಿವೆ. ಉತ್ತರ ಕರ್ನಾಟಕ ಎಂದು ಬೇರೆ ಯೋಚನೆ ಮಾಡಬಾರದು. ಯಾರೇ ಆಗತ್ತಾ 2-3 ಕರ್ನಾಟಕ ಎಂದು ಆಲೋಚನೆ ಮಾಡಬಾರದು. ಕೊಡಗು ಬೇರೆ ಎಂದು, ಉತ್ತರ ಕರ್ನಾಟಕ ಬೇರೆ ಎಂದು ಆಲೋಚನೆ ಮಾಡಬಾರದು. ಎಲ್ಲಿ ಡಿಫಿಷಿಯನ್ಸಿ ಇದೆ, ಎಲ್ಲಿ ಕೆಲಸ ಆಗಿಲ್ಲ ಅಲ್ಲಿ ಕೆಲಸ ಮಾಡಬೇಕೆಂದು ಹೇಳಬೇಕೇ ಹೊರತು ಅದು ಇದು ಎಂದು ಭೇದಭಾವ ಮಾಡಬಾರದು. ಕೆಲವರು ಇದನ್ನೇ ಮಂತ್ರವಾಗಿ ಇಟ್ಟುಕೊಂಡು, ಅವರು ಚೆನ್ನಾಗಿದ್ದರೆ ಪ್ರಪಂಚ ಚೆನ್ನಾಗಿದೆ ಎಂದು ಹೇಳುತ್ತಾರೆ. ಅವರಿಗೆ ಸರಿಯಿಲ್ಲ ಎಂದು ಈ ರೀತಿ philosophising personal ಆದುದರಿಂದ ಅಂಥವರ ಬಗ್ಗೆ ಯಾರೂ ಈ ಸದನದಲ್ಲಿ ಕಿವಿಗೆ ಹಾಕಕೂಡದು.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ನಮಗೆ ಸಮಗ್ರ ಕರ್ನಾಟಕದ ಎಲ್ಲಾ ಭಾಗಗಳು ಏಳಿಗೆ ಆಗಬೇಕು. ಅದಕ್ಕೋಸ್ಕರ ಒಂದು ಭಾಗದವರು ಇನ್ನೊಂದು ಭಾಗದವರ ಜೊತೆ ಸ್ಯಾಕ್ರಿಫೈಸ್ ಮಾಡಿಕೊಂಡು ಹೋಗಬೇಕೇ ಹೊರತು, ಕೈಗಾರಿಕಾ ಉದ್ದಿಮೆಗಳ ಇನ್‌ವೆಸ್ಟ್‌ಮೆಂಟ್ ದೃಷ್ಟಿಯಿಂದ Information industry, foreign direct investment, approvalsಗಳಲ್ಲಿ ಇವತ್ತು ನಾವು ಯಾರಿಗೂ ಕಡಿಮೆ ಇಲ್ಲ, ಇದೇ ರೀತಿ ಮುಂದೆ ಹೋಗುತ್ತೇವೆ, ಅದಕ್ಕೆ ಬೇಕಾದ ಅನುಮತಿಯನ್ನು ನಿಮ್ಮನ್ನು ಕೇಳಿ ಪಡೆದು ಮುಂದೆ ಹೋಗುತ್ತೇವೆ. ಇದು ಇಂಡಸ್ಟ್ರೀಯಲ್ ಗ್ರೋತ್ ಬಗ್ಗೆ ಆಯಿತು.

ಇನ್ನು ಶಿಕ್ಷಣ: ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಮೊದಲ ಆದ್ಯತೆ ಕೊಟ್ಟು ಹಳ್ಳಿಗಾಡಿನ ಹೆಂಗಸರಿಗೆ ಲ್ಯಾಟ್ರಿನ್ಸ್ ಕಟ್ಟಿಸಿಕೊಡಿ, ಕುಡಿಯುವುದಕ್ಕೆ ಶುದ್ಧವಾದ ನೀರನ್ನು ಕೊಡಿ ಎಂದು ಹೇಳಿದ ಆ ಪುಣ್ಯಾತ್ಮ. ನಾವು ಮಾಡುತ್ತಾ ಮಾಡುತ್ತಾ ಇಡೀ ದೇಶವನ್ನೇ ಲ್ಯಾಟ್ರಿನ್ ಮಾಡಿದ್ದೇವೆ. ಇದನ್ನು ನಾವು ಆತ್ಮಪೂರ್ವಕವಾಗಿ ಒಪ್ಪಿಕೊಳ್ಳಬೇಕು. ಎಷ್ಟು ಗಲೀಜು ಇದೆ ಈ ದೇಶದಲ್ಲಿ, ಎಷ್ಟು ಕೊಳಕು ಗುಂಡಿಗಳು ಇವೆ, ಎಷ್ಟು ಹೊಲಸು ಇದೆ. ಎಂತಂಥ ಹೊಸ ಹೊಸ ಕ್ರಿಮಿಗಳು ಹುಟ್ಟುತ್ತಿವೆ; ಅದನ್ನು ಇವತ್ತು ನಾವು ನೋಡಬಾರದೇ? ಇದು ಎಲ್ಲರ ಸಮಸ್ಯೆ. ನಮ್ಮ ನಿಮ್ಮ ಪಕ್ಷ ಎಂದು ಅಲ್ಲ. ಇವತ್ತು ಭಾರತದ ಬಗ್ಗೆ ಚಿಂತನೆ ಇರತಕ್ಕವರು ಪ್ರತಿಯೊಬ್ಬರೂ ಈ ಬಗ್ಗೆ ಆಲೋಚನೆ ಮಾಡಬೇಕು. ಆದುದರಿಂದ ಶಿಕ್ಷಣದ ಬಗ್ಗೆ ನಾವು ಹಿಂದಿನ ಯಾವುದನ್ನೂ ಹೋಲಿಕೆ ಮಾಡುವುದಕ್ಕೆ ಹೋಗುವುದಿಲ್ಲ, ಹೇಳುವುದಕ್ಕೆ ಹೋಗುವುದಿಲ್ಲ. ಹೇಳಿದ ಕೂಡಲೇ ತಪ್ಪು ತಿಳಿದುಕೊಳ್ಳುತ್ತಾರೆ. ಇವತ್ತು ಹೇಳುವುದಕ್ಕೆ ಆಗದೆ ಇರತಕ್ಕ ರಾಜಕೀಯ ಸ್ಥಿತಿ ಇದೆ. 1992 ರಿಂದ 1995ರವರೆಗೆ 1557 ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿದ್ದರೆ 1995ರಿಂದ 1998ರವರೆಗೆ 2828 ಕಟ್ಟಡಗಳನ್ನು ಕಟ್ಟಿಸಲಾಗಿದೆ. ಇವುಗಳಲ್ಲಿ ಹೊಸದಾಗಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಶಾಲಾ ಕೊಠಡಿಗಳ ಸಂಖ್ಯೆ 3911 ರಿಂದ 18693 ವರೆಗೆ ಏರಿದೆ ಧರ್ಮಸಿಂಗ್ ಅವರೇ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ 30486 ಇದ್ದದ್ದು ಈಗ 55510 ಆಗಿದೆ. ಶಾಲೆ ಬಿಡುವ

ಮಕ್ಕಳ ಪ್ರಮಾಣ ಕಡಿಮೆಯಾಗಿದೆ. ಡ್ರಾಪೌಟ್ಸ್ ಕಡಿಮೆಯಾಗಿದೆ. ಅದು ಶೇಕಡ 26.69 ರಿಂದ 16.5ಕ್ಕೆ ಇಳಿದಿದೆ. ಅಕ್ಷರಸ್ಥರ ಪ್ರಮಾಣ 1992ರಲ್ಲಿ ಶೇಕಡ 56 ಇದ್ದದ್ದು 1997ರಲ್ಲಿ ಶೇಕಡ 65ಕ್ಕೆ ಏರಿದೆ, ಇದೇ ಸಂದರ್ಭದಲ್ಲಿ ಮಾನ್ಯ ಶಿಕ್ಷಣ ಸಚಿವರ ಬಗ್ಗೆ ಅತ್ಯಂತ ಹೆಮ್ಮೆಯಿಂದ ಒಂದು ಮಾತು ಹೇಳುತ್ತೇನೆ. ಇನ್ನು ಎರಡು ವರ್ಷಗಳ ನಮ್ಮ ಅವಧಿಯಲ್ಲಿ ಇದನ್ನು ಶೇಕಡ 90ಕ್ಕೆ ಹೆಚ್ಚು ತೆಗೆದುಕೊಂಡು ಹೋಗಬೇಕು. 1999ರೊಳಗೆ ಅಕ್ಷರಸ್ಥರ ಪ್ರಮಾಣ ಕೇರಳಕ್ಕಿಂತ ಅಥವಾ ಕೇರಳದಷ್ಟು ಆಗಬೇಕು. ಅವರದ್ದು ಶೇಕಡ 92-93 ಇದೆ. ನಮ್ಮದು ಶೇಕಡ 65 ಇರತಕ್ಕದ್ದನ್ನು ಕೊನೇಪಕ್ಷ 90ಕ್ಕಾದರೂ ತೆಗೆದುಕೊಂಡು ಹೋಗಬೇಕು. ಯಾರು ಏನೇ ಅಡ್ಡಿ ಬಂದರೂ you should rule ont and do this job, ಆ ಒಂದು ತೀರ್ಮಾನವನ್ನು ನಾವು ಮಾಡಿದ್ದೇವೆ. ಆ ಪ್ರಕಾರ ಮಾಡುತ್ತೇವೆ. ಇನ್ನು ಕಿರಿಯ ಪ್ರಾಥಮಿಕ ಶಾಲೆಗಳು. ಶಿಕ್ಷಣವನ್ನು ನಾವು ಕೊಡದೆ ಇರತಕ್ಕದ್ದು ಎಂತಹ ಅಪಭ್ರಂಶ ಶೇಕಡ 40 ಜನರಿಗೆ ಇನ್ನೂ ಶಿಕ್ಷಣ ಇಲ್ಲ. ಅವರಿಗೆ ನಾವು ಭಗವದ್ಗೀತೆ ಹೇಳಿದರೆ ಏನು ಗೊತ್ತಾಗುತ್ತದೆ? ಖುರಾನ್ ಹೇಳಿದರೆ ಏನು ಗೊತ್ತಾಗುತ್ತದೆ? ನಾವು ಬೈಬಲ್ ಹೇಳಿದರೆ ಏನು ಗೊತ್ತಾಗುತ್ತದೆ? ಯಾವುದೇ ಒಂದು ಧಾರ್ಮಿಕ, ವೈಜ್ಞಾನಿಕ ಅಥವಾ ಸಾಮಾಜಿಕ ಈ ತಿಳಿವಳಿಕೆಯ ಜ್ಞಾನದ ಮಟ್ಟ ಮೇಲೆ ಬರಬೇಕೆಂದರೆ ಪ್ರಾಥಮಿಕ ಶಿಕ್ಷಣ ಬೇಡವೆ? ಹೋಗಲಿ, ಪ್ರಜಾವಾಣಿ ಪತ್ರಿಕೆ ಓದುವುದಕ್ಕೆ ಅವನಿಗೆ ಗೊತ್ತಾಗದಿದ್ದರೆ ಓಟು ಯಾರಿಗೆ ಕೊಡಬೇಕೆಂದು ಹೇಗೆ ಆಲೋಚನೆ ಮಾಡುತ್ತಾನೆ? ಇದು ಬೇಸಿಕ್. ಇಂಗ್ಲಿಷ್ ಪತ್ರಿಕೆ ಓದುವುದು, ಹಿಂದೂ ಪತ್ರಿಕೆ ಓದುವುದು ಬಹಳ ದೂರವಾಗುತ್ತವೆ. ಕರ್ನಾಟಕದಲ್ಲಿ ಅದನ್ನಾದರೂ ನಾವು ಮಾಡದೆ ಅವರಿಂದ ನಾವು ನಿರೀಕ್ಷೆ ಮಾಡುವುದು ಏನು? ಸುಭದ್ರ ಸರ್ಕಾರ ಸ್ಥಾಪನೆ. ಇದು ಸಾಧ್ಯವೆ? ಮೊದಲೇ ಅವನಿಗೆ ವಿಷಯ ಗೊತ್ತಿಲ್ಲದೆ ಅವನೇ ಸುಭದ್ರವಾಗಿಲ್ಲದಿದ್ದರೆ, ಅವನ ಮನೆಯೇ ಅಂಧಕಾರದಲ್ಲಿರುವಾಗ, ಅವನ ಮಕ್ಕಳನ್ನೇ ಸಾಕುವುದಕ್ಕೆ ಸವಲತ್ತು ಇಲ್ಲದೆ ಇದ್ದಾಗ ಸುಭದ್ರ ಸರ್ಕಾರ, ಸುಭದ್ರ ಸರ್ಕಾರ; ಏನು ಹೇಗೆ ಅಂದರೆ? ಸುಭದ್ರ ಸರ್ಕಾರದ ಕಲ್ಪನೆ, ನಾನು ಅಲ್ಪಸ್ವಲ್ಪ ಓದಿರುವ ಪ್ರಕಾರ, ಯಾವ ದೇಶದಲ್ಲಿ ಸಮಾಜ ಸುಭದ್ರವಾಗಿರುತ್ತದೆ ಅಲ್ಲಿ ಸರ್ಕಾರಗಳು ಬರುತ್ತವೆ ಹೋಗುತ್ತವೆ, ನಾವು ಹೇಗೆ ಕಸ ಹೊಡೆಯುವವರನ್ನು ಬೆಳಿಗ್ಗೆ ಕರೆದು ಸಾಯಂಕಾಲದ ಹೊತ್ತು ಕಳುಹಿಸುತ್ತೇವೆ ಹಾಗೆ ಸರ್ಕಾರ ಅಂದರೆ ಕಸ ಹೊಡೆಯುವುದು ಎಂದು ಹೇಳಿದ್ದು ರಾಜಾಜಿ; ನಾನಲ್ಲ. ಕಸ ಹೊಡೆಯುವ ಕೆಲಸಕ್ಕೆ ನಾವು ಖಾಯಂ ಆಗಿ ಜನ ಇಟ್ಟುಕೊಳ್ಳಬೇಕು. ನಾವು ಮಾತ್ರ ವೀಕ್ ಆಗುತ್ತಾ ಇರಬೇಕು. ಬಟ್ಲರ್ ರೆಸಲಿನ್ ಹೋದಸಾರಿ ಹೇಳಿದ್ದರು Government is like a buttler, ಯಜಮಾನ ಏನು ತಂದುಕೊಡುತ್ತಾನೆ ಅದನ್ನು ಸರಿಯಾಗಿ ರುಚಿಕರವಾಗಿ ಬೇಯಿಸಿ ಹಾಕಿ, ಮನೆ ಮಂದಿ ಮಕ್ಕಳೆಲ್ಲಾ ಉಂಡು ಉಳಿದದ್ದು ತಾನು ತಿನ್ನಬೇಕು ಎಂದು. ಇವನು ಹಾಗಲ್ಲ ನಮ್ಮ ದೇಶದ ಬಟ್ಲರ್. ತಂದದ್ದನ್ನೆಲ್ಲಾ ಅವನೇ ತಿಂದು ಮನೆ ಮಂದಿ ಎಲ್ಲಾ ಸೊರಗಿ ಸಾಕಾಗಿ 1998ರ ಚುನಾವಣೆಗೆ ಯಾರು ನಿಂತಿದ್ದಾರೆಂದು ಕೂಡಹೇಳುವುದಕ್ಕೆ ಸಾಧ್ಯವಿಲ್ಲದ ಸ್ಥಿತಿಗೆ ಬಂದಿದೆ. This is the total outcome of our stable Government. ಆ ತರಹ ತೀರಾ ಜಾಸ್ತಿ ತಿಂದು ಬಟ್ಲರ್ಸ್ ಇವತ್ತು ಆಸ್ಪತ್ರೆ ಸೇರಿದ್ದಾರೆ, ಕೆಲವರು ಕೋರ್ಟಿನಲ್ಲಿದ್ದಾರೆ. ಆ ಮಾತು ಬೇರೆ. ಆದರೆ ಆ ತರಹ ಬಂದು, ನಾನು ಜನರ ಸೇವೆ ಮಾಡುತ್ತೇನೆಂಬ ಪರಿಕಲ್ಪನೆ ಇಲ್ಲದೆ ಇರತಕ್ಕ ಸರ್ಕಾರಗಳು ಬಂದರೆ ಬರಲಿ. ನಾವು ಸರ್ಕಾರದವರು

ಜನರ ಕೆಲಸ ಮಾಡದಿದ್ದರೆ ತಪ್ಪು; ಮಾಡಬೇಕು. ಅದಕ್ಕೋಸ್ಕರ ಅವರು ನಮಗೆ ಸಂಬಳ ಕೊಡುತ್ತಿರುವುದು. ಜನರ ಉಪ್ಪು ತಿಂದು ಅವರಿಗೆ ಎರಡು ಬಗೆಯಬಾರದು, ಅದನ್ನು ನಾನು ಒಪ್ಪುತ್ತೇನೆ. ಆದರೆ ಎಷ್ಟು ಆಗಿದೆ, ಎಷ್ಟು ಆಗುತ್ತದೆ, ಎಷ್ಟು ಆಗುವುದಕ್ಕೆ ಸಾಧ್ಯ ಎಂಬುದಕ್ಕೆ ಇತಿಮಿತಿ ಇರುತ್ತದೆ. ಆದುದರಿಂದ ಶಿಕ್ಷಣ ಇಲಾಖೆಯ ಬಗ್ಗೆ ಹೇಳುವಾಗ ಇಷ್ಟೆ. ಈಗ ಎರಡು ವರ್ಷಗಳಲ್ಲಿ, ನಾವು, ಹಿಂದೆ ಹತ್ತು ವರ್ಷಗಳಲ್ಲಿ ಆಗದೇ ಇದ್ದ ಕೆಲಸವನ್ನು ಮಾಡಿದ್ದೇವೆ. ನಾನು ಮತ್ತೆ ಆ ಸರ್ಕಾರ, ಈ ಸರ್ಕಾರ ಅಂದಕೂಡಲೆ ಸಿಟ್ಟು ಮಾಡಿಕೊಳ್ಳು. ಹತ್ತು ವರ್ಷಗಳಲ್ಲಿ ಆಗದೇ ಇದ್ದ ಸಾಧನೆ ಎರಡು ವರ್ಷಗಳಲ್ಲಿ ಆಗಿದೆ ಸುರೇಶ್ ಅವರೇ. 4 ದಿವಸ ಉಪವಾಸವಿದ್ದರೆ, ಒಂದೇ ದಿನ 2 ಕೆ.ಜಿ. ಅನ್ನ ತಿನ್ನುವುದಕ್ಕಾಗುತ್ತದೆಯೇ? ನಿಧಾನವಾಗಿ ಹೋಗೋಣ. ಸುಧಾರಣೆ ಮಾಡುವ ಕೆಲಸದಲ್ಲಿ ತಪ್ಪಿದ್ದರೆ, ನಾವು ಬದಲಾವಣೆಯಾಗಿ ನೀವು ಬರಬಹುದು, ನೀವು ಬದಲಾವಣೆಯಾಗಿ ಬೇರೆಯವರು ಬರಬಹುದು. ಅದರ ಬಗ್ಗೆ absolutely no congusion so far as I am concerned. ಜನರ ಕೆಲಸ ಮಾಡಿದಾಗ ಮಾಡಿದ್ದೇವೆಂದು ಹೇಳಬೇಕು, ಮಾಡದಿದ್ದಾಗ, ಜನರು ನೀನು ಬೇಡ ಹೋಗಪ್ಪ ಎಂದು ಹೇಳುತ್ತಾರೆ. ಅವರು ಹೇಳಿದಾಗ ನಾವು ಹೋಗೋಣ. ಅವರು ಹೇಳಿದರೂ ಹೋಗದಿದ್ದರೆ ಇದೇನು ಅಪ್ಪನ ಆಸ್ತಿಯೇ? ಜನರು ಹೇಳುವವರೆಗೆ ನಾವು ಸರಿಯಾಗಿ ಕೆಲಸ ಮಾಡೋಣ. ಜನಾದೇಶಕ್ಕೆ ಹೋಗಿರಿ ಎಂದು ಹೇಳಿದಿರಿ. ಮಾನ್ಯ ಖರ್ಗೆಯವರೇ, ಜನಾದೇಶಕ್ಕೆ ಹೋಗುವುದಕ್ಕೆ ಒಂದು ಘಳಿಗೆ, ಒಂದು ನಿಮಿಷ ಕೂಡ ತಡ ಮಾಡುವುದಿಲ್ಲ. ಆದರೆ, ನಾನು ಇವರನ್ನೂ ಕೇಳಬೇಕಲ್ಲವೇ? ನೀವೂ ಹೇಗೆ ನಿಮ್ಮ ನಾಯಕರ ಮಾತನ್ನು ಕೇಳಬೇಕೋ ಹಾಗೆಯೇ ನಾನೂ ಅವರು ಹೇಳಿದ ಹಾಗೆ ಹೋಗಬೇಕು. ಇವತ್ತು ನಿಮ್ಮ ಹಿಂದಿರುವವರು ಎಲೆಕ್ಷನ್‌ಗೆ ಹೋಗುವಂತಹವರು ಯಾರಿದ್ದಾರೆ? ಸುಮ್ಮನೆ ಏಕೆ ಹೀಗೆ ಮಾತನಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಲಘುವಾಗಿ ತಿಳಿದುಕೊಳ್ಳಬೇಡಿ.

ಶ್ರೀ ಜೆ.ಎಚ್. ಪಟೇಲ್:- ಕೈಲಾಸಂರವರು ಅವರ ಅಪ್ಪ ಕಾಯಿಲೆಯಿಂದ ಆಸ್ಪತ್ರೆಯಲ್ಲಿದ್ದಾಗ, ಹೋಗಿ ಆ ಗುಳಿಗೆ ತೆಗೆದುಕೊಳ್ಳಿ ಸರಿಹೋಗುತ್ತದೆ ಹಾಗೆ ಹೀಗೆ ಎಂದು ಹೇಳಿದರು Are you serious about the med! cine? No! No! You are serious and I am earnest about this med! cine ಎಂದರು. ಇವರೂ ಅಂದರು, ಅವರೂ ಅಂದರು, ಡಿಸ್‌ಮಿಸ್ ನಡಿಯಪ್ಪ ಹೋಗೋಣ ಎಂದು ನೀವು ಆ ರೀತಿ ಹೇಳಲಿಲ್ಲ. ನೀವು, ಈ ಸದನವನ್ನು ಆಗಾಗ್ಗೆ ಡಿಸಾಲ್ವ್ ಮಾಡಕೂಡದು, ಜನರ ಹತ್ತಿರ ಹೋಗಬೇಕಾದರೆ ಐದು ವರ್ಷಗಳಾಗಬೇಕು ಎಂದು ಹೇಳಿದಿರಿ. ಅವರು ಸ್ವತಂತ್ರರು. ಅವರು ಯಾರ ಮಾತೂ ಕೇಳುವವರಲ್ಲ. ನಾವು ಹೇಳುವ ಮಾತು ಸರಿ ಇದ್ದರೆ ಒಪ್ಪುತ್ತಾರೆ, ನೀವು ಹೇಳುವ ಮಾತು ಸರಿ ಇದ್ದರೆ ಒಪ್ಪುತ್ತಾರೆ. ಸರಿ ಇಲ್ಲದಿದ್ದರೆ ಅವರು ಯಾರ ಮಾತನ್ನೂ ಕೇಳುವವರಲ್ಲವೆನ್ನುವುದು ನನಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಅವರುಗಳ ಮನಸಿನಲ್ಲಿಯೂ ಸಹ ಸರ್ಕಾರ ಹೋಗಬಾರದೆಂಬುದು ಇದೆ. ರಾಜಕೀಯವಾಗಿ ಹೇಳಬೇಕಾಗಿತ್ತಷ್ಟೆ.

ಶ್ರೀ ಜೆ.ಎಚ್. ಪಟೇಲ್:- ಬಹಳ ಟೀಕೆಗೊಳಗಾಗಿದ್ದೆಂದರೆ, ಎಲೆಕ್ಟ್ರಿಸಿಟಿ ಬೋರ್ಡ್. ಈ ಕಡೆ, ಆ ಕಡೆ, ಅಲ್ಲಿದ್ದವರು, ಇಲ್ಲಿದ್ದವರು ಎಲ್ಲರೂ ಕೆಇಬಿ ಎಂದು ಮಂತ್ರಘೋಷಣೆ ಮಾಡೇ ಮಾಡಿದರು. ವೋಲ್ಟೇಜ್ ಬಿದ್ದರೆ, ಪವರ್ ಕಟ್, ಪಂಪ್ ಬರ್ನ್ ಆಗಿದೆ ಎಂದು ಈ ವಿಷಯದಲ್ಲಿ ಎಲ್ಲರೂ ಪಕ್ಷಭೇದವಿಲ್ಲದೆ ಹೇಳಿದರು. ಅದಕ್ಕೇನು ಕಾರಣ? ರೋಗ ಎಲ್ಲಿದೆ ಎಂದು ಗೊತ್ತಿಲ್ಲದಿರುವಾಗ, ಇದಕ್ಕೆ ಕೆಇಬಿ ಕಾರಣವಾಗುತ್ತದೆಯೇ? After all, it is an organisation created by us. ಕೆ.ಇ.ಬಿ. ಈ ಸದನದ ಶಿಶು. ಸರ್ಕಾರದ ಅನುಮತಿ ಮೇರೆಗೆ ನಡೆಯುವ ಒಂದು ಮಂಡಳಿ. ಅದು ಎಷ್ಟೆಷ್ಟು ವೀಕ್ ಆಗಬೇಕೋ, ಎಷ್ಟೆಷ್ಟು ದುರ್ಬಲವಾಗಬೇಕೋ, ಎಷ್ಟೆಷ್ಟು ಪರದೇಶಿಯಾಗಬೇಕೋ, ಅಷ್ಟರಮಟ್ಟಿಗೆ ಅವರು ಹೇಳುತ್ತಾ ಬಂದರು. ನಾನು 1983ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ವಿದ್ಯುತ್ ಸಚಿವನಾಗಿದ್ದೆ. ನಿಮಗೆ ಗೊತ್ತಿರುವ ಹಾಗೆ, ಶ್ರೀ ನಿಜಲಿಂಗಪ್ಪನವರು ದೇಶದ ಎಲ್ಲಾ ಜನರನ್ನೂ ಕರೆದು, ನೀವು ಬನ್ನಿ ಅಲ್ಯುಮಿನಿಯಂ ಮಾಡಿ, ಸ್ಟೀಲ್ ಮಾಡಿ ನಾವು ನಿಮಗೆ ವಿದ್ಯುತ್‌ನ್ನು ಸೋವಿಯಾಗಿ ನೀಡುತ್ತೇವೆಂದರು, ಆಗ ಎಲೆಕ್ಟ್ರಿಸಿಟಿ ಇತ್ತು. ಉಪಯೋಗ ಮಾಡುವವರು ಬೇಕೆಂದು ಕರೆದರು, ಬರುವವರೆಲ್ಲಾ ಬಂದರು. ಈಗ ಮೆಲ್ಲನೆ ಒಬ್ಬೊಬ್ಬರೇ ಜಾರಿಬಿಡುತ್ತಾರೆ. This is a matter to be taken very seriously by this House.

(ಗೊಂದಲ)

ಕೆ.ಇ.ಬಿ. ಬಗ್ಗೆ ಆಮೇಲೆ ಪ್ರಶ್ನೆಕೇಳಿ ಕಣ್ಣಿದ್ದರೆ ಶಾಲೆಗಳನ್ನು ನೋಡಿ, ಕಿವಿ ಇದ್ದರೆ ಮಕ್ಕಳ ನಿನಾದ ಕೇಳಿ, ನಾಲಿಗೆ ಇದ್ದರೆ ನಮ್ಮ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂನ ರುಚಿ ನೋಡಿ, ಚರ್ಮವಿದ್ದರೆ ತಂತಿ ಹಿಡಿದು ನೋಡಿರಿ ಎಂದು ನಾನು ಆಗಲೇ ಹೇಳಿದ್ದೇನೆ. ಆದ್ದರಿಂದ, ಕೆಇಬಿ ಬಗ್ಗೆ ಆಮೇಲೆ ತಂತಿ ಮುಟ್ಟಿಸುತ್ತೇನೆ, ಹೇಳುತ್ತೇನೆ. ಮಾನ್ಯ ಮೊಯಿಲಿಯವರೆ, 10 ವರ್ಷಗಳಿಂದ ಇಲ್ಲಿಯವರೆಗೆ ಒಟ್ಟು 572 ಮೆಗಾವ್ಯಾಟ್ ಆ್ಯಡ ಆಗಿದೆ- ಇನ್‌ಕ್ಲೂಡಿಂಗ್ ಯುವರ್ ರೆಜಿಂ. ಈಗ 1995-96, 96-97, 97-98ನೇ ವರ್ಷಗಳದ್ದು ಮಾತ್ರ ಸಂಕ್ಷಿಪ್ತ ರೂಪುರೇಷೆ ಕೊಡುತ್ತೇನೆ. ತಮ್ಮ ಕಾಲದಲ್ಲಿ 572 ಮೆಗಾವ್ಯಾಟ್, ದೇವೇಗೌಡರ ಕಾಲದಲ್ಲಿ 177 ಮೆಗಾವ್ಯಾಟ್, ಈ ಒಂದೂವರೆ ವರ್ಷಗಳಲ್ಲಿ 923 ಮೆಗಾವ್ಯಾಟ್ ಕೆಪಿಸಿಎಲ್ ಯಲ್ಲಿ ಒಂದೇ ಆಡ್ ಮಾಡಿರುವುದು. By the end of this year the KPCL will add 930 M.Ws. Likewise, private and small projects will add about 660 M.Ws. 2 ವರ್ಷಗಳಲ್ಲಿ, 56,430, 310, 923 ಕೆಪಿಸಿಎಲ್ ನಿಂದಾದದ್ದು, 660 ಪ್ರೈವೇಟ್ ಸ್ಮಾಲ್ ಪ್ರಾಜೆಕ್ಟ್‌ನಿಂದಾದದ್ದು. I have not brought Cogentrix and Nagarjuna into picture. These are all projects already

undertaken including one barge mounted project. By the end of 1998 the power position will improve by 1583 MWs. These are all the projects already taken off. ಇದರಲ್ಲಿ ಕೊಜೆಂಟ್ರಿಕ್ಸ್ ಸೇರಿಲ್ಲ, ಸೇರಿದರೆ 2 ಸಾವಿರ ಮೆಗಾವ್ಯಾಟ್ ಆಗುತ್ತದೆ, ನಾಗಾರ್ಜುನ ಸೇರಿಲ್ಲ, ಅದನ್ನು ಸೇರಿದರೆ ಒಂದು ಸಾವಿರ ಮೆಗಾವ್ಯಾಟ್ ಆಗುತ್ತದೆ. ಅವುಗಳನ್ನಾವುದನ್ನೂ ಸೇರಿಸದೆ, ಹಾಲಿ ಕೈಗೊಂಡಿರುವ ಪ್ರಾಜೆಕ್ಟ್‌ನಲ್ಲಿ ಇನ್ನೂ ಒಂದೂಮುಕ್ಕಾಲು ವರ್ಷಗಳಲ್ಲಿ 1583 ಮೆ. ವ್ಯಾ. ಆಡ್ಡ್ ಮಾಡುತ್ತೇವೆ. ಆದರ ಏನೂ ಮಾಡಿಲ್ಲ ಎಂದು ಹೇಳುತ್ತೀರಿ. ಕೆ.ಇ.ಬಿ. ಪವರ್ ಜನರೇಟ್ ಮಾಡಿದರೆ ಡಿಸ್ಟ್ರಿಬ್ಯೂಷನ್ ಅಥಾರಿಟಿ ಯಾವುದು? ಅವರು ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಮ್ಯಾನೇಜ್ ಮಾಡಬೇಕೇ ಹೊರತು ಪವರ್ ಜನರೇಟ್ ಮಾಡುವುದಿಲ್ಲ. ಹಿಂದೆ ಶರಾವತಿಯಲ್ಲಿ ಮಾಡಿದರಷ್ಟೆ. ಕೂದಲೇ ಇಲ್ಲದೆ ತುರುಬು ಕಟ್ಟು ಎಂದರೆ ಹೇಗೆ? ನೀವು ಬಾಚಣಿಕೆ ಉಪಯೋಗಿಸಿದರೆ ಅರ್ಥವಿದೆ, ನಾನು, ನಾಣಯ್ಯನವರು ಬಾಚಣಿಕೆ ಉಪಯೋಗಿಸಿದರೆ ಅರ್ಥವಿದೆಯೇ? ನೀವು ಕೆ.ಇ.ಬಿ. ಮತ್ತು ಕೆಪಿಸಿಎಲ್‌ನ್ನು ಬೋಳು ತಲೆ ಮಾಡಿ ಹೋಗಿ, ಈಗ ತುರುಬು ಕಟ್ಟು ಎಂದರೆ ಹೇಗೆ? ಆದಾಗುವುದಿಲ್ಲ. Ground realities ತಪ್ಪಾಗಿದ್ದರೆ ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ. ಒಂದು ನಿಮಿಷ ಕೂಡ ಹಿಂಜರಿಯುವುದಿಲ್ಲ. 1583 MWs of power will be added to our grid within one and half years or one year nine months. ಇದು ಕೆಲಸ ಕೈಗೊಂಡಿರುವುದು. ಪವರ್ ಕನ್‌ಸಂಪಷನ್ ಬಗ್ಗೆ ನಾನು ಕಳೆದ ಸಾರಿ ಈ ಸದನಕ್ಕೆ ಹೇಳಿದ್ದೇನೆ ಈಗಲೂ ಸ್ಪಷ್ಟಪಡಿಸುತ್ತೇನೆ, ನಮ್ಮದು ಲಾಸ್ಟ್ ಇಯರ್ ಇದೇ ದಿನಕ್ಕೆ per day consumption ಇವತ್ತು ಪರ್‌ಡೇ ಕನ್‌ಸಂಪಷನ್ 72 ಮಿಲಿಯನ್ ಯೂನಿಟ್‌ಗೆ ಹೋಗಿದೆ. What am I to do? ಯಾರಿಂದ ಈ ಬೇಡಿಕೆ ಹೆಚ್ಚಾಗುತ್ತದೆ? I Know all about details of power consumption and transmission and distribution loss. ಆದರೆ, ಇವತ್ತು 72 ಮಿಲಿಯನ್

4.10 ಪಿ.ಎಂ.

ಯೂನಿಟ್ ಅಗ್ರಿಕಲ್ಚರ್ ಸೆಕ್ಟಾರ್‌ಗೆ ಹೋಗುತ್ತದೆಯೇ? ಫ್ಯಾಕ್ಟ್ ಕಂಡುಹಿಡಿಯುತ್ತೇವೆ. ಹೈ-ಟೆನ್ಷನ್ ಯೂಸರ್ಸ್ ಯೂಸ್ ಮಾಡಿದರೆ, ಮೀಟರ್ ಇದೆ ನಮಗೆ ರೆವಿನ್ಯೂ ಇಂಪ್ರೂವ್ ಆಗುತ್ತದೆ, ಪವರ್ ರೆಡ್ಯೂಸ್ ಮಾಡಿದರೆ ನಮಗೆ ರೆವಿನ್ಯೂ ಇಂಪ್ರೂವ್ ಆಗುತ್ತದೆ, ಟಾರಿಫ್ ಇನ್‌ಕ್ರೀಸ್ ಮಾಡಿದರೆ ರೆವಿನ್ಯೂ ಇಂಪ್ರೂವ್ ಆಗುತ್ತದೆ. ಆದರೆ, ಈ ರೀತಿ ಕನ್‌ಸಂಪಷನ್ ಪರ್ ಡೇ ಗೆ 72 ಮಿಲಿಯನ್ ಯೂನಿಟ್ ಹೋದರೇನು ಮಾಡುವುದು? ಇದು ಮಾರ್ಚಿ ತಿಂಗಳು. ಏಪ್ರಿಲ್ ಮೇ, ಜೂನ್ ಜೂನ್ 20ರವರೆಗೆ ನಾವು ಹೇಗೆ ಇದನ್ನು ಸುಧಾರಿಸುವುದು? ಅದಕ್ಕೆ ಎಲ್ಲೋ ಒಂದು ಕಡೆ ಪವರ್ ಕಟ್ ಆಗುತ್ತದೆ, ಡ್ರಿಪ್ ಆಗುತ್ತದೆ ಮತ್ತೊಂದು ಕಡೆ ಟ್ರಾನ್ಸ್‌ಫಾರ್ಮರ್ ಬರ್ನ್ ಆಗುತ್ತದೆ. ಏನೂ ಇಲ್ಲದೆ ಕೆಇಬಿ ಆಫೀಸರ್‌ಗಳನ್ನು ಹೊಡೆಯುವುದಕ್ಕೆ ಹೋಗುವುದು ಆಫೀಸರ್‌ಗಳನ್ನು ಬಯ್ಯುವುದು. ನಾನು ಈ ಸದನದ ಎಲ್ಲಾ ಸದಸ್ಯರಿಗೆ ಹೇಳುವುದು, ಪರಿಸ್ಥಿತಿ

ಹೀಗಿದೆ, ಒಂದು ಕಂಬಳಿ ಇದೆ ನಾಲ್ಕು ಜನ ಹೊದ್ದುಕೊಳ್ಳುತ್ತಾರೆ. ಯಾವನೋ ಒಬ್ಬ ಬೆಳಗಿನ ಜಾಗದಲ್ಲಿ ಕಂಬಳಿ ಎಳೆದು ಕೊಂಡು ಮಲಗುತ್ತಾನೆ. ಮೂರು ಜನ ಹೊರಗೆ ಚಳಿಯಲ್ಲಿ ಉಳಿಯುತ್ತಾರೆ. ಹಾಗೆ ಆಗುವುದು ಇದು. When there is such a system unless we improve the system, unless we improve generation, it is difficult: ಇವತ್ತು ನಮ್ಮ ಬೇಡಿಕೆಯಿರುವುದು 10,500 ಮೆಗಾವಾಟ್ಸ್ ನಾವು ಜನರೇಟ್ ಮಾಡುತ್ತಿರುವುದು 3,200ಮೆಗಾವಾಟ್ಸ್. ಈಗ ಜನರೇಟ್ ಮಾಡುತ್ತಿರುವುದು ಎಲ್ಲಾ ಸೇರಿಸಿದರೆ 5ಸಾವಿರ ಮೆಗಾವಾಟ್ಸ್‌ಗೆ ಹೋಗಬಹುದು. We can manage without such embarrassment. ಅದು ಸಫಿಸಿಯೆಂಟ್ ಎಂದು ಹೇಳುವುದಿಲ್ಲ. We can manage. ಆದ್ದರಿಂದ ಪವರ್ ಬಗ್ಗೆ ದಯವಿಟ್ಟು ಅನಾವಶ್ಯಕವಾಗಿ ಚುಚ್ಚಬೇಡಿ. ಅದನ್ನು ಎಲ್ಲಿಯಾದರೂ ಕೊಂಡು ಕೊಳ್ಳುವುದಾಗಿದ್ದರೆ ಇಂಪೋರ್ಟ್ ಮಾಡಿಕೊಳ್ಳುವುದು ಆಗಿದ್ದರೆ ಎರಡು ಹಡಗು ತರಿಸಿಬಿಡಿ ಎಂದು ಹೇಳಿಬಿಡಬಹುದಾಗಿತ್ತು. ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಹಡಗು ಬಂದು ಇಲ್ಲಿ ಜನರೇಟ್ ಮಾಡಬೇಕೇ ಹೊರತು ಹಡಗಿನಲ್ಲಿ ಪವರ್ ತರುವುದಕ್ಕಾಗುವುದಿಲ್ಲ. ಇನ್ನೊಂದು ಸೀಕ್ರೇಟ್ ಏನೆಂದರೆ ಜನರೇಟಿಂಗ್ ಸ್ಟೇಷನ್‌ನಲ್ಲಿ ಪವರ್ ಏನು ಜನರೇಟ್ ಆಗುತ್ತದೆ ಅದು ಇಲ್ಲಿ ಕನ್ಸೂಮ್ ಆಗಲೇಬೇಕು. ಅದನ್ನು ಸ್ಟಾಕ್ ಇಡುವುದಕ್ಕೆ ಬರುವುದಿಲ್ಲ. ಅದನ್ನು ಸ್ಟಾಕ್ ಇಟ್ಟುಕೊಂಡು ಯಡಿಯೂರಪ್ಪನವರು ಬಂದರು 2 ಮೆಗ್ಯಾವ್ಯಾಟ್ ಜಾಸ್ತಿ ಕೊಡಿ, ಮಾನ್ಯ ಖರ್ಗೆಯವರು ಬಂದರು 5 ಮೆಗಾವಾಟ್ಸ್ ಜಾಸ್ತಿ ಕೊಡಿ, ಹಾಗೆ ಕೊಡುವುದಕ್ಕೆ ಬರುವುದಿಲ್ಲ ಅದು. ಆ ಎನರ್ಜಿ ಬಗ್ಗೆ ಮೊದಲನೆಯದಾಗಿ ನಾವು ಮ್ಯಾನೇಜ್ ಮಾಡುವುದಕ್ಕೆ ಅಷ್ಟು ವಿಚಕ್ಷಣತೆಯಿಂದ ಕೇರ್‌ಫುಲ್ ಆಗಿ ಏನು ಮ್ಯಾನೇಜ್ ಮಾಡಬೇಕೋ ಮಾಡುತ್ತೇವೆ. ಆದರೂ ತೊಂದರೆಯಾಗಿದೆ. I do not deny that. ರೈತರಿಗೆ ತೊಂದರೆ ಯಾಗಿದೆ. ಸಣ್ಣ ಸಣ್ಣ ಕೈಗಾರಿಕೆಗಳವರಿಗೆ ತೊಂದರೆಯಾಗಿದೆ. ದೊಡ್ಡ ದೊಡ್ಡ ಕೈಗಾರಿಕೆಗಳವರು ಅವರವರೇ ಸ್ವತಹ ಜನರೇಟ್ ಹಾಕಿಕೊಂಡು 50-30ಮೆಗಾವ್ಯಾಟ್ಸ್ ಜನರೇಟ್ ಹಾಕಿಕೊಂಡು ಮಾಡುತ್ತಿದ್ದಾರೆ. ಹೀಗಾದರೂ ನಾವು ಕಷ್ಟದ ಪರಿಸ್ಥಿತಿಯಲ್ಲಿದ್ದೇವೆ. ಪವರ್‌ಗೆ ಸಂಬಂಧಪಟ್ಟಹಾಗೆ ಅದನ್ನು ಅರ್ಥಮಾಡಿಕೊಳ್ಳದೆ ಹಾಗೆ ಮಾಡಿದರೆ ಆಗುತ್ತದೆ ಹೀಗೆ ಮಾಡಿದರೆ ಆಗುತ್ತದೆಂದರೆ ಅದು ಆಗುವುದಿಲ್ಲ. I seek your co-operation and tolerance for another one year six months. Then we will come to a stage of management, but not surplus. ಸರ್‌ಪ್ಲಸ್ ಅಲ್ಲ ಮ್ಯಾನೇಜ್ ಆಗುತ್ತದೆ.

ಇನ್ನು ನೀರಾವರಿಯ ಬಗ್ಗೆ ಏನೂ ಆಗಿಲ್ಲವೆಂದು ಹೇಳಿದರು. ನಾಗೇಗೌಡರೇ ಇವರಿಗೆ ಎಲ್ಲಿಯಾದರೂ ತೋರಿಸಿ; ಅಂತಹ ಡ್ಯಾಮ್‌ಗಳು ಕಾಣಲಿಲ್ಲವೆಂದರೆ ಇನ್ನೇನು ಕಾಣುತ್ತದೆ? ಕಣ್ಣು ಪರೀಕ್ಷೆ ಮಾಡಿಸಿಕೊಳ್ಳಿ. ಕಣ್ಣು ಪರೀಕ್ಷೆ ಮಾಡಿಸುವುದಕ್ಕೆ ಹೋದಾಗ ಅಕ್ಷರಗಳನ್ನು ಗೋಡೆಗೆ ತಗುಲಿ ಹಾಕಿರುತ್ತಾರೆ. ಸಣ್ಣ ಅಕ್ಷರ ಹಾಕಿರುತ್ತಾರೆ. ಅದು ಕಾಣುವುದಿಲ್ಲವೆಂದರೆ ಅವರಿಗೆ ಛಸ್ಮ

ಕೊಡುತ್ತಾರೆ. ಇವರಿಗೆ ದೊಡ್ಡ ಅಧ್ಯಕ್ಷವೇ ಕಾಣದಿದ್ದರೆ ನಾನೆಲ್ಲಿ ವಸ್ತ್ರ ಕೊಡುವುದಕ್ಕೆ ಹೋಗಲಿ ಕಣ್ಣು ಅಪರೇಷನ್ ಮಾಡಬೇಕಾದರೆ ಡಾ: ಮೋದಿಯವರನ್ನು ಕರೆಸಬೇಕಾಗುತ್ತದೆ. ಮಾನ್ಯ ಖರ್ಗೆಯವರು ಹೇಳಿರುವ ಪ್ರತಿಯೊಂದನ್ನು ಬರೆದು ಇಟ್ಟುಕೊಂಡಿದ್ದೇನೆ. ಅಲಮಟ್ಟಿ ಡ್ಯಾಮ್‌ನ ಬಗ್ಗೆ ಕೆಲವು ವಿಷಯಗಳನ್ನು ನಂಜೇಗೌಡರು ಅರ್ಥಮಾಡಿಕೊಳ್ಳುತ್ತಾರೆ, ಯಡಿಯೂರಪ್ಪನವರು ಅರ್ಥಮಾಡಿಕೊಳ್ಳುತ್ತಾರೆ. ಕೆಲವು ವಿಷಯಗಳನ್ನು ನಾವು ಅಲ್ಲಿರುವ ವಿವಾದಗಳ ಕಾರಣ ಸದನದಲ್ಲಿ ಚರ್ಚೆಮಾಡುವುದಕ್ಕಾಗುವುದಿಲ್ಲ. ನಾವು ನೀವು ಕುಳಿತುಕೊಂಡು ಚರ್ಚೆ ಮಾಡಬಹುದು. ಅದರೂ ಅಲಮಟ್ಟಿ ಡ್ಯಾಮ್ ಎತ್ತರ 512 ಮೀಟರ್‌ವರೆಗೆ ಹೋಗಿದ್ದೇವೆ. 512ಕ್ಕೆ ಗೇಟ್ ಹಾಕಿದರೆ 519ಕ್ಕೆ ನೀರು ನಿಲ್ಲಿಸುತ್ತೇವೆಂದು ಒಪ್ಪಿಕೊಂಡಿದ್ದೇವೆ. 519ಮೀಟರ್‌ಗೆ ನಿಲ್ಲಿಸಿದರೆ ನಮ್ಮ ಷೇರು 173ಟಿಎಂಸಿ ಅಷ್ಟು ನೀರು ನಿಲ್ಲುತ್ತದೆ. ಆ ನೀರು ನಿಂತಾಗ ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ ಅವುಗಳ ಆರ್.ಆರ್.ಕ್ಲಿಯರ್ ಮಾಡಿದ್ದೇವೆ. 519ಮೀಟರ್‌ರವರೆಗೆ ಇವತ್ತು ನಮ್ಮದು ವಾದ ಇರುವುದು. ಪವರ್ ಜನರೇಷನ್‌ಗೋಸ್ಕರ 5ಮೀಟರ್ ಹೆಚ್ಚು ಮಾಡಿಕೊಳ್ಳುತ್ತೇವೆ. 524ಮೀಟರ್‌ರವರೆಗೆ ತೆಗೆದುಕೊಂಡು ಹೋಗುತ್ತೇವೆ. ಆದರೆ ಅದನ್ನು ನೀರಾವರಿಗೆ ಉಪಯೋಗಿಸಿಕೊಳ್ಳುವುದಿಲ್ಲವೆಂದು ಹೇಳಿದ್ದೇವೆ. ಆದರೂ ಅದು ವಾದ ವಿವಾದದಲ್ಲಿದೆ. 519ಮೀಟರ್‌ವರೆಗೆ ಹೋಗಲಿಕ್ಕೆ ನಮಗೆ ಯಾವುದೇ ಅಡ್ಡಿ ಆತಂಕವಿಲ್ಲ ಹೋಗುತ್ತೇವೆ. ಗೇಟ್ಸ್‌ಗಳು ರೆಡಿ ಇವೆ, ಕಟ್ಟಡ ಆಗಿದೆ. ಗೇಟ್ಸ್ ಫಿಕ್ಸ್ ಮಾಡುವುದಕ್ಕೆ ಎಷ್ಟು ಟೈಮ್ ಬೇಕೋ ಅಷ್ಟು ಇದೆ. ಆರ್. ಆರ್.ಕ್ಲಿಯರ್ ಮಾಡುವ ಕೆಲಸ ತಡವಾಗಿದೆ ಅದು ನಾನು ಒಪ್ಪುತ್ತೇನೆ. ಏಕೆ ತಡವಾಯಿತು ಅಂದರೆ ಮೊದಲಿನಿಂದಲೂ ಏನೂ ಆಗಿರಲಿಲ್ಲ. ಅವರ ತಂಟ್ರಿಗೆ ಯಾರೂ ಹೋಗಿರಲಿಲ್ಲ. ನೀರು ನಿಲ್ಲುತ್ತದೆಂದು ಹೇಳಿದಾಗ ನಾನು ಹೆಲಿಕಾಪ್ಟರ್‌ನಲ್ಲಿ ಸುತ್ತ ನೋಡಿಕೊಂಡು ಬಂದಿದ್ದೇನೆ. ಇನ್ನು ಕೆಲವು ಗ್ರಾಮಗಳಲ್ಲಿನ ಜನ ಊರು ಬಿಟ್ಟಿಲ್ಲ. ಅದೇ ಹೊಂಡದಲ್ಲೇ ಇದ್ದಾರೆ. ಎಲ್ಲಾ ಪರಿಹಾರ ಕೊಟ್ಟು ಆಗಿದೆ. ಇನ್ನು ಲ್ಯಾಂಡ್ ವ್ಯಾಲ್ಯು ಅತ್ಯಂತ ಧಾರಾಳವಾಗಿ ಅವರ ದರಕ್ಕಿಂತ ಹೆಚ್ಚಾಗಿ ಲ್ಯಾಂಡ್ ವ್ಯಾಲ್ಯು ಫಿಕ್ಸ್ ಮಾಡಿದ್ದೇವೆ. ಕೆಲವು ಕಡೆ ಡಿಸ್‌ಪ್ಯೂಟ್ ಇದೆ. ಕೆಲವರು ಒಪ್ಪಿದ್ದಾರೆ ಕೆಲವರು ಒಪ್ಪಿಲ್ಲ. ಕೆಲವರು ಅವರು ವಾಸ ಇದ್ದ ಮನೆಗಳಿಗೆ ಸರಿಯಾದ ವ್ಯಾಲ್ಯು ಕೊಡಲಿಲ್ಲವೆಂದು ಕೇಸ್ ಹಾಕಿದರು. ಮರುವಸತಿ ಕಾರಣದಿಂದ ತಡವಾಗಿದೆ. ಡ್ಯಾಮ್ ಕನ್‌ಸ್ಟ್ರಕ್ಷನ್ ಆಗಲಿ ಕೆನಾಲ್ ಕನ್‌ಸ್ಟ್ರಕ್ಷನ್ ಆಗಲಿ ಡಿಸ್ಟ್ರಿಬ್ಯೂಟರಿಯಾಗಲಿ ಲ್ಯಾಟರಲ್ ಆಗಲಿ ಅದರಲ್ಲಿ ಶೇಕಡ 80ಭಾಗದಷ್ಟು ಕೆಲಸ ಮಾಡಿದ್ದೇವೆ. ತಾವು ಅಪ್ಪಣೆ ಕೊಟ್ಟರೆ ತಮ್ಮ ಜೊತೆಗೆ ಮಾನ್ಯ ವಿರೋಧಪಕ್ಷದ ನಾಯಕರನ್ನು ಕಳುಹಿಸಿದಂತೆ ಒಂದೆರಡು ದಿವಸ ಹೋಗಿ ನೋಡಿಕೊಂಡು ಬರಲಿ. ಏನೋ ಕೆಲಸ ಮಾಡಿದರೂ ಅದರೊಳಗೆ ದೋಷ ಹುಡುಕುವುದು ಇವರ ಕೆಲಸ. ವಿ.ಸಿ.ಕೆನಾಲ್ 50-60ವರ್ಷಗಳ ಹಿಂದೆ ಮಾಡಿದ್ದು. ಅದನ್ನು ಯಾರೂ ರಿಪೇರಿ ಮಾಡಿಸಿರಲಿಲ್ಲ. ನಾವು ಮಾಡಿಸಿದ್ದೇವೆ; ಕಂಡಿ ಕೊರೆದದ್ದು ಅಲ್ಲಿ ಸೋರಿದ್ದು ಇದನ್ನೇ ಹೇಳುತ್ತಾರೆ. ಡ್ಯಾಮ್ ಕಟ್ಟಿದ್ದೇವೆ ನೋಡಿದರೆ ಅಂದರೆ ಡ್ಯಾಮ್ ಇಲ್ಲಿ ಸೋರುತ್ತದೆ

ಅಲ್ಲಿ ಸೋರುತ್ತದೆಂದು ಹೇಳುತ್ತಾರೆ. ನಾವು ಮಾಡಿದ್ದು ಕಂಪೇರ್ ಮಾಡುವುದಕ್ಕೆ ಹೋಗಿದ್ದಾರೆ. 15ವರ್ಷ ಇವರು ಖರ್ಚು ಮಾಡಿದ್ದು ಎಷ್ಟು? ಹಿಂದಿನದು 1991-92ರಿಂದ 1994-95ರವರೆಗೆ 1676ಕೋಟಿ. 1996-97, 1997-98 ಮತ್ತು 1998-99ರ ಟೋಟಲೇ ಅಮೌಂಟ್ ಪ್ಲಾನ್‌ನಲ್ಲಿ 2268ಕೋಟಿ. ಇದು ಖಚಿತವಾಗಿ ಕೆಲಸದ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಇದು ಊಹೆಯಲ್ಲ ನಾನು ಪ್ಲಾನ್ ಮಾಡಿದ್ದೇನೆಂದು ಅಲ್ಲ. ಅದಕ್ಕೇ ಕಣ್ಣಿದ್ದರೆ ನೋಡಿ 2268ಕೋಟಿ ರೂ ಖರ್ಚುಮಾಡಿದ್ದೇವೆ.But it is not connected with this. ನದಿಗಳ ಡಿಸ್‌ಪ್ಯುಟ್ ಬಗ್ಗೆ ಜಯಲಲಿತಾರವರು ಏನಾದರೂ ಹೇಳಲಿ. ನಾಳೆ ಬಂದ ಪ್ರಧಾನ ಮಂತ್ರಿಗಳು ಮಾತನಾಡಬೇಕೇ ಹೊರತು, ಆ ಜಯಲಲಿತಾ ಹೇಳಿದರು ಅದಕ್ಕೆ ಒಂದು ಉತ್ತರ ಕೊಡಿ, ಎಂದರೆ ಯಾರು ಏನೇ ಹೇಳಿದರೂ ಅದಕ್ಕೆ ನಾನು ಉತ್ತರ ಕೊಡಬೇಕಾಗಿಲ್ಲ. ನಾನು ಉತ್ತರ ಏನಾದರೂ ಕೊಡುವುದು ಇದ್ದರೆ ಪ್ರಧಾನಮಂತ್ರಿಗಳು ಕರೆದು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ನೋಡಿ ನೀವು ಕೂಳಿತು ಬಗೆಹರಿಸಿಕೊಳ್ಳಿ ಅಂದರೆ I will talk only with Mr. Karunanidhi. I don't take into cognizance any others's statement. Let the Prime Minister call me. ಅವರು ಕರೆದರೆ ನಾನು ಹೋಗುತ್ತೇನೆ. ಜಯಲಿಲಿತಾರವರಿಗೆ ಉತ್ತರ ಹೇಳುವುದು ಬೇಡ. ನಮ್ಮ ಕೆಲಸವನ್ನು ನಾವು ಮಾಡೋಣ, ಕಾಲ ಹೋದರೆ ವಾಪಸ್ಸು. ಬರುವುದಿಲ್ಲ. ಕಳೆದ ಸಾರಿ I do admit, ಕೆಲಸ ವೇಗದಲ್ಲಿ ಆಗಲಿಯೆಂದು ಹೇಳಿ ಅಂತಹ ಉದ್ದೇಶದಿಂದ ಕೆಲವು ಎಂಟರೆಸ್ಟ್‌ಮೆಂಟ್, ಟೆಂಡರ್ ಕರೆಯುವುದು ಬರೀ ಆದರ ಬಗ್ಗೆ ವಾದ ಮಾಡಿಕೊಳ್ಳುತ್ತಾ ಹೋದರೆ, ಎಂಟಿರ್‌ಸ್ಟ್‌ಮೆಂಟ್ ಬ್ರೀಚ್ ಆಫ್ ಟ್ರಸ್ಟ್ ಆಗಬಹುದು. ಟೆಂಡರ್ ಕರೆಯದೆ ಕೊಡುವುದು ಇದೇ ಕಸಬು ಆಗಬಹುದು ಅದು ಆಗುವುದಿಲ್ಲವೆಂದಲ್ಲ. ಇದರೊಳಗೆ ಏನು ವ್ಯತ್ಯಾಸವಿದೆ ಏನೂ ಇಲ್ಲ. ಕೆಲಸ ಬೇಗ ಆಗಲಿಯೆಂದು ಕಾಗೋಡು ತಿಮ್ಮಪ್ಪನವರಿಗೆ 96ನೇ ಕಿಲೋಮೀಟರ್‌ನಿಂದ 97ನೇ ಕಿಲೋಮೀಟರ್‌ರವರೆಗೆ ಕೆಲಸ ಕೊಡುವುದು ಏಕೆಂದರೆ ಜಮೀನು ಅವರ ಹತೋಟಿಯಲ್ಲಿರುತ್ತದೆ ಅಲ್ಲಿನ ರೈತರು ಅವರ ಮಾತು ಕೇಳುತ್ತಾರೆ ಕೆಲಸ ಜಾಸ್ತಿಯಾಗುತ್ತದೆಂದು ಕಾಗೋಡು ತಿಮ್ಮಪ್ಪನವರಿಗೆ ಕೊಟ್ಟಿದ್ದು. ಅವರೇನೂ ನಮ್ಮ ಚಿಕ್ಕಪ್ಪನ ಮಗ ಅಂತಲ್ಲ. ಅಥವಾ ದುಡ್ಡಿನ ದೃಷ್ಟಿಯಿಂದಲ್ಲ. ಇದೇ ತರಹ ಎಂಟರೆಸ್ಟ್‌ಮೆಂಟ್ ಕೆಲಸ ಆಗಿರುವುದರಿಂದ ಇಷ್ಟು ಕೆಲಸವಾಯಿತು. 300 ಕಿಲೋಮೀಟರ್‌ರವೆಗೆ ಕಾಲುವೆ ತೆಗೆದಿದ್ದೇವೆ. ಶೇಕಡ 80ರಷ್ಟು ಸಿಡಿ ವರ್ಕ್ಸ್ ಕಂಪ್ಲೀಟ್ ಆಗಿದೆ. ಬರುವ ಒಂದೂವರೆ ತಿಂಗಳಿನಲ್ಲಿ 15 ಸಾವಿರ ಎಕರೆಗೆ ನಾವು ನೀರು ಕೊಡುತ್ತೇವೆ. ಮಾಡಿರುವುದರಲ್ಲಿ ದೋಷ ಕಂಡುಹಿಡಿದು ನಮಗೆ ಹೇಳಿದರೆ ಸರಿಪಡಿಸಿಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಬರೀ ದೋಷವನ್ನು ನೋಡಿಕೊಂಡು ನೀವು ಕೆಲಸ ಮಾಡಿಲ್ಲವೆಂದರೆ ಹೇಗೆ?

ಆದ್ದರಿಂದ ಮಾಡಿದ್ದರಲ್ಲಿ ದೋಷವನ್ನು ಕಂಡುಹಿಡಿದು ನಮಗೆ ಹೇಳಿದರೆ ಸರಿಪಡಿಸಿಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಬರೇ ದೋಷವನ್ನೇ ನೋಡುತ್ತಾ ನಾವು ಕೆಲಸವೇ ಮಾಡಿಲ್ಲವೆಂದು ಹೇಳಿದರೆ ಹೇಗೆ? ಮಾನ್ಯ ಖರ್ಗೆಯವರು ರಾಜ್ಯದ ಆಡಳಿತ ನಡೆಸಿದವರಲ್ಲಿ ಒಬ್ಬ ರೆಸ್ಪಾನ್ಸಿಬಲ್ ಸಿಟಿಜನ್. ಅವರು ಸರ್ಕಾರ ನಡೆಸಿದ್ದಾರೆ. ಇನ್ನು ಬಿ.ಜೆ.ಪಿ. ಯವರು ಸರ್ಕಾರ ನಡೆಸಿಲ್ಲ, ಅವರಿಗೆ ಗೊತ್ತಿಲ್ಲ ಎಂದು ಹೇಳಬಹುದು. ಇವರು ಹಿಂದೆ ಸರ್ಕಾರ ನಡೆಸಿದವರು, ಹೇಗೆ ಏನು ಮಾಡಿದ್ದರು, ಅವರ ಕಾಲದಲ್ಲಿ ಏನಾಗಿತ್ತು, ವಿರೇಂದ್ರ ಪಾಟೀಲರ ಕಾಲದಲ್ಲಿ ಏನು ಆಗಿತ್ತು, ಬಂಗಾರಪ್ಪನವರ ಕಾಲದಲ್ಲಿ ಏನಾಗಿತ್ತು ಅದನ್ನೆಲ್ಲಾ ತಿಳಿದುಕೊಂಡು ಅದರ ಬಗ್ಗೆ ಹೇಳಿದರೆ ನಾವು ಇಷ್ಟು ಮಾಡಿದ್ದೇವಪ್ಪ, ನೀವು ಮಾಡಿಲ್ಲ ಎಂದು ಹೇಳಿದರೆ, ಆಯ್ತು, ನಮ್ಮದು ಏನು ತಪ್ಪು ಎಂದು ನಮಗೆ ನಾವು ಹೇಳಿಕೊಳ್ಳಬಹುದು. ಅದುಬಿಟ್ಟು ತಮಗೆ ಅನುಭವ ಇದ್ದರೂ ಕೂಡ ಕೆಲಸ ಆಗಿದ್ದರೂ ಸಹ ಏನೂ ಮಾಡಿಲ್ಲವೆಂದು ಹೇಳಿಕೊಂಡು ಕುಳಿತರೆ ಹೇಗೆ? ಆದ್ದರಿಂದ ಘಟಪ್ರಭಾ, ಮಲಪ್ರಭಾ, ಕಾವೇರಿ ಹಾಗೆಯೇ ಇವತ್ತು ಕೆಲಸ ಮಾಡಿರತಕ್ಕಂಥ ಹಲವಾರು ಸಣ್ಣ ಯೋಜನೆಗಳನ್ನು ಎಲ್ಲಾ ಲೆಕ್ಕಹಾಕಿದರೆ ನಾವು - total committed usage of water

40 ಟಿ.ಎಂ.ಸಿ. ಕಡಿಮೆಯಾಗಬಹುದು. Otherwise, we will have completed all our share.

ಇನ್ನೂ ಒಂದು ಮಾತು. ನೀರಾವರಿ ಬಗ್ಗೆ ಬಂದಾಗ ಅದು ಸಿ.ಬಿ.ಐ. ತನಿಖೆ ಮಾಡಿಸಬೇಕು, ಈ ತನಿಖೆ ಮಾಡಿಸಬೇಕು ಎಂದು ಹೇಳುತ್ತಾರೆ. ಇದು ಯಾವ ತನಿಖೆಯೂ ಬೇಡ. ಇದೆಲ್ಲಾ ತನಿಖೆಗಳು ಹೆಚ್ಚಾಗಿ ಯಾವುದರ ಪರಿಣಾಮವೂ ಏನೂ ಅದಹಾಗೆ ಕಾಣಲಿಲ್ಲ. ಹಾಗೆಂದು ಮಾಡಿದ್ದೆಲ್ಲಾ ಸರಿ ಅಂತಲ್ಲ. ಯಾವ ಉದ್ದೇಶಕ್ಕೋಸ್ಕರ ಯಾರು ಏನು ಮಾಡಿದರು, ತ್ವರಿತವಾಗಿ ಕೆಲಸ ಮಾಡಿಲ್ಲ ಎಂದು ಹೇಳಿರಬಹುದು ಅಥವಾ ಕೆಲವು ಇಂಜಿನಿಯರುಗಳು ತಪ್ಪು ಮಾಡಿರಬಹುದು. ಅವರನ್ನೆಲ್ಲ ಇವತ್ತು ಏನ್‌ಕ್ವೈರಿ ಮಾಡಿಸಿ ಕೆಲವರು ಸಸ್ಪೆಂಡ್ ಆಗಿದ್ದಾರೆ, ಕೆಲವರನ್ನು ಹೊರಹಾಕಿದ್ದೇವೆ. ಇದೆಲ್ಲ ಅಡ್ಮಿನಿಸ್ಟ್ರೇಟಿವ್ ಮೆಷರ್ಸ್ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಫೈನಾನ್ಸಿಯಲ್ ಆಗಿ ಇವತ್ತು ನಾವು ಸಾಲ ಮಾಡಿದ್ದೇವೆ. ತ್ವರಿತವಾಗಿ ಏಕೆ ಕೆಲಸ ಮಾಡಬೇಕು ಎಂದರೆ ಶೇಕಡಾ ಹತ್ತೊಂಭತ್ತರ ಬಡ್ಡಿಯಲ್ಲಿ ಸಾಲವನ್ನು ತೆಗೆದುಕೊಂಡು ಬಂದು ಅದು ಏನು ಸುಮ್ಮನೆ ಮನೆಯಲ್ಲಿ ಇಟ್ಟುಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೆ? we have to use it as quickly as possible to achieve our share ಅದನ್ನು ಮಾಡಿದ್ದೇವೆ. ಇದು ನೀರಾವರಿ ಇಲಾಖೆ ಬಗ್ಗೆ ಬರೇ ಗುಮಾನಿಗಳು ಜಾಸ್ತಿ, ಸಂಶಯಗಳು ಜಾಸ್ತಿ. ಅದು ಆಗಬಾರದು. ಕೆಲಸ ಮಾಡುವವರಿಗೆ ನೀವು ಮಾಡಿದ್ದನ್ನು

ತೋರಿಸಿ ಎಂದು ಹೇಳಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು, ಗ್ರಾಮೀಣ ಅಭಿವೃದ್ಧಿ ಬಗ್ಗೆ ನಾನು ಆಗಲೇ ಹೇಳಿದೆ. ನಿರ್ಮಲ ಗ್ರಾಮದ ಕಲ್ಪನೆಯೇ ನಮ್ಮ ರಾಜ್ಯದಲ್ಲೇ

ಮೊದಲು ಹುಟ್ಟಿದ್ದು. ಏಕೆಂದರೆ ಹಳ್ಳಗಾಡುಗಳಲ್ಲಿ ಇವತ್ತಿಗೂ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳ ನಂತರವೂ ಸಂಜೆಯಾದ ಮೇಲೆ ಹೆಣ್ಣು ಮಕ್ಕಳು ಹೊರಹೋಗಬೇಕು ಅಥವಾ ಹೊತ್ತು ಹುಟ್ಟುವುದಕ್ಕೆ ಮುಂಚೆ ಹೋಗಬೇಕು. ಇದು ಒಂದು ತರಹ ಅವಮಾನ. ಇದು ಮನಸ್ಸಿಗೆ ಆಘಾತವಾಗುತ್ತದೆ. ಇಂತಹ ಆಘಾತವಾಗತಕ್ಕಂಥ ಸ್ಥಿತಿಯಲ್ಲಿ ಈ ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಒಂದು ಕಡೆ ಪಂಚತಾರಾ ಹೋಟೇಲ್‌ನಲ್ಲಿ ಅಮೆರಿಕಾಕ್ಕಿಂತ ಹೆಚ್ಚಿನ ರೀತಿಯ ಲಕ್ಸುರಿ ಮಾಡಿಕೊಂಡಿದ್ದೇವೆ. ಇನ್ನು ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಪ್ರಕೃತಿಯ ಒತ್ತಡಗಳನ್ನು ತೀರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ಏನು? What kind of country, we are? ಏನೋ ಸ್ವಲ್ಪ ವ್ಯತ್ಯಾಸ ಇದ್ದರೆ ಪರವಾಗಿಲ್ಲ. ಮೂರು ಅಂತಸ್ತಿನ ಮನೆ ಅವನದ್ದು, ನನ್ನದೂ ಒಂದು ಅಂತಸ್ತದ್ದು, ನನಗೂ ಒಂದು ಸೂರು ಇದೆ, ಅವನಿಗೂ ಒಂದು ಸೂರು ಇದೆಯೆಂದು ಹೇಳಬಹುದು. ಈತರಹ ಒಂದು - Inbalanced growth and luxury is sufferable harassment and distress in the villages.

ನಾನು ಅದನ್ನೇ ಕೇಳುವುದು. ನಾವು ಏನು ಕೆಲಸ ಮಾಡಿದ್ದೇವೆ? ನಿರ್ಮಲ ಗ್ರಾಮ ಕೆಲಸ ಮಾಡಿದ ತಕ್ಷಣ ಭತ್ತ ಚೆನ್ನಾಗಿ ಬೆಳೆಯುತ್ತದೆ ಎಂದು ಅಲ್ಲ. ನೀರಾವರಿ ಮಾಡಿದರೆ ಮಾತ್ರ ಭತ್ತ ಚೆನ್ನಾಗಿ ಬೆಳೆಯುತ್ತದೆ, ಕಬ್ಬು ಬೆಳೆಯುತ್ತದೆ. ಜನಗಳ ಮಾನಸಿಕ ಆರೋಗ್ಯ ಸಾಮಾಜಿಕ ನಿರ್ಮಲತೆ, ಅವುಗಳನ್ನು ಉಳಿಸಿಕೊಂಡು ಹೋಗಲಿಕ್ಕೆ ಅದು ಬೇಕು. ಸೋಷಿಯಲ್ ಸರ್ವೀಸ್ ಬೇಕು. ಕೆಲವು ಇಂಡಸ್ಟ್ರೀಯಲ್ ಗ್ರೋತ್, ಕೆಲವು ಮೆಂಟಲ್ ಡೆವಲಪ್‌ಮೆಂಟ್‌ಗೆ ಬೇರೆ ಬೇರೆ ಖಾತೆಗೆ ಸಂಬಂಧಪಟ್ಟಂತೆ ಬೇರೆಬೇರೆ ವಿಷಯಗಳಿಗೆ ಅಧ್ಯತೆಯನ್ನು ಕೊಟ್ಟು ನಡೆಸಿಕೊಂಡು ಹೋಗುತ್ತಿದ್ದೇವೆ. ಇದಕ್ಕೆ ಅದನ್ನು, ಮಿಕ್ಸ್ ಮಾಡುವುದಕ್ಕೆ ನಾವು ಹೋಗುತ್ತಿಲ್ಲ. ಮಹಿಳೆಯರಿಗೆ ಮೀಸಲಾತಿ ಬಗ್ಗೆ ಹೇಳಿದರು. ಅದು ಮಾಡಿದ ತಕ್ಷಣ ತಮ್ಮ ಫುಡ್ ಪ್ರೊಡಕ್ಷನ್ ಆಗುತ್ತದೆ ಎಂದು ಅಲ್ಲ. ಮಹಿಳೆಯರಿಗೆ ಮೀಸಲಾತಿ ಕೊಟ್ಟು ಅವರಿಗೆ ರಾಜಕೀಯ ವ್ಯವಸ್ಥೆಯಲ್ಲಿ ಈಗ ಇರತಕ್ಕಂಥ ರಾಜ್ಯದ ಆಡಳಿತದಲ್ಲಿ ಸಮಾನ ಪಾರ್ಟಿಸಿ ಪೇಷನ್ ಇದ್ದರೆ ಏಕೆಂದರೆ - Women are always better social entites than men. ಏಕೆಂದರೇ ಅವರಿಗೆ ಹೆಚ್ಚಿಗೆ ನೋವು ಅರ್ಥವಾಗುತ್ತದೆ, ಮಕ್ಕಳಿಂದ ಹಿಡಿದು ಮುದುಕರ ವರೆಗೆ. ಇವತ್ತು ಬಹುಶಃ ದೇಶದ ಆಡಳಿತವನ್ನು ಅವರ ಕೈಗೆ ಕೊಟ್ಟಿದ್ದರೆ ಇಷ್ಟು ವರ್ಷ ಇಷ್ಟು ಹುಡುಗರು ಇರುತ್ತಿರಲಿಲ್ಲ, ಅನಕ್ಷರಸ್ಥರು ಇಷ್ಟೊಂದು ಖಾಯಿಲೆ ಬರುತ್ತಿರಲಿಲ್ಲ. ಅದಕ್ಕೋಸ್ಕರವಾಗಿ ನಾವು ಇವತ್ತು ರಿಸ್‌ರ್ವೇಷನ್ ಫಾರ್ ವಿಮನ್ ಎಂದು ಮಾಡಿದ್ದೇವೆ.

Reservation for women is our priority; Decentralisation of power is our priority. We have done it, we are doing it. We are committed to do it.

ಇದಕ್ಕೆ ನಿಮ್ಮ ಸಹಕಾರ ಬೇಕು. ಪ್ರತಿಯೊಂದಕ್ಕೂ ನಾವು ಇದನ್ನು ಒಪ್ಪುವುದಿಲ್ಲ ಎಂದು ಹೇಳಿದರೆ ನೀವು ಲೀಗಲ್ ಅಡ್ವೈಸ್ ಕೊಟ್ಟರೆ ಅದು ಕೊಡಬಹುದಾದದ್ದು ಒಂದು ಪರಿಧಿಯೊಳಗೆ

ಮಾತ್ರ. We are dischargeing something more than just legal matters. This House is here with supreme power which everyone of us know.

ಯಾವುದೇ ಕಡೆ ಏನಾದರೂ ಅಸಮತೋಲನ, ಅನ್ಯಾಯ, ದೌರ್ಜನ್ಯ ಆದರೆ ಅದನ್ನು ಸರಿಪಡಿಸುವುದಕ್ಕೆ ಈ ಸದನ ಇರುವುದು. ಯಾವುದೋ ಒಂದು ಸೆಕ್ಷನ್‌ಗಾಗಿ ಅಲ್ಲ. ಒಂದು ಜಾತಿಗೆ ಅಲ್ಲ, ಒಂದು ಧರ್ಮಕ್ಕೆ ಅಲ್ಲ. ಎಲ್ಲರಿಗೋಸ್ಕರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೋಸ್ಕರ ಈ ಸದನ ಇರುವುದು. ಯಾರೇ ಆಳಲಿ, ನೀವೇ ಆಳಬಹುದು, ನಾವೇ ಆಳಬಹುದು, ಖರ್ಗೆಯವರು ಆಳಬಹುದು; ಯಾರೇ ಬರಲಿ. ಆದರೆ ನಮ್ಮ ದೃಷ್ಟಿಕೋನ ಅದು ಇರಬೇಕು. ಆ ದೃಷ್ಟಿಯಿಂದ ಗ್ರಾಮೀಣ ಅಭಿವೃದ್ಧಿಯಲ್ಲಿ ಇಷ್ಟು ಕೆಲಸವನ್ನು ರಾಷ್ಟ್ರದ ಬೇರೆ ಯಾವ ರಾಜ್ಯಗಳಲ್ಲೂ ಮಾಡಿಲ್ಲ. ಬರೇ ಕುಡಿಯುವ ನೀರಿಗೆ ಈ ಸಾರಿ 198 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಶುದ್ಧವಾದ ಕುಡಿಯುವ ನೀರಿಗೆ 198 ಕೋಟಿಯಲ್ಲಿ ಇದರಲ್ಲಿ ಕೇಂದ್ರದ 25-26 ಕೋಟಿ ಬಂದಿದೆ ಎಂದು ಹೇಳಿದರು. ಉಳಿದುದ್ದೆಲ್ಲವನ್ನೂ ನಾವೇ ಖರ್ಚು ಮಾಡಿದ್ದೇವೆ. ಆದ್ದರಿಂದ ಗ್ರಾಮೀಣಾಭಿವೃದ್ಧಿ, ಶಿಕ್ಷಣ, ವಸತಿಯೋಜನೆ, ಔದ್ಯೋಗಿಕ ಬೆಳವಣಿಗೆ, ವಿದ್ಯುಚ್ಛಕ್ತಿ, ನೀರಾವರಿ ಇವುಗಳನ್ನು ನಾವೇನು ಮಾಡಿದ್ದೇವೆ ಎಂದು ನೀವು ತೆರೆದ ಮನಸ್ಸಿನಿಂದ ವಿಥೌಟ್ ಪ್ರಿಜುಡೀಸ್ ನೋಡಿ ಅವಾಗ ನಿಮ್ಮದು ಇಂತಹ ಕಡೆ ತಪ್ಪಾಗಿದೆ ಎಂದು ಹೇಳಿದರೆ ತಿದ್ದಿಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಅದು ಇಲ್ಲದೆ ಸುಮ್ಮನೆ ಏನೂ ಮಾಡಿಲ್ಲವೆಂದರೆ ಹೇಗೆ? ಅದಕ್ಕಾಗಿಯೇ ನಾನು ಹೇಳಿದ್ದು. ಕಣ್ಣು, ಕಿವಿ, ಮೂಗು ಸರಿ ಇದ್ದರೆ ವಾಸನೆ ಗೊತ್ತಾಗುತ್ತದೆ, ಶಾಖೋತ್ಪತ್ತಿ ಗೊತ್ತಾಗುತ್ತದೆ, ಪ್ರತಿಯೊಂದೂ ಗೊತ್ತಾಗುತ್ತದೆ. ಆರೋಗ್ಯಕರವಾದ ಸಮಾಜವನ್ನು ಕಟ್ಟುವುದಕ್ಕೆ ಮೊದಲು ಎಲ್ಲರಿಗೂ ಆರೋಗ್ಯ ಇರಬೇಕು. ಹಾಗೆಯೇ ನಮ್ಮರಾಜ್ಯದಲ್ಲಿ ಇವತ್ತು ಆರೋಗ್ಯ ಖಾತೆಯಿಂದ ಸುಮಾರು 252 ಆಸ್ಪತ್ರೆಗಳನ್ನು ಅಡ್ವಾನ್ಸ್ ಟೆಕ್ನಾಲಜಿಯನ್ನು ಉಪಯೋಗಿಸಿಕೊಂಡು ಅಪ್‌ಗ್ರೇಡೇಷನ್ ಮಾಡಿದ್ದೇವೆ. ಮುಖ್ಯವಾಗಿ ಗುಲ್ಬರ್ಗಾ ಜಿಲ್ಲೆಗೆ ಜರ್ಮನ್ ಸಂಸ್ಥೆಯಿಂದ ಬಂದಿರುವ ಹಣದಿಂದ ಸುಮಾರು 52 ಆಸ್ಪತ್ರೆಗಳನ್ನು ಮತ್ತು ರಾಜ್ಯದ ಬೇರೆ ಕಡೆಗೆ ಇರುವ 200 ಆಸ್ಪತ್ರೆಗಳನ್ನು ನಾವು ಸುಧಾರಣೆ ಮಾಡುತ್ತಿದ್ದೇವೆ. ಕೆಲವು ಕಡೆ ಹೊಸ ಕಟ್ಟಡಗಳನ್ನು ಕಟ್ಟುತ್ತಿದ್ದೇವೆ. ಆ ಕೆಲಸ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ನಾನು ಬರೇ ನಕ್ಷೆಯನ್ನು ಇಲ್ಲಿ ಹೇಳುತ್ತಿಲ್ಲ. 660 ಜನ ಡಾಕ್ಟರ್‌ಗಳನ್ನು ಕೆ.ಪಿ.ಎಸ್.ಸಿ. ಮೂಲಕ ಅಪಾಯಿಂಟ್ ಮಾಡಿದ್ದೇವೆ. ಆದರೆ, ಅವರಲ್ಲಿ ಕೆಲವರು ಹಳ್ಳಿಗಳಿಗೆ ಹೋಗಲಿಲ್ಲ. ಅಂತಹ ಕಡೆ ಸುಮಾರು 200 ಜನ ಡಾಕ್ಟರ್‌ಗಳನ್ನು ಲಭ್ಯವಿರತಕ್ಕಂಥವರನ್ನು ನೀವೇ ಅಪಾಯಿಂಟ್ ಮಾಡಿಕೊಳ್ಳಿ ಎಂದು ಡೆಪ್ಯುಟಿ ಕಮಿಷನರ್‌ಗಳಿಗೆ ಹೇಳಿ ಇವತ್ತು ಅಂತಹ ಕಡೆ ಅಪಾಯಿಂಟ್ ಮಾಡಿದ್ದೇವೆ. ಆದರೆ ಇನ್ನೂ ಕೆಲವು ಕಡೆ ಅವರು ಹೋಗಲಿಲ್ಲ. ನಮ್ಮ ಡಾಕ್ಟರ್‌ಗಳು - of course, they are cream of our society ಹಳ್ಳಿಯಲ್ಲೇ ಹುಟ್ಟಿ ಹಳ್ಳಿಗಳಲ್ಲೇ ಬೆಳೆದು ಓದಿಬಂದಿರತಕ್ಕಂಥವರು. ಅವರ ಮೇಲೆ ಸರ್ಕಾರ ಎಲ್ಲರೂ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿದರೆ, ಅವರು ಇಲ್ಲ, ನಾವು ಪಟ್ಟಣದಲ್ಲೇ ಇರುತ್ತೇವೆ, ಫಾರೀನ್‌ಗೆ ಹೋಗುತ್ತೇವೆ ಎಂದರೆ, ಈ ಯುವಕರುಗಳು ಇವತ್ತು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ನೀವು ಹುಟ್ಟಿಬೆಳೆದದ್ದು

ಹಳ್ಳಿಗಳಲ್ಲಿ. ಅದನ್ನು ಸರಿಪಡಿಸದೇ ಲಂಡನ್‌ಗೆ ಹೋಗಿ ಇವತ್ತು ಡಿಗ್ರಿ ತೆಗೆದುಕೊಂಡುಬರುತ್ತೇವೆ ಎಂದರೇ ಅದರಿಂದ ಏನು ಲಾಭ? ಅದು ಪೇಟ್ರಿಯಾಟಿಸಮ್, ಅದು ಹಿಂದೂತ್ವ. ಅದು ರಾಷ್ಟ್ರೀಯತೆ. ಅದಕ್ಕೆ ಜಾತಿ ಇಲ್ಲ. ಅದಕ್ಕೆ ಒಂದು ಒಳ್ಳೆಯ ಉದ್ದೇಶ ಇರಬೇಕು. ಮುಸಲ್ಮಾನ್ ಇರಬಹುದು, ಕ್ರೈಸ್ತ ಇರಬಹುದು, ಜೈನರು ಇರಬಹುದು, ಯಾರೇ ಇರಬಹುದು. ಈರೀತಿಯ ಒಂದು ಕಲ್ಪನೆಯನ್ನು ತಾವು ನಮಗೆ ತಿಳಿಸಿದರೆ ನಾವು ಒಪ್ಪಿಕೊಳ್ಳುತ್ತೇವೆ. ನಾವು ಮಾಡಿದ ಕೆಲಸದಲ್ಲಿ ತಪ್ಪಾಗಿದ್ದರೆ, ನೀವು ಹೇಳಿದರೆ ನಾವು ತಿದ್ದಿಕೊಳ್ಳುತ್ತೇವೆ. ಅದುಬಿಟ್ಟು ಸುಮ್ಮನೆ ಹೇಳಬೇಕು, ಅದಕ್ಕೋಸ್ಕರ ಹೇಳುತ್ತೇವೆ ಎಂದರೆ ಅದು ಸರಿಯಲ್ಲ. ಬಸ್ ಸ್ಟ್ರೈಕ್ ಮಾಡಿದರು. ಯಾರನ್ನೂ ಕೇಳಲಿಲ್ಲ ವಿನಾಕಾರಣ ಸ್ಟ್ರೈಕ್ ಮಾಡಿದರು. ಇದರಿಂದಾಗಿ ಎಲ್ಲರಿಗೂ ತೊಂದರೆಯಾಯಿತು. ಇದಕ್ಕೆ ಸರ್ಕಾರ ಏನೂ ಮಾಡಲಿಲ್ಲ ಎಂದರು. ಅವರನ್ನು ಕರೆಸಿ ಮಾತನಾದಿದೆವು ಈಗ ಸ್ಟ್ರೈಕ್ ವಿತ್‌ಡ್ರಾ ಮಾಡಿದ್ದಾರೆ. ಈ ರೀತಿ ಯಾವುದೇ ಒಂದು ವರ್ಗ ಇನ್ನೊಂದು ವರ್ಗವನ್ನು ransom ಹೈಜಾಕ್ ಮಾಡಿದರು. ಈ ರೀತಿ ಮಾಡಬಾರದು. ಅವರ ಡಿಮ್ಯಾಂಡ್ಸ್ we are here to listen to them and do something to them.

ಅದಕ್ಕೆ ನಮ್ಮೆಲ್ಲರ ರಾಜ್ಯಪಾಲರ ಭಾಷಣದ ಮೇಲೆ ಮಾತಾನಾಡುವಾಗ ಮೊನ್ನೆ ನಡೆದ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಹೇಳಿ ಸರ್ಕಾರಕ್ಕೆ ಜನಾದೇಶ ಇಲ್ಲ, ಈ ಸರ್ಕಾರ ಹೋಗಬೇಕೆಂದು ಕೆಲವರು ಹೇಳಿದರು. ಈ ರೀತಿ ಜನಾದೇಶ ಇಲ್ಲದ ಕಾರಣಕೋಸ್ಕರ ಯಾವ ಯಾವ ರಾಜ್ಯದಲ್ಲಿ ಏನೇನು ಆಗಿದೆ ಅವರೆಲ್ಲರೂ ಸೇರಿಕೊಂಡು ರಾಷ್ಟ್ರಪತಿಯವರ ಹತ್ತಿರ ಹೋಗಿ "ಸ್ವಾಮಿ, ಚುನಾವಣೆಯಲ್ಲಿ ಈ ರೀತಿ ಆಗಿದೆ, ಆದಕೋಸ್ಕರ ನಮ್ಮ ಸರ್ಕಾರವನ್ನು ಬದಲಾವಣೆ ಮಾಡುತ್ತೇವೆ" ಎಂದು ಹೇಳಿದರೆ... ಮನೋಹರ ಜೋಷಿ ಬರಲಿ, ಶೆಕಾವತ್ ಬರಲಿ, ಅಸ್ಸಾಂ ಪರಿಷತ್‌ನವರು ಬರಲಿ, ಆಂಧ್ರಪ್ರದೇಶದವರು ಬರಲಿ, ತಮಿಳುನಾಡಿನವರು ಬರಲಿ, ಬನ್ಸಿಲಾಲ್‌ರವರು ಬರಲಿ, ದಿಗ್ವಿಜಯ ಸಿಂಗ್‌ರವರು ಬರಲಿ, ಇವರೆಲ್ಲರೂ ಬಂದರೆ, ಮಾನ್ಯ ಯಡಿಯೂರಪ್ಪನವರೇ, ನಾನು ಒಂದು ನಿಮಿಷ ತಡ ಮಾಡುವುದಿಲ್ಲ. ನಾನು ಅವರಿಗಿಂತ ಮುಂಚೆ ಹೋಗಿ ಕೊಡುತ್ತೇನೆ. ಆದರೆ ಅದು ಅಲ್ಲ. ವಾಸ್ತವಿಕತೆ ಬೇರೆ. 1984ನೇ ಇಸವಿಯಲ್ಲಿ ರಾಮಕೃಷ್ಣ ಹೆಗಡೆಯವರು ಲೋಕಸಭಾ ಚುನಾವಣೆ ಆದ ನಂತರ ತಕ್ಷಣ ರಾಜೀನಾಮೆಕೊಟ್ಟರು ಎಂದು ಯಾರೋ ಹೇಳಿದರು. ರಾಮಕೃಷ್ಣ ಹೆಗಡೆಯವರು ಆಗ ರಾಜೀನಾಮೆ ಕೊಟ್ಟಿದ್ದು ನೈತಿಕತೆಯ ಆಧಾರದ ಮೇಲೆ. ಅವರಿಗೆ ರಾಜೀನಾಮೆ ಕೊಡುವಂತೆ ಹೇಳಿದ್ದು ನಾನೇ. ಆಗ ಆ ಸರ್ಕಾರದಲ್ಲಿ ನಾನೂ ಒಬ್ಬ ಇದ್ದೆ. That ideological ground is not comparable to the present sitution.

ತಾವು ಕೋಪಿಸಕೊಳ್ಳಬಾರದು, ಏಕೆಂದರೆ ಆಗ ನಮಗೆ ಒಂದು ಕಷ್ಟ ಇತ್ತು. ಅದೇನೆಂದರೆ, ತಮ್ಮ ಬೆಂಬಲದಿಂದ ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ಆದ್ದರಿಂದ ನಿಮ್ಮ ಸಹಾವಾಸ ಬೇಡ ಎಂದು ಹೇಳಿ ಚುನಾವಣೆಗೆ ಹೋಗಿದ್ದು ಉಂಟು. ಆದ್ದರಿಂದ ಯಾವ ಯಾವ ಸಂದರ್ಭದಲ್ಲಿ ಯಾವುದನ್ನು ಹೋಲಿಕೆ ಮಾಡಿಹೆ ಕೇಳಬೇಕೋ ಅದನ್ನು ಹೇಳಿದರೆ ಚೆನ್ನಾಗಿರುತ್ತದೆ. ಆದ್ದರಿಂದ

ನಿಮ್ಮ ಮಾತು ನನಗೆ ಮಾರ್ಗದರ್ಶನ ನೀಡುವುದಾದರೆ ಅದಕ್ಕೆ ನಾನು ಡಿಸ್ಸೈ ಮಾಡುವುದಿಲ್ಲ. I have also equal commitment to democracy and principles of democracy. Thank you Sir.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮೊದಲನೇ ಬಾರಿ ಈ ಸದನದಲ್ಲಿ ಬಹಳ ದೀರ್ಘವಾಗಿ ಭಾಷಣ ಮಾಡಿದ್ದಾರೆ. ಸುಮಾರು ಒಂದೂವರೆ ತಾಸು ಭಾಷಣ ಮಾಡಿದ್ದಾರೆ. ಯಾವ ಯಾವ ವಿಷಯದ ಮೇಲೆ ಎಷ್ಟು ಹೊತ್ತು ಮಾತನಾಡುತ್ತಾರೆಂದು ನಾನು ನನ್ನ ಎದುರಿಗಡೆ ಗಡಿಯಾರವಿರುವುದರಿಂದ ನೋಡುತ್ತಾ ಹಾಗೂ ಗಂಭೀರವಾಗಿ ಕೇಳುತ್ತಿದ್ದೇ. ಏಕೆಂದರೆ ಅವರು ಹೇಳುವುದನ್ನು ಕೇಳಿ ತಿಳಿದುಕೊಳ್ಳಬೇಕು, ಮತ್ತು ಅದಕ್ಕೆ ಕೆಲವು ವಿವರಣೆಯನ್ನು ಕೇಳಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಸುಮಾರು 15 ನಿಮಿಷಗಳ ಕಾಲ ಶಂಕರಾಚಾರ್ಯರ ತತ್ವದ ಮೇಲೆ ಮಾತಾನಾಡುತ್ತಾ ಕಳೆದರು. ಕಪಿ, ಮಾನವ, ಅಲ್ಲಿಂದ ಪ್ರಾರಂಭಿಸಿ, ಜನತಾ ದಳ ಎಲ್ಲಿದೆ ಎಂದರೆ ಕಪಿ ಯಾವ ಯಾವ ರೀತಿಯಲ್ಲಿ ಎವೊಲ್ಯೂಶನ್ ಆಗಿ ಕೊನೆಗೆ ಯಾವ ರೀತಿ ಮನಷ್ಯ ಬಂದನೋ ಮತ್ತು 10ನೇ ಶತಮಾನದಲ್ಲಿ ಶಂಕರಾಚಾರ್ಯರು ಏನೇನು ವ್ಯಾಖ್ಯಾನಗಳನ್ನು ಮಾಡಿದ್ದರೋ ಅದರ ಬಗ್ಗೆ ಹೇಳಿಕೊಂಡು ತನ್ನ ಪಕ್ಷದ ಅಸ್ತಿತ್ವವನ್ನು ಅವರು ಈ ದೇಶಕ್ಕೆ , ಕರ್ನಾಟಕ ರಾಜ್ಯದ ಜನರ ಮುಂದೆ ಇಡತಕ್ಕಂಥ ಒಂದು ಪ್ರಯತ್ನ ಮಾಡಿದರು. ನಮ್ಮ ವಾಟಾಳ್‌ರು ಹೇಳಿದ ಹಾಗೆ ಸಾಮಾನ್ಯವಾಗಿ ಹರಿಕಥೆಯಿಂದ ಪ್ರಾರಂಭಿಸಿ ಕೊನೆಗೆ ಕೆಲವು ಅಂಕಿಅಂಶಗಳನ್ನು ಅವರಿಗೆ ಕೊಟ್ಟಿರುವ ಮಾಹಿತಿ ಪ್ರಕಾರ ನಮ್ಮ ಮುಂದಿಟ್ಟಿದ್ದಾರೆ. ಅದನ್ನು ಅವರು ಎಲ್ಲಲ್ಲಿ ಅನುಕೂಲ ಆಗಬೇಕು ಅಲ್ಲಿ ಜೋಡಿಸಿ ಹೇಳಿದ್ದಾರೆ. ಉದಾಹರಣೆಗೆ ಮನೆಗಳ ವಿಷಯಕ್ಕೆ ಬಂದಾಗ ಅಂಬೇಡ್ಕರ್, ಆಶ್ರಯ, ಇಂದಿರಾ ಅವಾಸ್, ಕೇಂದ್ರ ಸರ್ಕಾರದ ಎಲ್ಲಾ ಸೇರಿಸಿ ಗುಂಪು ಮಾಡಿ ಇಷ್ಟು ಮನೆಗಳನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ, ನಾವು ಏನು ಅಪಾದನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾವು ಏನು ಅಪಾದನೆ ಮಾಡಿದ್ದೇವೆ ಅದಕ್ಕೆ ಅವರು ಉತ್ತರ ಕೊಡುವುದಕ್ಕೆ ಹೋಗಲಿಲ್ಲ. ಏಕೆಂದರೆ ಅವರು ಬುದ್ಧಿವಂತರು. ಒಟ್ಟಿನಲ್ಲಿ ಅವು ಎಲ್ಲಾ ಮನೆಗಳನ್ನು ತಾನೇ ಕಟ್ಟಿಸಿದ್ದೇನೆ ಎಂದು ಅರ್ಥದಲ್ಲಿ ಹೇಳಿದ್ದಾರೆ. ನೀರು, ಸೂರು, ಅನ್ನ, ಈ ಮೂರು ಮಹತ್ವದ ಮಾತುಗಳನ್ನು ಹೇಳಿದರು. ಇದಕ್ಕೆ ಯಾವ ಯಾವ ಯೋಜನೆಯಲ್ಲಿ, ಯಾವ ಯಾವ ಸ್ಕೀಮ್‌ನಲ್ಲಿ ಎಂದು ಕೂಡಿಸಿ ಹೇಳಿದರು. ಈ ಮನೆಯಲ್ಲಿ ಪ್ರಸ್ತಾಪ ಮಾಡಿರುವಂಥದ್ದಕ್ಕೆ ತಾವು ನಮಗೆ ಅಂಕಿಅಂಶಗಳನ್ನು ಒದಗಿಸಿಕೊಟ್ಟಿದ್ದೀರಿ. ಇಲ್ಲವೆಂದರೆ ಅವರ ಅಂಕಿಅಂಶಗಳು ಸುಳ್ಳು ಇರಬಹುದು, ಸತ್ಯಕ್ಕೆ ದೂರವಾದುದು ಇರಬಹುದು. ಇಲ್ಲವಾದರೆ ಅವರು ಹೇಳುವುದರಲ್ಲಿ ರಾಜಕೀಯವಾಗಿ ಏನಾದರೂ ಹೇಳಬೇಕು ಎಂದು ಎನ್ನುವ ದೃಷ್ಟಿ ಇರಬಹುದು. ಏಕೆಂದರೆ ನಾನು ಇಲ್ಲಿ ತಮಗೆ ಒಂದು ಉದಾಹರಣೆಯನ್ನು ಓದಿ ಹೇಳುತ್ತೇನೆ. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:183, ದಿನಾಂಕ: 13-3-98 ರಂದು ನೀವು ಒದಗಿಸಿರುವ ಮಾಹಿತಿಯಲ್ಲಿ 1997-98ರಲ್ಲಿ ತಾವು ಎಷ್ಟು ಮನೆಗಳನ್ನು ಕಟ್ಟಿದ್ದೀರಿ, ತಮ್ಮ ಗುರಿ ಏನು ಇತ್ತು, ತಾಲ್ಲೂಕು ವೈಸ್ ಎಲ್ಲವೂ ಇದರಲ್ಲಿ ಇದೆ. ತಮ್ಮ ಗುರಿ ಇದ್ದದ್ದು ಒಟ್ಟು: 30,625, ತಾವು ಮನೆಗಳನ್ನು ಫೆಬ್ರವರಿ ಕೊನೆಯವರೆಗೆ ಕಟ್ಟಿದ್ದು 798. ಇದನ್ನು

ತಮಗೆ ಕೊಡುತ್ತೇನೆ ತಾವು ಅವರಿಗೆ ಕಳುಹಿಸಿ ಕೊಡಬಹುದು. ಏಕೆಂದರೆ ಅದು ಇವತ್ತು ತಾವು ನೋಡಿ. ನಂತರ ಉಳಿದ ಪರಿಶಿಷ್ಟ ಜಾತಿ ಪಂಗಡದವರಿಗೆ ಕೂಡ ಯಾವ ರೀತಿ ತಮ್ಮ ಗುರಿ ಇತ್ತೋ ಅಷ್ಟನ್ನು ತಲುಪುವುದಕ್ಕೆ ಮಾಡಿದ್ದೀರಿ ಎನ್ನುವುದಕ್ಕೆ ಪ್ರಶ್ನೆ 83ಕ್ಕೆ ಅನುಬಂಧದಲ್ಲಿ ಈ ಪ್ರಶ್ನೆಗೆ ತಾವು ಉತ್ತರ ಕೊಟ್ಟಿದ್ದೀರಿ, ಅದನ್ನು ಕೂಡ ನಾನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತಿದ್ದೇನೆ. ಎಷ್ಟರ ಮಟ್ಟಿಗೆ ತಾವು ಸಾಧನೆ ಮಾಡಿದ್ದೀರಿ ಎನ್ನುವುದನ್ನು ನೋಡಿಕೊಳ್ಳಲಿ. ಇನ್ನು ವಸತಿ ಬಗ್ಗೆ ಹೇಳುವುದಾದರೆ, ನಿವೇಶನ ವಿತರಣೆ 1996-97 ಮತ್ತು 1997-98ರಲ್ಲಿ ನಮ್ಮ ಗುರಿ ಏನು? ಉದಾಹರಣೆಗೆ ಗುರಿ ಇರುವುದು 2,07,326 ಇದ್ದರೆ ನಿಮ್ಮ ಸಾಧನೆ: 1,19,705. 1997-98ರಲ್ಲಿ ತಮ್ಮ ಗುರಿ: 1,50,000 ಇದ್ದರೆ ಸಾಧನೆ: 22,761. ಇದ್ದೂ ಕೂಡ ಪ್ರಶ್ನೆ ಸಂಖ್ಯೆ: 180, 13.3.98ರಂದು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇದು ಕೂಡ ನಿಮ್ಮ ಸಾಧನೆ ನೋಡಿಕೊಳ್ಳಿ. ಏಕೆಂದರೆ ತಾವು ಏನು ತಪ್ಪು ಮಾಡಿಲ್ಲ ನೀವು ಸುಮ್ಮನೆ ವಾದ ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದೀರಿ. ಎಷ್ಟು ಸತ್ಯಾಂಶ ಅದರಲ್ಲಿ ಇದೆ ಎನ್ನತಕ್ಕಂಥದ್ದನ್ನೂ ಕೂಡ ತಾವೂ ತಿಳಿದುಕೊಳ್ಳಬಹುದು. ಇನ್ನು ನೀರಾವರಿ ಬಗ್ಗೆ ತಾವು ಹೇಳಿದ್ದೀರಿ. ಮೂರು ನಾಲ್ಕು ವರ್ಷಗಳಿಂದ ತಾವು ಬಿಡುಗಡೆ ಮಾಡಿರುವ ಹಣ, ಮತ್ತು ಖರ್ಚು ಮಾಡಿರುವ ಬಗ್ಗೆ ಮಾತ್ರ ಹೇಳಿದ್ದೀರಿ. ಇಲ್ಲಿ ನಾನು ಯುಕೆಪಿ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಯುಕೆಪಿಗೆ 1997-98ರಲ್ಲಿ 1,249 ಕೋಟಿ ರೂ. ಗಳ ನಿಮ್ಮ ಗುರಿ ಇತ್ತು. ಆದರೆ ನೀವು ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣ ಎಂದರೆ 488 ಕೋಟಿ 68 ಲಕ್ಷ ರೂ. ಗಳು ಮಾತ್ರ.

4.40 ಪಿ.ಎಂ.

ಇದು ಇಂಜಿನಿಯರ್ ಇನ್ ಚೀಫ್ ಕಂ ಪ್ರಾಜೆಕ್ಟ್ ಕೋ ಆರ್ಡಿನೇಟರ್ ಯು.ಕೆ.ಪಿ. ಆಲಮಟ್ಟಿ. ಇದನ್ನೂ ಬೇಕಾದರೆ ಅವರ ಅವಗಾಹನೆಗೆ ಕಳುಹಿಸಿಕೊಡಿ. ಅಂದರೆ, ಏನು ಗುರಿ ನಿಗದಿ ಮಾಡುತ್ತಾರೋ ಅದರ 50 ಪರ್ಸೆಂಟ್ ಹಣವನ್ನು ಇವತ್ತು ಖರ್ಚುಮಾಡಿಲ್ಲ. ಇವತ್ತು ಅವರು ನಮಗೆ ಕಣ್ಣಿಲ್ಲ, ದೊಡ್ಡ ಡ್ಯಾಮ್ ಇದೆ, ಹೋಗಿ ನೋಡಿ, ದೊಡ್ಡ ಅಕ್ಷರ ಕಾಣುತ್ತವೆ, ಕೆಳಗೆ ಚಿಕ್ಕದು ಕಂಡರೂ, ಇಂತಹ ದೊಡ್ಡ ಕೆಲಸ ನಾನು ಮಾಡಿದ್ದೇನೆ, ಇದರಲ್ಲಿ ನಿಮ್ಮ ಸಾಧನೆ ಏನೂ ಇಲ್ಲವೆಂದು ಹೇಳುತ್ತಾ ಇದ್ದೀರಲ್ಲಾ ನಿಮ್ಮ ಗುರಿ ಮತ್ತು ನಿಮ್ಮ ಸಾಧನೆ ನೋಡಿದರೆ ಯಾವ ಮಟ್ಟಕ್ಕೆ ನೀವು ಕೆಲಸ ಮಾಡಿದ್ದೀರಿ ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ. ಇದಕ್ಕೇನು ಕನ್ನಡಿ ಬೇಕಾಗಿಲ್ಲ. ಅದಕ್ಕಾಗಿ ಇದನ್ನೂ ತಮ್ಮ ಅವಗಾಹನೆಗೆ ತರುತ್ತಾ ಇದ್ದೇನೆ. ಇವುಗಳನ್ನೆಲ್ಲಾ ಅವರಿಗೆ ತೋರಿಸಲಿ. ಏಕೆಂದರೆ, ಪುರಸೊತ್ತು ಇದ್ದಾಗ, ಅವರು ಇದನ್ನು ನೋಡಿದರೆ ಒಳ್ಳೆಯದಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ, ದಯವಿಟ್ಟು ತಮ್ಮ ಗುರಿ ಏನಿದೆ, ಆ ಗುರಿ ಪ್ರಕಾರ ಅಥವಾ ತಾವು ಕೊಟ್ಟಂಥ ಹಣವನ್ನು ಸದುಪಯೋಗ ಮಾಡಿದ್ದಾರೆ ಎಂಬುದನ್ನು ರಿವ್ಯೂ ಮಾಡತಕ್ಕಂಥಾದ್ದು ಬಹಳ ಮುಖ್ಯ. ಬರೀ ನಾವು ಇಷ್ಟು ಹಣವನ್ನು ಕೊಟ್ಟಿದ್ದೇವೆ ಎಂಬುದಕ್ಕಿಂತ ಅದು ಖರ್ಚಾಗಿದೆಯೇ ಎಂಬುದನ್ನು ನೋಡಬೇಕು; ಬಿಡುಗಡೆಯಾಗಿದೆಯೇ ಎಂಬುದನ್ನು ನೋಡಬೇಕು. ಆ ರೀತಿಯಾಗಿ

ಬೊಬಲ್ಲೆಸ್ ಮಾಡಿದ್ದಾರೆಯೇ ಎಂದು ನೋಡಬೇಕು. ಅದೂ ಕೂಡ ಇಲ್ಲ. ಇನ್ನೊಂದು ವಿ.ಸಿ. ಕೆನಾಲ್ ಬಗ್ಗೆಯೂ ಹೇಳಿದಿರಿ. ವಿ.ಸಿ. ಕೆನಾಲ್‌ಗಾಗಿ ಸುಮಾರು 285 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, ಕೆನಾಲ್ ರಿಪೇರಿ ಮಾಡಿಸುತ್ತಿದ್ದೇವೆ. ಅದೂ ಇವರ ಕಣ್ಣಿಗೆ ಕಾಣಿಸುತ್ತಾ ಇಲ್ಲವೆಂದರು. ಆದರೆ, ಮೊದಲು ತಾವು ಎಷ್ಟು ಹಣ ಖರ್ಚುಮಾಡುತ್ತೀರಿ, ಆದರ ಗುಣಮಟ್ಟವೂ ಇರಬೇಕು. ಮತ್ತು ಎಸ್ಟಿಮೇಟ್‌ನಲ್ಲಿ ತರಾತುರಿಯಲ್ಲಿ ಆಗಿದೆ ಎನ್ನತಕ್ಕಂಥ ಮಾತು, ತಾವು ಹೇಳಿಕೊಂಡು ಇವತ್ತು 10 ರೂಪಾಯಿ ಆಗುವಂಥ ಕೆಲಸಕ್ಕೆ ನಾವು 100 ರೂಪಾಯಿ ಎಸ್ಟಿಮೇಟ್ ಮಾಡಿದರೆ, ಹಣವನ್ನು ಎಲ್ಲಿಂದ ತರುವುದು? ನಾವು ಹಣವನ್ನು ಎಷ್ಟು ಖರ್ಚುಮಾಡುತ್ತೇವೆನಾನುವುದನ್ನು ಸಮರ್ಥನೆ ಮಾಡಿಕೊಳ್ಳುವುದಲ್ಲ. ಆ ಹಣದ ಜೊತೆಯಲ್ಲಿ ನಾವು ನಿಜವಾಗಿಯೂ ಆ ಭೌತಿಕ ಗುರಿಯನ್ನು ಅಚೀವ್ ಮಾಡಿದ್ದೇವೆಯೇ ಎನ್ನುವುದನ್ನೂ ನೋಡಬೇಕು. ಅವರು ಪದೇಪದೇ ಅಂಕಿಸಂಖ್ಯೆ ಹೇಳುತ್ತಾರೆ. ಉದಾಹಣೆಗೆ ಹಿಂದೆ ಕೃಷ್ಣರಾಜಸಾಗರ ಡ್ಯಾಮ್ ಕಟ್ಟುವುದಕ್ಕೆ ವಿಶ್ವೇಶ್ವರಯ್ಯನವರು ಕೇವಲ 3 ಕೋಟಿ ರೂಪಾಯಿ ಖರ್ಚುಮಾಡಿದ್ದಾರೆ ಎನ್ನತಕ್ಕಂಥಾದ್ದು ನಮ್ಮ ಅಂದಾಜಿನಲ್ಲಿದೆ. ಹಿಂದೆ ಒಂದು ಡ್ಯಾಮಿಗೆ 3 ಕೋಟಿ ಖರ್ಚುಮಾಡಿದರು. ಇವತ್ತು ನಾಗೇಗೌಡರು ಬರೀ ಒಂದು ವಿ.ಸಿ. ಕೆನಾಲ್ ರಿಪೇರಿ ಮಾಡುವುದಕ್ಕೆ 285 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ. ಅಂದರೆ, ವಿಶ್ವೇಶ್ವರಯ್ಯ ಬರೀ 3 ಕೋಟಿ ಖರ್ಚುಮಾಡಿದ್ದಾರೆ, ನಾನು ಇಲ್ಲಿ ಒಂದು ಕೆನಾಲ್‌ಗೆ 285 ಕೋಟಿ ಖರ್ಚುಮಾಡಿದ್ದೇನೆ ಎಂದು ಹೇಳಿಕೊಳ್ಳುವುದಕ್ಕಾಗುತ್ತದೆಯೇ? ಈಗಿನ ಅವಶ್ಯಕತೆ ಪ್ರಕಾರ ಈ ಹಣ ಇರಬಹುದು. ಆಗಿನ ಅವಶ್ಯಕತೆ ಪ್ರಕಾರ, ಅದಕ್ಕೆ 3 ಕೋಟಿ ಇದೆ. ಅದು ಸಾಕಾಗುವಷ್ಟಾಯಿತು. ಹಾಗೆ ಯಾವ ಯಾವ ಕಾಲಕ್ಕೆ, ಯಾವ ಯಾವ ವರ್ಷಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಮತ್ತು ಅದಕ್ಕೆ ಏನು ಗುರಿಯನ್ನು ಸಾಧಿಸಬೇಕೋ ಅದನ್ನು ಸಾಧಿಸಿದ್ದಾರೆ. ಅದನ್ನು ಬಿಟ್ಟು ತಾವು ಇಡೀ ಪ್ರಪಂಚ ಸುತ್ತಿ, ಹತ್ತಾರು ವರ್ಷದ ಅಂಕಿಸಂಖ್ಯೆ ತೆಗೆದುಕೊಂಡು ಹಿಂದಕ್ಕೆ 200 ಕೋಟಿ ಮಾಡಿದ್ದರು, ನಾನು 2 ಸಾವಿರ ಕೋಟಿ ಮಾಡಿದ್ದೇವೆ. ಹಿಂದಕ್ಕೆ ನಮ್ಮ ಅಲಮಟ್ಟಿ ಡ್ಯಾಮನ್ನೂ ಕೂಡ 512 ಮೀಟರ್ ಎತ್ತರಕ್ಕೆ ಬಂದಿದೆ ಎಂದು ಹೇಳುವಂತಾದ್ದು. ಅಂದರೆ, ಸುಮಾರು 3 ವರ್ಷದ ಹಿಂದೆ 504 ಇತ್ತು ಎಂದು ತಾವು ಇಲ್ಲೇ ಒಪ್ಪಿಕೊಂಡಿದ್ದೀರಿ. ಅಂದರೆ, ಈ ಎಲ್ಲಾ 504 ನಿಮ್ಮ ಕಾಲದಲ್ಲೇ ಆಯಿತೇ? ಅದಕ್ಕಾಗಿ ನೀವು ಬರೀ ಹಣದ ಅಂಕಿಸಂಖ್ಯೆ ಕೊಟ್ಟು, ಇಷ್ಟು ದೊಡ್ಡ ಅಚೀವ್‌ಮೆಂಟ್ ಮಾಡಿಕೊಂಡಿದ್ದೇವೆ ಎಂದು ಹೇಳಿಕೊಳ್ಳುವುದು ಬೇಡ. ಅದರಲ್ಲಿ ಸಾಕಷ್ಟು ಲೋಪದೋಷವಾಗಿದೆ. ನಾನು ಸ್ಪಷ್ಟಪಡಿಸುತ್ತೇನೆ. ಇವತ್ತು ತಮಗೆ ನಿಜವಾಗಿಯೂ ಕಳಕಳಿ ಇದ್ದರೆ, ಇವತ್ತು ನಾವು ಯು.ಕೆ.ಪಿ. ಬಗ್ಗೆ ಸಿ.ಬಿ.ಐ, ಸಿ.ಬಿ.ಐ. ಎಂದು ಬಡಿದುಕೊಳ್ಳುತ್ತೀದ್ದೇವಲ್ಲಾ, ಇದು ತಮಗೆ ಇಚ್ಛೆ ಇಲ್ಲ. ನಾನು ಇವತ್ತಿಗೂ ಕೂಡ ಹೇಳುತ್ತೇನೆ. ತಾವು ಅದನ್ನು ಸಿ.ಬಿ.ಐ. ನವರಿಂದ ವಿಚಾರಣೆ ಮಾಡಿಸಿದರೆ, ಕೋಟ್ಯಾಂತರ ರೂಪಾಯಿ ಉಳಿಯುತ್ತದೆ. ಮತ್ತು ಮುಂದೆ ಆಗತಕ್ಕಂಥಾದ್ದು ತಪ್ಪುತ್ತದೆ ಎಂಬ ಮಾತನ್ನು ಹೇಳುತ್ತೇನೆ. ನಾನು ಅಪಾದನೆ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ನೀವೂ ಕೂಡ ಮನಸ್ಸು ಮಾಡಿ ನೋಡಿದರೆ, ನಿಮಗೆ ಗೊತ್ತಾಗುತ್ತದೆ. ಎಸ್ಟಿಮೇಟ್‌ನಲ್ಲಿ ಎಷ್ಟು ವ್ಯತ್ಯಾಸವಾಗಿದೆ, ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ಕೆಲಸ ಕೊಟ್ಟು, ಎಷ್ಟೋ ಜನರಿಗೆ ನೇರವಾಗಿ ಕೆಲಸ ಕೊಟ್ಟಿದ್ದೀರಿ.

ಮತ್ತು ಇದನ್ನು ಎಲ್ಲರೂ ಕೂಡ ಒಪ್ಪಿಕೊಂಡಿದ್ದಾರೆ. ನೂರಾರು ಕಾಂಟ್ರಾಕ್ಟರುಗಳು ಕ್ವಾಲಿಫೈಡ್ ಇಲ್ಲ, ಅವರ ಹತ್ತಿರ ಮಿಷನರೀಸ್ ಇಲ್ಲ, ಮತ್ತು ಇಂಜಿನಿಯರ್ಸ್ ಇಲ್ಲ, ಯಾವ ಸಪೋರ್ಟ್ ಇಲ್ಲ. ಇದುಗೊತ್ತಿದ್ದರೂ ಕೂಡ ನೀವು ಸಮರ್ಥನೆ ಮಾಡುತ್ತಿದ್ದೀರಿ. ಇದಕ್ಕೆ ನನಗೆ ಬಹಳ ಬೇಸರವಾಯಿತು. ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಈಗಲೂ ನಾನು ಒತ್ತಾಯ ಮಾಡುತ್ತೇನೆ. ನಿಮ್ಮಲ್ಲಿ ತಾಕತ್ತಿದ್ದರೆ ನೀವೇಹೋಗಿ ಸಿ.ಬಿ.ಐ. ಗೆ ನಿಮ್ಮಲ್ಲಿ ಶಕ್ತಿ ಇದ್ದರೆ ಹಾಗೆ ಮಾಡಿ. ಎಂದು ಹೇಳುವುದು ಬೇಡ. ಸಾರ್ವಜನಿಕ ಹಿತದೃಷ್ಟಿಯಿಂದ, ಸರ್ಕಾರದ ಹಣ ಪೋಲಾಗಬಾರದು ಎನ್ನುವ ದೃಷ್ಟಿಯಿಂದ ಮತ್ತು ಇವತ್ತೇನು ನಿಮ್ಮ ಸಾಧಕಭಾಧಕಗಳನ್ನು ಕೂಡಿಸುವುದರಲ್ಲಿ ನಿಮಗೆ ಎಷ್ಟು ತೊಂದರೆಯಾಗುತ್ತಾ ಇದೆ, ಅದುಗೊತ್ತಿದೆ. ಇಷ್ಟು ರಿಸೋರ್ಸ್‌ಸ್ ನಾವು ಪ್ರಾಮಾಣಿಕವಾಗಿ ಮೊಬಲೈಸ್ ಮಾಡಿದಮೇಲೆ, ಆದರ ಸದುಪಯೋಗವಾಗಬೇಕೆಂಬ ಇಚ್ಛೆ ಇದ್ದರೆ, ನಾನು ಇವತ್ತೂ ಕೂಡ ಅದರ ಮೇಲೆ ನಿಂತಿದ್ದೇನೆ, ನಾನು ಮೊದಲೂ ಕೂಡ ಡಿಮ್ಯಾಂಡ್ ಮಾಡಿದ್ದೇನೆ. ಇವತ್ತು ಯು.ಕೆ.ಪಿ.ಯ ಒಂದು ಭಾಗದಲ್ಲಿ ನಡೆದಂತಾದ್ದರ ಬಗ್ಗೆ, ವಿ.ಸಿ. ಕೆನಾಲ್‌ನಲ್ಲಿ ನಡೆದ ಅವ್ಯವಹಾರ ಏನಿದೆ, ಇದರ ತನಿಖೆಯಾಗಬೇಕು. ದಯವಿಟ್ಟು, ನಾನು ಕಳಕಳಿಯಿಂದ ಹೇಳಿಕೊಳ್ಳುತ್ತೇನೆ. ತಾವು ಪುನರ್ ವಿಚಾರ ಮಾಡಿ, ರಿವ್ಯೂ ಮಾಡಿ. ಇದನ್ನು ಸಿಬಿಐ ಗೆ ರೆಫರ್ ಮಾಡಿದರೆ, ನಿಮಗೆ ಒಳ್ಳೆಯ ಹೆಸರು ಬರುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇಲ್ಲವಾದರೆ, ನನಗೆ ಹೇಳಬೇಕಾಗುತ್ತದೆ. ಯಾರು ತಪ್ಪು ಮಾಡುತ್ತಿದ್ದಾರೋ, ಅವರು ಇಂಜಿನಿಯರ್ಸ್ ಇರಬಹುದು ಅಥವಾ ಯಾರೋ ಇರಬಹುದು. ಅವರಿಗೆ ನೀವು ಕುಮ್ಮಕ್ಕು ಕೊಡುತ್ತಿದ್ದೀರಿ ಎಂಬ ಮಾತನ್ನು ವಿಧಿ ಇಲ್ಲವೆಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ಹಿಂದು ಮುಂದುಹೇಳತಕ್ಕಂತಾದ್ದು ಅಲ್ಲ. ಇದರ ಬಗ್ಗೆಯೂ ಕೂಡಗಮನಹರಿಸಬೇಕಾದ ವಿಷಯ ಇದೆ. ಇನ್ನು ನಾಲ್ಕನೆಯದೇನೆಂದರೆ, ಕ್ರಾಪ್ ಪರಿಹಾರದ ಬಗ್ಗೆ ತಾವು ಹೇಳುತ್ತೀರಿ ಎಂದು ತಿಳಿದುಕೊಂಡಿದ್ದೆ. ಬೀದರ್, ಗುಲ್ಬರ್ಗಾದಲ್ಲಿ ಅದಂಥ ರೈತರ ಬವಣೆ ಏನಿದೆ, ಅದನ್ನು ನಿವಾರಿಸುವುದಕ್ಕೋಸ್ಕರ, ಸಚಿವ ಸಂಪುಟದ ತೀರ್ಮಾನ ತೆಗೆದುಕೊಂಡು ಈ ಸದನದಲ್ಲಿ ಹೇಳುತ್ತೇವೆಂಬ ಮಾತನ್ನು ಹೇಳಿದ್ದರು. ಆದರೆ, ಅದರ ಬಗ್ಗೆ ತಾವು ಏನನ್ನೂ ಕೂಡ ಪ್ರಸ್ತಾಪ ಮಾಡಿಲ್ಲ. ದಯವಿಟ್ಟು ಅದರ ಬಗ್ಗೆಯೂ ಕೂಡ ತಾವು ಸ್ಪಷ್ಟಪಡಿಸಬೇಕು; ಮತ್ತು ಇಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮೀಟರ್ ಬಗ್ಗೆ, ಕೆ.ಇ.ಬಿ. ಡಿಪಾಸಿಟ್ ಏನಿದೆ, ನಿಜವಾಗಿಯೂ ರೈತರಿಗೆ ತೊಂದರೆಯಾಗುತ್ತದೆ ಎಂಬ ಮಾತನ್ನು ಹೇಳಿದೆವು....

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):- ಕೆ.ಇ.ಬಿ. ಯಲ್ಲಿ ಮೀಟರ್ ಹಾಕುವುದರ ಬಗ್ಗೆ ಬರೀ ಅಳತೆ ಮಾಡುವುದಕ್ಕೋಸ್ಕರ ಮೀಟರ್ ಹಾಕತಕ್ಕಂತಾದ್ದು, ಮೀಟರ್ ಆಧಾರದ ಮೇಲೆ ವಿದ್ಯುತ್ ಚಾರ್ಜನ್ನು ವಿಧಿಸುವುದಿಲ್ಲವೆಂಬುದನ್ನು ಇದೇ ಸದನದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಇನ್ನು ಬೀದರ್ ಮತ್ತು ಗುಲ್ಬರ್ಗಾ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನಾನು ಈ ಸದನಕ್ಕೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೆ. ಅದೇರೀತಿಯಲ್ಲಿ ಸಚಿವಸಂಪುಟದ ಸಭೆಯಲ್ಲಿ ನಾನು ಈ ವಿಷಯವನ್ನು ತೆಗೆದುಕೊಂಡು ಹೋಗಿ, ಸಚಿವ ಸಂಪುಟದಲ್ಲಿ ಈಗಾಗಲೇ ತೀರ್ಮಾನವಾಗಿದೆ. ಈಗತಾನೆ ಸಂಬಂಧಪಟ್ಟ ಕಡತದ ಮೇಲೆ, ಆಜ್ಞೆ ಹೊರಡಿಸುವುದಕ್ಕೆ

ರುಜು ಮಾಡಿದ್ದೇನೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಂಬಂಧಪಟ್ಟ ಹಾಗೆ, ಒಂದು ಹೆಕ್ಟೇರಿಗೆ 500 ರೂಪಾಯಿಗಳಿಂದ subject to a maximum of Rs. 2000/- per farmer ಎನ್ನುತಕ್ಕಂಥ ಸಚಿವ ಸಂಪುಟದ ತೀರ್ಮಾನ ಈಗಾಗಲೇ ಆಗಿದೆ. ಸಂಬಂಧಪಟ್ಟ ಆಜ್ಞೆ ಇವತ್ತು ಹೊರಡಬಹುದು ನಾನು ಈಗಾಗಲೇ ಕಡತದ ಮೇಲೆ ರುಜು ಮಾಡಿದ್ದೇನೆ ಅಥವಾ ನಾಳೆ ಆಜ್ಞೆ ಹೊರಡುತ್ತದೆ. ಇದನ್ನು ಈಗಾಗಲೇ ಹೇಳಿದ್ದೇವೆ. ಮತ್ತೆ ಸತ್ತಿರುವವರ ಬಗ್ಗೆಯೂ ಹೇಳುತ್ತಿದ್ದೇವೆ. ಸಿಓಡಿ ತನಿಖೆಯೂ ಕೂಡ ಬಹಳ ಭರದಿಂದ ನಡೆಯುತ್ತಾ ಇದೆ. ಒಂದರೆಡು ಮೂರು ದಿವಸದಲ್ಲಿ ಆ ವರದಿ ಬಂದಮೇಲೆ, ಅದರಲ್ಲಿ ಕಿಂಚಿತ್ತು ನಿಜಾಂಶ ಇದೆಯೆಂದು ಕಂಡುಬಂದರೆ, ಅಂತಹವರಿಗೂ ಕೂಡಬಂದು ಲಕ್ಷ ರೂಪಾಯಿ ಪರಿಹಾರವನ್ನು ನೀಡತಕ್ಕ ಹೇಳಿಕೆಯನ್ನು ಈಗಾಗಲೇ ಕೊಟ್ಟಿದ್ದೇನೆ ಮತ್ತು ವರದಿ ಬಂದ ನಂತರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಕೇಳಿದ್ದು ಬೆಲೆ ಪರಿಹಾರ. ಒಂದು ಎಕರೆಗೆ 500 ರೂಪಾಯಿ ಮಾಡಿ ಎಂದು ನಾವೆಲ್ಲರೂ ಕೂಡ ಇಲ್ಲಿ ಡಿಮ್ಯಾಂಡ್ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ :- ಒಂದು ಹೆಕ್ಟೇರಿಗೆ, 500 ರೂಪಾಯಿಗಳಿಂದ ಸಚಿವ ಸಂಪುಟದ ತೀರ್ಮಾನವಾಗಿರುತ್ತದೆ. ಆ ತೀರ್ಮಾನವನ್ನು ಮೀರತಕ್ಕ ಅಧಿಕಾರ ನನಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಒಂದು ಎಕರೆಗೆ 500 ರೂಪಾಯಿ ಎಂದರೆ, ಒಂದು ಹೆಕ್ಟೇರಿಗೆ ಹೆಚ್ಚುಕಡಿಮೆ 2,250 ರೂಪಾಯಿ ಆಗುತ್ತದೆ. ಅವರು ಒಂದು ಹೆಕ್ಟೇರಿಗೆ 500 ರೂಪಾಯಿ ಎಂದು ಹೇಳುತ್ತಿದ್ದಾರೆ, ಆದರೆ, ಒಂದು ಎಕರೆಗೆ 500 ರೂಪಾಯಿ ಎಂದು ನಾನು ಹೇಳುತ್ತಿದ್ದೇನೆ. ಅಂದರೆ ಒಂದು ಹೆಕ್ಟೇರಿಗೆ ಎಷ್ಟಾಗುತ್ತದೆಂದರೆ, 2,250 ರೂಪಾಯಿ ಹೆಚ್ಚುಕಡಿಮೆ ಆಗುತ್ತದೆ. ಇವತ್ತು ಕನಿಷ್ಟ 2 ಸಾವಿರ ರೂಪಾಯಿಗಳ ಡಿಮ್ಯಾಂಡ್ ಇದ್ದರೂ ಕೂಡ ಮಿನಿಮಮ್ ಇಷ್ಟು ಕೊಡುತ್ತಾರೆಂಬುದನ್ನು ನಾವು ಕೇಳಿಕೊಂಡಿದ್ದೇವೆ. ಇದರ ಬಗ್ಗೆ ತಾವು ಬಹಳ ಉದಾಸೀನ ತೋರಿಸುತ್ತಿದ್ದೀರಿ. ಇದರಿಂದ ಅವನಿಗೆ ಏನೂ ಸಹಾಯವಾಗುವುದಿಲ್ಲ. ಅದರಲ್ಲಿಯೂ ಕೂಡ ಸಣ್ಣ ಮತ್ತು ಅತಿ ಸಣ್ಣ ರೈತರು ಎಂದು ತಾವು ಹೇಳುತ್ತಿದ್ದೀರಿ. ಉಳಿದಂಥವರಿಗೆ ಏನೂ ಅನುಕೂಲವಾಗುವಂತಾದ್ದು ಇಲ್ಲ. ಆದ್ದರಿಂದ, ಇದೂ ಕೂಡ ಸರಿಯಿಲ್ಲ. ಈ ಧೋರಣೆಯನ್ನು ತಾವು ಬದಲಾವಣೆ ಮಾಡಬೇಕು. ಮುಖ್ಯಮಂತ್ರಿಗಳು ಪುನಃ ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ತಾವು ಇಲ್ಲಿ ಈ ಮಾತನ್ನು ಹೇಳಬೇಕು. ನಾವೆಲ್ಲರೂ ಕೂಡ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಡಿಫಾಸಿಟ್ ತೆಗೆದುಕೊಳ್ಳುವ ಬಗ್ಗೆ ಅಡಿಶನಲ್ ಡಿಫಾಸಿಟ್ ತೆಗೆದುಕೊಂಡು ಇವತ್ತು ಸಾಮಾನ್ಯ ಜನ ಮನೆ ಬಳಕೆದಾರರಿಗೂ ಸಹ ಇವತ್ತು ಡಿಪಾಜಿಟ್ ಹೆಚ್ಚು ಆಗಿದೆ. ಪರ್ ಪೋಲ್‌ಗೆ ನೀವು ಕೇಳತಕ್ಕಂಥ ಡಿಫಾಸಿಟ್ ಹೆಚ್ಚು ಆಗಿದೆ. ದಯವಿಟ್ಟು ರೈತರ ಹಿತದೃಷ್ಟಿಯಿಂದ ಆದರೂ ಸಹ ಇದನ್ನು ತೆಗೆದು ಹಾಕಿ ಈಗಾಗಲೇ 300 ರೂಪಾಯಿ 500 ರೂಪಾಯಿ ಮಾಡಿದ್ದೀರಿ. ಪರ್ ಪೋಲ್‌ಗೆ ಇಷ್ಟು ಎಂದು ಡಿಫಾಸಿಟ್ ಎನು ಇದೆ ಮನೆಗಳಿಗೆ ಇಂತಿಷ್ಟು ಡಿಫಾಸಿಟ್ ಎಂದು ಎನು ಇದೆ ಇದರ ಬಗ್ಗೆ ಈಗಾಗಲೇ ಕನ್ಸ್ಯೂಮರ್ಸ್ ಫೋರಂ ಮಾಡಿ ಜನರು

ಹೋರಾಟಕ್ಕೆ ಇಳಿಯುತ್ತಿದ್ದಾರೆ. ದಯವಿಟ್ಟು ತಾವು ಅದಕ್ಕೆ ಅವಕಾಶ ಮಾಡಿಕೊಡಬೇಡಿ. ಇರಿಗೇಷನ್ ಪಂಪ್‌ಸೆಟ್ಸ್‌ಗೆ ಮೋಟರ್‌ಗಳನ್ನು ಫಿಕ್ಸ್ ಮಾಡಿದ್ದು ಕೂಡ ತಾವು ತೆಗೆದು ಹಾಕಬೇಕು. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ನಾನು ಏನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ ಯುಕೆಪಿ ಇರಬಹುದು ಬೇರೆ ವಿಷಯಗಳು ಇರಬಹುದು ತಾವು ಅದಕ್ಕೆ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮೊದಲಬಾರಿಗೆ ಅನೇಕ ಅಂಕಿಅಂಶಗಳೊಂದಿಗೆ ಕಳೆದ 3-4 ವರ್ಷಗಳ ತಮ್ಮ ಸಾಧನೆಯನ್ನು ತಿಳಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ. ನಿಜ ಹಣ ಖರ್ಚಾಗಿದೆ. ತಾವು ತಮ್ಮದೇ ಆದ ರೀತಿಯಲ್ಲಿ ತನಿಖೆ ಮಾಡಿ ವರದಿಯನ್ನು ತರಿಸಿಕೊಳ್ಳುವಂತಹ ಪ್ರಯತ್ನ ಮಾಡಿ ಶೇಕಡ 50ಕ್ಕೂ ಹೆಚ್ಚು ಹಣ ಮಧ್ಯವರ್ತಿಗಳ ಜೇಬು ಸೇರಿದೆ. ನಾನು ತಮಗೆ ಒಂದೇ ಉದಾರಣೆ ಕೊಡುತ್ತೇನೆ ನೀವು ಯಾವ ರೀತಿ ತನಿಖೆ ಮಾಡಿಸುತ್ತೀರೋ ನೋಡಿ; ಕೆರೆಗಳ ಹೂಳುನ್ನು ತೆಗೆಸಿದೆ ಎಂದು ಹೇಳಿ ಬಿಲ್ ಮಾಡಿ ದುಡ್ಡು ಡ್ರಾ ಮಾಡಿಕೊಂಡಿರುವುದು ಉಂಟು. ಕಂಟ್ರಾಕ್ಟರ್‌ಗಳು ಕೆಲಸ ಮಾಡುವುದಕ್ಕೆ ಎಜನ್ಸಿಯನ್ನು ಫಿಕ್ಸ್ ಮಾಡುವುದಕ್ಕಿಂತ ಮುಂಚೆಯೇ ಅವರು ಕೆಲಸ ಮಾಡಿ ಮೋಸ ಮಾಡಿರುವುದುಂಟು. ನಾನು ಭಾಷಣ ಮಾಡುವಾಗ ವಿವರವನ್ನು ಒದಗಿಸಿದ್ದೇವೆ. ತಮ್ಮ ಕಣ್ಣು ಮುಂದೆಯೇ ತಮಗೆ ಅನೇಕ ವಿಷಯಗಳು ಗೊತ್ತಿದೆ. ಇದನ್ನು ನೋಡಿ ಸರಿಪಡಿಸುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ಈಗಾಗಲೇ ಈ ಸದನದಲ್ಲಿ ರಾಜ್ಯಪಾಲರು ಭಾಷಣ ಮಾಡುವಾಗ ಒಂದು ಸತ್‌ಸಂಪ್ರದಾಯವನ್ನು ಕಾಪಾಡಿಕೊಂಡು ಬರಬೇಕೆಂದು ನಾವು ಇಲ್ಲಿ ಕುಳಿತಿದ್ದೇವೆ. ಆ ಸಮಯದಲ್ಲಿ ಪ್ರಸ್ತಾಪವಾದದ್ದು ಏನು? ಬೀದರ್‌ನಲ್ಲಿ ಗುಲ್ಬರ್ಗದಲ್ಲಿ ಬಿಜಾಪುರದಲ್ಲಿ ಈ ತೊಗರಿ ಬೆಳೆ ನಾಶವಾಗಿರುವುದರ ಬಗ್ಗೆ ಒಕ್ಕೊರಲಿನಿಂದ ಆ ಕಡೆಯಲ್ಲಿರುವವರು ಸಹ ನೊಂದಿದ್ದಾರೆ ಇದು ತಮಗೆಲ್ಲರಿಗೂ ಗೊತ್ತಿರುವುದು. ರೈತರಿಗೆ ನಾವೇನು ಬಿಕ್ಷೆ ಕೊಡುತ್ತಿಲ್ಲ, ಅವನು ಇವತ್ತು ಒಂದು ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಅದಕೋಸ್ಕರ ತಾವು ಏನಾದರೂ ಏಕರೆಗೆ 500 ರೂಪಾಯಿ ಕೊಟ್ಟರೆ ಒಂದು ಹೆಕ್ಟೇರ್‌ಗೆ 1250 ರೂಪಾಯಿಗಳಾಗುತ್ತದೆ. ಅವನು ಖರ್ಚು ಮಾಡಿದ್ದಾನಲ್ಲಾ ಔಷಧಿ ಹೊಡೆಯುವುದಕ್ಕೆ ಒಂದು ಬಾರಿಗೆ 15-20 ಎಕರೆಗೆ, ನಾನು ಹೋಗಿ ನೋಡಿ ಬಂದಿದ್ದೇನೆ, ತಾವು ಕೊಡುವಂತ ಪರಿಹಾರ ಒಂದು ಬಾರಿ ಅವನು ಕ್ರಿಮಿಕೀಟಗಳ ನಾಶಕ್ಕೆ ಔಷಧಿಗೆ ಖರ್ಚು ಮಾಡಿದ್ದನಲ್ಲಾ ಅದಕ್ಕೂ ಸಹ ಆಗುವುದಿಲ್ಲ. ಒಂದು ವಿಶೇಷವಾದ ಸಂದರ್ಭ ಆದ್ದರಿಂದ ನಾನು ಒಕ್ಕೊರಲಿನಿಂದ ಒಂದು ಒತ್ತಾಯ ಮಾಡಿದವು. ಪರ್ ಎಕರೆಗೆ 500 ರೂಪಾಯಿ ಕೊಡಿ ಎಂದು ನಾವು ಹೇಳಿದೆವು, ಪರ್ ಹೆಕ್ಟೇರ್‌ಗೆ ಆ ಹಣ 1250 ರೂಪಾಯಿ ಆಗುತ್ತದೆ. ಆದರೆ ತಾವು ಏನು ಹೇಳಿದ್ದೀರಿ ಮ್ಯಾಗ್ಸಿಮಮ್ 2000 ರೂಪಾಯಿಗಳು ಎಂದು ಸಾಮಾನ್ಯ ಒಬ್ಬ ರೈತ ಒಂದು 10-15 ಎಕರೆ ಜಮೀನು ಇಟ್ಟಿದ್ದಾನೆ. ಅವನ ಬೆಳೆ ನಾಶ ಆದರೆ ಅವನಿಗೆ ತಾವು ಗರಿಷ್ಟ 2000ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರೆ ದೊಡ್ಡ ಅನ್ಯಾಯವಾಗುತ್ತದೆ, ಮೊದಲನೇಯದು ತಾವು ವಿಶೇಷ ಗಮನ ಹರಿಸಿ ಸ್ಪಷ್ಟವಾಗಿ ಹೇಳಬೇಕು ಕನಿಷ್ಟ ಪಕ್ಷ ನಾವು ಏನು ಪರಿಹಾರ ಕೊಡಬೇಕೆಂದು

ಹೇಳುತ್ತಿದ್ದೇನೆ ಕನಿಷ್ಟ ಎರಡು ಸಾವಿರ ರೂಪಾಯಿ ಪರ್‌ಹೆಕ್ಟೇರ್‌ಗೆ ಕೊಡಬೇಕು ಎನ್ನುವುದು ನಮ್ಮ ಒತ್ತಾಯ ಇದೆ. ಎರಡನೇಯದು ಮಾನ್ಯ ಬೈರೇಗೌಡರು ಏಕೆ ಈ ರೀತಿ ಮಾತನಾಡುತ್ತಾರೋ ಗೊತ್ತಿಲ್ಲ ನಾವು ಮೀಟರ್ ಹಾಕಿಸುತ್ತೇವೆ ಅಷ್ಟೇ, ನಾವು ಹೆಚ್‌ಪಿಗೆ ಇಷ್ಟು ಎಂದು ವಸೂಲಿ ಮಾಡುತ್ತೇವೆ ಅದಕ್ಕಿಂತ ಮುಂದೆ ಹೋಗುವುದಿಲ್ಲ ಎಂದು. ತಾವು ಹೇಳುವುದು ಒಂದು ಮಾಡಬೇಕೆಂದು ಮನಸ್ಸಿನಲ್ಲಿ ಇರುವುದು ಒಂದು. ಇಲ್ಲದಿದ್ದರೆ ಇವತ್ತು ತಾವು 12 ಲಕ್ಷ ಐ.ಪಿ. ಸೆಟ್‌ಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ತಾವು ಮೀಟರ್‌ಗಳನ್ನು ಹಾಕಿಸಿ ಮೀಟರ್ ರೀಡರ್, ಮತ್ತು ಲೈನ್‌ಮ್ಯಾನ್‌ಗಳಿಗೆ, ಇನ್ನಿತರರಿಗೆ ಇನ್ನೊಂದು ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ನಿಮ್ಮ ಹತ್ತಿರ ಹಣ ಎಲ್ಲಿದೆ? ನಿಮ್ಮ ಉದ್ದೇಶ ಏನು ಇದೆ? ನೋಡಿ ರೈತ ಇಷ್ಟು ಭಾಗ ವಿದ್ಯುತ್ ಉಪಯೋಗ ಮಾಡುತ್ತಿದ್ದಾನೆ ಅದಕ್ಕೆ ಪರ್ ಯೂನಿಟ್ ಇಷ್ಟು ಕೊಡಬೇಕೆಂದು ಕೇಳುತ್ತೇವೆ ಎಂದು ಸ್ಪಷ್ಟವಾಗಿ ಎಂದು ಮಾನ್ಯ ನಾಣಯ್ಯನವರು ವಿಧಾನ ಪರಿಷತ್ತಿನಲ್ಲಿ ಹೇಳಿಕೆ ಕೊಟ್ಟಿದ್ದ ಅನ್ನು ನಾನು ಈ ಸದನದಲ್ಲಿ ಹೇಳಿದ್ದೇನೆ. ವಿದ್ಯುತ್ ಎಷ್ಟು ಉಪಯೋಗ ಮಾಡುತ್ತಾರೆ ಎನ್ನುವುದು ಗೊತ್ತಾಗಬೇಕಲ್ಲಾ ಅದಕ್ಕೆ ಒಂದು ತಾಲ್ಲೂಕಿನಲ್ಲಿ 10-20 ಕಡೆ ಸ್ಯಾಂಪಲ್ ಗೋಸ್ಕರ ನೀವು ಹಾಕಿದರೆ ನಿಮಗೆ ಗೊತ್ತಾಗುತ್ತದೆ. ಅದಕೋಸ್ಕರ ಇದು ಯಾವುದೇ ಕಾರಣಕ್ಕೋಸ್ಕರ ಆಗುವುದಿಲ್ಲ. ಇದಕ್ಕೆ ಕೈ ಹಾಗಬೇಡಿ. ಕೈ ಹಾಕಿದರೆ ಬಹುಶ ನೀವು ಕೈ ಸುಟ್ಟುಕೊಳ್ಳುತ್ತೀರಿ. ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗದೇ ಇರುವಂತಹ ಸ್ಥಿತಿಗೆ ಬರುತ್ತೀರಿ. ಮಾನ್ಯ ಮುಖ್ಯಮಂತ್ರಿಗಳು ಇಷ್ಟು ಸಮಯ ತಾವು ಅಂಕಿ ಅಂಶಗಳನ್ನು ಕೊಟ್ಟಿದ್ದಿರಲ್ಲಾ ವಾಸ್ತವೀಕ ಜೀವನದಲ್ಲಿ ಜನರ ಸಮಸ್ಯೆಗಳಲ್ಲಿ ಏನಾದರೂ ಬದಲಾವಣೆ ಆಗಿದೆಯೇ? ಬಡವರ ಬಗ್ಗೆ ತಾವು ಹೇಳಿದಿರಿ, 50 ವರ್ಷಗಳ ಸ್ವಾತಂತ್ರ್ಯ ಸುವರ್ಣಮಹೋತ್ಸವದ ಇತಿಹಾಸ ಹೇಳಿದಿರಿ. ಹಳ್ಳಿಗಳ ಸ್ಥಿತಿ ಎನಾಗಿದೆ ಎಂದು ಹೇಳಿದಿರಿ. ಮೊನ್ನೆ ನಾನು ಚುನಾವಣೆಗೆ ಹೋದವಲ್ಲಾ, ತಾವು ಹೆಲಿಕ್ಯಾಪ್ಟರ್‌ನಲ್ಲಿ ಬಂದಿರಿ, ಹಳ್ಳಿಪಳ್ಳಿ, ಸ್ಲಮ್‌ಗೆ ತಾವು ಹೋಗಲಿಲ್ಲ. ನಾವು ಎಲ್ಲಾ ಕಡೆ ಹೋಗಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇ ತಾವು ನಂಬುತ್ತೀರೋ ಇಲ್ಲವೋ ಶೇಕಡ 50-60 ಜನ ವಲಸೆ ಹೋಗಿದ್ದಾರೆ. ಉದ್ಯೋಗಕ್ಕಾಗಿ ಬೇರೆ ಬೇರೆ ರಾಜ್ಯಗಳಿಗೆ ಹೊರಟು ಹೋಗಿದ್ದಾರೆ. ಧಾರುಣ ಸ್ಥಿತಿಯಲ್ಲಿ ಅವರು ಇದ್ದಾರೆ. ಅವರು ಹಿಂತಿರುಗಿ ಬಂದಾಗ ಒಂದಷ್ಟು ಗಂಜಿ ಕುಡಿಯುವುದಕ್ಕೆ ಮಾನ್ಯ ಸಚಿವರು ಬಹಳ ಕಷ್ಟ ಪಟ್ಟು ಒಂದು ಸರ್ವೆ ಮಾಡಿಸಿ ಒಂದು 6-7 ಲಕ್ಷ ಜನ ಬಡವರು ಇದ್ದಾರೆ ಅವರಿಗೆ ಹಸಿರು ಕಾರ್ಡ್ ಕೊಡುವುದಕ್ಕೆ ಅಗಲಿಲ್ಲ ನಿಮ್ಮ ಕೈಯಲ್ಲಿ. ಅದಕ್ಕೆ ನಾನು ತಮಗೆ ಒತ್ತಾಯ ಮಾಡುವಂತಾದ್ದು, ಮುಂದೆ ಎನು ಮಾಡಬೇಕು ಎನ್ನುವುದು ಅದು ಬೇರೆ ವಿಷಯ. ವಲಸೆ ಹೋಗುವವರನ್ನು ಉಳಿಸುವುದಕ್ಕೆ ತಮ್ಮಲ್ಲಿ ಏನು ಕಾರ್ಯಕ್ರಮ ಇದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಬಗ್ಗೆ ತಾವು ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ಈ ವರ್ಗದ ಜನರಿಗೆ ಕೇಂದ್ರ ಸರ್ಕಾರದಿಂದ ಬಂದ ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಬಂದ ಹಣ ಖರ್ಚಾಗಲಿಲ್ಲ. 10 ಸಾವಿರಕ್ಕಿಂತ ಜಾಸ್ತಿ ನಾನು ಬಾವಿಗಳನ್ನು ತೋಡಿದ್ದೇವೆ. ಆ ಸ್ಕೀಮ್‌ನಲ್ಲಿ ಎಂದು ಹೇಳಿದಿರಿ. ನೀವು ಕೆಇಬಿಗೆ ದುಡ್ಡು ಕಟ್ಟಿದ್ದರೂ ನೂರರಲ್ಲಿ 10ಕ್ಕೆ ಇನ್ನೂ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಯಾವುದೋ ಒಂದು ಮೀಟರ್ ಮೇಲೆ ಡಿಫಾಸಿಟ್ ಹಾಕುವುದು, ತಾವು ಎಲ್ಲರನ್ನೂ ಶೋಷಣೆ ಮಾಡುವಂತಹ ಕೆಲಸ ಕೆಇಬಿ ಯವರು ಮಾಡುವುದಕ್ಕೆ ಹೊರಟಿದ್ದಾರೆ.

ಕೃಷ್ಣಾ ಬೇಸಿನ್ ಬಗ್ಗೆ ತಾವು ಮಾತನಾಡುತ್ತಾ ಹೇಳಿದಿರಿ ಎರಡು ಸಾವಿರ ಇಸವಿಯೊಳಗೆ ನಾನು ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ ಎಂದು. ಅದರಲ್ಲಿ ಅರ್ಧ ಭಾಗದಷ್ಟು ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಚುನಾವಣೆ ಸಮಯದಲ್ಲಿ ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಅಲ್ಲ ಈಗ ಎಲ್ಲಾ ಕೆಲಸ ನಿಂತು ಹೋಗಿದೆ. ಇದು ವಾಸ್ತವೀಕವಾಗಿ ಇರತಕ್ಕಂಥಾದ್ದು ತಾವು ಯಾವ ಕಾರಣಕ್ಕೂ ಐಪಿ ಸೆಟ್‌ಗಳಿಗೆ ಮೀಟರ್ ಹಾಕುವುದಿಲ್ಲ ಎಂದು ಸ್ಪಷ್ಟ ಮಾಡಬೇಕು. ಪರ್ ಹೆಕ್ಟೇರ್‌ಗೆ ಎರಡು ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ):- ಮಾನ್ಯ ಅಧ್ಯಕ್ಷರೇ, ಆ ಸಮಯದಲ್ಲಿ ಈ ಸದನದ ಸಮಿತಿ ಮಾಡಿದಾಗ ತಾವು ಸಹ ಸದಸ್ಯರಾಗಿದ್ದೀರಿ. ಅದಕ್ಕೆ ತಾವು ಸಹ ಒಪ್ಪಿಕೊಂಡಿದ್ದೀರಿ. ಈಗ ತಾವು ಪತ್ರಿಕೆಗಳಲ್ಲಿ ವಿಷಯ ಬರಬೇಕೆಂದು ಮಾತನಾಡುವುದಾದರೆ ಹೇಗೆ? ಆ ಸಮಿತಿಯಲ್ಲಿ ನಾನೂ ಸದಸ್ಯನಾಗಿದ್ದೆ, ತಾವು ಸದಸ್ಯರಾಗಿದ್ದೀರಿ. ಮಾನ್ಯ ಶೆಟ್ಟರು ಸಹ ಸದಸ್ಯರು. ಮಾನ್ಯ ವೀರಪ್ಪಮೊಯ್ಲಿಯವರು ಸದಸ್ಯರಾಗಿದ್ದರು. ಆ ಸಮಿತಿಯಲ್ಲಿ ಮೀಟರ್‌ಗಳನ್ನು ಅಳವಡಿಸಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

+ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಅವತ್ತು ಚರ್ಚೆ ಆಗಿದ್ದು ವಿದ್ಯುತ್ ಅನ್ನು ಶೇಕಡ 40 ಭಾಗದಷ್ಟು ರೈತರು ಉಪಯೋಗಿಸುಕೊಳ್ಳುತ್ತಾರೆಂದು ಬಂದಾಗ, ಟ್ರಾನ್ಸ್‌ಮಿಷನ್ ಲಾಸಸ್ ಅನ್ನು ಥೆಫ್ಟ್‌ನ್ನು ರೈತರ ಮೇಲೆ ಹಾಕುವುದಕ್ಕೆ ಹೊರಟಿರಿ, ಅದಕೋಸ್ಕರ ಮೀಟರ್ ಅನ್ನು ಅಲ್ಲಲ್ಲಿ ಅಳವಡಿಸಿ, ಎಷ್ಟು ವಿದ್ಯುತ್ ರೈತರು ಉಪಯೋಗ ಮಾಡುತ್ತಾರೆ ಎನ್ನುವ ಲೆಕ್ಕ ಸಿಗುತ್ತದೆ ಎಂದು ಹೇಳಿದೆನೆಯೇ ಹೊರತು ಸಾರಾಸಗಟು ಎಲ್ಲಾ ಐಪಿ ಸೆಟ್‌ಗಳಿಗೆ ನೀವು ಮೀಟರ್ ಹಾಕಿ ಎಂದು ನಾನು ಹೇಳಲಿಲ್ಲ. ಆ ರೀತಿ ಹೇಳುವುದಕ್ಕೂ ಸಾಧ್ಯವಿಲ್ಲ. ಮೀಟರ್ ಹಾಕುವುದನ್ನು ಕೈ ಬಿಡಬೇಕೆಂದು ನಾನು ಸ್ಪಷ್ಟವಾಗಿ ಒತ್ತಾಯ ಮಾಡುತ್ತಿದ್ದೇನೆ. ಮತ್ತೇ ಯು.ಕೆ.ಪಿ. ಯಲ್ಲಿ ಲೂಟಿ ನಡೆಯುತ್ತಿದೆ ಖುಷಿ ಬಂದ ಹಾಗೆ ಬಿಲ್ ಮಾಡಿ ಹಣ ಡ್ರಾ ಮಾಡಿಕೊಳ್ಳುತ್ತಿರುವುದು ನಡೆದಿದೆ. ಅದರ ಬಗ್ಗೆ ತಾವು ತನಿಖೆ ಮಾಡಿಲ್ಲ. ಖರ್ಚಾಗಿರುವ ಬಗ್ಗೆ ಮಾತ್ರ ಲೆಕ್ಕ ತೋರಿಸಿದ್ದೀರಿ. ಅಲ್ಲಿ ವಾಸ್ತವೀಕವಾಗಿ ಕೆಲಸಗಳು ನಿಂತು ಹೋಗಿದೆ. ಅದಕೋಸ್ಕರ ಸ್ಪಷ್ಟವಾದ ಒಂದು ಉತ್ತರವನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡುತ್ತಿದ್ದೇನೆ. ಇನ್ನೊಂದು 10-15 ದಿವಸದಲ್ಲಿ ನಾವು ಸದನ ಮುಗಿಸಿಕೊಂಡು ಹೋಗುತ್ತಿದ್ದಂತೆಯೇ ಇಡೀ ರಾಜ್ಯದಲ್ಲಿ ಬಹುತೇಕವಾಗಿ ಕುಡಿಯುವ ನೀರಿನ ಹಾಹಾಕಾರ. ಬರಗಾಲದ ಛಾಯೇ ಎಲ್ಲಾ ಕಡೆ ಕಾಣುತ್ತಿದೆ. ಕೆರೆಕಟ್ಟೆಗಳಲ್ಲಿ ನೀರು ಇಲ್ಲ. ಹೋದ ಸಾರಿ ಬರಗಾಲದ ಬಗ್ಗೆ ಚರ್ಚೆ ಆದ ಮೇಲೆ 6 ತಿಂಗಳ ನಂತರ ನಾವು ಸೇರುತ್ತಿದ್ದೇವೆ. ಬರಗಾಲದ ಬಗ್ಗೆ ಚರ್ಚೆಮಾಡಿದೆವು. ಪರಿಹಾರದ ಬಗ್ಗೆ ಘೋಷಣೆ ಮಾಡಿರುವ ಅಂಕಿ ಅಂಶಗಳನ್ನು ಕೊಡುತ್ತೇವೆಂದು ನಿಮ್ಮ ರೆವಿನ್ಯೂ ಮಂತ್ರಿಗಳು ಹೇಳಿದರು. ನೀವು ಉತ್ತರ ಕೊಡುವವರೆಗೂ ಹೋಗವುದಿಲ್ಲ ಎಂದು ಹೇಳಿದೆ. ಅಧ್ಯಕ್ಷರು ಹೇಳಿದರು ಕುಳಿತುಕೊಳ್ಳಿ ಯಡಿಯೂರಪ್ಪನವರೇ ಉತ್ತರಕೊಡಿಸುತ್ತೇವೆ ಎಂದು ಉತ್ತರ ಕೊಡಲಿಲ್ಲ. ರೆವಿನ್ಯೂ ಮಂತ್ರಿಗಳು

ಸದನಕ್ಕೆ ಬರಲೇ ಇಲ್ಲ. ಇವೆಲ್ಲವನ್ನೂ ನಾವು ನೋಡಿದ್ದೇವೆ. ಆದ್ದರಿಂದ ತಾವು ಸರಿಯಾದಂತಹ ಅಂಕಿ ಅಂಶಗಳನ್ನು ಕೊಡಿ. ಎಲ್ಲಿ ತಪ್ಪಾಗಿದೆಯೋ ಅಲ್ಲಿ ಸರಿಪಡಿಸುವಂತಹ ಪ್ರಯತ್ನವನ್ನು ಮಾಡದೇ ಅಧಿಕಾರಿ ಕೊಟ್ಟ ಅಂಕಿಅಂಶದ ಮೇಲೆ ಏನೋ ಸಾಧನೆ ಆಗಿದೆ ಎಂದು ಹೇಳಿದರೆ ಆ ಸಾಧನೆಗೆ ಈ ರಾಜ್ಯದ ಜನ ನಿಮಗೆ ಉತ್ತರ ಕೊಟ್ಟಿದ್ದಾರೆ. ಆಗಿದ್ದರೆ ನೀವು ಮಾಡಿದಂತಹ ಸಾಧನೆ ಅವನಿಗಿದೆ ತಲುಪಿದ್ದರೆ ಬಹುಶ್ಯ ಫಲಿತಾಂಶ ತದ್ವಿರುದ್ಧವಾಗುತ್ತಿತ್ತು. ಆದ್ದರಿಂದ ಈ ಫಲಿತಾಂಶವೇ ಕಳೆದ ಎರಡೂವರೆ ವರ್ಷಗಳಿಂದ ಜನತಾದಳ ಜನ ಹಿತವನ್ನು ಸಂಪೂರ್ಣವಾಗಿ ಮರೆತಿದೆ ಕೈಗಾರಿಕೋಧ್ಯಮಿಗಳ ಜೊತೆ ಶಾಮೀಲಾಗಿ ಎಲ್ಲವನ್ನು ಮರೆತಿದ್ದೀರಿ. ಇಲ್ಲಿ ಚರ್ಚೆ ಆಯಿತು, ಯಾರಿಗೆ ಬೇಕಾಗಿತ್ತು.

ಮೂರುವರೆ ಸಾವಿರ ಕೋಟಿ ರೂಪಾಯಿಗಳಷ್ಟನ್ನು ಗ್ರಾನೈಟ್ ಇದೆ ಅದನ್ನು ಕೊಡಬೇಡಿ ಎಂದು ಹೇಳಿದರೆ ನಾವು ಕೊಟ್ಟೇ ತೀರುತ್ತೇವೆಂದು ಹೇಳಿದಿರಿ, ಪುಣ್ಯಕ್ಕೆ ಅದು ಇಲ್ಲಿ ಚರ್ಚೆಗೆ ಬಂತು ಮುಂದೆ ಎನು ಮಾಡುತ್ತೀರೋ ನೋಡೋಣ. ಅಂಥಾದ್ದು 35 ಕೇಸ ಇದೆ. ಅಂದರೆ ಸರ್ಕಾರದ ಬೊಕ್ಕಸಕ್ಕೆ ಬರುವಂತಹ ಹಣವನ್ನು ಯಾರೋಬ್ಬರಿಗೆ ಮಾರಾಟ ಮಾಡುವುದಕ್ಕೆ ಸಿದ್ಧರಾಗಿರುವ ಸರ್ಕಾರ ನೀವು. ದಯಮಾಡಿ ಈ 3-4 ಅಂಶಗಳು ಏನು ಇವೆ ಅದಕ್ಕೆ ಉತ್ತರ ಕೊಡಿ. ಅವರನ್ನು ತೃಪ್ತಿ ಪಡಿಸುವುದಕ್ಕೆ ಏನೇನೋ ಮಾಡುತ್ತಿದ್ದೀರಿ, ತಮಗೆ ಓಟು ಕೊಟ್ಟು ತಮಗೆ ಅಧಿಕಾರ ಮಾಡಲು ಬಿಟ್ಟಂತಹ ಜನರಿಗೆ ಕನಿಷ್ಟ ತೊಗರಿ ಬೆಳೆ ನಾಶವಾಗಿರುವುದಕ್ಕೆ ಒಂದಿಷ್ಟು ಪರಿಹಾರ ಕೊಡುವಂತಾದ್ದು, ಮೋಟರ್ ಹಾಕದೇ ಒಳ್ಳೆಯ ವಿದ್ಯುತ್ ಕೊಡುವಂತಾದ್ದು, ಹಸಿರು ಕಾರ್ಡ್ ಏನೂ ಕೊಟ್ಟಿಲ್ಲ 6 ಲಕ್ಷ ಜನಕ್ಕೆ ಅವರಿಗೆ ನಾಳೆ ಕೊಡುತ್ತೇವೆಂದು ಹೇಳುವಂತಾದ್ದು, ಯುಕೆಪಿ ಯಲ್ಲಿ ಕೆಲಸ ತೆಗೆದು ಬಿದ್ದು ಹೋಗಿದೆ, ಅದನ್ನು ಪ್ರಾರಂಭ ಮಾಡಿ ಎರಡು ಸಾವಿರ ಇಸವಿ ಒಳಗೆ ಪೂರ್ಣ ಮಾಡುವುದು, ಈ ಕಡೆ ತಾವು ವಿಶೇಷವಾದ ಗಮನ ಕೊಟ್ಟು, ಯಾರನ್ನೋ ಹೊರದೇಶದವರನ್ನು ಕರೆದುಕೊಂಡು ಬಂದು ಏನೇನೋ ಆಸೆಗೋಸ್ಕರ, ಪವರ್ ಕಾರ್ಪೊರೇಷನ್ ಮುಗಿಸುವುದಕ್ಕೆ ಹೊರಟಿದ್ದೀರಲ್ಲಾ, ನಾವು ಮಾಡಿಲ್ಲ ಅದನ್ನು; ಅಲ್ಲಿ ಬುದ್ಧಿವಂತರು ಇದ್ದಾರೆ ಸಾಕಷ್ಟು ಟೆಕ್ನಿಕಲ್ ಹ್ಯಾಂಡ್ಸ್ ಇದ್ದಾರೆ. ಕೆಪಿಸಿಗೆ ಎಲ್ಲಿ ಸಹಕಾರ ಕೊಡುತ್ತಿದ್ದೀರಿ? ಪವರ್ ಕಾರ್ಪೋರೇಷನಲ್ಲಿ ಕೆಲಸ ಮಾಡುವವರಿಗೆ ಕೆಲಸವನ್ನು ಕೊಡಿ, ಅದನ್ನು ಬಿಟ್ಟು ಹೊರದೇಶದವರಿಗೆ ಕೊಡುವುದು ಬೇಡ. ಇದರ ಬಗ್ಗೆ ವಿಶೇಷ ಗಮನವನ್ನು ಕೊಡಬೇಕು ಮತ್ತು ಸ್ಪಷ್ಟವಾದ ಉತ್ತರವನ್ನು ತಮ್ಮಿಂದ ಬಯಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಕೆ.ಇ.ಬಿ. ಬಗ್ಗೆ ಒಂದು ಸಮಿತಿಯನ್ನು ಮಾಡಿದಾಗ ಅದರಲ್ಲಿ ನೀವೆಲ್ಲಾ ಇದ್ದೀರಿ ಎಂದು ಹೇಳುತ್ತೀರಿ. ಆ ವರದಿಯನ್ನು ಸರ್ಕಾರ ಅಕ್ಷರಶಃ ಒಪ್ಪಿಲ್ಲ. ಸರ್ಕಾರ ಇವತ್ತು ಸಮಿತಿಯಲ್ಲಿ ಕೈಗೊಂಡಿರತಕ್ಕ ನೀತಿಯನ್ನು ಸ್ಪಷ್ಟಪಡಿಸಬೇಕು. ಕಾವೇರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವುದಿಲ್ಲವೆಂದು ಹೇಳಿದರು ಏಕೆ? ಈಗಾಗಲೇ ಕೇರಳದ ಮುಖ್ಯಮಂತ್ರಿಗಳು, ರಾಷ್ಟ್ರೀಯ ಅಜೆಂಡಾದಲಿ ಕಾವೇರಿ ವಿಷಯವನ್ನು ಸೇರಿಸಿರುವುದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ

ನೀವು ಅದನ್ನು ಹೇಳದೆ ಮೌನ ಆಚರಣೆ ಮಾಡಿದರೆ ಒಳ್ಳೆಯ ರೀತಿಯಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಹೇಳಬೇಕಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಪ್ರಧಾನ ಮಂತ್ರಿಗಳು ಅಧಿಕೃತವಾಗಿ ಹೇಳಿದರೆ ನಾನು ಉತ್ತರ ಕೊಡುತ್ತೇನೆ. ಜಯಲಲಿತ ಅವರು ತಮ್ಮ ಅಭಿಪ್ರಾಯವನ್ನು ರಾಜಕೀಯ ಮಿತ್ರ ಪಕ್ಷದವರ ಹತ್ತಿರ ಹೇಳಿದಕ್ಕೆ, ನಾನು ಅವರಿಗೆ ಉತ್ತರ ಕೊಡುವುದಿಲ್ಲ. If the Prime Minister sends word to me to discuss with the counterpart, ಈ ಸಮಸ್ಯೆಯನ್ನು ಬಗೆಹರಿಸಲು ಮಾತನಾಡಲು ಬಂದರೆ ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಹಸಿರು ಕಾರ್ಡ್ ಬಗ್ಗೆ ಎಲ್ಲರೂ ಒಂದೇ ಸಮನಾಗಿ ಮಾತನಾಡುತ್ತಿದ್ದೇವೆ. ಇದು ಬಹಳ ಗಂಭೀರವಾದಂಥ ಪರಿಸ್ಥಿತಿ, ಇದರ ಬಗ್ಗೆ ತಮ್ಮ ಸರ್ಕಾರ ಸ್ಪಷ್ಟವಾದ ನೀತಿಯನ್ನು ಕೈಗೊಳ್ಳುವ ಬಗ್ಗೆ ತಮ್ಮ ಉತ್ತರದಲ್ಲಿ ತಿಳಸಬೇಕು. ಪೊಲೀಸ್‌ರವರಿಗೆ ಮನೆ ಕಟ್ಟಿಸಿಕೊಡುತ್ತೇವೆಂದು ನೆನ್ನೆ ದಿವಸ ಹೇಳಿದ್ದೀರಿ, ಆದರೆ ಅದೇನೂ ತೃಪ್ತಿಯಾಗುವುದಿಲ್ಲ. ಇವತ್ತು ಅವರು 24 ಗಂಟೆ ದುಡಿಮೆ ಮಾಡತಕ್ಕಂಥ ಜನ. ಬೇರೆ ನೌಕರರಿಗೂ ಮತ್ತು ಪೊಲೀಸ್‌ರವರಿಗೂ ಬಹಳ ವ್ಯತ್ಯಾಸ ಇದೆ. ಒಂದು ನಿಮಿಷ ಬಿಡುವಿಲ್ಲದೆ ದುಡಿಯತಕ್ಕಂಥವರು, ಇವರಿಗೆ ವಿಶೇಷವಾದ ಯೋಜನೆಯನ್ನು ಸರ್ಕಾರ ಮಾಡುತ್ತೀರಾ ಮತ್ತು ಅವರಿಗೆ ಭತ್ಯವನ್ನು ಜಾಸ್ತಿ ಮಾಡುತ್ತೀರಾ ಇದರ ಬಗ್ಗೆ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಈ ತಾರತಮ್ಯದಿಂದ ಅವರಲ್ಲಿ ಒಂದು ರೀತಿಯ ಕಲುಷಿತ ಮನೋಭಾವನೆ ಹುಟ್ಟಿ ಮತ್ತೆ ಸಂಘವನ್ನು ಸ್ಥಾಪನೆ ಮಾಡಿ ಅವರು ಚಳುವಳಿಗೆ ಇಳಿಯತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗಬಹುದೆಂದು ನಾನು ತಮಗೆ ತಿಳಿಸುತ್ತೇನೆ. ಬೀದರ್‌ನಲ್ಲಿ ನಿಮ್ಮ ಸರ್ಕಾರ ಗೋಲಿಬಾರ್ ಮಾಡಿಲ್ಲ, ಆದರೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣ ಆಯಿತು. ಇದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು. ಅಲ್ಲಿನ ರೈತರು ಸಾಲ ಕೊಡಲಾರದೆ ಮತ್ತು ಬೆಳೆ ನಷ್ಟ ಆಗಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿಗೆ ಏಕೆ ಹೋಯಿತು ಎಂಬುದನ್ನು ಸ್ಪಷ್ಟಪಡಿಸಬೇಕು. ಸರ್ಕಾರ ಇವತ್ತು ಆಸ್ಪತ್ರೆಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದೆ. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಯಾರಿಗೂ ಹೇಳಿದೆ, ಗೌಪ್ಯವಾಗಿ ಕೆ.ಆರ್. ಆಸ್ಪತ್ರೆಗೆ, ವಿಕ್ಟೋರಿಯಾ ಆಸ್ಪತ್ರೆಗೆ ಮತ್ತು ಬೋರಿಂಗ್ ಆಸ್ಪತ್ರೆಗೆ ಇದ್ದಕ್ಕಿದ್ದ ಹಾಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಬಂದರೆ, ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂಬುದು ತಮಗೆ ಗೊತ್ತಾಗುತ್ತದೆ. ಒಂದು ವೇಳೆ ತಾವು ಬರುತ್ತೀರೆಂದು ಅವರಿಗೆ ಗೊತ್ತಾದರೆ ಅಲ್ಲಿನ ವ್ಯವಸ್ಥೆ ಬೇರೆ ಯಾಗಿರುತ್ತದೆ. ಕೆ.ಆರ್. ಆಸ್ಪತ್ರೆಯ ಶೌಚಾಸ್ಥಳಕ್ಕೆ ಒಂದು ಸಾರಿ ಹೋಗಿ ಬಂದರೆ ಸಾಕು, ನಿಜವಾಗಿಯೂ ನನಗೆ ತಿಳಿದಮಟ್ಟಿಗೆ ತಮ್ಮ 40 ವರ್ಷದ ಸಾಧನೆ ಮತ್ತು ಏನು ಹೋರಾಟ ಮಾಡಿಕೊಂಡು ಬಂದಿದ್ದೀರಿ, ಅಲ್ಲಿನ ಪರಿಸ್ಥಿತಿಯನ್ನು ನೋಡಿ ಬಂದರೆ ಅದರ ಚಿತ್ರ ತಮಗೆ ಗೊತ್ತಾಗುತ್ತದೆ. ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿರುವ ಸರ್ಕಾರನ್ನು ವಿಸರ್ಜನೆ ಮಾಡಿದರೆ ನಾನು ವಿಸರ್ಜನೆಗೆ ತಯಾರು ಎಂದು ಹೇಳಿದ್ದೀರಿ. ಆದರೆ ಅದನ್ನು ನಾನು ಒಪ್ಪುವುದಿಲ್ಲ. ಆ ಸರ್ಕಾರಗಳನ್ನು ಮಾಡುವುದು ಬೇರೆ, ನಿಮ್ಮ ಸರ್ಕಾರಕ್ಕೆ ಐದು

ವರ್ಷದ ಕಾಲಾವಧಿ ಇರುವಾಗ ವಿಸರ್ಜನೆ ಮಾಡುವುದಕ್ಕೆ ಆಗುತ್ತದೆಯೇ? ನೀವು ಆ ಮಾತನ್ನು ಹೇಳಿರುವುದಕ್ಕೆ ನಾನು ವಿರೋಧ ಮಾಡುತ್ತೇನೆ. ವಿಸರ್ಜನೆ ಮಾಡುವುದಕ್ಕೆ ಈ ಸರ್ಕಾರ ಅಥವಾ ತಾವು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದಲ್ಲ ಅದನ್ನು ತಾವು ಸ್ಪಷ್ಟ ಪಡಿಸಬೇಕು.

+ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ):- ಮಾನ್ಯ ಅಧ್ಯಕ್ಷರೆ, ನಾನು ಎರಡು ವಿಷಯಗಳ ಮೇಲೆ ಸ್ಪಷ್ಟೀಕರಣ ಕೇಳಬೇಕೆಂದು ಅಪೇಕ್ಷೆಪಡುತ್ತೇನೆ. ಸಭಾನಾಯಕರು ಕಾವೇರಿ ವಿಚಾರದಲ್ಲಿ ಕುಮಾರಿ ಜಯಲಲಿತರವರಿಗೆ ಉತ್ತರ ಕೊಡಬೇಕಾಗಿಲ್ಲ ಎಂದು ಹೇಳಿದರು, ಅದು ಸರಿ. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದ್ದವರಿಗೆಲ್ಲಾ ಉತ್ತರ ಕೊಟ್ಟು ಇಲ್ಲಿ ಪೂರೈಸುವುದಕ್ಕೆ ಆಗುವುದಿಲ್ಲ. ಇವತ್ತು ನ್ಯಾಷನಲ್ ಅಜೆಂಡಾವನ್ನು ಮಾಡುತ್ತೇವೆಂದು, ಅಧಿಕಾರಕ್ಕೆ ಬರುವ ಬಿಜೆಪಿ ಸರ್ಕಾರ ಹೇಳಿದೆ. ಈ ವಿಚಾರವನ್ನು ತಾವು ಮರೆಯಬಾರದು. ನ್ಯಾಷನಲ್ ಅಜೆಂಡಾದಲ್ಲಿ ಕಾವೇರಿ ವಿಚಾರ ಅಥವಾ ಇದಕ್ಕೆ ಸಂಬಂಧಪಟ್ಟ ವಿಚಾರಗಳು ಬಂದಾಗ ಏಕೆಂದರೆ ನ್ಯಾಷನಲ್ ಅಜೆಂಡಾ ರಾಷ್ಟ್ರಪತಿಯವರಿಗೂ ಹೋಗುತ್ತದೆ. ರಾಷ್ಟ್ರಪತಿಯವರು ಈ ನ್ಯಾಷನಲ್ ಅಜೆಂಡಾವನ್ನು ಅಧಿಕೃತವಾಗಿ ಒಪ್ಪದಿದ್ದರೂ ಕೂಡ ಅದರ ಆಧಾರದ ಮೇಲೆ ಸರ್ಕಾರ ರಚನೆ ಮಾಡುವುದಕ್ಕೆ ಅವಕಾಶ ಕೊಡುತ್ತಾರೆ. ಅದುದರಿಂದ ಇದರ ಬಗ್ಗೆ ಜಾಗ್ರತೆಗೊಳ್ಳಬೇಕಾಗುತ್ತದೆ. ಏಕೆಂದರೆ ರಾಷ್ಟ್ರೀಯ ಅಜೆಂಡಾದಲ್ಲಿ ಅನಧಿಕೃತವಾದಂಥ ಅಂಕಿತ ರಾಷ್ಟ್ರಪತಿಯವರಿಗೆ ಬಿದ್ದಂತಾಗುತ್ತದೆ. ಈ ವಿಷಯಕ್ಕೆ ಜಯಲಲಿತರವರಿಗೆ ಉತ್ತರ ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ನಾನು ಒಪ್ಪುತ್ತೇನೆ. ಆದರೆ ಈ ಸದನದಲ್ಲಿ ತಕ್ಷಣ ಸರ್ವಾನುಮತ ನಿರ್ಣಯ ಮಾಡಿದರೆ ಒಳ್ಳೆಯದು. ಏಕೆಂದರೆ ಇಂಥ ವಿಷಯಗಳನ್ನು ನ್ಯಾಷನಲ್ ಅಜೆಂಡಾದಲ್ಲಿ ಸೇರಿಸಿದರೆ, ಇವತ್ತು ಅಥವಾ ನಾಳೆಯೊಳಗಾಗಿ ಪ್ರೆಸಿಡೆಂಟ್ ಆಡ್ರಸ್‌ನಲ್ಲಿ ಬರಬಹುದು. ಇದನ್ನು ಬಹಳ ವಿಚಾರ ಮಾಡಿ ಇಲ್ಲಿ ಪ್ರಸ್ತಾಪಮಾಡುತ್ತಿದ್ದೇನೆ. ಹಿಂದೆ ಬಹಳ ತಪ್ಪು ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಇದ್ದಂಥ ಅಧಿಕಾರವನ್ನು ಸುಪ್ರೀಂ ಕೋರ್ಟ್‌ಗೆ ಬಿಟ್ಟು, ಕರ್ನಾಟಕ ರಾಜ್ಯದವರು ಇವತ್ತು ಕೈಗೆ ಕೋಳ ಹಾಕಿಕೊಂಡು ಕುಳಿತಿದ್ದೇವೆ. ಇದೇ ಇನ್ನೊಂದು ಮೂರನೆ ಪ್ರಮಾದವಾದರೆ, ಬಹುಶಃ ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನ್ಯಾಷನಲ್ ಅಜೆಂಡಾದಲ್ಲಿ ಇಂಥ ಸೂಕ್ಷ್ಮವಾದ ವಿಚಾರಗಳನ್ನು ತಂದು ಕರ್ನಾಟಕದಂತಹ ರಾಜ್ಯಗಳಿಗೆ ದ್ರೋಹ ಮಾಡಿದರೆ, ಖಂಡಿತವಾಗಿ ಇದನ್ನು ರಾಜ್ಯ ಸಹಿಸುವುದಿಲ್ಲ ಎಂಬ ಧ್ವನಿ ಈ ಸದನದಿಂದ ಹೋಗಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಪಾಯಿಂಟ್ ಆಫ್ ಆರ್ಡ್‌ರ್. ಹೊಸದಾಗಿ ನಾಳೆ ಅಧಿಕಾರ ವಹಿಸಿಕೊಳ್ಳುವ ಸರ್ಕಾರ, ಆ ಮಿತ್ರ ಪಕ್ಷಗಳ ಒಂದು ನ್ಯಾಷನಲ್ ಅಜೆಂಡಾದಲ್ಲಿ ಏನು ಇರಬೇಕು, ಏನು ಇರಬಾರದು ಎಂಬುದನ್ನು ಶ್ರೀ ವೀರಪ್ಪ ಮೊಯ್ಲಿಯವರಿಂದ ಹೇಳಿಸಿಕೊಳ್ಳುಬೇಕಾಗಿಲ್ಲ. ಕಾಂಗ್ರೆಸ್‌ನವರು ಕಾವೇರಿ ವಿವಾದದಲ್ಲಿ ನಮ್ಮನ್ನು ನೀರಿನಲ್ಲಿ ಮುಳುಗಿಸಿದರು. ಯಾರ್‍ಯಾರೋ ಜೊತೆಯಲ್ಲಿ ಶಾಮಿಲಾಗಿ, ಅನ್ಯಾಯಮಾಡಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯ ಬರುವುದಕ್ಕೆ ಆಗುವುದಿಲ್ಲ. ಅದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:- ಅಜೆಂಡಾದಲ್ಲಿ ಏನು ಇರಬೇಕೆಂದು ಇವರಿಂದ ಕೇಳಬೇಕಾಗಿಲ್ಲ. ನಾನು ನಿಮಗೆ ಭರವಸೆ ಕೊಡುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪಾಯಿಂಟ್ ಆಫ್ ಆರ್ಡ್‌ರ್. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ I don't have any objection. Was it the point of order?

Mr. SPEAKER: Let him substantiate it.

(INTERRUPTIONS)

ಶ್ರೀ ಬಿ. ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ದೇಶದ ಜನತೆ ನಮ್ಮ ಮೇಲೆ ಜವಾಬ್ದಾರಿಯನ್ನು ವಹಿಸಿದ್ದಾರೆ. ಪಾಯಿಂಟ್ ಆಫ್ ಆರ್ಡ್‌ರ ಎಂದರೆ, ಇಲ್ಲಿ ನ್ಯಾಷನಲ್ ಅಜೆಂಡಾ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಯು.ಎಫ್ ಮತ್ತು ಕಾಂಗ್ರೆಸ್‌ನವರು, ರಾಷ್ಟ್ರೀಯ ಜಲ ನೀತಿ ಮಾರ್ಗ ಸೂಚಿಯನ್ನು ಜಾರಿಗೆ ತರುವುದಕ್ಕೆ ಆಗಲಿಲ್ಲವೋ, ಅದನ್ನು ನಾವು ಮಾಡಿ ತೋರಿಸುತ್ತೇವೆ. ಅದೂ ನ್ಯಾಷನಲ್ ಅಜೆಂಡಾದಲ್ಲಿ ಬರುವುದಿದೆ. ಇದನ್ನು ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ಬರುವುದಿಲ್ಲ.

Mr. SPEAKER: The point of order is disallowed.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, ಅವರ ಪಕ್ಷಕ್ಕೆ ಸೀಮಿತವಾದ ನ್ಯಾಷನಲ್ ಅಜೆಂಡಾ ಆದರೆ ನಾವು ಪ್ರವೇಶಿಸುವುದಿಲ್ಲ; ಅವರು ಏನಾದರೂ ಮಾಡಿಕೊಳ್ಳಲಿ. ಆದರೆ ಇದು ದೇಶಕ್ಕೆ ಸಂಬಂಧಿಸಿದೆ. ರಾಷ್ಟ್ರೀಯ ಅಜೆಂಡಾ, ರಾಷ್ಟ್ರಪತಿಯವರ ಗಮನಕ್ಕೆ ಬಂದು ಅವರಿಗೆ ಸರ್ಕಾರ ರಚನೆ ಮಾಡಲು ಅಧಿಕಾರ ಕೊಡುತ್ತಾರೆ, ಅದನ್ನು ಅವರು ಮರೆಯಬಾರದು. ಎಲ್ಲರೂ ಅಷ್ಟು ಎತ್ತರಕ್ಕೆ ಹೋಗಲು ಬರುವುದಿಲ್ಲ. ಯಡಿಯೂರಪ್ಪನವರ ವಿಚಾರಗಳು ಸೀಮಿತವಾಗಿರಬಹುದು.

5.10 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಪಾಯಿಂಟ್ ಆಫ್ ಆರ್ಡ್‌ರ ಏನೆಂದು ಅವರು ಹೇಳಲಿ. ಯಾವ ವಿಷಯ ಅಸ್ತಿತ್ವದಲ್ಲೇ ಇಲ್ಲವೋ National agenda is still not existing. It has got to be approved by the President of the Republic.

There is s Supreme Court decision. It directed Mr. Narasima Rao to hold consultation with the concerned States. Without consultation with the concerned States, not Government can impose that. Supreme Court's decision is there to this effect. You know it.

ಯಡಿಯೂರಪ್ಪನವರು ನ್ಯಾಷನಲ್ ಅಜೆಂಡಾ ನಾವು ಏನು ಮಾಡಬೇಕು, ಬೇಡಬೇಕು? ಎನ್ನುವುದನ್ನು ನೀವು ಯಾರು ಹೇಳುವುದಕ್ಕೆ ಎಂದು ಕೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ನ್ಯಾಷನಲ್ ಅಜೆಂಡಾ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ. ನ್ಯಾಷನಲ್ ಅಜೆಂಡಾ, ಅವರ ಪಕ್ಷಕ್ಕೇ ಸೀಮಿತವಾಗಿದ್ದರೆ ಅದು ಚರ್ಚೆಗೆ ವಸ್ತುವಾಗುವುದಿಲ್ಲ. ನ್ಯಾಷನಲ್ ಅಜೆಂಡಾವನ್ನು ರಾಷ್ಟ್ರಪತಿಯವರಿಗೆ ಒಪ್ಪಿಸಿ ನಾಳೆ ದಿವಸ ರಾಷ್ಟ್ರಪತಿಗಳ ಭಾಷಣದಲ್ಲಿ ಇದು ಬರಬಹುದೆನ್ನುವ ಅಪಾಯ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಇದೆಲ್ಲಾ ಇವರ ಕಲ್ಪನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಅವರ ಕಲ್ಪನೆ ಬೇರೆ, ನಮ್ಮ ಕಲ್ಪನೆ ಬೇರೆ. ಅವರ ಸಿದ್ಧಾಂತವೇ ಬೇರೆ ನಮ್ಮ ಸಿದ್ಧಾಂತವೇ ಬೇರೆ. ಯಾವ ರೀತಿ ಸಮಸ್ಯೆ ಪರಿಹಾರ ಮಾಡುತ್ತಾರೋ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮೊಯಿಲಿಯವರೇ

Sri. M. VEERAPPA MOILY:- I am on my legs. ಇಷ್ಟಾದರೂ ತಿಳಿದುಕೊಳ್ಳುತ್ತೀರಾ? ಒಬ್ಬರು ನಿಂತು ಮಾತನಾಡುವಾಗ, ಸಮಾಧಾನದಿಂದ ಕುಳಿತುಕೊಳ್ಳುವಂಥ ಬೇಸಿಕ್ ಲೆಸನ್ ಆದರೂ ಕಲಿಯುತ್ತೀರೋ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದು ಮಕ್ಕಳಿಗೆ ಪಾಠ ಹೇಳಿಕೊಟ್ಟಂತಾಯಿತು ನಿಮಗೆ ಈಗಾಗಲೇ ಜನ ಬುದ್ಧಿ ಕಲಿಸಿದ್ದಾರೆ, ಇನ್ನೂ ಇವರಿಗೆ ಬುದ್ಧಿ ಬರಲಿಲ್ಲವೆಂದರೆ ನಾವು ಏನು ಮಾಡಬೇಕು? ನಿಮ್ಮ ಜಿಲ್ಲೆಯಲ್ಲಿ ನಿಮಗೆ ಸರಿಯಾಗಿ ಹೇಳಿಕಳುಹಿಸಲಿಲ್ಲವಾ ಏನು ಮಾಡಬೇಕೆಂದು? ನನಗೆ ಪಾಠ ಹೇಳಬೇಡಿ. ಸ್ಪೀಕರ್ ಇದ್ದಾರೆ, ನಾನು ಯಾವಾಗ ನಿಂತುಕೊಳ್ಳಬೇಕು? ಯಾವಾಗ ಕುಳಿತುಕೊಳ್ಳಬೇಕು ಎನ್ನುವುದಕ್ಕೆ. ಮೊದಲು ನೀವು ಪಾಠ ಕಲಿಯಿರಿ. ನಾನು ಮಾತನಾಡುವುದಕ್ಕೆ ಸ್ಪೀಕರ್‌ರವರು ಅವಕಾಶ ಕೊಟ್ಟಿದ್ದಾರೆ ನೀವು ಯಾರು ಕ್ವೊಶ್ಚನ್ ಮಾಡುವುದಕ್ಕೆ ನನಗೆ? ನನಗೆ ಗೊತ್ತಿದೆ ನೀವು ಏನು ಎಂಬುದು.

ಶ್ರೀ ಎಂ. ವೀರಪ್ಪ ಮೊಯಿಲಿ:- ಸ್ಪೀಕರ್‌ರವರು ನಿಮಗೆ ಮಾತನಾಡಲು ಅನುಮತಿ ಕೊಟ್ಟಾಗ ನಾನು ಕುಳಿತುಕೊಂಡಿದ್ದೇನೆ. ಆದರೆ, ನನಗೆ ಮಾತನಾಡಲು ಅನುಮತಿ ಕೊಟ್ಟಾಗ

ಮತ್ತೊಬ್ಬರು ಕುಳಿತುಕೊಳ್ಳುವುದನ್ನು ಕಲಿಯಬೇಕಾಗುತ್ತದೆ. ಅಷ್ಟಾದರೂ ಕಲಿಯಬೇಕಾಗುತ್ತದೆ. I am telling you. ತಾವು ರೂಲ್ ಔಟ್ ಮಾಡಿ, ಅವರೂ ರೂಲ್ ಔಟ್ ಮಾಡಲಿ. ಆದರೆ, ಜವಾಬ್ದಾರಿ ಅವರು ಹೊರಬೇಕಾಗುತ್ತದೆ. ನಾಳೆ ನ್ಯಾಷನಲ್ ಅಜೆಂಡಾದಲ್ಲಿ ಬಂದು, ಕಾವೇರಿ ವಿಚಾರದಲ್ಲಿ ನಾಳೆ ಏನಾದರೂ ಕರ್ನಾಟಕಕ್ಕೆ ದ್ರೋಹವಾದರೆ, ಅಧಿಕಾರಕ್ಕಾಗಿ ಕರ್ನಾಟಕ ರಾಜ್ಯದ ಹಿತವನ್ನು ಬಲಿ ತೆಗೆದುಕೊಂಡು, ಅದಕ್ಕೆ ನಾವು ಸುಮ್ಮನೆ ಇರಬೇಕೇ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ಯಾರು ಯಾವ ಕರ್ಮ ಮಾಡುತ್ತಾರೆಂದು ಕಾದು ನೋಡೋಣ. ಮಹಾರಾಷ್ಟ್ರದಲ್ಲಿ ಏನಾಗಿದೆ? ರಾಜಾಸ್ಥಾನದಲ್ಲಿ ಏನಾಗಿದೆ? ಆಮೇಲೆ ಮಾನ್ಯ ಅಧ್ಯಕ್ಷರೆ, ಎರಡನೆಯದಾಗಿ ವಿದ್ಯುತ್ತಿನ ವಿಚಾರ ಹೇಳುವುದಾದರೆ, ಮನೆನಾಡು ಪ್ರದೇಶದಗಳಲ್ಲಿ ವರ್ಷದಲ್ಲಿ 35 ಅಥವಾ 40 ದಿವಸಗಳಷ್ಟು ಸಹಾ ಪಂಪ್ ಸೆಟ್‌ಗಳನ್ನು ರೈತರು ಉಪಯೋಗ ಮಾಡುವುದಿಲ್ಲ. ಅಂಥಾ ಕಡೆಯೂ ಪರ್ ಹೆಚ್.ಪಿ., 500 ರೂಪಾಯಿಗಳನ್ನು ಕಲೆಕ್ಟ್ ಮಾಡುವುದು ಸರಿಯಲ್ಲ. ಎಲ್ಲಾ ಭಾಗಕ್ಕೂ ಒಂದೇ ಸ್ಕೇಲನ್ನು ಉಪಯೋಗ ಮಾಡುವುದು ಸರಿಯಲ್ಲ. ಇದನ್ನು ನೋಡಿದರೆ ಮಲೆನಾಡು ಪ್ರದೇಶಗಳಲ್ಲಿ ಮೀಟರ್‌ಗಳನ್ನೇ ಅಳವಡಿಸುವುದು ರೈತರುಗಳಿಗೆ ಅನುಕೂಲವಾಗುತ್ತದೆ. ವರ್ಷದಲ್ಲಿ ಒಂದೆರಡು ತಿಂಗಳು ಮಾತ್ರ ಪಂಪ್ ಸೆಟ್‌ಗಳನ್ನು ಉಪಯೋಗ ಮಾಡತಕ್ಕಂಥ ರೈತರು ಆ ಸಮಯಕ್ಕೆ ಮಾತ್ರ ಮೀಟರ್ ಚಾರ್ಜ್ ಕಟ್ಟಿದರೆ, ಉಳಿದಂಥ ತಿಂಗಳುಗಳಿಗೆ ಹಣ ಕಟ್ಟುವುದು ಉಳಿಯುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ವಿಚಾರ ಮಾಡಬೇಕು. ಇನ್ನು ಮೂರನೇ ವಿಚಾರವೇನೆಂದರೆ, ಪೊಲೀಸ್‌ರವರಿಗೆ ವರ್ಷದಲ್ಲಿ 30 ದಿವಸಗಳ ಸ್ಯಾಲರಿ ಕೊಡುವಂಥ ಒಂದು ಬೆನಿಫಿಟ್‌ನ್ನು ಸಹಾ ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ಇದರ ಬಗ್ಗೆ ಪುನಃ ಆಲೋಚನೆ ಮಾಡಿ ಆ ಬೆನಿಫಿಟ್‌ನ್ನು ರಿಸ್ಟೋರ್ ಮಾಡತಕ್ಕಂಥ ಕೆಲಸವನ್ನು ಮಾಡಬೇಕು.

Mr. SPEAKER: Today I am very happy that the Assembly is really in Sessions.

ಶ್ರೀ ಹೆಚ್. ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೆ, In my Constituency we had South Indian Zonal Delegates meetings of our Party.

ಆಗ ಆಂಧ್ರದವರು ಇದ್ದರು, ಕೇರಳಾದವರು ಇದ್ದರು, ತಮಿಳುನಾಡಿನವರು ಇದ್ದರು, ಕರ್ನಾಟಕದವರು ಇದ್ದರು, ಸನ್ಮಾನ್ಯ ವಾಜಪೇಯಿಯವರು ಇದ್ದರು, ಸನ್ಮಾನ್ಯ ಆದ್ವಾನಿಯವರು ಇದ್ದರು, ಇನ್ನೂ ನಮ್ಮ ಪಕ್ಷದ ಅನೇಕ ಮುಖಂಡರು ಇದ್ದರು. ಅಲ್ಲಿ ಒಂದು ಸರ್ವಸಮ್ಮತವಾದ ಒಂದು ನಿರ್ಣಯವನ್ನು ಮಾಡಿದರು. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ರಾಷ್ಟ್ರೀಯ ಜಲ ನೀತಿ ಮಾಡಿ ಸ್ಟ್ಯಾಚೂಟರಿ ಗೈಡ್‌ಲೈನ್ಸ್ ಹಾಕಬೇಕುನ್ನತಕ್ಕಂಥ ಒಂದು ನಿರ್ಣಯವನ್ನು ಅವರ ಸಮ್ಮುಖದಲ್ಲಿ ಮಾಡಿದರು. ಇದನ್ನು ನಮ್ಮ ಯಡಿಯೂರಪ್ಪನವರು ಆಗಲೇ ಹೇಳಿದ್ದಾರೆ. ಅವರು

ದೆಹಲಿಗೆ ಹೋಗಿ ಬಂದಿದ್ದಾರೆ. ಅದರ ಬಗ್ಗೆ ನಾವು ಕರ್ನಾಟಕದವರಾಗಿ ಕೈ ಕಟ್ಟಿಕೊಂಡು ಕುಳಿತುಕೊಳ್ಳುತ್ತೇವೆಯಾ? ನಮ್ಮ ಪಕ್ಷದ ಎಂ.ಪಿ.ಗಳು ಇಲ್ಲವಾ? ಮುಖಂಡರುಗಳು ಇಲ್ಲವಾ? ಮುಂಖಂಡರುಗಳು ಇಲ್ಲವಾ? ಇದರ ಬಗ್ಗೆ ವೆಂಕಯ್ಯ ನಾಯ್ಡೂರವರೂ ಹೇಳಿದ್ದಾರೆ. ಆ ರೀತಿ ವಾಜಪೇಯಿಯವರು ಮಾಡುವ ಹಾಗಿದ್ದಿದ್ದರೆ, ಆಯಮ್ಮ ಹೇಳುವುದಕ್ಕೆ ಮೊದಲೇ ಒಪ್ಪಿಕೊಂಡುಬಿಡುತ್ತಿದ್ದರು. ಅವರು ಮೊದಲೇ ಹೇಳಿದ್ದರು, I don't yield to pressure tactics.

ಜಯಲಲಿತಾ ಅವರು ಪ್ರೆಸಿಡೆಂಟ್‌ರವರಿಗೆ ಕಾಗದ ಕಳುಹಸಬೇಕಾದರೂ, ಅನ್ ಕಂಡೀಷನಲ್ ಸಪೋರ್ಟ್ ಕಳುಹಿಸಿರುವುದರಿಂದಲೇ ಅವರು ಕರೆದಿರುವುದು. ಅದನ್ನು ತಿಳಿದುಕೊಳ್ಳಬೇಕು. Support can't be a conditional support. If somebody wants to support a person to become a Prime Minister, that support though it come form outside, it should be unconditional not conditional.

ಆದ್ದರಿಂದ, ಇದರ ಬಗ್ಗೆ ಸುಮ್ಮನೆ ಭಾವನೆ ಮಾಡಿಕೊಂಡು, ಊಹೆ ಮಾಡಿಕೊಂಡು ಮಾತನಾಡುವುದರಲ್ಲಿ ಅರ್ಥ ಇಲ್ಲ. ಇದನ್ನು ಈಗಾಗಲೇ ಮುಖ್ಯಮಂತ್ರಿಗಳು ಕ್ಲಾರಿಫೈ ಮಾಡಿದ್ದಾರೆ. ಒಂದು ಪಕ್ಷ ಅಂಥಾ ಪರಿಸ್ಥಿತಿ ಬಂದರೆ, ನಮ್ಮ ಎಂ.ಪಿ. ಗಳು ರಾಜೀನಾಮೆ ಕೊಡಬೇಕೆಂದು ನಾವೇ ಹೇಳುತ್ತೇವೆ. ಅದಕ್ಕೂ ನಾವು ಹಿಂಜರಿಯುವುದಿಲ್ಲ. ಅಧಿಕಾರಕ್ಕೋಸ್ಕರ ಯಾರು ಯಾರೋ ಹೇಳಿದ ಹಾಗೆ ಇವರು ಕೇಳಿಬಿಡುತ್ತಾರೆ ಎಂದು ಊಹೆ ಮಾಡಿಕೊಂಡು ಸಣ್ಣದಾಗಿ ಯೋಚನೆ ಮಾಡುವುದು ಬೇಡವೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು):- ಹೂಳು ಎತ್ತುವುದರಲ್ಲಿ ಹಣ ಲೂಟಿಯಾಗಿದೆ ಎನ್ನುವ ವಿಷಯವನ್ನು ಹೇಳಿದ್ದಾರೆ. ಹೋದ ವರ್ಷ ನಮ್ಮ ರಾಜ್ಯದ ಎರಡು ಕಡೆ ಮಾತ್ರ ಟ್ರಯಲ್ ಬೇಸಿಸ್ ಮೇಲೆ ಹೂಳು ತೆಗೆಸಿದ್ದೇವೆ. ಅದು ಯಾವ ರೀತಿ ಎಂದರೆ, ನಾವು ಹೂಳು ಎತ್ತುವ ಯಂತ್ರವನ್ನು ಮಾತ್ರ ಕೆರೆಯಲ್ಲಿ ಇಟ್ಟಿರುತ್ತೇವೆ. ರೈತರುಗಳು ತಮ್ಮ ಟ್ರಾಕ್ಟರುಗಳನ್ನು ತಂದರೆ ಅದಕ್ಕೆ ನಾವು ತುಂಬಿಕೊಡುತ್ತೇವೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ದೊಡ್ಡಮರಳಿ ಕೆರೆ ಮತ್ತು ಕೋಲಾರ ಜಿಲ್ಲೆಯ ಕಾಜಿಕಲ್ಲಹಳ್ಳಿ ಕೆರೆಯಲ್ಲಿ ಮಾತ್ರ ಹೂಳು ಎತ್ತುವ ಕೆಲಸವನ್ನು ಮಾಡಿದ್ದೇವೆಯೇ ವಿನಃ ರಾಜ್ಯದ ಬೇರೆ ಯಾವ ಕೆರೆಗಳಲ್ಲೂ ಹೂಳು ಎತ್ತುವ ಕೆಲಸವನ್ನು ಮಾಡಿಲ್ಲ. ಸನ್ಮಾನ್ಯ ವಿರೋಧ ನಾಯಕರು ಸತ್ಯಕ್ಕೆ ದೂರವಾದಂಥ ಮಾತನ್ನು ಹೇಳಿದ್ದಾರೆಂದು ನಾನು ಈ ಮೂಲಕ ಹೇಳಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಎರಡು ಸಾವಿರ ಇಸವಿಯೊಳಗೆ ನಮಗೆ ಹಕ್ಕಿನ ಪ್ರಕಾರ ದೊರೆಯುವ ಎಲ್ಲಾ ನೀರನ್ನು ಉಪಯೋಗ ಮಾಡಿಕೊಳ್ಳಲಾಗುತ್ತದೆಂದು ಹೇಳಿದ್ದಾರೆ. ಈ ಯೋಜನೆಗೆ 1256 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೂ ಇದುವರೆಗೆ ಕೇವಲ ಐದುನೂರು

ಕೋಟಿ ಹಣವನ್ನು ಮಾತ್ರ ಖರ್ಚು ಮಾಡಲಾಗಿದೆ. ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಇನ್ನೂ 8 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಪ್ಲಾನಿಂಗ್ ಕಮಿಷನ್‌ರವರು ಹೇಳಿದ್ದಾರೆ. ಇಷ್ಟೊಂದು ಹಣವನ್ನು ಯಾವ ರೀತಿಯಾಗಿ ಒದಗಿಸಲಾಗುತ್ತದೆಂದು ವಿಷಧವಾಗಿ ಹೇಳಬೇಕಾಗುತ್ತದೆ. ಆಮೇಲೆ ಗೋಧಾವರಿ ಡೈವರ್ಷನ್ ನಿಂದ ಬರತಕ್ಕಂಥ 23 ಟಿ.ಎಂ.ಸಿ. ಎಫ್.ಟಿ. ಯಷ್ಟು ನೀರಿನ ಸಮಸ್ಯೆ ಬಗ್ಗೆ ಮಾನ್ಯ ದೇವರಾಜ್ ಅರಸರು ಹಾಗೂ ಚೆನ್ನಾರೆಡ್ಡಿ ಮುಖ್ಯ ಮಂತ್ರಿಯಾಗಿದ್ದಂಥ ಕಾಲದಲ್ಲಿ ಸೆಂಟ್ರಲ್ ವಾಟರ್ ಕಮಿಷನ್ ಮುಂದೆ ಹೋಗಿದ್ದಂಥ ಫೈಲ್ ಇನ್ನೂವರೆಗೆ ಕ್ಲಿಯರೆನ್ಸ್ ಆಗಲಿಲ್ಲ. ಆ ನೀರನ್ನು ಉಪಯೋಗಿಸತಕ್ಕಂಥ ಶಕ್ತಿ ಇದುವರೆಗೂ ಇವರಿಗೆ ಬಂದಿಲ್ಲ. ಅದರ ಬಗ್ಗೆ ಏನೂ ಮಾಡಲಾಗಿದೆ ಎಂಬ ಬಗ್ಗೆಯೂ ನಾನು ಪ್ರಸ್ತಾಪ ಮಾಡಿದ್ದೇನೆ ಅದೇ ರೀತಿಯಾಗಿ ಸ್ಕೀಮ್ 'ಬಿ'ನಲ್ಲಿ ಬರತಕ್ಕಂಥ 173 ಟಿ.ಎಂ.ಸಿ. ಎಫ್.ಟಿ ಯನ್ನು ನೀರನ್ನು ಯಾವ ಯೋಜನೆಯಡಿ ಇವತ್ತು ಬಳಕೆ ಮಾಡಲಾಗುತ್ತದೆ ಎನ್ನುವ ಬಗ್ಗೆಯೂ ನಾನು ಕೇಳಿದ್ದೇನೆ, ಅದರ ಬಗ್ಗೆಯೂ ಕೂಡ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು.

ಈ ಮನೆಯಲ್ಲಿ ಈಗಾಗಲೇ ನಾವು ಒಂದು ರೆಸಲ್ಯೂಷನ್ ಕೂಡ ಮಾಡಿ ಸ್ಕೀಮ್ (ಬಿ)ನಲ್ಲಿ ಬರತಕ್ಕಂಥ 173 ಟಿಎಂಸಿ ನೀರನ್ನು ಬಳಕೆ ಮಾಡಬೇಕೆಂದು ಹೇಳತಕ್ಕಂಥಾದ್ದರ ಬಗ್ಗೆ, ಅದರ ಹಂಚಿಕೆ ಹೇಗೆ ಮಾಡಬೇಕೆಂಬುದರ ಬಗ್ಗೆ ಕೂಡ ನಾವು ಪ್ರಸ್ತಾಪ ಮಾಡಿ ಸಲ್ಯೂಷನ್ ಮಾಡಿರತಕ್ಕಂಥ ಸಂದರ್ಭದಲ್ಲಿ ಅದರ ಬಗ್ಗೆಯೂ ಕೂಡ ಏನೂ ಪ್ರಸ್ತಾಪ ಇಟ್ಟಿಲ್ಲ. ಇವೊತ್ತು ತುಮಕೂರು, ಕೋಲಾರ, ಚಿತ್ರದುರ್ಗ ಭಾಗಕ್ಕೆ ಬರತಕ್ಕಂಥ ಭದ್ರಾ ಮೇಲ್ದಂಡೆ ಮುಖೇನ ನೀರನ್ನು ಹರಿಸ ತಕ್ಕಂಥಾದ್ದರ ಬಗ್ಗೆ ನಾವು ನಾನಾ ರೀತಿಯಲ್ಲಿ ಭಾಷಣ ಮಾಡಿದ್ದೇವೆ, ಪ್ರಸ್ತಾಪ ಮಾಡಿದ್ದೇವೆ. ಇವೊತ್ತು ನೀವು ತುಂಬಾ ಲಿಫ್ಟ್ ಎನ್ನತಕ್ಕಂಥಾದ್ದನ್ನು ಏನು ಹೇಳಿದ್ದೀರಿ, ಅದು ಕೇವಲ ಕಾಗದಗಳ ಮೇಲೆ ಉಳಿಯತಕ್ಕಂಥ ಯೋಜನೆಯಾಗುತ್ತದೆ ನಿಜರೂಪದಲ್ಲಿ ಜಾರಿಗೆ ಮಾಡುವುದಕ್ಕೆ ಆಗುವುದಿಲ್ಲ, ನೀರು ಕೊಡುವುದಕ್ಕೆ ಆಗುವುದಿಲ್ಲ. ಮೂಲವಾಗಿರತಕ್ಕಂಥ ಗ್ರಾವಿಟಿ ಫ್ಲೋನಲ್ಲಿ ಬರತಕ್ಕಂಥ ರೀತಿಯಲ್ಲಿ ನೀರನ್ನು ತಂದು ಇವೊತ್ತು ಭದ್ರಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತಗೊಳಿಸುತ್ತೀರಾ ಎಂಬುದನ್ನು ಹೇಳಬೇಕು. ತಾವು ಅನೇಕ ಸಂದರ್ಭಗಳಲ್ಲಿ ಇದನ್ನು ಕಾರ್ಯಗತಗೊಳಿಸುತ್ತೇವೆ, ಬಜೆಟ್‌ನಲ್ಲಿ ಸೇರಿಸುತ್ತೇವೆ, ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ ಎಂದು ತಾವು ಮತ್ತು ನೀರಾವರಿ ಸಚಿವರು ಅನೇಕ ಸಂದರ್ಭಗಳಲ್ಲಿ ಹೇಳಿದ್ದೀರಿ. ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಯಾವರೀತಿಯಾಗಿ ಯೋಜನೆಯನ್ನು ಮಾಡುತ್ತೀರಿ? ಸೆಂಟ್ರಲ್ ವಾಟರ್ ಕಮಿಷನನಲ್ಲಿ ಯಾವರೀತಿಯಾಗಿ ಸರಿ ಎನ್ನತಕ್ಕಂಥಾದ್ದರ ಬಗ್ಗೆ ಇವೊತ್ತು ನಿಜವಾಗಿಯೂ ಕೂಡ ತುಮಕೂರು, ಕೋಲಾರ ಮತ್ತು ಚಿತ್ರದುರ್ಗದ ಜನರು ಇವೊತ್ತು ತಮ್ಮ ಉತ್ತರವನ್ನು ನೋಡುತ್ತಾ ಇದ್ದಾರೆ. ಚುನಾವಣಾ ಸಂದರ್ಭದಲ್ಲಿಯೂ ಕೂಡ ಈ ಕುರಿತು ಅನೇಕ ಮಾತುಗಳು ಪ್ರಸ್ತಾಪ ಆಗಿರುವಂಥ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ನೀವು ಉತ್ತರ ಕೊಡುವುದನ್ನು ಅದು ಯಾವ ರೀತಿಯಾಗಿ ಇರುತ್ತದೆ ಎಂಬುದನ್ನು ಜನರು ನಿರೀಕ್ಷೆ ಮಾಡುತ್ತಾ ಇದ್ದಾರೆ. ದಯಮಾಡಿ ಇವೊತ್ತು ಅದರ ಬಗ್ಗೆ ತಾವಾಗಲೀ, ನೀರಾವರಿ ಸಚಿವರಾಗಲೀ, ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಕುಡಿಯುವ ನೀರಿನ ವಿಚಾರದಲ್ಲಿ ಹಾಹಾಕಾರ ಆಗಿದೆ ಎಂದು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. 198ರೂ. ಕೋಟಿಗಳನ್ನು ಕೇಂದ್ರ ಮತ್ತು ರಾಜ್ಯ ವಲಯದಲ್ಲಿ ಖರ್ಚು ಮಾಡುವುದಲ್ಲದೆ ನಾವು ಎಕ್ಸ್‌ಟರ್‌ನಲ್ ಏಡೆಡ್ ಪ್ರಾಜೆಕ್ಟ್ಸ್‌ನಿಂದ ಆಗಿರತಕ್ಕಂಥ ಖರ್ಚು ಆದರೆ ಒಟ್ಟಿಗೆ ಹತ್ತಿರ ಹತ್ತಿರ 261 ಕೋಟಿ ರೂ. ಗಳು ಆಗುತ್ತವೆ. ಇದಲ್ಲದೆ ಕೇಂದ್ರ ಸರಕಾರದಿಂದ ನಮಗೆ ಈಗ ಹೆಚ್ಚುವರಿ ಹಣವಾಗಿ 20 ಕೋಟಿ ರೂ. ಗಳು ಬಂದಿವೆ. ರಾಜ್ಯ ಸರಕಾರದಿಂದ ರಾಜ್ಯವಲಯದಲ್ಲಿ 8 ಕೋಟಿ ರೂ. ಗಳು ಬಂದಿವೆ. ಅರೆ ಮರು ಭೂಮಿ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ 20 ತಾಲ್ಲೂಕುಗಳಿಗೆ 6.5 ಕೋಟಿ ರೂ. ಗಳು ಬಂದಿವೆ. ಈಗಲೇ ಒಂದು ಆದೇಶವನ್ನು ಹೊರಡಿಸಿದ್ದೇವೆ, ನಿಮ್ಮ ಶಿವಮೊಗ್ಗ ಜಿಲ್ಲೆಗೆ 85.40-ಲಕ್ಷ ರೂ.ಗಳನ್ನು 11-3-98ರಂದು ಹೆಚ್ಚುವರಿಯಾಗಿ ಹಣವನ್ನು ಕೇಂದ್ರ ವಲಯದಲ್ಲಿ ಕೊಟ್ಟಿದ್ದೇವೆ. ಇದಲ್ಲದೆ ನಿಮ್ಮಲ್ಲಿ ನಾನ್ ಕವರ್ಡ್ ವಿಲೇಜಸ್ ಎಂದು ಹೇಳಿ ಮಲೆನಾಡಿನ ಪ್ರದೇಶದಲ್ಲಿ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿವಮೊಗ್ಗದಲ್ಲಿ ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ಎಲ್ಲಿ ಕುಡಿಯುವ ನೀರಿನ ವ್ಯವಸ್ಥೆಯು ಇಲ್ಲ ಅಲ್ಲಿಗಾಗಿ ಒಂದು ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದೇವೆ. ಅದೂ ಕೂಡ 11-3-98ರಂದು ಸರಕಾರದ ಆದೇಶವಾಗಿದೆ. ಮಾರ್ಚ್ ತಿಂಗಳಲ್ಲಿ ಖರ್ಚು ಮಾಡಲು ಕೊಟ್ಟಿರತಕ್ಕಂಥ ಹಣ ಇದು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):- ಮೊದಲೇ ಹಣವನ್ನು ಕೊಟ್ಟಿದ್ದರೆ ಕೆಲಸವನ್ನು ಮಾಡಲು ಅನುಕೂಲವಾಗುತ್ತಿತ್ತು.

ಶ್ರೀ ಎಂ.ಪಿ. ಪ್ರಕಾಶ್:- ದಯವಿಟ್ಟು ಕೇಳಿ, ಕೇಂದ್ರ ಸರಕಾರದಲ್ಲಿ ಬೇರೆ ಬಾಬತ್ತುಗಳಲ್ಲಿ ಬೇರೆ ರಾಜ್ಯಗಳಲ್ಲಿ ಖರ್ಚಾಗದೇ ಉಳಿದಿರತಕ್ಕಂಥ ಹಣವನ್ನು ಈ ಚುನಾವಣೆಯ ಸಂದರ್ಭ ಇದ್ದಾಗ್ಯೂ ಕೂಡ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ನಮ್ಮ ಮುಖ್ಯಮಂತ್ರಿಯವರಿಂದ ಪತ್ರವನ್ನು ಬರೆಸಿಕೊಂಡು ಹೋದ ಮೇಲೆ ಬೇರೆ ರಾಜ್ಯಗಳಲ್ಲಿ ಖರ್ಚಾಗದೇ ಉಳಿದಿರತಕ್ಕಂಥ ಹಣದಲ್ಲಿ ಹೆಚ್ಚುವರಿ ಹಣವನ್ನು ನಮಗೆ ಇವೊತ್ತು ಕೊಟ್ಟಿದ್ದಾರೆ. ಇದು ಅಡಿಷನಾಲಿಟಿ. ಆದ್ದರಿಂದ ಇದಕ್ಕಾಗಿ ನಮಗೆ ಶಹಭಾಶ್‌ಗಿರಿ ಕೊಡಬೇಕಾಗಿತ್ತು. ಚುನಾವಣೆಯ ಸಂದರ್ಭದಲ್ಲಿ ಕೂಡ ಹೋಗಿ ಹಣವನ್ನು ತಂದಿದ್ದೀರಿ ಎಂದು ಶ್ಲಾಘಿಸ ಬೇಕಾಗಿತ್ತು. ಮೊದಲು ಹಣವು ಬರಲಿಲ್ಲವಾದ ಕಾರಣ ಬಿಡುಗಡೆ ಮಾಡಿರಲಿಲ್ಲ. ಆದ್ದರಿಂದ ನಮಗೆ ಕುಡಿಯುವ ನೀರಿನ ವಿಚಾರದಲ್ಲಿ ಯಾವ ಸಮಸ್ಯೆಯೂ ಇಲ್ಲ. ಇಂದಿರಾ ಅವಾಸ್ ಮನೆಗಳ ವಿಚಾರದಲ್ಲಿ 1997-98ನೇ ಸಾಲಿಗೆ ನಮ್ಮ ಗುರಿ ಇದ್ದುದು 37, 657 ಮನೆಗಳನ್ನು ಕಟ್ಟ ತಕ್ಕಂಥಾದ್ದು. 36,430 ಮನೆಗಳನ್ನು ಈಗಾಗಲೇ ಕಟ್ಟಿ ಆಗಿದೆ. 1996-97-98ನೇ ಸಾಲಿನ ಉತ್ತರ ಇದು.

ಶ್ರೀ ಶ್ರೀರಂಗದೇವರಾಯಲು (ಗಂಗಾವತಿ):- ಮಾನ್ಯ ಅಧ್ಯಕ್ಷರೇ, ರೈತರಿಗೆ ಕ್ರಾಪ್‌ಲೋನ್ ಕೊಡಬೇಕಾದರೆ ಇನ್‌ಶೂರೆನ್ಸ್ ಹಣವನ್ನು ಮುರಿದುಕೊಳ್ಳುತ್ತಾ ಇದ್ದಾರೆ.

ಇನ್‌ಶೂರೆನ್ಸ್ ಸ್ಕೀಮ್‌ನಲ್ಲಿ ನ್ಯಾಷನಲೈಸ್ಡ್ ಬ್ಯಾಂಕ್‌ನವರು ಕೊಡುತ್ತಾರೆ. ಮುಖ್ಯವಾಗಿ ನಮ್ಮ ಕ್ಷೇತ್ರದಲ್ಲಿನ ಭತ್ತದ ಬೆಳೆಯ ಬಹಳ ನಷ್ಟ ಉಂಟು ಮಾಡಿದಾಗ ಬ್ಯಾಂಕ್ ಮೆನೇಜರ್‌ಸ್ನ್ನು ಭೇಟಿಯಾದಾಗ ಜಿಲ್ಲಾಧಿಕಾರಿಗಳಿಂದ ನೀವು ನಮಗೆ ಇಷ್ಟು ನಷ್ಟವಾಗಿದೆ ಎಂಬುದನ್ನು ತಂದುಕೊಟ್ಟರೆ ನಾವು ತಲಾ 5 ರಿಂದ 6 ಸಾವಿರ ರೂ. ಗಳ ವರೆಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಅನುಕೂಲವಾಗುತ್ತದೆ ಎಂದು ಭಾವಿಸುತ್ತೇನೆ. ನಾವು ಬಹುಶಃ ಹಿಂದೆ ಕುಳಿತ ಕಾರಣ ಅವರಿಗೆ ಕಾಣುತ್ತಾ ಇಲ್ಲ. ಯಾಕೆಂದರೆ ನಾವು ಪ್ರಸ್ತಾಪ ಮಾಡಿದ ಒಂದಕ್ಕೂ ಕೂಡ ಅವರು ಉತ್ತರವನ್ನು ಕೊಡುತ್ತಾ ಇಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೇಳಿದಾಗ ಉತ್ತರ ಕೊಟ್ಟಿಲ್ಲ. ನಾನು ಹೈಸ್ಕೂಲ್‌ಗಳ ಬಗ್ಗೆ ಕೇಳಿದಾಗ್ಯೂ ಉತ್ತರ ಕೊಟ್ಟಿಲ್ಲ. ರೈತರ ಬಗ್ಗೆ ಕೇಳಿದರೂ ಅದಕ್ಕೂ ಉತ್ತರ ಕೊಟ್ಟಿಲ್ಲ. ಹಾಗಾಗಿ ದೂರವಿರುವ ನಾವು ಮಂತ್ರಿಗಳಿಗೆ ಕಾಣಿಸುತ್ತಾ ಇಲ್ಲವೆಂದು ಕಾಣುತ್ತದೆ. ದಯಮಾಡಿ ನನ್ನ ಸಮಸ್ಯೆಗಳಿಗೆ ಉತ್ತರಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು):- ಮಾನ್ಯ ಅಧ್ಯಕ್ಷರೇ, ಫೆಬ್ರವರಿ 27ರಂದು ಕರ್ನಾಟಕ ರಾಜ್ಯ ಹೈಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠ ಮಂಗಳೂರಿನಲ್ಲಿ ನಡೆಯುತ್ತಿರತಕ್ಕಂಥ ಕೊಜೆಂಟ್ರಿಕ್ಸ್ ಅವ್ಯವಹಾರಗಳ ಬಗ್ಗೆ, ಸುಮಾರು ನೂರು ಕೋಟಿ ರೂ. ಗಳ ಅವ್ಯವಹಾರ ಇರಬಹುದು, ಅದರ ಬಗ್ಗೆ ಸಿಬಿಐ ತನಿಖೆಗೆ ಆಜ್ಞೆ ಮಾಡಿದ್ದರು. ಇದು ನೇರವಾಗಿ ಕರ್ನಾಟಕ ಸರಕಾರದ ಆಡಳಿತದ ಮೇಲೆ ಪ್ರತಿಬಿಂಬಿಸುತ್ತಾ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕೆಂದು ವಿನಂತಿಸುತ್ತಾ ಇದ್ದೇನೆ. ಇದರ ಬಗ್ಗೆ ಅಪೀಲು ಮಾಡುವ ವಿಚಾರವೂ ಬಂದಿದೆ. ಇದರಂತೆ ಎಂಆರ್‌ಪಿಎಲ್‌ನಂಥ ಸಂಸ್ಥೆಯು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ 18 ಕೋಟಿ ರೂ. ಗಳಷ್ಟು ಬಾಕಿ ಇಟ್ಟಿರುವುದನ್ನು ಅವರು ಸ್ಟೇ ಮಾಡಿದ್ದರೂ ಕೂಡ ಅದನ್ನು ವೆಕೇಟ್ ಮಾಡಲು ನಮ್ಮ ರಾಜ್ಯ ಸರಕಾರದಿಂದ ಆಗಿಲ್ಲ. ಆದ್ದರಿಂದ ಇದರ ಬಗ್ಗೆ ತಾವುಗಳು ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳಿ ಗ್ರಾಮಾಂತರ):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರ ಹೃದಯ ಶ್ರೀಮಂತಿಕೆಯಿಂದ ನಾವು ಸಾಕಷ್ಟುಮಟ್ಟಿಗೆ ಮುಳುಗಡೆ ಭಾಗದ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿಕೊಂಡರೂ ಕೂಡ ದುರ್ದೈವದಿಂದ ಅಲ್ಲಿನ ಅಧಿಕಾರಿಗಳ ನಡೆತೆಯಿಂದ ಇನ್ನೂ ನಮಗೆ ಯಾವ ಸರಿಯಾದ ಸವಲತ್ತುಗಳೂ ಸಿಕ್ಕಿಲ್ಲ. ಇವೊತ್ತಿನ ವರೆಗೂ ಸಂಪೂರ್ಣವಾಗಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವಂಥ ಪುನರ್ ಕೇಂದ್ರ ಒಂದು ಆಗಿಲ್ಲ. ತಾವುಗಳು 15-8-99ರಂದು ಬಾಗಲಕೋಟೆಗೆ ಬಂದಾಗ ಕಟ್ಟಡಗಳ ಬೆಲೆ ನಿಗದಿಪಡಿಸಬೇಕೆಂದು ಸಾರ್ವಜನಿಕವಾಗಿ ಹೇಳಿದ್ದರೂ ಕೂಡ ಆ ಕುರಿತು ಇನ್ನೂ ಆದೇಶಗಳು ಹೊರಬಿದ್ದಿಲ್ಲ. ಅದೇ ದಿವಸ ತಾವುಗಳು ಹೇಳಿದಂತೆ ಹೋದ ವರ್ಷ ಹಿನ್ನೀರಿನಲ್ಲಿ ಸರ್ವೆ ಮಾಡಿದಂಥ ಜಮಿನುಗಳು ಮುಳುಗಿ ಕೋಟ್ಯಾಂತರ ರೂ. ಗಳ ಹಾನಿಯಾಗಿದೆ. ಅಂಥವರ ಒಂದು ಎಕರೆ ಭೂಮಿಗೂ ಕೂಡ ಯಾವುದೇ ಪರಿಹಾರ ಸಿಕ್ಕಿಲ್ಲ. ಅಲ್ಲಿನ ಅಧಿಕಾರಿಗಳ ಕುಮ್ಮಕ್ಕಿನಿಂದ ನಮ್ಮ ಯಾವುದೇ ಕೆಲಸಗಳು ಆಗುತ್ತಾ ಇಲ್ಲ. ಈ ಕುರಿತು ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಯಾವ ಸಂದರ್ಭದಲ್ಲಾದರೂ ಕೂಡ ನೀರಾವರಿ ವಿಚಾರ ಬಂದಾಗ ಭದ್ರಾ ಮೇಲ್ದಂಡೆ ಯೋಜನೆ, ತುಂಗಾ ಕಿರು ನಾಲೆ ಬಗ್ಗೆ ಆಗಾಗ ಚರ್ಚೆಯಾಗುತ್ತಿದೆ. ನಾನು ತಮ್ಮ ಮೂಲಕ ನೀರಾವರಿ ಸಚಿವರ ಗಮನಕ್ಕೆ ಇರುವುದೇನೆಂದರೆ ಮಾನ್ಯ ಮುಖ್ಯಮಂತ್ರಿಯವರು ಕಡೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ತುಂಗಾ ಕಿರು ನಾಲೆಯ ಕಾಮಗಾರಿಯನ್ನು ಪ್ರಾರಂಭ ಮಾಡುವಷ್ಟು ಶಕ್ತಿ ತಮ್ಮ ಸರಕಾರಕ್ಕೆ ಇಲ್ಲ ಎಂದು ಪತ್ರಿಕೆಗಳ ಮೂಲಕ ಹೇಳಿಕೆ ಮಾಡಿದ್ದಾರೆ. ಆ ಬಗ್ಗೆ ನಾನು ಮುಖ್ಯಮಂತ್ರಿಯವರನ್ನು ಮೆಚ್ಚುತ್ತೇನೆ. ಅದರೆ ನಮ್ಮ ನೀರಾವರಿ ಸಚಿವರು ಆಗಾಗ ಹೇಳಿಕೆ ಮಾಡುವಂಥಾದ್ದು ಏನೆಂದರೆ, ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ, ಅದರ ಅಂದಾಜು ವೆಚ್ಚವನ್ನು ತಯಾರು ಮಾಡಿ ಇಟ್ಟುಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಾನು ಎಚ್ಚರಿಕೆಯನ್ನು ಕೊಡುವುದೇನೆಂದರೆ ನಮ್ಮ ಪರಿಸರವು ಹಾಳಾಗುವುದರ ಬಗ್ಗೆ ಸಂಪೂರ್ಣವಾದಂಥ ಮಾಹಿತಿಗಳು ನಮ್ಮಲ್ಲಿ ಇವೊತ್ತಿನ ವರೆಗೂ ಇಲ್ಲ. ನಮ್ಮ ಅರಣ್ಯ ಪ್ರದೇಶಗಳು ನಾಶವಾಗುವ ಬಗ್ಗೆ ನಮ್ಮಲ್ಲಿ ಸಂಪೂರ್ಣವಾದಂಥ ಮಾಹಿತಿಗಳು ಇಲ್ಲ. ನಾನು ಮಂತ್ರಿಗಳ ಕೊಠಡಿಯಲ್ಲಿ ಸ್ವತಃ ಹೋಗಿ ಮಾತನಾಡುವಾಗ ಅವರು ಏನು ಹೇಳಿದ್ದಾರೆ ಅಂದರೆ, ಕೊಳವೆಯ ಮುಖಾಂತರವಾಗಿ ನಾವು ನೀರು ತರುತ್ತೇವೆ ಎಂದು ಹೇಳಿದ್ದಾರೆ. ಹಾಗಾದರೆ ಇದೇನು ಕುಡಿಯುವ ನೀರಿನ ಯೋಜನೆಯೋ ಅಥವಾ ನೀರಾವರಿ ಯೋಜನೆಯೋ ಎಂಬುದು ನನಗೆ ಅರ್ಥವಾಗಿಲ್ಲ. ಆದ್ದರಿಂದ ಸ್ಪಷ್ಟವಾಗಿ ಸರಕಾರದ ನಿಲುವನ್ನು ಈ ಎರಡು ಯೋಜನೆಗಳ ಬಗ್ಗೆ ಸಮಂಜಸವಾದ್ದಂಥ ಉತ್ತರವನ್ನು ಕೊಡಬೇಕು. ಯಾಕೆಂದರೆ ನಮ್ಮ ಭಾಗದ ಜನರು ಅರಣ್ಯ ನಾಶವಾಗುತ್ತದೆ ಎಂಬ ದೃಷ್ಟಿಯಿಂದ ಅವರ ಕೋಪಗೊಂಡು ಬೇರೆ ವಿಚಾರಕ್ಕೆ ತಯಾರಾಗಿ ತಡೆ ಹಿಡಿಯುವಂತೆ ಆಗುತ್ತದೆ. ಆದ್ದರಿಂದ ಯಾವ ಭಾಗದ ಜನರಿಗೆ ತಾವು ನೀರು ಒದಗಿಸಿಕೊಡುತ್ತೇವೆಂದು ಹೇಳಿದ್ದೀರೋ ಅದನ್ನು ತಮ್ಮ ಇಲಾಖೆಯು ಮುಖಾಂತರವಾಗಿ ತಮ್ಮ ಸ್ಪಷ್ಟ ನಿಲುವನ್ನು ಹೇಳಬೇಕಾಗುತ್ತದೆ.

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ):- ಮಾನ್ಯ ಅಧ್ಯಕ್ಷರೇ, ನಮ್ಮ ರಿಸರ್ವ್ಡ್ ಕ್ಷೇತ್ರದಲ್ಲಿ ಗಂಡೂರಿ ನಾಲ ಎಂಬ ಒಂದೇ ಪ್ರಾಜೆಕ್ಟ್ ಇದೆ. ಈ ಬಗ್ಗೆ ಸದನದಲ್ಲಿ ಹಿಂದೆ ನಾನು ವಿನಂತಿ ಮಾಡಿಕೊಂಡಿದ್ದೇನೆ. ಬರಗಾಲ ಪೀಡಿತ ಪ್ರದೇಶವಾದ್ದರಿಂದ ಕೂಲಿಕಾರ್ಮಿಕರು ಹೊರರಾಜ್ಯಗಳಿಗೆ ಹೋಗುತ್ತಿದ್ದಾರೆ. ಮೊದಲು ಅಲ್ಲಿ ಸಾವಿರಾರು ಕೂಲಿಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅದರೆ ಎರಡು ತಿಂಗಳುಗಳಿಂದ ಅಲ್ಲಿ ಕೆಲಸ ನಿಂತು ಹೋಗಿದೆ. ನೀರಿನ ಹಾಹಾಕಾರ ಎದ್ದಿದೆ. ನಮಗೆ ಇರುವುದು ಅದೊಂದೇ ಪ್ರಾಜೆಕ್ಟ್. ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತಾರೆ, ಶೀಘ್ರದಲ್ಲಿ ಪ್ರಾರಂಭ ಮಾಡಿದರೆ ನಮ್ಮ ಕೂಲಿ ಕಾರ್ಮಿಕರಿಗೆ ಅನುಕೂಲವಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ. ಮತ್ತು ರೈತರಿಗೆ ಕೂಡ ಅನುಕೂಲವಾಗುತ್ತದೆ ಎಂದು ಹೇಳುತ್ತಾ ಮರುಪಾವತಿಯಾಗಿಲ್ಲ ಎಂದು ಕಾಂಟ್ರಾಕ್ಟ್ ಕೆಲಸವನ್ನೂ ಕೂಡ ಬಂದ್ ಮಾಡಿದ್ದಾರೆ, ಅವರಿಗೆ ಮರುಪಾವತಿಯನ್ನು ಯಾವಾಗ ಮಾಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಕಡೂರಿಗೆ ಬಂದ ಸಂದರ್ಭದಲ್ಲಿ ತುಂಗಾ ಕಿರುಯೋಜನೆ ಬಗ್ಗೆ ಮಾತನಾಡಿದ್ದರು. ಆದರ ಸಾಧಕ ಬಾಧಕಗಳ ಬಗ್ಗೆ ಯೋಚನೆ ಮಾಡುತ್ತೇನೆ, ಈ ಯೋಜನೆಗೆ ಹಣ ಬೇಕಾಗುತ್ತದೆ ಎಂಬ ಮಾತನ್ನು ಹೇಳಿರುತ್ತಾರೆ.

ನೀವು ಇಷ್ಟೇಲ್ಲಾ ಮಾತನಾಡುತ್ತೀರಿ, ನಿಮ್ಮ ಸಾರ್ಕರ ಇದ್ದಾಗ ಯಾವುದು ಕೆಲಸವು ಸರಿಯಾಗಿ ಆಗಿರುವುದಿಲ್ಲ. 10 ಕೋಟಿ ರೂಪಾಯಿಗಳನ್ನು ಕೊಡಬೇಕು ಸಂದರ್ಭದಲ್ಲಿ ಕೇವಲ 2 ಕೋಟಿ ರೂಪಾಯಿಗಳವರೆಗೆ ಕೊಟ್ಟಿದ್ದಾರೆ. ನೀವೆಲ್ಲಾ ಏನು ಮಾತನಾಡುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ವಾರಾಹಿ ನಾಲೆ ಯೋಜನೆ ಸಂಪೂರ್ಣವಾಗಿದೆ. ಆದರೆ ಅಲ್ಲಿರಕ್ಕಂಥ ರೈತರಿಗೆ ಪರಿಹಾರ ಮತ್ತು ಪುನರ್ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಕೊಟ್ಟಿಲ್ಲ. 1991-92-95ರಲ್ಲಿ ಆಕ್ಯೆರು ಮಾಡಿರತಕ್ಕಂಥ ಮನೆಗಳಿಗೆ ರೆವಿನ್ಯೂ ಅಧಿಕಾರಿಗಳು ಆದೇಶವನ್ನು ಕೊಟ್ಟಿದ್ದಾರೆ, 1995ರ ಸರ್ವೆ ಪ್ರಕಾರ ಹಣವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ರೈತರು ಅದರಿಂದ ಬಹಳ ಬೇಸರವನ್ನು ಮಾಡಿಕೊಂಡಿದ್ದಾರೆ. ರೈತರಿಗೆ ಅನುಕೂಲವಾಗುವಂತೆ ಅದನ್ನು ಸರಿಪಡಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ನನ್ನ ಕ್ಷೇತ್ರದಲ್ಲಿ ಎನ್.ಆರ್. ಬಿ.ಸಿ. ಯಲ್ಲಿ ದುರುಪಯೋಗವಾಗಿದೆ. ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಸ್ಪೀಡ್ ಗಮನದಲ್ಲಿಟ್ಟುಕೊಂಡಿದ್ದೇವೆಂದು ಎಂದು, ಮೂರರಷ್ಟು ಪೇಮೆಂಟ್ ಮಾಡಿದ್ದಾರೆ. ಒಂದು ನಾಲೆಯ ವರ್ಕ್ಸ್‌ಗೆ 65 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಗಹನವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ ಅದು ರೆಕಾರ್ಡ್‌ದಲ್ಲಿ ಇದೆ. 4 ಕೋಟಿ ರೂಪಾಯಿಗಳ ಲೈನ್ ಎಸ್ಟಿಮೆಟ್‌ಗೆ 11 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಒಂದು ಸಲ ಟೆಂಡರ್ ವಹಿಸಿದ ಮೇಲೆ ನೀವು ಒಂದು ಎಂಟ್ರೆಸ್ಟ್ ಕಮೀಟಿ ಮಾಡಿ ಹೆಚ್ಚಿಗೆ ಹಣವನ್ನು ಕೊಡುತ್ತಾ ಹೋದರೆ ಇದಕ್ಕೆ ಜವಾಬ್ದಾರಿ ಯಾರು? ಆಕ್ಷನ್ ಪ್ಲಾನ್‌ದಲ್ಲಿ ಇದ್ದರೂ, ಪತ್ರವನ್ನು ಬರೆದರೂ 65 ಲಕ್ಷ ರೂಪಾಯಿಗಳನ್ನು ಒದಗಿಸಲಿಲ್ಲ. ಅಡಿಷನಲ್ ಇ.ಎ.ಎಸ್. ನಲ್ಲಿ ಕೆಲಸ ಮಾಡಿಸುತ್ತಿದ್ದೇವೆ. ಈ ಬಗ್ಗೆ ತಾವು ಹೇಳಬೇಕು. ಕೆ.ಇ.ಬಿ. ದಿಢೀರ್ ಎಂದು ವಿದ್ಯುತ್ ಸರಬರಾಜನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆ.ಇ.ಬಿ.ಯಲ್ಲಿ ಕೆಲವೊಂದು ದೋಷಗಳು ಇವೆ ಅದರ ಬಗ್ಗೆ ನಮಗೆ ಅರ್ಥವಾಗುತ್ತದೆ. ಲಕ್ಷಗಟ್ಟಲೇ ಡಿಸ್ಟಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಂಡರೂ ಒಂದಕ್ಕೂ ನನ್ನ ಕ್ಷೇತ್ರದಲ್ಲಿ ತೆಗೆದುಕೊಳ್ಳಲಿಲ್ಲ. ತಾವು ಇಂತಹ ಸಾಮಾನ್ಯ ಸಂಗತಿಯನ್ನಾದರೂ ಗಮನಿಸಿ ವಿದ್ಯುತ್ ಸರಿಯಾಗಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಅನೇಕ ಸದಸ್ಯರುಗಳು ಯು.ಕೆ.ಪಿ.ಯಲ್ಲಿ ಕೆಲಸವಾಗಿಲ್ಲ.

ಸರಿಯಾದ ಕೆಲಸವಾಗದೆ ನಿಂತು ಹೋಗಿದೆ ಎಂದು ಪದೇ ಪದೇ ಈ ಸದನದಲ್ಲಿ ಹೇಳುತ್ತಿದ್ದಾರೆ. ಎರಡು ನಿಮಿಷ ಹೆಚ್ಚಿಗೆ ಸಮಯವನ್ನು ತೆಗೆದುಕೊಂಡರೂ ಸರಿ ನಾನು ನಿಮಗೆ ಎಲ್ಲವನ್ನೂ ವಿವರವಾಗಿ ಹೇಳುತ್ತೇನೆ. ನಾನು ಹೇಳುವುದನ್ನು ತಾವು ಖುದ್ದಾಗಿ ಹೋಗಿ ನೋಡಿಕೊಂಡು ಬನ್ನಿ. ಅದು ಆಗಿಲ್ಲವೆಂದರೆ ನಾನು ಸರ್ಕಾರದ ಪರವಾಗಿ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ. ಇದು ಬಹಳ ಮಹತ್ವದ ವಿಚಾರ ಇರುವುದರಿಂದ ನಾನು ಪದೇ ಪದೇ ಹೇಳುತ್ತೇನೆ. ಕಾಂಗ್ರೀಟ್ ಕೆಲಸ ಪೂರ್ತಿ ಮುಗಿದಿದೆ. ಅದು ಅದ ಮೇಲೆ ಗೇಟ್ ಕೂಡಿಸುವುದು. 15 ಮೀಟರ್ ಗೇಟ್ ರೆಡಿಯಾಗಿದೆ. ಅದಕ್ಕೆ ಸ್ಟೀಲ್ ಬ್ರಿಡ್ಜ್ ಮಾಡಬೇಕು ಆ ಕೆಲಸ ಪ್ರಾರಂಭವಾಗಿದೆ. ಡ್ಯಾಮ್‌ನಲ್ಲಿ ಎಲ್ಲಾ ಗೇಟ್‌ಗಳನ್ನು ಮುಗಿಸಿ 1999ರ ಮಳೆಗಾಲಕ್ಕೆ ಬ್ರಿಡ್ಜ್ ಹಾಕಿ ನೀರನ್ನು ನಿಲ್ಲಿಸಬೇಕೆಂಬ ಪ್ರಕ್ರಿಯೆ ಹಾಕಿಕೊಂಡಿದ್ದೇವೆ. ಈಗಾಗಲೇ 41 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆ. ಇನ್ನು ಉಳಿದದ್ದು ಕೆನಾಲ್ ಕೆಲಸ. ಎಂದು ನಾರಾಯಣಪುರ ಬಲದಂಡೆ ಕಾಲುವೆ (ಎನ್‌ಆರ್‌ಬಿಸಿ), ಇಂಡಿ ಬ್ರ್ಯಾಂಚ್ ಕೆನಾಲ್, ಜೇವರ್ಗಿ ಕೆನಾಲ್, ನಾರಾಯಣಪುರ ಕಾಲುವೆಯದಲ್ಲಿ 90 ಕಿ.ಮೀ ಮುಗಿದಿದೆ. 20 ಕಿ.ಮೀ ಬಾಕಿ ಇದೆ. ಮುಖ್ಯಮಂತ್ರಿಗಳು ಹೇಳಿದಂತೆ ಇದು 80 ಪರ್ಸೆಂಟ್ ಮುಗಿದಿದೆ. ಜೇವರ್ಗಿ ಬ್ರ್ಯಾಂಚ್ ಕೆನಾಲ್‌ನಲ್ಲಿ 135 ಕಿ.ಮೀ. ಇನ್ನು ಬಾಕಿ ಉಳಿದಿರುವುದು 16 ಕಿ.ಮೀ. ಇಂಡಿ ಬ್ರ್ಯಾಂಚ್ ಕೆನಾಲ್‌ನಲ್ಲಿ ಒಟ್ಟು 132 ಕಿ.ಮಿ. ಇದೆ. ಅದರಲ್ಲಿ ಉಳಿದಿರುವುದು 13 ಕಿ.ಮೀ. ಮಾತ್ರ. ಎಕ್ಸ್‌ಕಾವೇಷನ್ ವರ್ಕ್ಸ್ ನಾರಾಯಣಪುರದಲ್ಲಿ 390 ಕಿ.ಮೀ. ನಲ್ಲಿ 326 ಕಿ.ಮೀ. ಮುಗಿಸಿರುತ್ತೇವೆ. 71 ಕಿ.ಮೀ ಉಳಿದಿದೆ. ಇದರ ಬಗ್ಗೆ ನಾನು ಅಂಕಿ ಅಂಶಗಳನ್ನು ಕೊಟ್ಟಿರುತ್ತೇನೆ. ಇನ್ನು ಉಳಿದಿರುವುದು ಸಿಡಿ ವರ್ಕ್ಸ್. ಅಂದರೆ ಸಿಡಿ ಮುಗಿದಿಲ್ಲ; 80 ಪರ್ಸೆಂಟ್ ಅಲ್ಲಿರತಕ್ಕಂಥ ಪ್ರಕರಣಗಳು ಮುಗಿದಿದೆ. ಇನ್ನು ಉಳಿದಿರತಕ್ಕಂಥದ್ದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಕೆಲಸವನ್ನು ಮುಗಿಸುತ್ತೇವೆ. ಇನ್ನು ಸಿ.ಡಿ. ವರ್ಕ್ಸ್, ಆರ್ ಆ್ಯಂಡ್ ಆರ್ ಕೆಲಸ, ಮತ್ತೊಂದು ಬಾಗಲಕೋಟೆಯ ಕೆಲಸ ಉಳಿದಿದೆ. ನಾರಾಯಣಪುರ ಬಲದಂಡೆ ಕಾಲುವೆ ಸಿ.ಡಿ. ವರ್ಕ್ಸ್ 158 ಇದೆ. ಆದರಲ್ಲಿ 70 ಮುಗಿದಿರುತ್ತವೆ. 54ಕ್ಕೆ ಕೆಲಸ ನಡೆಯುತ್ತಿದೆ. ಇನ್ನು 44 ಉಳಿದಿರುವೆ. ಜೀವರ್ಗಿ ಬ್ರ್ಯಾಂಚ್ ಕೆನಾಲ್, ಸಿ.ಡಿ. ವರ್ಕ್ಸ್ 165 ಇವೆ, ಆದರಲ್ಲಿ 40 ಮುಗಿದಿರುತ್ತದೆ. 65ಕ್ಕೆ ಕೆಲಸ ನಡೆಯುತ್ತಿದೆ, 60 ಬಾಕಿ ಉಳಿದಿರುತ್ತವೆ. ಇಂಡಿ ಬ್ರ್ಯಾಂಚ್ ಕೆನಾಲ್‌ದಲ್ಲಿ ಸಿಡಿ. ವರ್ಕ್ಸ್ 90 ಇವೆ. ಅದರಲ್ಲಿ 20 ಮುಗಿದಿವೆ. 16ಕ್ಕೆ ಕೆಲಸ ನಡೆಯುತ್ತಿದೆ. ಬಾಗಲಕೋಟೆಗೆ ಈ ವರ್ಷ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಅದರಲ್ಲಿ 10 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಆ ವಾಲ್ಯೂಯೇಷನ್ ಪ್ರಾಬ್ಲಮ್ ಇದೆ. ಇನ್ನು ಆರ್ ಆ್ಯಂಡ ಆರ ವರ್ಕ್ಸ್‌ಗೆ 472 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಇದನ್ನು ಮುಗಿಸಬೇಕೆಂದು ಮುಖ್ಯಮಂತ್ರಿಗಳಿಗೂ ಇದೆ. ಇದನ್ನು ಬೇಗ ಮುಗಿಸದಿರುವುದಕ್ಕೆ ರಾಜಕೀಯ ಇಚ್ಛಾಶಕ್ತಿ ಇದೆ. ಆ ಭಾಗದಲ್ಲಿ ಬರತಕ್ಕಂಥ ಒಟ್ಟು ನಾಲ್ಕು ಜನ ಕಾಂಗ್ರೆಸ್ ಸದಸ್ಯರು ಇದ್ದಾರೆ. ಜೆ.ಟಿ. ಪಾಟೀಲರು, ಬಿ.ಎಸ್. ಪಾಟೀಲ ಮನಗೂಳಿಯವರಿದ್ದಾರೆ ಅವರನ್ನು ಬೇಕಾದರೆ ಕೇಳಿ, ನಾವೆಲ್ಲರೂ ಕೂಡಿ ಎಷ್ಟು ಮೀಟಿಂಗ್ ಮಾಡಿ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸತಕ್ಕಂಥದ್ದು ಆಗಿದೆ. ಪ್ರೈಸ್ ಫಿಕ್ಸೇಷನ್ ಕಮಿಟಿ ಇದುವರೆಗೂ ಮಾಡಿರಲಿಲ್ಲ. ಈಗ ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. 1963 ರಿಂದ ಆ ಸಮಸ್ಯೆ ಇದೆ. 212 ಹಳ್ಳಿಗಳಲ್ಲಿ 10 ಹಳ್ಳಿಗಳಿಗೆ

ಮಾತ್ರ ಬೇರೆ ಕಡೆ ಶಿಫ್ಟ್ ಮಾಡಿದ್ದೇವೆ. 30 ವರ್ಷದಿಂದ 54 ಹಳ್ಳಿಗಳಿಗೆ ಮಾತ್ರ ಆರ್ ಆ್ಯಂಡ್ ಆರ್ ಮಾಡುವುದಕ್ಕೆ ಸಾಧ್ಯವಾಗಿದೆ. ಸೆಂಟಿಮೆಂಟಲ್ ಅಟಾಚ್‌ಮೆಂಟ್ ಇರುವುದರಿಂದ ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಈಗ ನಾವು ಪ್ರೈಸ್ ಫಿಕ್ಸೇಷನ್ ಕಮಿಟಿ ಮಾಡಿದ್ದೇವೆ. ಒಣಭೂಮಿಗೆ 50 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಇದೆ. ನೀರಾವರಿ ಇದ್ದ ಜಮೀನುಗಳಿಗೆ 90 ಸಾವಿರ ಕೊಡಬೇಕೆಂದು ಹೇಳಿದ್ದೇವೆ, ಇನ್ನು ಕಬ್ಬು ಬೆಳೆಯುವಂಥ ಜಮೀನಿಗೆ 1.10 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಇದೆ. ಇದರ ಬಗ್ಗೆ ಇನ್ನೂ ತಕರಾರು ಇದೆ. ಡಿಪ್ರೀಸಿಯೇಷನ್ 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ.

5.40 ಪಿ.ಎಂ.

ಈ ಒಂದು ಜಮೀನು ಇತ್ಯರ್ಥ ಇರಬಹುದು ಮನೆಗಳ ಪುನರ್ ವಸತಿ ಇರಬಹುದು ಇದಕ್ಕೆ ಹೆಚ್ಚು ಸಹಾಯಧನ ಕೊಡಬೇಕು ಎಂದು ಮಾನ್ಯ ಜಗದೀಶ್ ಪಾಟೀಲ್ ಅವರು ಹೇಳಿದರು. 1 ಲಕ್ಷ 15 ಸಾವಿರ ರ್‍ಯಾಂಡ್‌ಗೆ ಕೊಡಬೇಕೆಂದು ಹೇಳಿದರು. ಇವತ್ತೋ ನಾಳೆಯೋ ಇದನ್ನು ಇತ್ಯರ್ಥ ಮಾಡುತ್ತೇವೆ. 85 ಕೋಟಿ ಬೇಕಾಗಿದೆ. ಮಾರ್ಚ್ 31 ರೊಳಗೆ 250 ಕೋಟಿ ರೂಪಾಯಿ ಬೇರೆ ಪರಿಹಾರ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಕೆನಾಲ್ ವರ್ಕ್ಸ್‌ಗೆ 1200 ಕೋಟಿ ರೂ. ಇದರಲ್ಲಿ ಸಿವಿಲ್ ವರ್ಕ್ ಕೂಡ ಮಾಡಬೇಕಾಗಿದೆ. ಇಲ್ಲಿಯವರೆಗೆ ಖರ್ಚು ಮಾಡಬೇಕಾಗಿದ್ದದ್ದು 399.82 ಕೋಟಿ ರೂಗಳು ಇಲ್ಲಿಯವರೆಗೆ ಖರ್ಚು ಮಾಡಿರುವುದು 317 ಕೋಟಿ ರೂಪಾಯಿ. ಎಲ್ಲಿ ಹಿಂದೆ ಬಿದ್ದಿದ್ದೇವೆ ಎಂಬುದನ್ನು ತಿಳಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಮ್ಮ ರೆಕಾರ್ಡ್ ಅನ್ನು ಸರಿ ಮಾಡಿಕೊಳ್ಳಿ. 1996-97 ರಲ್ಲಿ ನಿಮ್ಮ ಗ್ರ್ಯಾಂಟ್ಸ್ 801 ಕೋಟಿ ರೂ. ಗಳು ಸೇರಿ ಮಾಡಿದ್ದು 512 ಕೋಟಿ ರೂ. ಗಳು 1997-98ರಲ್ಲಿ 1249 ಕೋಟಿ ರೂ. ಗಳು ತಾವು ರಿಲೀಸ್ ಮಾಡಿದ್ದು ಫೆಬ್ರವರಿ ಕೊನೆಯವರೆಗೆ 488 ಕೋಟಿ. ರೂ. ಗಳು.

ಶ್ರೀ ಕೆ.ಎನ್. ನಾಗೇಗೌಡ:- ತಮಗೆ ಪ್ರಸಂಟೇಷನ್ ಮಾಡಿ ತೋರಿಸುತ್ತೇನೆ. 150 ಕೋಟಿ ಆರ್.ಆರ್. ಗೆ ಖರ್ಚು ಮಾಡಿದ್ದೇವೆ. ಇನ್ನು 50 ಕೋಟಿ ಡ್ಯಾಮ್‌ಗೆ ಖರ್ಚು ಮಾಡಿದ್ದೇವೆ 317 ಕೋಟಿ ಸಿವಿಲ್ ವರ್ಕ್ಸ್‌ಗೆ ಖರ್ಚು ಮಾಡಿದ್ದೇವೆ. 472 ಕೋಟಿ ಭೂಮಿ ಮನೆ ಕಳೆದುಕೊಂಡವರಿಗೆ ಪರಿಹಾರ ಕೊಡಬೇಕಾಗಿತ್ತು. ನಮ್ಮ ಕಾರ್ಯಕ್ರಮದ ಪ್ರಕಾರ ನಾವೇನು ಟಾರ್ಗೆಟ್ ಹಾಕಿಕೊಂಡಿದ್ದೆವು ಅದರ ಹತ್ತಿರ ಹೋಗಿದ್ದೇವೆ. ತಾವು ವಾಸ್ತವಾಂಶವನ್ನು ಅರ್ಥ ಮಾಡಿಕೊಳ್ಳಬೇಕು. ಒಂದು ಕಡೆ ಕೆಲಸವಾಗಿಲ್ಲವೆಂದು ಹೇಳುತ್ತೀರಿ ಮತ್ತೊಂದು ಕಡೆ ಹಣ ಕೊಟ್ಟಿಲ್ಲವೆಂದು ಹೇಳುತ್ತೀರಿ ನಾನು ಪೂರ್ಣ ಮಾಹಿತಿಯನ್ನು ತಮಗೆ ಒದಗಿಸುತ್ತಿದ್ದೇನೆ. ಟೆಂಡರ್ ಎಂಟ್ರೆಸ್ಟ್ ಮಾಡುವುದಕ್ಕೂ ಒಂದು ಗೈಡ್ ಲೈನ್ಸ್ ಇದೆ. ಕಂಟ್ರಾಕ್ಟರ್ ಹತ್ತಿರ ಮೆಷಿನ್ ಇದೆಯೋ ಇಲ್ಲವೋ; ಹೇಗೆ ಆತ ಕೆಲಸ ಮಾಡುತ್ತಾನೆಂದು ಹೇಳಿದರು. ಟೆಂಡರ್ ಬಗ್ಗೆ ಎಲ್ಲಾ ಲೀಡಿಂಗ್

ಪತ್ರಿಕೆಗಳಲ್ಲೂ ಪಬ್ಲಿಕ್ ಮಾಡಿದ್ದೇವೆ. ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದು ಅವರ ಟರ್ನ್ ಓವರ್ ಏನು ಅವರ ಕೆಪ್ಯಾಸಿಟಿ ಏನು ಪ್ರೀಕ್ವಾಲಿಫಿಕೇಷನ್ಸ್ ಏನು ಎಂಬುದನ್ನು ಅವರು ವಿಚಾರ ಮಾಡುತ್ತಾರೆ. ಶ್ರೀ ಉಮೇಶರಾವ್ ಸಮಿತಿ ಕೂಡ ಇದೆ ಎಷ್ಟು ಕೆಲಸವಾಗಿದೆ ಅಷ್ಟಕ್ಕೆ ಮಾತ್ರ ಪೇಮೆಂಟ್ ಮಾಡಬೇಕೆಂದು ನಾವು ಅವರಿಗೂ ಆದೇಶ ಕೊಟ್ಟಿದ್ದೇವೆ. ಕೃಷ್ಣ ಜಲಭಾಗ್ಯ ನಿಗಮದ ಬಗ್ಗೆ ಅಂದಾಜನ್ನು ವಿಚಾರ ಮಾಡಿಕೊಡಿ ಎಂದು ಕೂಡ ತಿಳಿಸಿದ್ದೇವೆ. ಅದರ ಲೆಂಗ್ತ್ ಎಷ್ಟು ಡೆಪ್ತ್ ಎಷ್ಟು ಎಂದು ಉಮೇಶ ರಾವ್ ಸಮಿತಿಯವರು ಪೂರ್ತಿ ಕೆನಾಲ್ ಲೈನ್ ಅನ್ನು ಅಂದಾಜು ಮಾಡಿದ್ದಾರೆ. ಸುಮಾರು 6 ತಿಂಗಳ ಕಾಲ ವಿಚಾರ ಮಾಡಿದ್ದಾರೆ. ಸುಮಾರು 30 ಪರ್ಸೆಂಟ್ ಕೇಸಸ್‌ನಲ್ಲಿ 28 ರಲ್ಲಿ ಮಾತ್ರ ಅಂದಾಜು ಮಾಡಿದ್ದು ಬೇರೆ ಅಲ್ಲಿ ಕೆಲಸ ಆಗಿರತಕ್ಕಂಥಾದ್ದು ಬೇರೆ ಈ ರೀತಿಯಾಗಿದೆ. ಕೆಲಸವಾಗಿದ್ದರೆ ಹಣಕೊಡುತ್ತೇವೆ. ಕೆಲಸವಾಗದಿದ್ದರೆ ಇಲ್ಲವೆಂದು ತಿಳಿಸಿದ್ದೇವೆ. ಮಾನ್ಯ ಖರ್ಗೆಯವರಿಗೆ ಎಲ್ಲವೂ ತಿಳಿದಿದೆ. ಪೀಸ್ ವರ್ಕ್ ಕೊಡಬೇಕೇ ಬೇಡವೇ; ಯಾವ ರೀತಿ ಕೊಡಬೇಕು ಎಂಬ ಬಗ್ಗೆ ಎಲ್ಲವೂ ಅವರಿಗೆ ತಿಳಿಸಿದೆ. ಅವರೂ ಕೂಡ ಇಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದವರು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಎಂಟ್ರಸ್ಟ್‌ಮೆಂಟ್ ಆಗಬಾರದೆಂದು ತೀರ್ಮಾನ ಮಾಡಿದವರು ಯಾರು? ರಾಜ್ಯದ ಪೂರ ಡಂಗೂರು ಹೊಡೆದವರು ಯಾರು? ಆ ನಿರ್ಣಯವನ್ನು ತೆಗೆದುಕೊಂಡವರು ಯಾರು?

ಶ್ರೀ ಕೆ.ಎನ್. ನಾಗೇಗೌಡ:- ಆಯಾಯ ಸಿಚ್ಯುಯೇಷನ್‌ಗೆ ತಕ್ಕಂತೆ ಸಿವಿಲ್ ವರ್ಕ್ಸ್ ಆಗಬೇಕು ಹಣ ಉಳಿಯಬೇಕು ಸಮಯ ಉಳಿಯಬೇಕು ಎಂದು ಕಾರ್ಯ ಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಮಾನ್ಯ ಜಯಚಂದ್ರ ಅವರು ಅಪ್ಪರ್ ಭದ್ರಾ ಬಗ್ಗೆ ಹೇಳಿದರು. ಸಿವಿಲ್ ವರ್ಕ್ಸ್ ಏನು ಇದೆ ಇದು ವೇಗವಾಗಿ ಆಗಬೇಕು ಹಣ ಉಳಿಯಬೇಕು ಸಮಯ ಸೇವ್ ಆಗಬೇಕು ಎಂಬ ದೃಷ್ಟಿಯಿಂದ ಟೆಂಡರ್ ಕರೆದು ಕೆಲಸವನ್ನು ನಾವು ಒಪ್ಪಿಸುತ್ತೇವೆ. ಎಲ್ಲವನ್ನೂ ಇಂದು ಇಲ್ಲಿ ಸುದೀರ್ಘವಾಗಿ ಹೇಳುವುದಕ್ಕಾಗುವುದಿಲ್ಲ. ಕೆಲಸ ಮಾಡಿದ್ದಾದ ಮೇಲೆ ಹಣ ಕೊಟ್ಟಿದ್ದೇವೆ. ಮಾನ್ಯ ಜಯಚಂದ್ರ ಅವರು ಮತ್ತು ಇತರ ಸದಸ್ಯರು ಅಪ್ಪರ್ ಭದ್ರಾ ಮಾಡಬೇಕೆಂದು ಹೇಳಿದರು. ತಾವು ಮಧ್ಯಾಹ್ನ ಚರ್ಚೆಯನ್ನು ಮಾಡಿ ಯಾದ ಮೇಲೆ ಅಪ್ಪರ್ ಭದ್ರಾ ಎಂದು ಎಲ್ಲೂ ಸಹ ಅಲೋಕೇಷನ್ ಮಾಡಿಲ್ಲ. ತುಂಗಭದ್ರಾ ಬೇಸಿನ್ ಒಳಗೆ ಕ್ಲಾಸ್-(5) ನಲ್ಲಿ 320 ಟಿಎಂಸಿ ಇರತಕ್ಕಂಥಾದ್ದನ್ನು ಎಕ್ಸೀಡ್ ಮಾಡುವುದಕ್ಕೆ ನಮಗೆ ಪವರ್ಸ್ ಇಲ್ಲ. ಅಪ್ಪರ್ ಭದ್ರಾ ಆದರೆ ಅಲ್ಲಿ ಮುಳುಗಡೆಯಾಗುತ್ತದೆಂದು ತೀವ್ರ ವಿರೋಧ ಇದೆ. ಮಾನ್ಯ ಕಾಗೋಡು ತಿಮ್ಮಪ್ಪನವರೂ ಕೂಡ ಬಂದಿದ್ದರು. ಮಾನ್ಯ ನಿಜಲಿಂಗಪ್ಪನವರು ಇದನ್ನು ಮಾಡಲೇ ಬೇಕು ಎಂದು ಹೇಳುತ್ತಿದ್ದಾರೆ ಇದು ಆದರೆ ತುಮಕೂರಿಗೆ ಎರಡೂವರೆಲಕ್ಷ ಎಕರೆಗೆ ನೀರು ಕೊಟ್ಟಂತಾಗುತ್ತದೆ 12 ಟಿ ಎಂ ಸಿ ಉಳಿಸುತ್ತೇವೆಂದು ಕೂಡ ತಿಳಿಸಿದ್ದೇನೆ. ಗೋದಾವರಿ ತೆಗೆದುಕೊಳ್ಳಿ ಅದಕ್ಕೆ ಖರ್ಚು ಮಾಡೋಣ ಟೈಂ ಲಿಮಿಟ್ ಬರುವುದಿಲ್ಲ. ತುಂಗಭದ್ರಾಕ್ಕೆ ಕೊಡಬೇಕೆಂದು ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಾಗ ಕೊನೇ ಮಂತ್ರಿಮಂಡಲದಲ್ಲಿ ವಿವರವಾಗಿ ಇನ್‌ವೆಸ್ಟಿಗೇಷನ್ ಆಗಬೇಕೆಂದು

ಹೇಳಿದ ಮೇಲೆ ಇದಕ್ಕೆ ಒಂದು ಸರ್ವೆ ಮಾಡಿ ಅಂದಾಜು ತಯಾರಿಸಿದ್ದು ಇದರಿಂದ 2 ಲಕ್ಷ 20000 ಎಕರೆಗೆ ನೀರಾವರಿಯಾಗುತ್ತದೆ ಎಂದು ಅಂದಾಜು ಮಾಡಿ ಇದನ್ನು ತಾಂತ್ರಿಕ ಸಮಿತಿಯ ಮುಂದೆ ಕಳುಹಿಸುತ್ತಿದ್ದೇವೆ. ಅಪ್ಪರ್ ಭದ್ರಾ ಮಾಡಬೇಕೆಂದು ಹೇಳುತ್ತಿದ್ದೀರಿ ಆದರೆ ತಾವು ತಿಳಿಸಿದಂತೆ ಎಲ್ಲೂ ಅಲೊಕೇಷನ್ ಇಲ್ಲ. ಮಾನ್ಯ ಜಯಚಂದ್ರ ಅವರು ಅಪ್ಪರ್ ಭದ್ರಾ ಬಗ್ಗೆ ಹೇಳುದರು. ನಾನು ತರಿಸಿ ನೋಡಿದೆ. ಒಂದು ವರ್ಷದಲ್ಲಿ ಕೂಡ ತುಂಗಭದ್ರಾದಲ್ಲಿ 129 ಟಿಎಂಸಿ ಗಿಂತ ಕೆಳಗಡೆಯಾಗಿಲ್ಲ. 21-22 ಟಿಎಂಸಿ ಸಿಲ್ಟ್ ಇದ್ದರೂ ಕೂಡ 132-130 ನೀರು ಹರಿದು ಹೋಗಿದೆ. ಇದರ ಬಗ್ಗೆ ಸುದೀರ್ಘವಾಗಿ ಇಲ್ಲಿ ಮಾತನಾಡಲು ಸಮಯ ಇಲ್ಲ. ಮಾನ್ಯ ಜಯಚಂದ್ರ ಅವರಿಗೆ ನಾನು ಸರಕಾರದ ಪರವಾಗಿ ಒಂದು ಭರವಸೆ ಕೊಡುತ್ತೇನೆ. ಆ ಭಾಗದ ಶಾಸಕರನ್ನೆಲ್ಲಾ ನಾನು ಕರೆಯುತ್ತೇನೆ ತಾವೇ ಕರೆದುಕೊಂಡು ಬನ್ನಿ ನಾನೂ ಕೂಡ ಕರೆಯುತ್ತೇನೆ. ಅಪ್ಪರ್ ಭದ್ರಾ ಬಗ್ಗೆ ಏನು ತುಂಗಭದ್ರಾ ಬಗ್ಗೆ ಏನು ಮಾಡುತ್ತೇವೆ ಮತ್ತು ಮುಂದಿನ ನಮ್ಮ ಬಿ ಸ್ಕೀಮ್ ಏನು ಎಂಬ ಬಗ್ಗೆ ವಿಚಾರ ಮಾಡೋಣ. (ಬಿ) ಸ್ಕೀಮ್‌ನಲ್ಲಿ ಕೋಲಾರಕ್ಕೆ, ತುಮಕೂರಿಗೆ ನೀರು ಕೊಡುವುದಕ್ಕೆ ಆಗುತ್ತದೆಯೇ ಎಂಬ ಬಗ್ಗೆ ಎಲ್ಲವನ್ನೂ ಸಮಗ್ರವಾಗಿ ಆಲೋಚನೆ ಮಾಡಿ ಬಚಾವತ್ ಅವಾರ್ಡ್ ಒಳಗಡೆ ಕ್ಲಾಸ್-5ನಲ್ಲಿ ಏನು ಇದೆ, ಗೋದಾವರಿ ಡೈವರ್ಷನ್‌ಗೆ ಮತ್ತೆ ಅರ್ಜಿ ಹಾಕಬೇಕೇ ಅದನ್ನು ಎಕ್ಸೀಡ್ ಮಾಡಿ ಎಂದು ಸೆಂಟ್ರಲ್ ವಾಟರ್ ಕಮಿಷನ್ ಅವರನ್ನು ಕೇಳಬೇಕೇ ಎಂಬ ಬಗ್ಗೆ ನಾನು ಸುದೀರ್ಘವಾಗಿ ಚರ್ಚೆ ಮಾಡುತ್ತೇನೆ. ತಮ್ಮ ಮುಖಂಡತ್ವದಲ್ಲಿ ಎಲ್ಲರನ್ನೂ ಕರೆದುಕೊಂಡು ಬನ್ನಿ ನನ್ನದೇನೂ ಅಭ್ಯಂತರವಿಲ್ಲ. ಕೂತು ಚರ್ಚೆ ಮಾಡಿ ಬಿ ಸ್ಕೀಮ್ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ನಾನು ಅವರಿಗೆ ಸರಕಾರದ ಪರವಾಗಿ ಭರವಸೆ ಕೊಡುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ರೇವು ನಾಯಕ್ ಮತ್ತು ಜ್ಞಾನೇಂದ್ರರವರು ವರಾಹಿ ಹಾಗೂ ಗಂಡೂರಿನಾಲೆ ಬಗ್ಗೆ ಕೇಳಿದ್ದರು.

ಶ್ರೀ ಹೆಚ್. ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ಈಗ 320 ಟಿಎಂಸಿಎಫ್‌ಟಿ ಸೀಲಿಂಗ್ ಹಾಕಿರುವುದು ನಿಜ. ನಾವು 304 ಅಷ್ಟನ್ನು ಯುಟಿಲೈಸ್ ಮಾಡಿಕೊಂಡಿದ್ದೇವೆ. ನಾವು ಅಂಕಿ ಅಂಶ ಹಾಕಿಕೊಂಡಿರುವುದು ನಿಜ. ನಾವು ಅಂಕಿಅಂಶ ಹಾಕಿರುವುದರಲ್ಲಿ ಕರೆಕ್ಟ್ ಆಗಿ ಹಾಕಿಕೊಂಡು ಅಸೆಸ್ ಮಾಡಿ ಹಾಕಿಲ್ಲ. ಈಗ ಹಿರಿಯೂರು ಡ್ಯಾಮ್ ಯೀಲ್ಡ್ ಇರುವುದೇ 5 ಟಿಎಂಸಿಎಫ್‌ಟಿ. ನೀವು ಯುಟಿಲೈಸ್ ಮಾಡಿದ್ದೇವೆ ಎಂದು ಹಾಕಿರುವುದು 8 ಟಿಎಂಸಿಎಫ್‌ಟಿ ಹೀಗೆಲ್ಲಾ ಕೆಲವು ಕಡೆ ಇನ್‌ಫ್ಲೇಟೆಡ್ ಫೀಗರ್ಸ್ ಆಗಿದೆ. ಮತ್ತೊಂದು ಕಡೆ ಇನ್ನೊಂದು ತರಹ ಆಗಿದೆ. ಇದರಲ್ಲಿ ನಾವು ಸೇವಿಂಗ್ಸ್ ಮಾಡತಕ್ಕ ಅವಕಾಶ ಇದೆ. ಆದ್ದರಿಂದ ಅಪ್ಪರ್ ಭದ್ರಾಗೆ ಅಲೋಕೇಷನ್ ಇಲ್ಲ ಎಂದು ನಾವು ಹೇಳುವುದು ಬೇಡ. ಅವರು ಮಾಡದೇ ಇರಬಹುದು. ನಾವು ನಮ್ಮಲ್ಲಿ ಎಕಾನಮೈಸ್ ಮಾಡೋಣ. ರೀ-ಅಲೊಕೇಟ್ ಮಾಡೋಣ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೇ, 320 ಟಿಎಂಸಿ ಯಲ್ಲಿ ತುಂಗಾಭದ್ರಾಗೆ 132, ಈಗ ಸುಪ್ರೀಂ ಕೋರ್ಟಿನಲ್ಲಿ ಇಲ್ಲಿಯವರೆಗೆ ನಮ್ಮ

ಫಿಗರ್ಸ್‌ನ್ನು ನಾವು ಇಟ್ಟುಕೊಳ್ಳಬಹುದಾಗಿತ್ತು. ಅವರ ಫಿಗರ್ಸ್‌ನ್ನು ಅವರು ಇಟ್ಟುಕೊಳ್ಳಬಹುದಾಗಿತ್ತು. ಸುಪ್ರೀಂ ಕೋರ್ಟಿನಲ್ಲಿ ಆಲಮಟ್ಟಿ ವಿಚಾರ ಬಂದ ಮೇಲೆ ಎರಡೂ ರಾಜ್ಯಗಳಿಗೂ ಡೈರೆಕ್ಷನ್ ಕೊಟ್ಟಿದೆ. ಇನ್‌ಫರ್ಮೇಷನ್ ಎಕ್ಸ್‌ಛೇಂಜ್ ಮಾಡಿಕೊಳ್ಳಿ. ನಮ್ಮ ಪ್ರಾಜೆಕ್ಟ್ ಎಲ್ಲಾ ಅವರ ಕೈಯಲ್ಲಿ ಕೊಟ್ಟಿದ್ದೇವೆ. ಅವರ ಪ್ರಾಜೆಕ್ಟ್‌ಗೆ ಸಿಗುವಷ್ಟು ಡಿಟೈಲ್ಸ್ ಎಲ್ಲಾ ನಮ್ಮ ಹತ್ತಿರ ಇದೆ. ತುಂಗಾಭದ್ರಾಗೆ 132, ಭದ್ರಾಗೆ 61.7, ತುಂಗಾಕ್ಕೆ 11.1 ಯುಕೆಪಿ ಗೆ 12.24 ಎಲ್ಲಾ ಡೀಟೈಲ್ಸ್ ನಾನು ನೋಡಿದ್ದೇನೆ. ಇದಕ್ಕೊಂದು ಒಂದ ಮೀಟಿಂಗ್‌ನ್ನು ಕರೆಯೋಣ. ಬೇಕಾದರೆ ನಂಜೇಗೌಡರನ್ನು ಕರೆಸುತ್ತೇನೆ. ಮಾನ್ಯ ನಂಜೇಗೌಡರು ಇದರಲ್ಲಿ ಬಹಳ ನುರಿತವರು ಇದ್ದಾರೆ. ಅವರನ್ನು ಕರೆಸಿ ಲೀಗಲ್ ಆಗಿ ಟೆಕ್ನಿಕಲ್ ಆಗಿ ಫೈನಾನ್ಸಿಯಲ್ ಪೊಸಿಷನ್ ನೋಡಿಕೊಂಡು ಯಾವ ಯಾವ ಭಾಗಕ್ಕೆ ನಮ್ಮ ನೀರು ಷೇರು ಎಷ್ಟಾಗುತ್ತದೆ. ಆಮೇಲೆ ಮೈನರ್ ಇರಿಗೇಷನ್ ಎಷ್ಟು ಎಂಬುದನ್ನು ನೋಡಬೇಕು. ಇನ್ನು ಕೊನೆಯದಾಗಿ ಗಂಡೋರಿ ನಾಲೆಯ ಬಗ್ಗೆ ಹೇಳಿದ್ದಾರೆ. ತಮಗೆ ಗೊತ್ತಿದೆ. ತಾವೂ ಸಹ ಬಹಳಷ್ಟು ಆಸಕ್ತಿ ವಹಿಸಿ ಮಾನ್ಯ ರೇವುನಾಯಕರಿಗೆ ಬಹಳ ಥ್ಯಾನ್ಸ್ ಕೊಟ್ಟಿದ್ದೀರಿ. ಇದನ್ನು ಪ್ರಾರಂಭ ಮಾಡಿದ್ದೇ ಈಗ. ತಮಗೆ ಗೊತ್ತಿದೆ. ಅಲ್ಲಿರುವ ಪುನರ್‌ವಸತಿ ಗಲಾಟೆ. ಬಿಲ್ ಕೊಟ್ಟಿಲ್ಲ. ನಮಗೆ ಸುಮಾರು ನೂರಾರು ಕೋಟಿ ರೂಪಾಯಿಯನ್ನು ಕೊಟ್ಟಿಲ್ಲ. ಬಾಕಿ ಇದೆ. ಅದಕ್ಕೆ ಕಾರಣ ಏಕೆಂದರೆ ನಾನು ಜಾಸ್ತಿ ಪ್ರೋಗ್ರಾಮ್‌ಗಳನ್ನು ಹಾಕಿಕೊಂಡಿದ್ದೇವೆ ಈ ವರ್ಷ. ಆದ್ದರಿಂದ ನಮಗೆ ಅದರ ಹಣ ಕೊಟ್ಟಿಲ್ಲ. ಮಾರ್ಚಿ 31 ರೊಳಗೆ ಗಂಡೋರಿ ನಾಲೆಗೆ ವಿಶೇಷವಾಗಿ ಮಾಡುತ್ತೇವೆ. ಗುಲ್ಬರ್ಗಾದಲ್ಲಿರುವ ನಾಲ್ಕು ಪ್ರಾಜೆಕ್ಟ್‌ಗಳನ್ನು ಜೂನ್‌ಗೆ ಮುಗಿಸುತ್ತಿದ್ದೇವೆ. ಗಂಡೋರಿನಾಲೆಯನ್ನು ಈಗ ಶುರುಮಾಡಿದ್ದೇ ಕೇವಲ ಆರೇಳು ತಿಂಗಳ ಹಿಂದೆ. ಈ ಸಾರಿ ಅವರ ಬಾಕಿಯನ್ನು ಕ್ಲಿಯರ್ ಮಾಡಿ ಬರುವ ವರ್ಷ ಸ್ವಲ್ಪ ಫಾಸ್ಟ್ ಆಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೇ, ನೇತ್ರಾವತಿ ನೀರನ್ನು ತುಮಕೂರಿಗೆ ಕೊಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದ್ದೆವು. ಅದಕ್ಕೇನಾದರೂ ಸ್ವಲ್ಪ ಉತ್ತರ ಕೊಡಬೇಕು.

ಶ್ರೀ ಕೆ.ಎನ್. ನಾಗೇಗೌಡ:- ನೇತ್ರಾವತಿಯದು ನಮ್ಮ ಸ್ನೇಹಿತರೊಬ್ಬರು ತಾಂತ್ರಿಕ ತಜ್ಞರೊಬ್ಬರು ಹೊರಗಡೆ ಇದ್ದಾರೆ. ಅವರು ಎಲ್ಲಾ ಕಡೆ ಹೇಳಿಕೊಂಡು ಬರ ಬಹುದು. ಎಲ್ಲಾ ಕಡೆ ಕೆಎಸ್‌ಆರ್‌ಟಿಸಿ ಬಸ್‌ನ್ನು ಸಿಂಧ್ಯಾರವರು ಕೊಟ್ಟಂತೆ ಎಂದು ತಿಳಿದುಕೊಂಡಿದ್ದಾರೆ. ಅದೇನಾಗಿದೆ ಎಂದರೆ ನೇತ್ರಾವತಿ ಡೈವರ್ಸ್‌ಷನ್ ಮಾಡುತ್ತಾರೆ ಅಂತಲೇ ತಮಿಳುನಾಡಿನವರ ಅರ್ಜಿ ಇರುವುದು. ತಮಿಳುನಾಡಿನವರು ಕಾವೇರಿ ಬಗ್ಗೆ ಅವರಿಗೆ ನೇತ್ರಾವತಿ ಡೈವರ್ಸ್‌ಷನ್ ಮಾಡಿಕೊಳ್ಳ ಬಹುದು. ಕುಮಾರಧಾರಾವನ್ನು ಡೈವರ್ಸ್‌ಷನ್ ಮಾಡಿಕೊಳ್ಳಬಹುದು. ಹೇಮಾವತಿಯಲ್ಲೂ ಮಾಡಿಕೊಳ್ಳಬಹುದು ಅಂತಲೇ ತಮಿಳುನಾಡಿನವರ ಅರ್ಜಿ ಇರುವುದು. ಇಲ್ಲಿ ನಾವು ಡೈವರ್ಸ್‌ಷನ್ ಮಾಡುತ್ತೇವೆ ಎಂದು ಹೇಳಿದರೆ ನಮ್ಮ ಕೇಸೂ ಹೋಗುತ್ತದೆ. ಡೈವರ್ಸ್‌ಷನ್ ಮಾಡುವುದಕ್ಕಾಗುವುದೂ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಅದನ್ನು ಪ್ರಸ್ತಾಪ ಮಾಡದೇ ಇರುವುದೇ ಬಹಳ ಲೇಸು ಎಂದು ಅನಿಸುತ್ತದೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಬಡ ಕುಟುಂಬಗಳ ಬಗ್ಗೆ ಹಸಿರು ಕಾರ್ಡ್‌ನ್ನು ಕೊಡುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರ ವಂದನಾನಿರ್ಣಯದ ಮೇಲೆ ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಸವಿಸ್ತಾರವಾಗಿ ಮಾತನಾಡಿ ಈ ಹಸಿರು ಕಾರ್ಡ್‌ಕೊಡುವುದರ ಬಗ್ಗೆ ಅವರೂ ಸಹ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ತಮಗೆ ತಿಳಿದಹಾಗೆ 60 ಲಕ್ಷ ಬಡ ಕುಟುಂಬಗಳಿಗೆ ಸುಲಭದರದಲ್ಲಿ ರಾಜ್ಯ ಸರ್ಕಾರ ಆಹಾರಧಾನ್ಯವನ್ನು ಕೊಡುತ್ತಿದೆ. ಸುಮಾರು 6 ಲಕ್ಷ ಅರ್ಹ ಬಡ ಕುಟುಂಬಗಳು ತಪ್ಪಿಹೋಗಿವೆ ಎಂದು ಸರ್ಕಾರದ ಗಮನಕ್ಕೂ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಭರವಸೆಯನ್ನು ಕೊಟ್ಟ ಹಾಗೆ ಮೇ 98 ರೊಳಗೆ ಹಸಿರು ಕಾರ್ಡ್‌ಗಳನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬೇಕಾದರೆ ಒಂದು ಪ್ರಶ್ನೆಯನ್ನು ಕೇಳಿಲ್ಲ. ನಮ್ಮ ಲೋಕೋಪಯೋಗಿ ಮಂತ್ರಿಗಳು ಇದ್ದಾರೆ. ಇಡೀ ರಾಜ್ಯದಲ್ಲಿ ನಾವೆಲ್ಲಾ ಶಾಸಕರು ಇವತ್ತು ಬೆಳಿಗ್ಗೆ ಸೇರಿದಾಗ ಒಂದು ಬಂದಿರುವ ಕಂಪ್ಲೇಂಟ್ ಎಂದರೆ ಬೇರೆ ಕೆಲಸಗಳಾಗುತ್ತಿವೆ. ಆದರೆ ಪಿಡಬ್ಲ್ಯೂಡಿ ಯಿಂದ ಏನು ಕೆಸವಾಗಬೇಕಾಗಿತ್ತೋ ಎಲ್ಲೂ ಸಹಾ ಆಸ್ಫಾಲ್ಟ್ ಇಲ್ಲ. ಒಂದು ಅಂದಾಜಿನ ಪ್ರಕಾರ ಸುಮಾರು 90 ಕೋಟಿ ರೂಪಾಯಿಗೂ ಹೆಚ್ಚು ಹಣ ಬಿಲ್‌ಗಳು ರಾಜ್ಯದಲ್ಲಿ ಪಾವತಿಯಾಗದೆ ಕಂಟ್ರಾಕ್ಟರ್ ಯಾರೂ ಕೆಲಸಕ್ಕೆ ಬರುತ್ತಿಲ್ಲ. ಈ ಮಾರ್ಚಿಯಲ್ಲಿ ಏನು ಕೆಲಸಗಳಾಗಬೇಕಾಗಿತ್ತೋ ಅದು ಆಗದೇ ಇರುವ ದುಸ್ಥಿತಿಗೆ ಬಂದಿದೆ. ವಾಸ್ತವಿಕ ಸ್ಥಿತಿ ಏನು ಹೋದವರ್ಷವೂ ಕೂಡ ಆಸ್ಫಾಲ್ಟ್‌ನಿಂದಲೇ ಪ್ರಗತಿಯಾಗಲಿಲ್ಲ. ಈ ಸಾರಿಯಾದರೂ ವೆಲ್ ಇನ್ ಆಡ್ವಾನ್ಸ್ ಸ್ಟಾಕ್ ಮಾಡಿಕೊಳ್ಳುವ ಕೆಲಸವಾಗಬೇಕಾಗಿತ್ತು. ಮಾರ್ಚಿ, ಏಪ್ರಿಲ್, ಮೇ ನಲ್ಲಿ ಆಗಬೇಕಾಗಿತ್ತು. ಅದೇನು ಇದೆ ಎಂದು ಹೇಳಿ ಅದನ್ನು ಸರಿಪಡಿಸುವಂಥ ಪ್ರಯತ್ನವಾಗಬೇಕು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಕೆಲವು ಸ್ಪಷ್ಟೀಕರಣ ಕೇಳಿದ್ದಾರೆ. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಯಲ್ಲಿ ಫಸಲು ಹಾನಿಯಾಗಿ ಆತ್ಮಹತ್ಯೆ ಮಾಡಿಕೊಂಡರು. ಅದಕ್ಕೆ ಆಗಲೇ ಮಾನ್ಯ ಬೈರೇಗೌಡರು ಉತ್ತರ ಹೇಳಿದ್ದಾರೆ. ನಾವು ಕ್ರಾಪ್ ಕಾಂಪೆನ್‌ಸೇಷನ್ ಅಲ್ಲ ಕೊಟ್ಟಿರುವುದು. Crop compensation will be something else. ಇದು ಇನ್‌ಪುಟ್ ಸಬ್ಸಿಡಿ ಮಾತ್ರ . ಕ್ರಾಪ್ ಕಾಂಪೆನ್‌ಸೇಷನ್ ರಾಜ್ಯದ ಬೇರೆ ಎಲ್ಲಾ ಜಿಲ್ಲೆಗಳಲ್ಲೂ ಕೊಡುವುದಕ್ಕೂ ಹೋದರೆ ಯಾವ ಸರ್ಕಾರದಿಂದಲೂ ಕ್ರಾಪ್ ಕಾಂಪೆನ್‌ಸೇಷನನ್ನು ಕೊಡುವುದಕ್ಕಾಗುವುದಿಲ್ಲ. ಕ್ರಾಪ್ ಇನ್‌ಸೂರೆನ್ಸ್ ಸಿಸ್ಟಂ, ಗೌರ್ನಮೆಂಟ್ ಆಫ್ ಇಂಡಿಯಾ, ಇದರ ಮೇಲೆ ಒಂದು ರಾಷ್ಟ್ರೀಯ ನೀತಿಯನ್ನು ಅನುಸರಿಸಿದರೆ ಮಾತ್ರ ಕೊಡುವುದಕ್ಕಾಗುತ್ತದೆಯೇ

ಹೊರತು ಕ್ರಾಪ್ ಕಾಂಪೆನ್‌ಸೇಷನನ್ನು ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ನಮ್ಮಲ್ಲಿ ಕೆಲವುಕಡೆ ಕಬ್ಬು ಹಾಳಾಗಿದೆ, ಕೆಲವು ಕಡೆ ಭತ್ತ ಸುಟ್ಟುಹೋಗಿದೆ. ದಾವಣಗೆರೆಯ ಹತ್ತಿರ ಶೇಂಗಾ ಹಾಳಾಗಿದೆ. ಕಾಕೆಜೋಳ ಹಾಳಾಗಿದೆ. ಹತ್ತಿ ಹಾಳಾಗಿದೆ. ಅದಕ್ಕೆ ನಾವು ಇವತ್ತು ಹೇಳಿದಷ್ಟು ಸುಲಭವಾಗಿ ಕ್ರಾಪ್ ಕಾಂಪೆನ್‌ಸೇಷನನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ಇದನ್ನು ತೀರಾ ಅವನಿಗೆ ಬೀಜ ನೆಕ್ಸ್ಟ್ ಬೆಳೆ ಬೆಳೆಯಲಿಕ್ಕೆ ಅನುಕೂಲವಾಗಲಿ ಎಂದು ಇನ್‌ಪುಟ್ ಸಬ್ಸಿಡಿ ಎಂದು ಕೊಟ್ಟಿದ್ದೇವೆ. ಅದು 500 ರೂಪಾಯಿ ಪರ್ ಹೆಕ್ಟೇರ್. ಮ್ಯಾಕ್ಸಿಮಮ್ 2000 ರೂಪಾಯಿ ಎಂದು ಮಾಡಿದ್ದೇವೆ. ಈಗ ಆ ರೀತಿ ಕೊಟ್ಟರೂ ನಾಲ್ಕುವರೆ ಕೋಟಿ ರೂಪಾಯಿಗಳನ್ನು ಆ ಎರಡು ಜಿಲ್ಲೆಗೆ ನಾವು ಕೊಡುತ್ತಿದ್ದೇವೆ. ಅದು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- 500 ರೂಪಾಯಿ ಪರ್ ಎಕರೆ ಎಂದು ಮಾಡಿದರೆ ಅಟ್‌ಲೀಸ್ಟ್ ಅದನ್ನು ಇನ್‌ಪುಟ್ ಸಬ್ಸಿಡಿ ಎಂದಾದರೂ ತಿಳಿದುಕೊಳ್ಳಿ. ಕಾಂಪೆನ್‌ಸೇಷನ್ ಪರ್ ಹೆಕ್ಟೇರ್ ಎಂದರೆ 1500 ರೂಪಾಯಿ ಆಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್:- ಅದು ಸಾಧ್ಯ ಇದ್ದಿದ್ದರೆ ಮಾಡಬಹುದಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆಗುತ್ತದೆ ಸಾರ್.

ಶ್ರೀ ಜೆ.ಹೆಚ್. ಪಟೇಲ್:- ಇಲ್ಲ.

Sri. M. MALLIKARJUNA KHARGE: You find out. ನಾವು 10 ಕೋಟಿ ರೂಪಾಯಿಗಳನ್ನು ವೀರಪ್ಪಮೊಯಿಲಿಯವರು ಇದ್ದಾಗ ಕೊಟ್ಟಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್:- ಈಗ ನೀವು ಹತ್ತು ಕೋಟಿರೂಪಾಯಿಗಳನ್ನು ಕೊಟ್ಟಾಗ ಬೇರೆ ಜಿಲ್ಲೆಯವರು ಯಾರೂ ಕೇಳಿರಲಿಲ್ಲ. ಈಗ ಎಲ್ಲರೂ ಕೇಳುತ್ತಿದ್ದಾರೆ. ಪರಿಸ್ಥಿತಿ ಆ ರೀತಿ ಇದೆ. ಆಮೇಲೆ ಪೊಲೀಸರಿಗೆ ಲೀವ್ ಬೆನಿಫಿಟ್‌ನ್ನು ತೆಗೆದಿದ್ದೀರಿ ಎಂದು ಹೇಳಿದರು. The Government Order will be issued next month to revive the old system. ಆಮೇಲೆ ಅಲ್ಲಿ ಡಿಪ್ರೀಷಿಯೇಷನ್ ಮಾಫ್ ಮಾಡುತ್ತೇವೆ ಅಥವಾ ವೈವ್ ಮಾಡುತ್ತೇವೆ ಎಂದು ಇನ್ನೂ ಏನು ಹೇಳಿಲ್ಲ. ನಾವು ಅಲ್ಲ ಬಾಗಲಕೋಟೆಗೆ ಬಂದಾಗ ಹೇಳಿದ್ದನ್ನು ಈಗ ಎಕ್ಸಾಮಿನ್ ಮಾಡಿಸುತ್ತಿದ್ದೇನೆ. ಆಗಲೇ ನಾಗೇಗೌಡರು ಹೇಳಿದಂತೆ ಏನೋ ಸಣ್ಣಪುಟ್ಟ ಮೊತ್ತ ವಾಗಿದ್ದರೆ. "ಯಸ್" ಎನ್ನುತ್ತಿದ್ದೆ. We need Rs. 300 crore more. But we have not rejected. It is still being considered. ಇನ್ನು ಮಾಧುಸ್ವಾಮಿಯವರು ಹೇಳಿರುವುದಕ್ಕೂ, ಜಯಚಂದ್ರರವರು ಹೇಳಿದ್ದಕ್ಕೂ ಆಗಲೇ ಉತ್ತರ ಕೊಟ್ಟಿದ್ದಾರೆ. ಕೆಲಸ ಮಾಡದೇ ಎಲ್ಲಿಯಾದರೂ ದುಡ್ಡು ಪೋಲು ಆಗಿದ್ದರೆ ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗುತ್ತದೆ. ಈಗ ಎಂ.ಓ.ಯು

ರೂಟ್, ಬಿಡ್ ರೂಟ್ ಎಂತಲೂ ಇದೆ. ಟೆಂಡರ್ ರೂಟ್, ಎಂಟ್ರುಸ್ಟ್‌ಮೆಂಟ್ ರೂಟ್ ಎಂದು ಇದೆ. ನನಗೂ ಎಂಟ್ರುಸ್ಟ್‌ಮೆಂಟ್ ಎಂದರೇನು, ಟೆಂಡರ್ ಎಂದರೇನು ಎಂಬುದು ಗೊತ್ತು. ಅದಕ್ಕೆ ಕೇಳಿದೆವು. ಈಗ ಯಾವ ಸಿಸ್ಟಂನಲ್ಲು If you have the will to check irregularities, you can. ಯಾವ ಸಿಸ್ಟಂ? ಟೆಂಡರ್ ಸಿಸ್ಟಂನಲ್ಲೂ ಇರ್ರೆಗ್ಯುಲಾರಿಟೀಸ್‌ನ್ನು ನೋಡಿದ್ದೇವೆ. ಎಂಟ್ರುಸ್ಟ್‌ಮೆಂಟ್‌ನಲ್ಲೂ ಇರ್ರೆಗ್ಯುಲಾರಿಟೀಸ್‌ನ್ನು ನೋಡಿದ್ದೇವೆ. So we have to have our will to stop the irregularities.ಪೊಲಿಟಿಕಲ್ ಲೀಡರ್‌ಶಿಫ್‌ಗೆ ಆ ವಿಲ್ ಇಲ್ಲದಿದ್ದರೆ ಸಿಸ್ಟಮ್‌ನಲ್ಲಿ ಏನೂ ಆಗುವುದಿಲ್ಲ. ನಮಗೆ ವಿಲ್ ಇಲ್ಲದಿದ್ದರೆ ಅಧಿಕಾರಿಗಳಿಗೆ ವಿಲ್ ಇರುವುದಿಲ್ಲ. That is being looked after with all caution. This much I can assure the House.

ಶ್ರೀ ಅರಗ ಜ್ಞಾನೇಂದ್ರ:- ವರಾಹಿ ಯೋಜನೆ ಬಗ್ಗೆ ಹೇಳಿ.

ಶ್ರೀ ಜೆ.ಹೆಚ್. ಪಟೇಲ್:- ವರಾಹಿ ಬಗ್ಗೆ ಹೇಳಬೇಕೆಂದರೆ You can the Member of the Committee.

ಶ್ರೀ ಜೆ.ಹೆಚ್. ಪಟೇಲ್:- ಇವತ್ತು 85 ಎಸ್.ಆರ್. (ಷೆಡ್ಯೂಲ್ ಆಫ್ ರೇಟ್) ಕೊಟ್ಟರೆ ಅದರಿಂದ ರೈತರಿಗೆ ಏನು ಅನುಕೂಲವಾಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್:- ಹೌದು, ಮಾನ್ಯ ಗೌಡರೇ, ಮಾನ್ಯ ಜ್ಞಾನೇಂದ್ರ ಅವರು ಹೇಳುವುದೇನೆಂದರೆ ಈಗ್ಗೆ ಸುಮಾರು 60-70 ವರ್ಷದ ಕೆಳಗೆ ಕಟ್ಟಿದ್ದ ಮನೆ ಮುಳುಗಿ ಹೋದಂತಹ ಸಂದರ್ಭದಲ್ಲಿ 5 ಲಕ್ಷದ ಮನೆಗೆ 50 ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟಂಥದ್ದೂ ಇದೆ. ಅದು ಮಾನ್ಯ ಸದಸ್ಯರಿಗೂ ಗೊತ್ತಿರುವ ವಿಷಯವೇ.

ಶ್ರೀ ಕಾಗೋಡು ತಿಮ್ಮಪ್ಪ:- ಅದು ಹಾಗಲ್ಲ, ಅದರಲ್ಲಿ ಷೆಡ್ಯೂಲ್ ಆಫ್ ರೇಟ್‌ನಲ್ಲಿ ಕೊಡಬೇಕು ಎಂದು ಒಂದು ತೀರ್ಮಾನವಾಗಿದೆ. ಷೆಡ್ಯೂಲ್ ಆಫ್ ರೇಟ್ ಎಂದರೆ ಅದು ಯಾವಾಗಿನಿಂದ? ಅದನ್ನು ಡೇಟ್ ಆಫ್ ಎಸ್ಟಿಮೇಟ್‌ನಿಂದ ಡೇಟ್ ಆಫ್ ಪೇಮೆಂಟ್‌ನಿಂದ ಗಣನೆಗೆ ತೆಗೆದುಕೊಳ್ಳುವುದೇ ಎನ್ನುವ ಪ್ರಶ್ನೆ ಬಂತು. ಅದನ್ನೂ ಕೂಡ ನಾವು ಕಮಿಟಿಯಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್:- ಯಾವುದರ ಆಧಾರದ ಮೇಲೆ ಅದನ್ನು ತೀರ್ಮಾನ ಮಾಡಬೇಕು ಎಂಬುದನ್ನು ತಾವೇ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಕರೆಂಟ್ ಷೆಡ್ಯೂಲ್ ಆಫ್ ರೇಟ್ ಎಂದರೆ ಯಾವ ದಿನದಲ್ಲಿ ಅದನ್ನು ಎಸ್ಟಿಮೇಟ್ ಮಾಡುತ್ತಾರೋ; ಅಲ್ಲಿಂದ ಅದು ಗಣನೆಗೆ ಬರುತ್ತದೆ.

ಅಧ್ಯಕ್ಷರು:- ನೀವು ಏತಕ್ಕೆ ಸುಮ್ಮನೆ ಅದನ್ನು ಮೈಮೇಲೆ ಕೊಡವಿಕೊಳ್ಳುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್:- ಷೆಡ್ಯೂಲ್ ಆಫ್ ರೇಟನ್ನು ಇವತ್ತಿಗೆ ಲೆಕ್ಕ ಹಾಕಿ ಕೊಡುತ್ತಾರೆ ಎಂಬುದು ಬೇಡ ಅದಕ್ಕೆ ಬದಲಾಗಿ ಅದಕ್ಕೆ ಏನಾದರೂ ಒಂದು ವಯ ಮೀಡಿಯಾವನ್ನು ರೀಸನಬಲ್ ಆಗಿ ಜಸ್ಟಿಫೈ ಆಗಿ ಮಾಡಬೇಕೇ ಹೊರತು ಕರಾರುವಕ್ಕಾಗಿ ಹೀಗೆ ಕೊಡುತ್ತೇವೆ ಎಂದು ಹೇಳುವುದು ಕಷ್ಟವಾಗುತ್ತದೆ. ನಾವು ಬೇಕಾದರೆ ಈ ಬಗ್ಗೆ ಮತ್ತೆ ಮೀಟಿಂಗ್ ಮಾಡೋಣ. ಇದಕ್ಕೆ ಮುಂಚೆ ಶಿವಮೊಗ್ಗದಲ್ಲಿ ಕರೆಯಲಾದ ಮೀಟಿಂಗ್‌ಗೆ ತಾವು ಬಂದಿದ್ದಿರಿ. ಅನೇಕ ಕಾರಣಗಳಿಂದಾಗಿ ಇತ್ತೀಚಿಗೆ ಆ ಬಗ್ಗೆ ಮೀಟಿಂಗ್ ಕರೆಯಲಾಗಿತ್ತು. ಆಗ ಉಪ ಮುಖ್ಯಮಂತ್ರಿಗಳು ಅಥವಾ ನೀರಾವರಿ ಮಂತ್ರಿಗಳು will attend the next meeting. We will convene the meeting and try to come to some definite conclusion wherein all of you can be present. ಇಷ್ಟುನ್ನು ನಾನು ಹೇಳಿಲಿಚ್ಛಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೊನೆಯ ಪಕ್ಷ ಒಂದು ಎಕರೆಗೆ 500 ರೂಪಾಯಿಯಷ್ಟನ್ನಾದರೂ ಪರಿಹಾರ ಕೊಡಿ.

ಶ್ರೀ ಜೆ.ಹೆಚ್. ಪಟೇಲ್:- ಆ ರೀತಿ ಮಾಡಲಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹಿಂದೆ ಈ ರೀತಿ ಮಾಡಿದ ಉದಾಹರಣೆಗಳಿಲ್ಲ ಎಂದರೆ ಹೋಗಲಿ ಬಿಡ ಎನ್ನಬಹುದು. ಆದರೆ ಹಿಂದೆ ಈ ರೀತಿ ಪರಿಹಾರ ಕೊಟ್ಟಿದ್ದರೆ ತಾವು ಈಗ ಕೊಡಬಹುದಲ್ಲಾ. ಕನಿಷ್ಠ ಅಷ್ಟನ್ನಾದರೂ ಕೊಡಲಿಲ್ಲ ಎಂದರೆ ಹೇಗೆ? ನಾವು ಇಷ್ಟು ಹೊತ್ತು ತಾಳ್ಮೆಯಿಂದ ಕುಳಿತು ನಿಮ್ಮ ಮಾತುಗಳನ್ನು ಕೇಳಿದ್ದೇವೆ. ಏಕೆಂದರೆ ಅನೇಕ ಸಲ ನಾವು ಮಧ್ಯದಲ್ಲಿ ಮಾತನಾಡಿದರೆ ನಿಮಗೆ ಸಿಟ್ಟು ಬಂದು ನೀವು ಏನನ್ನೂ ಕೇಳುವುದಕ್ಕೆ ತಯಾರಿಲ್ಲ ಎನ್ನುತ್ತೀರಿ. ನಾವು ಸಹಾಯ ಮಾಡುವುದಕ್ಕೆ ತಯಾರಿದ್ದೇವೆ ಎನ್ನತಕ್ಕಂತಹ ಮಾತನ್ನೂ ಹೇಳುತ್ತೀರಿ. ಅದುದರಿಂದ ನಾವು ಈ ಸಲ ಬಹಳ ತಾಳ್ಮೆಯಿಂದ ಅವರು ಹೇಳಿದ ಮಾತುಗಳನ್ನು ಕೇಳಿಕೊಂಡು ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕೊಡುತ್ತಾರೆ ಎನ್ನುವ ದೃಷ್ಟಿಯಿಂದ ನಾವು ಮಧ್ಯೆ ಮಾತನಾಡಲಿಲ್ಲ. ಅವರು ಯುಕೆಪಿ ಬಗ್ಗೆ ಹೇಳುತ್ತಾ ಅದು ಎಸ್ಟಿಮೇಟ್ ಆಗುತ್ತದೆ ಎಂದರು. ನಾನು ಪ್ರಾಮಾಣಿಕವಾಗಿ ಇಲ್ಲಿ ಹೇಳುವುದೇನೆಂದರೆ ಅದರಲ್ಲಿ ನಡೆದಿರುವಂಥದ್ದನ್ನು ನೀವು ನೋಡಿದರೆ ನೀವೇ ಪುನೀ ಪೂರ್ವಕವಾಗಿ ಅದನ್ನು ಸಿಬಿಐಗೆ ರೆಫರ್ ಮಾಡುತ್ತೀರಿ. ಅದರಲ್ಲಿ ಸಾಕಷ್ಟು ಅವ್ಯವಹಾರವಾಗಿದೆ. ಬೇಕಾದರೆ ನೀವು ಆ ರೆಕಾರ್ಡ್ಸ್‌ಗಳನ್ನು ತರಿಸಿ ನೋಡಿ.

ಶ್ರೀ ಜೆ.ಹೆಚ್. ಪಟೇಲ್:- ನಾನು ಆ ರೆಕಾರ್ಡ್ಸ್‌ಗಳನ್ನೆಲ್ಲಾ ತರಿಸಿ ನೋಡಿದ್ದೇನೆ. ಅದಕ್ಕೆ ಸಂಬಂಧಪಟ್ಟ 12 ವರ್ಕ್ಸ್‌ಗಳಿಗೆ ನಾನು ಆ ದಿನವೇ ಪೇಮೆಂಟ್ ನಿಲ್ಲಿಸಿದ್ದೇನೆ. They should go into it and examine that. ಆದರೆ ಇರ್‌ಸ್ಯೆಲಾರಿಟಿ ಆಗಿದೆ, ಅದರಲ್ಲಿ ಯಾರೋ

ಮಧ್ಯವರ್ತಿಗಳು ಉಪಯೋಗ ಪಡೆದಿದ್ದಾರೆ ಎಂದು ಜನರಲ್ ಆಗಿ ಹೇಳಬಾರದು. ಇಂತಹ ಪ್ರಾಜೆಕ್ಟ್‌ನಲ್ಲಿ, ಇಂತಹ ವರ್ಕ್ಸ್‌ನಲ್ಲಿ ಇಂಥ ಅವ್ಯವಹಾರವಾಗಿದೆ ಎಂದು ಹೇಳಿದರೆ ನಾವು ಏನಾದರೂ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಪ್ರತಿಯೊಂದನ್ನೂ ಕಿಲೋಮೀಟರ್ ವೈಸ್‌ನಲ್ಲಿ ಎಲ್ಲೆಲ್ಲಿ ಅವ್ಯವಹಾರವಾಗಿದೆ ಎಂಬುದನ್ನು ವಿವರವಾಗಿ ಕೊಟ್ಟಿದ್ದೇವೆ. ತಾವು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಯಾವ ರೀತಿಯಾಗಿ ಎಂಟ್ರಸ್ಟ್ ಮಾಡಿ ಪುನಃ ಸಬ್ ಏಜೆಂಟ್‌ಗಳಿಗೆ ಆ ಕೆಲಸವನ್ನು ಕೊಟ್ಟಿದ್ದೀರಿ. ಮತ್ತೆ ಈಗ ಅದನ್ನೇ ಕೇಳಿದರೆ ಅರ್ಥವೇನು? ಅನೇಕ ಸಲ ನೀವು ರಿವ್ಯೂ ಮಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಯಾವುದಾದರೂ ಕಮಿಷನ್‌ಗೆ ಒಪ್ಪಿಸಿ ಎಂದರೆ ನೀವು ಅದನ್ನು ಮಾಡುತ್ತಿಲ್ಲ. ಬೇಕಾದರೆ ನೀವು ಅದನ್ನು ಸಿಬಿಐ ತನಿಖೆಗೆ ರೆಫರ್ ಮಾಡುವುದಕ್ಕಿಂತ ಮೊದಲು ಸದನ ಸಮಿತಿಗೆ ಅದನ್ನು ಒಪ್ಪಿಸಿ. ಆ ಸದನ ಸಮಿತಿಗೆ ಏನಾದರೂ ಅದರಲ್ಲಿ ತಪ್ಪುಗಳಿವೆ ಎಂದು ಕಂಡುಬಂದರೆ ನಂತರ ನೀವು ಅದನ್ನು ಸಿಬಿಐಗೆ ರೆಫರ್ ಮಾಡಿ. ಇಷ್ಟನ್ನಾದರೂ ತಾವು ಮಾಡುತ್ತೀರಾ?

ಶ್ರೀ ಕೆ.ಎಸ್. ನಾಗೇಗೌಡ:- ಈ ವಿಚಾರವನ್ನು ಖರ್ಗೆಯವರು ಹೇಳಿದ ನಂತರ ನಾವು ಉಮೇಶ್‌ರಾವ್ ಕಮಿಟಿ ಮತ್ತೆ ಇನ್ನೊಂದು ಒಟ್ಟು ಎರಡು ಕಮಿಟಿಗೆ ರೆಫರ್ ಮಾಡಿದ್ದೇವೆ. ಅದರ ಮುಖಾಂತರ ಎಲ್ಲವನ್ನೂ ಎಕ್ಸಾಮಿನ್ ಮಾಡಿಸಿದ್ದೇವೆ. 7 ತಿಂಗಳಿಂದ ಅವರು ಅದನ್ನು ಎಕ್ಸಾಮಿನ್ ಮಾಡುತ್ತಿರುವುದರಿಂದ ಇನ್ನೂ ಆ ಕೆಲಸಗಳಿಗೆ ಪೇಮೆಂಟ್ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದುದರಿಂದ ನಾನು ಹೇಳುವುದೇನೆಂದರೆ, ನೀವು ಇದನ್ನು ಸದನ ಸಮಿತಿಗೆ ಒಪ್ಪಿಸಿ, ಅದು ಅವ್ಯವಹಾರ ನಡೆದಿದೆ ಎಂದು ಅಭಿಪ್ರಾಯಪಟ್ಟರೆ ನಂತರ ನೀವು ಅದನ್ನು ಸಿಬಿಐಗೆ ರೆಫರ್ ಮಾಡಿ. ಇದರ ಜೊತೆಗೆ ರೈತರಿಗೆ ಆಗಿರುವ ಬೆಳೆ ಹಾನಿಗೆ ಪರಿಹಾರವನ್ನು ಪ್ರಕಟಿಸಬೇಕು ಮತ್ತು ಪ್ರಕೃತಿ ವಿಕೋಪ ನಿಧಿ ಬಗ್ಗೆಯೂ ಅವರು ಹೇಳಬೇಕು. ಅವರು ಈ ವಿಷಯಗಳ ಬಗ್ಗೆ ಹೇಳಿಕೆ ಕೊಡದಿದ್ದರೆ ನಾವು ಇಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಕಳೆದ ಸಲ ನಾನು ಒಂದು ತೀರ್ಮಾನವನ್ನು ಸದನದ ಗಮನಕ್ಕೆ ತಂದಿದ್ದೇನೆ. ಅದೇನೆಂದರೆ ಎಂತಹ ಗಂಭೀರ ವಿಷಯವಿದ್ದರೂ ಕೂಡ ಸದನದೊಳಗೆ ಧರಣಿ ಮಾಡಿ ಬಾವಿಗೆ ಬರಬಾರದು; ಎಂಬುದಾಗಿ ತೀರ್ಮಾನ ತೆಗೆದುಕೊಂಡಿದ್ದೇವೆ. ಗುಲ್ಬರ್ಗಾ ಬಿಜಾಪುರ, ಬೀದರ್ ಜಿಲ್ಲೆಗಳಲ್ಲಿ ಬೆಳೆ ಹಾನಿಯಿಂದಾಗಿ ರೈತರಿಗಾಗಿರುವ ನಷ್ಟದ ಬಗ್ಗೆ ಎಲ್ಲಾ ಮಾನ್ಯ ಸದಸ್ಯರುಗಳೂ ಮಾನ್ಯ ಮುಖ್ಯಮಂತ್ರಿಗಳಿಗೆ ಶಕ್ತಿಮೀರಿ ಅವರ ಗಮನಕ್ಕೆ ಈ ವಿಚಾರವನ್ನು ತರಲು ಪ್ರಯತ್ನಿಸಿದ್ದೇವೆ. ಅವರಿಗೆ ನೀವು ಕೊಡುವಂತಹ 500 ರೂಪಾಯಿ ಪರಿಹಾರ ಒಂದು ಲೀಟರ್ ಔಷಧಿಗೂ ಕೂಡ ಸಾಕಾಗುವುದಿಲ್ಲ.

ಆದುದರಿಂದ ಕನಿಷ್ಠ ಒಂದು ಹೆಕ್ಟೇರಿಗೆ ಎರಡು ಸಾವಿರ ರೂಪಾಯಿಗಳನ್ನಾದರೂ ಮಾನವೀಯತೆಯ ದೃಷ್ಟಿಯಿಂದ ತಾವು ಕೊಡಬೇಕೆಂದು ಕೇಳುತ್ತಿದ್ದೇವೆ. ನಾವು ಕೇಳುತ್ತಿರುವುದು ಹೆಕ್ಟೇರಿಗೆ ಕನಿಷ್ಠ ಎರಡು ಸಾವಿರ ರೂಪಾಯಿಯನ್ನು ಮಾತ್ರ. ಅದನ್ನು ನೀವು ಗರಿಷ್ಠ ಎರಡು ಸಾವಿರ ರೂಪಾಯಿ ಎಂದು ಮಾಡದೆ ಎಲ್ಲಾ ರೈತರಿಗೂ ಇದನ್ನು ವಿಸ್ತರಿಸಬೇಕು. ಇನ್ನು ಎರಡನೆಯದಾಗಿ ಯಾವ ಕಾರಣಕ್ಕೂ ನೀವು ಐಪಿ ಸೆಟ್‌ಗೆ ಮೀಟರ್ ಅಳವಡಿಸುವುದನ್ನು ಬಿಜೆಪಿ ಪಕ್ಷ ಒಪ್ಪುವುದಿಲ್ಲ. ಅದನ್ನು ಅಳವಡಿಸುವುದಿಲ್ಲ ಎಂಬ ಮಾತನ್ನು ಕೂಡ ತಾವು ಹೇಳಬೇಕು. ಮೂರನೆಯದಾಗಿ ಹಸಿರು ಕಾರ್ಡಿನ ವಿಚಾರವಾಗಿ ಹೇಳುವುದಾದರೆ 6 ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡಿನ ವಿತರಣೆ ಆಗಬೇಕು. ಏಕೆಂದರೆ ಒಂದು ತಿಂಗಳು ಆ ಕುಟುಂಬಗಳಿಗೆ ಹಸಿರು ಕಾರ್ಡಿನಲ್ಲಿ ಆಹಾರ ಧಾನ್ಯಗಳು ಸಿಗದಿದ್ದರೆ ಆ ಕುಟುಂಬಗಳು ಹೊಟ್ಟೆಗಿಲ್ಲದೆ ಬೀದಿ ಪಾಲಾಗುತ್ತದೆ. ಕಳೆದ ಎರಡು ವರ್ಷಗಳಿಂದಲೂ ಈ ವಿಚಾರದಲ್ಲಿ ಇದೇ ಸರ್ಕಸ್ ಮಾಡುತ್ತಾ ಅವನಿಗೆ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಿಲ್ಲ. ಇನ್ನು ನಾಲ್ಕನೆಯದಾಗಿ ಲೋಕೋಪಯೋಗಿ ಕೆಲಸಗಳು ಸ್ಥಗಿತಗೊಂಡಿವೆ. ರಸ್ತೆಗಳಿಗೆ ಟಾರ್ ಹಾಕಿಲ್ಲ. ಅದಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗದೆ ಆ ಕೆಲಸ ನಿಂತು ಹೋಗಿದೆ. ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು "ನಮ್ಮ ಸರ್ಕಾರ ರಾಜೀನಾಮೆ ಕೊಡಬೇಕು ಎಂದರೆ ನಾವು ಮತದಾನಕ್ಕೆ ಸಿದ್ದ. ನೀವು ಅಲ್ಲಿಗೆ ಬನ್ನಿ ನಮ್ಮ ಸರ್ಕಾರವನ್ನು ಬೀಳಿಸಿ" ಎಂದು ಹೇಳಿದರು. ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಅದಕ್ಕೆ ಒಂದು ಸ್ಥಾನಮಾನ, ಗೌರವನ್ನು ಕೊಡುವಂತಹ ಸರ ಸಂಪ್ರದಾಯವನ್ನು ನಾವು ಪಾಲನೆ ಮಾಡಿಕೊಂಡು ಬಂದಿದ್ದೇವೆ. ನನಗೆ ಜ್ಞಾಪಕವಿರುವ ಪ್ರಕಾರ ಸ್ವಾತಂತ್ರ್ಯ ಬಂದ ಮೇಲೆ ಯಾವುದೇ ರಾಜ್ಯದ ಮುಖ್ಯಮಂತ್ರಿಗಳು ಈ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ "ಬೇಕಾದರೆ ಅಲ್ಲಿ ಚುನಾವಣೆಯಾಗಲಿ, ನನ್ನ ಸರ್ಕಾರವನ್ನು ಬೀಳಿಸಲಿ" ಎಂದು ಹೇಳುವಂತಹ ಉದಾಹರಣೆಗಳಿಲ್ಲ. ಆದರೆ ಈ ಮುಖ್ಯಮಂತ್ರಿಗಳು ಆ ರೀತಿ ಹೇಳಿದ್ದಾರೆ. ಆದ್ದರಿಂದ ನಾನು ಆ ಬಗ್ಗೆ ಏನನ್ನೂ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಸರ್ಕಾರ ಈ ಎಲ್ಲಾ ಬೇಡಿಕೆಗಳನ್ನೂ ಈಡೇರಿಸಬೇಕು; ಎಂಬುದು ನಮ್ಮ ಒತ್ತಾಯ. ಇನ್ನೊಂದು ದುಃಖ ತರುವಂತಹ ವಿಚಾರವೆಂದರೆ ಕೊಜೆಂಟ್ರಿಕ್ಸ್ ಯೋಜನೆಯಲ್ಲಿ ಹೈಕೋರ್ಟ್ ಅವ್ಯವಹಾರ ನಡೆದಿದೆ ಎಂದು ಹೇಳಿದೆ. ಸಿಬಿಐ ನವರು ರಿಪೋರ್ಟ್ ಕೊಡಬೇಕು ನೀವು ಸುಪ್ರೀಂ ಕೋರ್ಟಿಗೆ ಹೋಗುತ್ತೇವೆ ಎಂದರೆ ಏನರ್ಥ? ಅವರು ಕೊಜಿಂಟ್ರಿಕ್ಸ್ ಪ್ರಾಜೆಕ್ಟ್ ನಿಲ್ಲಿಸುವುದಕ್ಕೆ ಹೇಳಿಲ್ಲ. ಅಲ್ಲಿ ನಡೆದಿರುವ ಭ್ರಷ್ಟಾಚಾರ, ಅವ್ಯವಹಾರಗಳ ಬಗ್ಗೆ ತನಿಖೆಯಾಗಬೇಕು ಎಂದು ಹೇಳಿದ್ದಾರೆ. ಅದಷ್ಟು ಬೇಗ ತನಿಖೆಯಾಗಬೇಕು ಎಂದು ಹೇಳುವುದಕ್ಕೆ ಬದಲಾಗಿ ನೀವು ಸಿಬಿಐ ತನಿಖೆಯಾಗಬಾರದು ಎಂದು ಸುಪ್ರೀಂ ಕೋರ್ಟಿಗೆ ಹೋಗುತ್ತಿರಿ ಎಂದು ಹೇಳುವುದಾದರೆ ಆ ಭ್ರಷ್ಟಾಚಾರ ಹಗರಣಗಳನ್ನು ಮುಚ್ಚಿ ಹಾಕುವುದಕ್ಕೆ ನೀವು ಹೊರಟಿದ್ದೀರಿ ಎನ್ನುವಂತಹ ಸಂದರ್ಭ ಈಗ ಕಾಣುತ್ತಿದೆ. ಅದಕ್ಕೋಸ್ಕರ

ವಿತರಿಸಬೇಕೆಂದು ಒತ್ತಾಯ ಮಾಡಿ ನಿಮ್ಮ ಉತ್ತರದಿಂದ ನಮಗೆ ಸಮಾಧಾನವಿಲ್ಲದಿರುವುದರಿಂದ ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

(ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಮಾನ್ಯ ಮೊಯಿಲಿಯವರೇ ನಾನು ತಮಗೆ ಅಪೀಲು ಮಾಡಿಕೊಳ್ಳುವದೇನೆಂದರೆ ತಾವು ಮಾಜಿ ಮುಖ್ಯಮಂತ್ರಿಗಳು ಮತ್ತು ಖರ್ಗೆಯವರು ಹಾಗೂ ಉಳಿದವರೆಲ್ಲರೂ ಕೂಡ they all have been in the Government. ಗೌರ್ನರ್ಸ್ ಅಡ್ರೆಸ್‌ಗೆ ನಾವು ಮೋಷನ್ ಆಫ್ ಥ್ಯಾಂಕ್ಸ್ ಅಡಾಫ್ಟ್ ಮಾಡುವಾಗ it is an honour shown to the constitutional functionary. I appeal to you. You have your score settled with the Government. I will not come in the way. But I have to put the motion to vote. I am appaling to you. There is no precedent earlier in this House as I have gone through where the Governor's Address was put into this kind of a perculiar situtíon.

6.10 ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ನಾವು ಗವರ್ನರ್ ಅಡ್ರೆಸ್‌ಗೆ ಒಂದು ಅವಮಾನ ಮಾಡಬೇಕು ಅಥವಾ ಅವಹೇಳನ ಮಾಡಬೇಕು ಎಂಬ ಉದ್ದೇಶ ಇಲ್ಲ. ಏಕೆಂದರೆ ಮಾನ್ಯ ಮುಖ್ಯ ಮಂತ್ರಿಗಳೇ ಅನೇಕ ಸಾರಿ ಹೇಳಿದ್ದಾರೆ. ಏನೆಂದು ಹೇಳಿದ್ದಾರೆಂದರೆ ಗವರ್ನರ್ ಮೋಷನ್ ಆಫ್ ಥ್ಯಾಂಕ್ಸ್ ಇರುತ್ತದೆ, ಆಗ ಯಾರ ಪರ ಎಷ್ಟು ಮತಗಳು ಬರುತ್ತವೆ ಅಥವಾ ಇಲ್ಲ ಎನ್ನತಕ್ಕದ್ದು ಅದೇ ಒಂದು ವೋಟ್ ಆಫ್ ಕಾನ್‌ಫಿಡೆನ್ಸ್ ಎಂದು ಅವರೇ ಹೇಳಿದರು. ಅಂದರೆ ಈಗ ಆ ಒಂದು ಗವರ್ನರ್ ಅಡ್ರೆಸ್ ಮೇಲೆ ವೋಟ್ ಆಫ್ ಕಾನ್‌ಫೀಡೆನ್ಸ್ ಮತಗಳನ್ನು ಗಳಿಸಿಕೊಳ್ಳಬೇಕು ಅಥವಾ ಪಡೆದುಕೊಳ್ಳಬೇಕೆಂಬ ಅಭಿಪ್ರಾಯದಿಂದ ಅವರು ಹೊರಗಡೆ ಹೇಳಿದಾಗ ಇದು ನೀವು ಸರಿ ಎಂದು ಹೇಳಿದರೆ ನಾವು ಒಪ್ಪುತ್ತೇವೆ.

ಅಧ್ಯಕ್ಷರು:- ಸನ್ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿರತಕ್ಕ ಭಾಷಣಕ್ಕೆ ನಾವೇನು ಗೌರವ ಪೂರ್ವಕವಾಗಿ ವಂದನೆಯನ್ನು ಸಲ್ಲಿಸುತ್ತೇವೆ. ಅದನ್ನು ಓಟಿಗಾಗಿ ಪರಿವರ್ತನೆ ಮಾಡತಕ್ಕದ್ದನ್ನು ಯಾರೂ ಮಾಡಬಾರದು. ಅದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹೇಳಿದ್ದಾರೆ; ಅದು ರೂಮರ್ ಅಲ್ಲ. ಈಗ ಆ ವಿಚಾರ ಪ್ರತಿ ಒಂದು ಪತ್ರಿಕೆಯಲ್ಲಿ ಬಂದಿದೆ. ತಾಕತ್ತಿದ್ದರೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಆಗ ಅವರು ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ.

ಅಧ್ಯಕ್ಷರು:- ನಿಮ್ಮ ಓಟ್ ತಾಕತ್ತನ್ನು ರಾಜ್ಯಪಾಲರಿಂದ ದೂರ ಇಟ್ಟು ಬಿಟ್ಟು ನೀವು ಸೆಟಲ್ ಮಾಡಿಕೊಳ್ಳಿ. ಇದು ರಾಜ್ಯಪಾಲರಿಗೆ ಗೌರವ ಸೂಚಿಸತಕ್ಕ ವಿಚಾರ. ದಯಮಾಡಿ ತಾವು ಸಹಕರಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಮ್ಮ ಮಾತಿಗೆ ನಾವು, ಮನ್ನಣೆ ಕೊಡುತ್ತೇವೆ. ಮನ್ನಣೆ ಕೊಡುವುದಿಲ್ಲ ಎಂದು ಇಲ್ಲ. ಆದರೆ ದಯವಿಟ್ಟು ಇನ್ನೊಂದು ಸಾರಿ ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಿಂದೆನೂ ಕೂಡ ಪ್ರಿಸಿಡೆಂಟ್ ಇದೆ. ಪರ್ ಹೆಕ್ಟೇರ್ ಏನು ಎಂದರೆ ಸಾವಿರ ರೂಪಾಯಿ ಕಾಂಪೆನ್ಸೇಷನ್ ಕೊಟ್ಟಿದ್ದಾರೆ. ಅದಕ್ಕೆ ಅವರು ಕನ್ಸೀಡರ್ ಮಾಡಬೇಕು ಎನ್ನತಕ್ಕ ಮನವಿಯನ್ನು ತಮ್ಮ ಮುಖಾಂತರ ಅವರಲ್ಲಿ ಕೇಳಿಕೊಳ್ಳತ್ತೇನೆ. ಮತ್ತು ಉಳಿದಂತಹ ವಿಚಾರದ ಬಗ್ಗೆ ನಾವು ಪದೇ ಪದೇ ಪ್ರಸ್ತಾಪ ಮಾಡಿದ್ದೇವೆ. ಅದರ ಬಗ್ಗೆ ಅವರದ್ದು ಒಂದೇ ಉತ್ತರ ಇದೆ. ಇದಕ್ಕೆ ದಯವಿಟ್ಟು ಈಗಲಾದರೂ ರೀಕನ್ಸಿಡರ್ ಮಾಡುತ್ತಾರೆಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆಗೆ ಇಷ್ಟು ಹೇಳಿದ ಮೇಲೆ ಅವರು ರೀಕನ್ಸಿಡರ್ ಮಾಡುತ್ತೇನೆಂದು ಹೇಳಿದರೆ ನಾವು ಕುಳಿತುಕೊಳ್ಳುತ್ತೇವೆ. ಇಲ್ಲ ಎಂದರೆ ಮುಂದಿನ ದಾರಿ ನಮಗೆ ಇದೆ. ಅದು ನೋಡೋಣ. ಆದ್ದರಿಂದ ದಯವಿಟ್ಟು ಅಷ್ಟಾದರೂ ಒಂದು ಸಾವಿರ ಕೊಡಿ. ನಾಲ್ಕೂವರೆ ಕೋಟಿ ರೂಪಾಯಿ ಎಷ್ಟಾಗುತ್ತದೆ. ಇಡೀ ಎರಡು ಮೂರು ಜಿಲ್ಲೆಗೆ.

ಅಧ್ಯಕ್ಷರು:- ನಾನಾಗಿದ್ದರೆ ಹತ್ತು ಕೋಟಿ ರೂಪಾಯಿ ಕೊಟ್ಟುಬಿಡುತ್ತಿದ್ದೆ. ಅವರು ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಹೇಳಿದರೆ ಕೊಟ್ಟು ಬಿಡುತ್ತಾರೆ. ಏಕೆಂದರೆ ಅನೇಕ ಸಾರಿ ಆ ಪೀಠದಿಂದ ತಾವು ಆಶ್ವಾಸನೆ ಕೊಡಿಸುತ್ತೀರಿ. ಅಟ್‌ಲೀಸ್ಟ್ ಇದನ್ನೂ ಹೇಳಿಕೊಡಿ.

ಅಧ್ಯಕ್ಷರು:- ಅವರ ಕಷ್ಟ ಏನು ಇದೆಯೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕಾಗಿ ದಯವಿಟ್ಟು ತಮಗೆ ರಿಕ್ವೆಸ್ಟ್ ಮಾಡುತ್ತೇನೆ.

ಅಧ್ಯಕ್ಷರು:- ಅವರ ಕಷ್ಟ ದುಡ್ಡಿಗೆ ಏನೇನು ಇದೆಯೋ ನಾನು ಹೇಗೆ ನೀವೇ ತಂದು ಕೊಡಿ ಎಂದರೆ ನಾನು ಆಮೇಲೆ ಎಲ್ಲಿಗೆ ಹೋಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಹೇಳಬೇಕಾಗುತ್ತದೆ. ಅವರ ಈ ಮೊಂಡುತನದಿಂದ ಹಾಗೂ ಅಲ್ಲೇನು ರೈತರು ಸಾಕಷ್ಟು ಸೂಯಿಸೈಡ್ ಮಾಡಿಕೊಂಡು ಸತ್ತಿದ್ದಾರೆ. ಮತ್ತು ಗುಲ್ಬರ್ಗಾದಲ್ಲೂ ಸಹ ರೈತರು ಸತ್ತಿದ್ದಾರೆ. ಅವರ ಬಗ್ಗೆ ಇವರಿಗೆ ಕಳಕಳಿ ಇಲ್ಲ, ಅನುಕಂಪ ಇಲ್ಲ. ರೈತರ ಬಗ್ಗೆ ಇವರಿಗೆ ಯಾವುದೇ ಚಿಂತೆ ಇಲ್ಲ ಎನ್ನತಕ್ಕದ್ದು ಇದರಿಂದ ಸ್ಪಷ್ಟವಾಗುತ್ತದೆ.

ಮತ್ತೆ ಇದರ ಬಗ್ಗೆ ಅವರು ಹಣವನ್ನು ಬಿಡುಗಡೆಮಾಡಲು ತಯಾರಿಲ್ಲ ಎಂದು ಹೇಳಿ ಇದು ತೋರಿಸುತ್ತಿದೆ. ಅದಕ್ಕಾಗಿ ನಾವು ಇದನ್ನು ಪ್ರತಿಭಟಿಸಿ ವಾಕೌಟ್ ಮಾಡುತ್ತೇವೆ ತಮ್ಮ ಮಾತಿಗೆ ಮನ್ನಣೆ ಕೊಡುತ್ತೇವೆ.

Mr. SPEAKER: Thank you. I am grateful to you.

(ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸಭಾ ತ್ಯಾಗ ಮಾಡಿದರು)

ಅಧ್ಯಕ್ಷರು:- ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ: "ಮಾರ್ಚ್ 9, 1998ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಲ್ಲಿಸಲು ಅಪ್ಪಣೆ ಕೋರುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸದನವು ಅನುಮೋದನೆ ನೀಡಿತು)

-0-

ಅಧ್ಯಕ್ಷರು:- ವಂದನಾ ನಿರ್ಣಯುವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು. ಸಭೆಯನ್ನು ಈಗ ಮುಂದೂಡಲಾಗಿದೆ. ಪುನಃ ಸಭೆಯು ನಾಳೆ 11.30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6.15ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 18ನೇ ಮಾರ್ಚ್ 1998ರಂದು ಬೆಳಿಗ್ಗೆ 11.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

00000

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)